BY AIR MAIL
PAR AVION
हवाई डाक से



ಪ್ರೇಯಸಿಗೆ ಪತ್ರಗಳು

ಕೃಷ್ಣಾನಂದ ಕಾಮತ

ಮ.ಗ.ಮಾ

ಪ್ರೇಯಸಿಗೆ ಪತ್ರಗಳು!

ಮನೋಹರ ಗ್ರಂಥಮಾಲೆಯ

೪೫ ನೆಯ ಗ್ರಂಥವರ್ಷದ ದ್ವಿತೀಯ ಗ್ರಂಥ

ಆಗಸ್ಟ್ ೧೯೬೦

ಪ್ರೇಯಸಿಗೆ ಪತ್ರಗಳು!

ಕೃಷ್ಣಾನಂದ ಕಾಮತ

೧೯೯೦

ಮನೋಹರ ಗ್ರಂಥಮಾಲಾ

ಲಕ್ಷ್ಮೀಭವನ, ಸುಭಾಸ ರಸ್ತೆ

ಧಾರವಾಡ-೫೮೦ ೦೦೧

PREYASIGE PATRAGALU—(Kannada) by : Krishnanand Kamat
Published by : Manohar Granthamala Dharwad-580 001
Printed at : Twarita Mudrana Gangapur Oni GADAG-582101.
First Edition: 1990.
Price: 25-00 Pp: 142 + xiv

Copies: 2000

ಸಂಪಾದಕ–ಪ್ರಕಾಶಕ : ಜಿ. ಬಿ. ಜೋಶಿ
ಸಾಹಿತ್ಯ ಸಲಹೆಗಾರ : ಕೆ. ಡಿ. ಕುರ್ತಕೋಟಿ
ವ್ಯವಸ್ಥಾಪಕ ಸಂಪಾದಕ: ರಮಾಕಾಂತ ಜೋಶಿ
ಹೊದಿಕೆ ಚಿತ್ರ : ಕೃಷ್ಣಾನಂದ ಕಾಮತ

ಬೆಲೆ: ೨೫–೦೦

ಮುದ್ರಣ:
ಗಂಗಾಪೂರ ಓಣಿ, ಕುಂಬಾರಗರಡಿ ಹತ್ತಿರ
ಘ. ಶಿ. ಭಾಂಡಗೆಯವರ ತ್ವರಿತ ಮುದ್ರಣ
ಗದಗ–೫೮೨ ೧೦೧

ಮುದ್ರಣದ ಅವಧಿ
ಕೇವಲ ಎಂಟು ದಿನ

ಸಂಪಾದಕರ ನುಡಿ

ಕೃಷ್ಣಾನಂದ ಕಾಮತರು ನಮ್ಮ ಮಾಲೆಯ ಚಂದಾದಾರರಿಗೆ ಅಪರಿಚಿತರೇನಲ್ಲ. ಅವರ ಮೊದಲ ಪುಸ್ತಕ–ನಾನೂ ಅಮೇರಿಕೆಗೆ ಹೋಗಿದ್ದೆ ದಿಂದಲೇ ಅವರು ಗ್ರಂಥಮಾಲೆಯ ಆಪ್ತ ಬರಹಗಾರರಲ್ಲಿ ಒಬ್ಬರಾಗಿ ಹೋಗಿದ್ದಾರೆ. ಅಲ್ಲಿಂದೀಚೆ ಅವರ ಬರವಣಿಗೆಯ ವೈವಿಧ್ಯ ಬೃಹದಾಕಾರವಾಗಿ ಬೆಳೆದಿದ್ದರೂ ಓದುಗರೊಡನೆ ಸಮರಸವಾಗಿ ಹಂಚಿಕೊಳ್ಳುವ ಕಲೆಯಲ್ಲಿ ಕಡಿಮೆಯಾಗಿಲ್ಲ. (ಯಾಕೆಂದರೆ ಅವರ ಮೊದಲ ಕೃತಿಯೇ ಅತ್ಯಂತ ಪಕ್ವವಾಗಿ ಹೊರಬಂದ ಕೃತಿ. ಹೀಗಾಗಿ ಬರವಣಿಗೆಯಲ್ಲಿ ಪಕ್ವತೆ ಬಂದಿದೆ ಎನ್ನುವದು ತಪ್ಪಾಗುತ್ತದೆ.)

ಗ್ರಂಥಮಾಲೆಗೂ ಅವರಿಗೂ 'ಅಂಟಿದ ನಂಟಿನ' ಗಂಟು ಬಹಳ ಗಟ್ಟಿಯಾದದ್ದು; ಮಾತುಗಳಲ್ಲಿ ಹೇಳಲು ಅಸಾಧ್ಯವಾದದ್ದು, ಅವರಂಥ ಸದ್ದುಗದ್ದಲವಿಲ್ಲದ ಕರ್ಮಿಗಳು ವಿರಳ. ಮಿತವಾದ ಮಾತು; ಮಾತಿಗಿಂತ ಒಂದು ತೂಕ–ಕೃತಿ ಹೆಚ್ಚು. ಗ್ರಂಥಮಾಲೆ ಅವರಿಗೆ ಎಂದೆಂದಿಗೂ ಋಣಿ.

ಶ್ರೀಮತಿ ಜ್ಯೋತ್ಸ್ನಾ ಕಾಮತರು ಮುನ್ನುಡಿಯನ್ನು ಬರೆದುದಕ್ಕಾಗಿ, ಕೃಷ್ಣಾನಂದ ಕಾಮತರಿಂದ ಇಂಥದೊಂದು ಕೃತಿ ಹೊರಬರಲು ಬೆನ್ನೆಲುಬಾಗಿ ಪ್ರೇರಣೆ ನೀಡಿದ್ದಕ್ಕಾಗಿ ಅವರಿಗೂ ಕೃತಜ್ಞತೆಗಳು.

ಅತ್ಯಲ್ಪ ವೇಳೆಯಲ್ಲಿ ಈ ಪುಸ್ತಕವನ್ನು ಮುದ್ರಿಸಿಕೊಟ್ಟ ಗದುಗಿನ ತ್ವರಿತ ಮುದ್ರಣದ ಶ್ರೀ ಫ. ಶಿ. ಭಾಂಡಗೆಯವರಿಗೆ ವಂದನೆಗಳು.

–ಜಿ. ಬಿ. ಜೋಶಿ

ಮುನ್ನುಡಿ

ತಮ್ಮ ಯಾವ ಕೃತಿಗೂ, ಯಾರಿಂದಲೂ ಮುನ್ನುಡಿ ಬರೆಯಿಸದೇ ಇದ್ದರೂ, ಕಾಮತರು, 'ಪ್ರೇಯಸಿಗೆ ಪತ್ರಗಳು' ಪುಸ್ತಕಕ್ಕೆ ಪತ್ನಿಯಿಂದಲೇ ಮುನ್ನುಡಿಯನ್ನು ಬರೆಯಿಸುವ ನಿರ್ಧಾರವನ್ನು ಕೈಕೊಂಡದ್ದು ಅರಿತು ಉಬ್ಬಿಹೋದೆ. ಈ ಅಪೂರ್ವ ವಾದ ಗೌರವವನ್ನು ಅದೆಷ್ಟು ಸಮರ್ಪಕವಾಗಿ ನಿರ್ವಹಿಸಿದ್ದೇನೆಂದು ಇನ್ನಿತರರು ನಿರ್ಣಯಿಸಬೇಕು. ಹೀಗೆ ಮಾಡಲು ನನಗಿರುವ ಒಂದೇ ಒಂದು ಅಧಿಕಾರವೆಂದರೆ, ಇವೆಲ್ಲ ಪತ್ರಗಳು, ನನಗೇ ಸಂಬೋಧಿಸಿದವುಗಳು. ಅಲ್ಲದೇ ಆಗೊಮ್ಮೆ, ಈಗೊಮ್ಮೆ ಇಲ್ಲಸಲ್ಲದ ಪ್ರಶ್ನೆಗಳನ್ನು ಪತ್ರಮುಖೇನ ಕೇಳಿ, ಕೆಣಕಿ ಪರಿಪಕ್ವ ವಾದ ಉತ್ತರಗಳನ್ನು ದೊರಕಿಸಿದ್ದು! ಇಷ್ಟೊಂದು ವರ್ಷ ನನ್ನ ವೈಯಕ್ತಿಕ ಆಸ್ತಿಯಾಗಿದ್ದ ಈ ಪತ್ರಗಳನ್ನು ಪ್ರೀತಿಯ ಓದುಗರೊಂದಿಗೆ ಹಂಚಿಕೊಳ್ಳಲು ಸಾಧ್ಯವಾದದ್ದಕ್ಕೆ ತುಂಬ ಸಂತೋಷವಾಗಿದೆ.

ಕಳೆದ ಕಾಲುಶತಕದಲ್ಲಿ, ಹಲವು ವರ್ಗಾವರ್ಗಿಗಳಲ್ಲಿ ಒಂದೂ ಪತ್ರವನ್ನು ಕಳೆದು ಹಾಕದೇ ಕಾದಿರಿಸಿಕೊಂಡಿದ್ದೇ ಒಂದು ಮಹಾ ಸಾಧನೆ. ಇದು ಅವುಗಳ ಬಗ್ಗೆ ಇರುವ ಪ್ರೀತಿ, ಗೌರವ, ಅಭಿಮಾನಗಳ ಸಂಕೇತವೂ ಹೌದು. ಜನ್ಮ ಪತ್ರಿಕೆ, ಶಾಲಾ ಕಾಲೇಜುಗಳ ಗುಣಗಳ ಯಾದಿ, ಪದವಿ ಸರ್ಟಿಫಿಕೇಟುಗಳು, ವಿವಾಹ ದಾಖಲೆ, ಸರಕಾರಿ ಸೇವಾ ನೋಂದಣಿ, ಚೆಕ್ ಮತ್ತು ಪಾಸ್‌ಬುಕ್ ಗಳನ್ನು ಎಲ್ಲೆಂದರಲ್ಲಿ ಇಟ್ಟು ಮರೆಯುವ ಅಭ್ಯಾಸವಿದ್ದವಳು, ಈ ಪತ್ರಗಳ ನೂರಾರು ಕಂತೆಗಳ ಮೇಲೆ ಸರ್ಪಕಾವಲು ಇಡಬೇಕಾಯಿತಾದ್ದರಿಂದ ನನಗೆ ಅವು ಗಳ ಬಗೆಗಿನ ಕಳಕಳಿಯ ಅರಿವು, ಓದುಗರಿಗೆ ಆಗದಿರದು. ಇವು ನನಗೆ ಸಂದಾಯ ವಾಗಿದ್ದ ವಧುದಕ್ಷಿಣೆ ಎಂದು ನಂಬಿದ್ದೇನೆ.

ಪತ್ರಲೇಖನದ ತಮ್ಮ ಹವ್ಯಾಸದ ಕುರಿತು 'ಸ್ನೇಹಿತೆಯರು' ಪತ್ರದಲ್ಲಿ ಕಾಮತ್‌ರು ಮುಕ್ತ ಮನಸ್ಸಿನಿಂದ ಬರೆದುಕೊಂಡಿದ್ದಾರೆ. ಬರೆದ ಪ್ರತಿಪತ್ರ ದಲ್ಲಿಯೂ ಅಚ್ಚುಕಟ್ಟುತನ, ಶಿಸ್ತುಗಳು ಒಡೆದು ಕಾಣುತ್ತಿದ್ದವು. 'ತ್ವರಿತ ಅಂಚೆ',

ಸಂಪೂರ್ಣ ವಿಳಾಸ, ಅಂಚೆಯ ನಂಬರು, (ಪಿನ್‌ಕೋಡ್) ತಪ್ಪದೆ ಬರೆಯುತ್ತಾರಲ್ಲದೇ ಮೊಟಕು ಮಾಡಲು ಯತ್ನಿಸುವದೇ ಇಲ್ಲ. ಬರೆದ ಪತ್ರಗಳು ಅಂಚೆಯಲ್ಲಿ ಕಳೆದು ಹೋದರೆ, ಕೂಡಲೇ ತಿಳಿಯಬೇಕೆಂದು, ಅನುಕ್ರಮ ನಂಬರುಗಳನ್ನು ಸೇರಿಸಿರುತ್ತಾರೆ. ಕಾಣೆಯಾದ ಪತ್ರಗಳನ್ನು ಇನ್ನೊಮ್ಮೆ ಶಬ್ದಶಃ ಬರೆಯುವಂಥ ಅಗಾಧ ಸ್ಮರಣಶಕ್ತಿ ಅವರದು. ಬಂದ ಪತ್ರಗಳನ್ನು ಅಷ್ಟಾವಕ್ರವಾಗಿ ಹರಿಯಬಾರದು, ನೀಟಾಗಿ ಕತ್ತರಿಸಲು ಆಜ್ಞೆಯಿತ್ತರಲ್ಲದೇ ಕತ್ತರಿಯೊಂದನ್ನು ಇದಕ್ಕಾಗಿಯೇ ಖರೀದಿಸಿ ಕಾಣಿಕೆಯಾಗಿ ಇತ್ತರು! ದಿನದ ಕೆಲಸದಿಂದ ಎಷ್ಟೋ ದಣಿಯಲಿ, ಮ್ಲಾನಳಾಗಿರಲಿ, ಕಾಯುತ್ತಿದ್ದ ನನ್ನವರ ಪತ್ರ ಕಂಡೊಡನೆ ಪುಳಕಿತಳಾಗುತ್ತಿದ್ದೆ. ಅವುಗಳನ್ನು ಆಗಾಗ ಓದುತ್ತಿರುವದು ಸಾಮಾನ್ಯವಾಗಿತ್ತು. ವಿಶೇಷ ಸಂದರ್ಭಗಳಲ್ಲಿ ಬರೆದವನ್ನು ಅನೇಕ ಸಲ ತಿರುವಿ ಹಾಕುತ್ತಿದ್ದೆ. ಜೊತೆಯಲ್ಲಿದ್ದಾಗ ಮಿತಭಾಷಿಯಾಗಿದ್ದವರು ಪತ್ರಗಳಲ್ಲಿ ತುಂಬ ವಾಚಾಳಿ! ಸರಳರೇಖೆಯಲ್ಲಿ ಮೂಡಿಸಿದ ಒಂದೇ ಅಳತೆಯ ಚಿಕ್ಕ ಅಕ್ಷರಗಳನ್ನು ಒಂದಿಷ್ಟೂ ಕಾಟಾ (ಚಿತ್‌ಕಾಟ್) ಹಾಕದೇ ಪುಟದುದ್ದಕ್ಕೂ ಬರೆಯುತ್ತಿದ್ದ ನಿಯಮಿತವಾದ ಪತ್ರಗಳು, ಕನ್ನಡ ಭಾಷೆ ಬಾರದವರೂ ನೋಡಿ ಅಸೂಯೆಪಡುವಂತೆ ಆಗುತ್ತಿತ್ತು. ಪ್ರತಿದಿನವೂ ಬರುವ ಪತ್ರಗಳಲ್ಲಿ ದಸ್ತಾವೇಜುಗಳಂತೆ ತುಂಬಿತುಳುಕುವ ವಿಷಯಗಳು, ಪತ್ನಿಗೆ ಬರೆಯಲು ಎಲ್ಲಿಂದ ಬರುತ್ತವೆ? ಎಂಬುದು ಅವರ ಕುತೂಹಲಕ್ಕೆ ಕಾರಣವಾಗಿತ್ತು. ಕೆಲವೊಮ್ಮೆ ಪತ್ರಗಳನ್ನು ಓದಿ ಹೇಳಿದಾಗ, ಮನವಾರೆ ನಕ್ಕು, ನಿನ್ನವರು ಉತ್ತಮ ಬರೆಹಗಾರರಿರಬೇಕು, ಎಂದು ಮೆಚ್ಚಿಗೆ ಸೂಚಿಸುತ್ತಿದ್ದರು. ಆಡು ಮುಟ್ಟದ ಗಿಡವಿಲ್ಲವಂತೆ. ಕಾಮತರು ಬರೆಯದ ವಿಷಯವಿರಲಿಲ್ಲ. ಅಸಾಮಾನ್ಯ ಜನಸಾಮಾನ್ಯರು, ಭೇಟಿಮಾಡಿದ ವಿಶೇಷ ವ್ಯಕ್ತಿ, ಓದಿದ ಪುಸ್ತಕ, ಕೇಳಿದ ಸಂಗೀತ, ಬರೆದ ಲೇಖನ, ಹಾಸ್ಯ, ವಿನೋದ, ವಿಚಾರ, ಪ್ರದೇಶ ಪರಿಚಯ, ಅನಿಸಿಕೆಗಳು, ರಾಜಕಾರಣ, ಹಣಕಾಸಿನ ವ್ಯವಸ್ಥೆ, ಜನಜೀವನ, ಆದರ್ಶಗಳು ಒಟ್ಟಿನಲ್ಲಿ ಜೀವನ ಪಾಠಗಳು. ರೇಗಿದಾಗ ಬೈದು ಬರೆಯುವ ಭಾಷೆಯೂ ಪ್ರಭಾವಕಾರಿಯಾಗಿ, ವಾದ, ತರ್ಕಬದ್ಧವಾಗಿರುತ್ತಿತ್ತು. ಕಳೆದ ನಾಲ್ಕು ದಶಕಗಳಲ್ಲಿ ಎಷ್ಟೋ ಅಮೂಲ್ಯ ಪತ್ರಗಳನ್ನು ಅನೇಕರಿಗೆ ಬರೆದಿದ್ದಾರೆ. ಬಹುಸಂಖ್ಯಾತರು ಅವನ್ನು ನಾಶಪಡಿಸಿರಬೇಕು. ಕೆಲವರಾದರೂ ಕಾದಿರಿಸಿದ್ದರೆ, ಅವುಗಳ ಪ್ರತಿಯನ್ನಾದರೂ ಕಳಿಸಿದರೆ ಕೃತಜ್ಞಳಾಗಿರುವೆ.

ಪ್ರತಿದಿನವೂ ಬರುವ ಪತ್ರಗಳನ್ನು ನೋಡಿದವರು, ನನ್ನದು 'ಪತ್ರಸಂಸಾರ' ಎಂದು ಗೇಲಿ ಮಾಡಿದ್ದುಂಟು. ಅಸೂಯೆಪಡುವವರು 'ನಿನ್ನ ಗೆಣೆಯ ಏನಂತಾನೆ?' ಎಂದು ಸಿಕ್ಕಾಗೊಮ್ಮೆ ಕೊಂಕುನುಡಿಯುತ್ತಾರೆ. ಹದಿವಯಸ್ಸಿನ ಹುಡುಗಿಯರು, ನಿನ್ನ ಕೋಣೆ ಪತ್ರಗಳ ರಾಶಿಯಿಂದ ತುಂಬಿ ತುಳುಕುತ್ತಿರಬೇಕಲ್ಲವೇ? ಎಂದು ವಿಸ್ಮಯಪಟ್ಟಿದ್ದುಂಟು. ಆತುರ ತಡೆಯದವರು ಕದ್ದು ಪತ್ರ ಓದಲು ಯತ್ನಿಸಿ, ಸಾಧ್ಯವಾಗದಿದ್ದಾಗ ಮರುಗಿದವರೂ ಇದ್ದಾರೆ. ಹಲವು ವರ್ಷಗಳ ನಂತರ ಭೇಟಿ ಯಾದ ಆಪ್ತರಲ್ಲಿ 'ಈಗಲೂ ನಿನ್ನ ಗಂಡ, ಹಿಂದಿನ ತೀವ್ರತೆಯಿಂದಲೇ ಪತ್ರ ಬರೆಯುತ್ತಾರೆಯೇ?' ಎಂದು ಪ್ರಶ್ನಿಸುವವರೂ ಇದ್ದಾರೆ. ಪತ್ನಿ ಜೊತೆಗಿದ್ದಾಗ ಈ ಪ್ರೀತಿ, ಕಳಕಳಿ ಎಲ್ಲಿ ಮಾಯವಾಗುತ್ತವೆಯೋ ಏನೋ! ಪತಿಯ ಸಹಜ ದರ್ಪ ವನ್ನು ಅವಕಾಶ ದೊರೆತಾಗ ಪ್ರದರ್ಶಿಸುವದಕ್ಕೋ ಏನೋ, ಆಗಾಗ ಗದರಿಸು ತ್ತಲೇ ಇರುತ್ತಾರೆ. ಪ್ರೇಮಗೀತ, ಸಖೀಗೀತಗಳನ್ನು ಬರೆದ ಕವಿಗಳು ಕನ್ನಡದಲ್ಲಿ ಕಡಿಮೆಯಿಲ್ಲ. ಆದರೆ ದಶಕಗಟ್ಟಲೆ ಪತ್ರ ಬರೆಯಲು ಪತ್ನಿಯಲ್ಲಿ ಪ್ರೇಮಿಯನ್ನು ಕಲ್ಪಿಸಿಕೊಂಡವರು ಇರಲಿಕ್ಕಿಲ್ಲ!

ಕರ್ನಾಟಕದ ಉದ್ದಗಲಕ್ಕೆ ಹರಡಿಕೊಂಡ ಅನೇಕಾನೇಕ ಮಿತ್ರರೊಂದಿಗೆ, ಅ. ನ. ಕೃಷ್ಣರಾಯರು ಪತ್ರಸಂಪರ್ಕವಿಟ್ಟುಕೊಂಡಿದ್ದರು. ಸಮಕಾಲೀನ ಸಾಹಿತ್ಯ, ರಾಜಕಾರಣ, ಸಂಗೀತ, ಕಲೆ, ನಾಟಕಗಳ ಬಗ್ಗೆ ಮುಕ್ತ ವಿಚಾರಗಳು ಅವುಗಳಲ್ಲಿ ಇರುತ್ತಿದ್ದವು. ಉತ್ತಮ ಪತ್ರ ಸಾಹಿತ್ಯವಾಗುವ ಯೋಗ್ಯತೆ ಇದ್ದರೂ ಅವುಗಳನ್ನೆಲ್ಲ ಸಂರಕ್ಷಿಸಿಕೊಳ್ಳಲು ಆಗಲಿಲ್ಲವೆಂದು ಅ. ನ. ಕೃ.ರು ತಮ್ಮ ಆತ್ಮ ಕಥೆ ಯಲ್ಲಿ ಮರುಗಿದ್ದಾರೆ. ಎ. ಎನ್. ಮೂರ್ತಿರಾಯರು ಪ್ರಾಧ್ಯಾಪಕರಾಗಿ ವಿವಿಧ ಊರುಗಳಲ್ಲಿ ಸೇವೆ ಸಲ್ಲಿಸುವ ದಿನಗಳಲ್ಲಿ ತಮ್ಮ ಆತ್ಮೀಯ ಗೆಳೆಯರಾದ ತೀ. ನಂ. ಶ್ರೀಕಂಠಯ್ಯರವರೊಡನೆ ಆಗಾಗ ಪತ್ರಸಲ್ಲಾಪ ನಡೆಸುತ್ತಿದ್ದರು. ಪಿತರ ಅಕಾಲ-ಮೃತ್ಯುವಿನ ನಂತರ, ತಿ. ಶ್ರೀ. ನಾಗಭೂಷಣ ಅವರು, ಮೂರ್ತಿ ರಾಯರಿಗೆ ಅವರೇ ತಮ್ಮ ತಂದೆಗೆ ಬರೆದ ಪತ್ರಗಳ ಕಂತೆಯನ್ನು ಹಿಂದಿರುಗಿಸಿದಾಗ ಅವರಿಗಾದ, ಸೋಜಿಗ-ಆನಂದಗಳಿಗೆ ಕೊನೆ ಮೊದಲಿರಲಿಲ್ಲವಂತೆ. ಕೇಂದ್ರ ಸಾಹಿತ್ಯ ಆಕಾಡಮಿಯಿಂದ ಪುರಸ್ಕೃತವಾದ 'ಚಿತ್ರಗಳು-ಪತ್ರಗಳು' ಪುಸ್ತಕಕ್ಕೆ ಈ ಪತ್ರಗಳೇ ಆಧಾರ. ತೀ. ನಂ. ಶ್ರೀ ಅವರ ಪತ್ರಗಳನ್ನು ತಾವು ಕಾದಿರಿಸಲಿಲ್ಲವಲ್ಲ! ಎಂದು ಇಂದಿಗೂ ಮೂರ್ತಿರಾಯರು ಮರುಗುತ್ತಿರುತ್ತಾರಂತೆ. ಶ್ರೀ ಮಾಸ್ತಿಯವರು

ತಮಗೆ ಬಂದ ಸಕಲ ಪತ್ರಗಳನ್ನೂ ಕಾಯ್ದಿರಿಸಿ, 'ಪತ್ರಗಳು' ಪುಸ್ತಕ ಪ್ರಕಟಿಸಿದ್ದಾರೆ. ದೀರ್ಘಾವಧಿಯ ವರೆಗೆ ಪ್ರೇಯಸಿಗೆ ಬರೆದ ಪತ್ರಗಳು ಕನ್ನಡದಲ್ಲಿ ಪ್ರಕಟವಾಗುತ್ತಿರುವದು ಇದೇ ಮೊದಲಿಗೆ ಎಂದು ಅನಿಸುತ್ತದೆ.

ನಮ್ಮ ವಿವಾಹದ ಕಾಲುಶತಮಾನ ಇಷ್ಟರಲ್ಲಿ ತುಂಬಿದೆ. ಊಟ, ಉಪಚಾರ, ಉಡುಗೊರೆಗಳ ಆಡಂಬರದ ಜೀವನಕ್ಕೆ ಮಾರುಹೋಗದ ಇವರು, ಕೊಡಮಾಡಿದ ನೆಮ್ಮದಿಯ ವೈವಾಹಿಕ ಜೀವನಕ್ಕೆ ಹೇಗೆ ಕೃತಜ್ಞತೆ ಸಲ್ಲಿಸುವದೆಂದು ತೊಳಲಾಟದಲ್ಲಿ ತೊಳಕಿಕೊಂಡಾಗ, 'ಪ್ರೇಯಸಿಗೆ ಪತ್ರಗಳ', ಪ್ರಕಟಿಸಲು ಮುಂದೆ ಬಂದು, ಜಿ. ಬಿ. ಜೋಶಿಯವರು, ನಮ್ಮ ಸಮಸ್ಯೆಯನ್ನು ಬಗೆಹರಿಸಿದ್ದಾರೆ. ಅದಕ್ಕಾಗಿ ಅವರಿಗೆ ಕೃತಜ್ಞತೆಗಳು. ಓದುಗರಿಗೆ ಈ ಪತ್ರಗಳು ಸ್ವಲ್ಪವಾದರೂ ಖುಷಿ ಕೊಟ್ಟರೆ, ಸ್ವಾನುಭವಗಳನ್ನು ಸಾರ್ವಜನಿಕರೊಡನೆ ಹಂಚಿಕೊಂಡ ತೃಪ್ತಿ ನನ್ನದಾಗುತ್ತದೆ.

ಯುಗಾದಿ, ೨೭–೩–೧೯೯೦

–ಜ್ಯೋತ್ಸ್ನಾ ಕಾಮತ
೧೧೦, ಶಶಿಕಿರಣ, ೧೮ನೇ ಅಡ್ಡರಸ್ತೆ
ಮಲ್ಲೇಶ್ವರಮ್
ಬೆಂಗಳೂರು–೫೬೦೦೫೫

ಹಿನ್ನೆಲೆಯಾಗಿ

ಮನೋಹರ ಗ್ರಂಥಮಾಲೆಯ ಜಿ. ಬಿ. ಜೋಶಿಯವರು, ಚಲನಚಿತ್ರ ನಿರ್ದೇಶಕ ನಾಗಾಭರಣರೊಂದಿಗೆ ಭೇಟಿಕೊಟ್ಟಾಗ (೨೯–೬–೧೯೭೯) ಮನೆ ತುಂಬ ಹರಡಿಕೊಂಡಿದ್ದ ಪತ್ರರಾಶಿಯನ್ನು ಕಂಡು, ಇವುಗಳನ್ನು ಸಂಪಾದಿಸಿ ಕೊಟ್ಟರೆ, ಪ್ರಕಟಿಸುತ್ತೇನೆ, ಅಂದಿದ್ದರು. ಸಂಪಾದಕರು, ಪ್ರಕಾಶಕರು ಮಾಮೂಲಾಗಿ ಕೊಡುವ ಆಶ್ವಾಸನೆ ಇದು, ಎಂದು ಕೈಬಿಟ್ಟೆ. ಆನಂತರ ಒಮ್ಮೆ ಸಾಹಿತಿಗಳ ತಂಡದೊಡನೆ ಬಂದಾಗ (೨೧–೨–೧೯೮೨) ತಮ್ಮಲ್ಲಿರುವ ಸಾಹಿತಿ ಧೀಮಂತರ ಪತ್ರಗಳನ್ನೆಲ್ಲ ಸಂಪಾದಿಸಿಕೊಟ್ಟರೆ, ಮುಂಬರುವ "ಪುಟ-ಬಂಗಾರ"ದಲ್ಲಿ ಪ್ರಕಾಶಿಸುತ್ತೇನೆಂದರು. ಅದೂ ಕಾರ್ಯಗತವಾಗಲಿಲ್ಲ. ಆದರೆ 'ಪುಟ–ಬಂಗಾರ'ದ ಬಿಡುಗಡೆಗೆ ಬಂದಾಗ, (೧–೪–೧೯೮೮) ತಿರುಗಿ ಪತ್ರ ಸಾಹಿತ್ಯದ ಬಗ್ಗೆ ಪ್ರಸ್ತಾಪವೆತ್ತಿದಾಗ, ಶೇಖರವಾದ ಪತ್ರಕೋಟಿಯನ್ನು ಪರೀಕ್ಷಿಸಲು ನಿರ್ಧರಿಸಿದೆ. ಅವುಗಳನ್ನು ವಿಂಗಡಿಸಿ, ಜೋಡಿಸಿ, ಕಾಲಾನುಕ್ರಮವಾಗಿ, ಯಾದಿಯೊಂದನ್ನು ಸಿದ್ಧಪಡಿಸುವದೇ ಅಸಾಧ್ಯವಾದ ಕಾರ್ಯವೆನಿಸಿದ್ದರಿಂದ, ಕೈಮುಗಿದು ಮಂಗಳ ಹಾಡಿದ್ದಾಯಿತು.

ಜಿ. ಬಿ. ಯವರು ಅಷ್ಟು ಸುಲಭದಲ್ಲಿ ಸೋಲನ್ನೊಪ್ಪುವ ಆಸಾಮಿಯಲ್ಲ. ಕೇಂದ್ರ ಸಂಗೀತ ನಾಟಕ ಅಕಾಡಮಿಯ ಪಾರಿತೋಷಕ ಪಡೆಯಲು ಬಂದಾಗ, (೧೯–೧೨–೮೯) ಇನ್ನೊಮ್ಮೆ ಪತ್ರಸಾಹಿತ್ಯದ ಪ್ರಸ್ತಾಪವೆತ್ತಿದರು. ತಮ್ಮ ಜೊತೆಗೆ ಕೀರ್ತಿನಾಥ ಕುರ್ತಕೋಟಿ, ಡಾ. ರಮಾಕಾಂತ ಜೋಶಿ ಮತ್ತು ರಾಘು ಜೋಶಿಯವರನ್ನು ಕರೆತಂದಿದ್ದರು. ಹೀಗಾಗಿ ಹಾರಿಕೆಯ ಆಶ್ವಾಸನೆ ಕೊಡುವಂತಿರಲಿಲ್ಲ! ಮೇ ತಿಂಗಳೊಳಗೆ ನೂರೈವತ್ತು ಮುದ್ರಿತ ಪುಟಗಳಷ್ಟು ಆಗುವ ಹಸ್ತಪ್ರತಿಯನ್ನು ಕೊಡಲು ಒಪ್ಪಿಕೊಳ್ಳಬೇಕಾಯಿತು. ಇದಕ್ಕಾಗಿ ಪ್ರಕಾಶಕರು, ಅಭಿಮಾನಿಗಳು, ಸ್ನೇಹಿತೆಯರು, ಸಹಪಾಠಿಗಳು, ಸಹೋದ್ಯೋಗಿಗಳು, ಪತ್ನಿ ಮುಂತಾದವರೆಲ್ಲ ಬರೆದ ಪತ್ರಗಳಿದ್ದರೂ ನಾನು ಬರೆದ ಪತ್ರಗಳೇ ಹೆಚ್ಚು

ಆಕರ್ಷಕವಾಗಿವೆಯೆಂದು ನನ್ನವಳು ಸೂಚಿಸಿದಳು. ಅಂತೆಯೇ ವಿವಾಹದ ಮೊದಲ ಪಂಚವಾರ್ಷಿಕದ ಪತ್ರಮಾಲೆಯನ್ನೇ ಈ ಕೃತಿಗೆ ಬಳಿಸಿಕೊಂಡಿದ್ದೇನೆ.

ದಿನಚರಿಯಂತೆ, ಪತ್ರಗಳೂ ತೀರ ಖಾಸಗೀ ವಿಚಾರಗಳಿಗೆ ಮೀಸಲು. ಅಂತೆಯೇ ಬಂದ ವಿಚಾರಗಳನ್ನೆಲ್ಲ ಯಾವ ಮುಚ್ಚುಮರೆ ಇಲ್ಲದೇ ಬರೆದು, ಬಿಡುತ್ತೇವೆ. ಆದರೆ ಪ್ರಕಟಿಸುವ ಸಂದರ್ಭ ಬಂದಾಗ, ಓದುಗರಿಗೆ ಆಸಕ್ತಿಯಿರದ ವಿಷಯಗಳನ್ನು ಕೈಬಿಡುವದು ಅನಿವಾರ್ಯವಾಗುತ್ತದೆ. ಅಂತೆಯೇ ಈ ಪತ್ರಗಳನ್ನೆಲ್ಲ ಅಭ್ಯಸಿಸಿ, ಅವುಗಳಲ್ಲಿ ಸತ್ವವಿರಬಹುದಾದವನ್ನು ಮಾತ್ರ ಸಂಕ್ಷಿಪ್ತವಾಗಿ ಬರೆಯಲು ಯತ್ನಿಸಿದ್ದೇನೆ. ಒಂದೇ ವಿಷಯವಾಗಿ ಹತ್ತೆಂಟು ಪತ್ರಗಳಲ್ಲಿ ಹಂಚಿ ಹೋದದ್ದನ್ನು ಒಂದೆಡೆ ತರಲು ಯತ್ನಿಸಿದ್ದೇನೆ. ಪ್ರತಿಯೊಂದು ಪತ್ರಕ್ಕೂ ತಲೆ ಬರಹಕೊಡುವದಲ್ಲದೇ ಬರೆದ ಊರು, ದಿನಾಂಕಗಳನ್ನು ಸೂಚಿಸಿದ್ದೇನೆ. ಇದರಿಂದ ಘಟನೆಗಳು ಜರುಗಿದ ಕಾಲ–ಸ್ಥಳಗಳ ಕಲ್ಪನೆ ಬರುವಂತಿದೆ. ಸರ್ವಸಾಧಾರಣವಾಗಿ ಪತ್ರಗಳನ್ನು ಒಳಗೊಂಡಿರುವ ವಿಳಾಸ, ಕ್ಷೇಮ ಸಮಾಚಾರ ಖಾಸಗಿ ವಿಚಾರಗಳ ಅಡ್ಡಿ–ಆತಂಕಗಳನ್ನು ಬಿಟ್ಟುಕೊಡಲಾಗಿದೆ. ಇವೆಲ್ಲ ಪತ್ರಗಳು ಹೆಂಡತಿಗೇ ಬರೆದವಾದ್ದರಿಂದ, ಇಲಿಯನ್ನು ಹುಲಿಯನ್ನಾಗಿ ಚಿತ್ರಿಸುವ ಯತ್ನ ಇಲ್ಲಿದೆ, ಅನಿಸಿದರೂ ಆಶ್ಚಯವಿಲ್ಲ! ಇಂಥ ಆರೋಪ ಬರುವ ಸಾಧ್ಯತೆ ಇದ್ದರೂ ಮೂಲ ಪತ್ರಗಳಿಗೆ ಅನ್ಯಾಯವಾಗದಂತೆ ಸಂಪಾದಿಸಲು ಯತ್ನಿಸಿದ್ದೇನೆ. ಇವುಗಳಲ್ಲಿ ದಿನಚರಿಯೊಂದಿಗೆ ಅಲ್ಲಲ್ಲಿ ಆತ್ಮಚರಿತ್ರೆಯೂ ಇಣಕಿ ನೋಡಲು ಯತ್ನಿಸಿದೆ. ಅರಿವಿಗೆ ನೆರವಾಗುವಂತಹ, ಆದರೆ ಮೂಲ ಪತ್ರಗಳಲ್ಲಿ ಇಲ್ಲದ ಮಾಹಿತಿಯನ್ನು ಅಡಿಟಿಪ್ಪಣೆಯಾಗಿ ಕೊಡಲಾಗಿದೆ. ನಾವು ಜೊತೆಯಾಗಿದ್ದಾಗ, ಪತ್ರ ಬರೆಯುವಿಕೆ ಇಲ್ಲದೇ ಎಷ್ಟೊಂದು ಸ್ವಾರಸ್ಯಕರ ಘಟನೆಗಳೆಲ್ಲ ಹೇಳಹೆಸರಿಲ್ಲದೇ ಮಾಯವಾದವು! ಎಂದು ಅನಿಸಿದ್ದೂ ಇದೆ. ಅಂತೆಯೇ ಅಂಥ ದಿನಗಳಲ್ಲಿ ವಿವರವಾದ ದಿನಚರಿ ಬರೆಯಲು ಪ್ರಾರಂಭಿಸಬೇಕಾಯಿತು.

ಅವಕಾಶ ಸಿಕ್ಕರೆ, ಇನ್ನಿತರ ಪತ್ರಗಳನ್ನೂ ಸಂಪಾದಿಸಿ ಪ್ರಕಟಿಸುವ ವಿಚಾರವಿದೆ. ಈ ಕೃತಿಯ ನಿರೂಪಣೆ, ವ ಸಂಪಾದನೆಯಲ್ಲಿರುವ ಕೊರತೆಗಳನ್ನು ತಿಳಿಸಿದರೆ ಕೃತಜ್ಞನಾಗುವೆ. ಕನ್ನಡದಲ್ಲಿ ಪ್ರವಾಸ ಕಥನ, ಪತ್ರಸಾಹಿತ್ಯದ ಕೊರತೆ ಇದೆ, ಎಂದು ಸಾರ್ವಜನಿಕ ಭಾಷಣಗಳಲ್ಲಿ ಘೋಷಿಸಿದರೂ ಇಂಥ ಪುಸ್ತಕ ಪ್ರಕಟವಾದಾಗ ಹಣಕೊಟ್ಟು ಓದುವವರ ಕೊರತೆ ಸಾಕಷ್ಟು ದೊಡ್ಡದಿದೆ. ಇಂಥವುಗಳ

ಪ್ರಕಟನೆಗೆ ಪ್ರಕಾಶಕರು, ಹಾಕಿದ ದುಡ್ಡು ಹಿಂತಿರುಗಿ ಬಾರದು, ಎಂದು ಗೋಳಾಡುತ್ತಾರೆ. ಜಿ. ಬಿ. ಜೋಶಿಯವರೊಬ್ಬರು ಇದಕ್ಕೆ ಅಪವಾದವಾಗಿರಬೇಕು. ಕೇಂದ್ರ ಸಂಗೀತ-ನಾಟಕ ಅಕಾಡಮಿ ಕೊಡಮಾಡಿದ ಇಪ್ಪತ್ತೈದು ಸಹಸ್ರ ರೂಪಾಯಿಗಳನ್ನು ಇಂಥ ಸಾಹಸದಲ್ಲಿ ತೊಡಗಿಸಲು ಸಿದ್ಧರಾಗಿದ್ದಾರೆ! ಈ ಕೃತಿಯ ಸಕಲ ಶ್ರೇಯಸ್ಸೂ ಅವರಿಗೇ ಸಲ್ಲಬೇಕು.

ಯುಗಾದಿ, ೨೭-೩-೧೯೯೦.

-ಕೃಷ್ಣಾನಂದ ಕಾಮತ
೧೧೦, ಶಶಿಕಿರಣ
೧೮ನೇ ಅಡ್ಡರಸ್ತೆ
ಮಲ್ಲೇಶ್ವರಂ
ಬೆಂಗಳೂರು-೫೬೦೦೫೫

ಪರಿವಿಡಿ

೧. ವಧುವಿಗೆ

ಜೊಬನೇರ, ೧೭-೧೨-೧೯೬೫

ಪ್ರಿಯ ಬಿಸಿಲೇ,

ರಸಿಕರು ಪ್ರೇಯಸಿಗೆ ನಲ್ಲೆ, ಪ್ರಿಯತಮೆ, ಮನದನ್ನೆ ಚೆನ್ನಾ, ಪ್ರಾಣಪ್ರಿಯೆ, ಹೃದಯೇಶ್ವರಿ ಎಂದೆಲ್ಲ ಸಂಬೋಧಿಸುತ್ತಿರಬಹುದು. ಬೆಳದಿಂಗಳು ಪ್ರೇಮದ ಸಂಕೇತವಾಗಿದ್ದಿರಬಹುದು. ಬಿಸಿಲೇ, ಎಂದು ಕರೆಯುವದರಲ್ಲಿ ಏನರ್ಥ? ಎಂದು ಹುಬ್ಬೇರಿಸಿದೆಯಾ? ನಾನು ಓದಿದ ಸಾಯರೆಕ್ಯೂಸ್(ನ್ಯೂಯಾರ್ಕ್)ದಲ್ಲಿ ವರ್ಷದಲ್ಲಿ ಆರು ತಿಂಗಳು ಹಿಮಪಾತವಾಗುತ್ತದೆ. ಇನ್ನಿತರ ದಿನಗಳಲ್ಲಿ ಗಗನಮಂಡಲವೆಲ್ಲ ಕರಿಮೋಡಗಳಿಂದ ಆವೃತವಾಗಿರುತ್ತದೆ. ಇದಲ್ಲದಿದ್ದರೆ ತಲೆ ಚಿಟ್ಟು ಹಿಡಿಸುವ ಜಿಟಿ ಜಿಟಿ ಮಳೆ ಬೀಳುತ್ತಿರುತ್ತದೆ. ಆದ್ದರಿಂದ ಎಂದಾದರೊಮ್ಮೆ ಬಿಸಿಲು ಪ್ರತ್ಯಕ್ಷವಾದಾಗ ಹರ್ಷಿತರಾಗುವ ಅಮೇರಿಕನ್ನರು "ಇದೆಷ್ಟು ಸುಂದರವಾದ ದಿನ! ಕುಡಿತದ ಅಮಲೇರಿಸುವಂಥ ಬಿಸಿಲು!" ಎಂದು ಉದ್ಗರಿಸುವದುಂಟು. ಈ ಪತ್ರ ಬರೆಯುತ್ತಿರುವಾಗ ಸಹ, ಜೋಬನೇರದಲ್ಲಿ ಮೈಕೊರೆಯುವ ಚಳಿ-ಇಬ್ಬನಿ. ಇಂಥ ಪರಿಸರದಲ್ಲಿ ನನ್ನ ಜೀವನದ ನಶೆಯಾಗಿ ಬರಲಿರುವ ನೀನು ನನ್ನ ಪಾಲಿಗೆ ಬಿಸಿಲೇ!

ಭಾವೀ ಪತ್ನಿಗೆ 'ನೀನು' ಎಂದು ಕರೆಯಬೇಕೆ? ಇಲ್ಲವೇ ನೀವು ಎಂದು ಸಂಬೋಧಿಸಬೇಕೇ? ಎಂದು ದೊಡ್ಡ ಗೊಂದಲವೇ ಆಯಿತು. ಆಗ ಗೆಳೆಯನೊಬ್ಬನ ಅನುಭವಗಳು ನೆನಪಿಗೆ ಬಂದವು. ನವ ವಿವಾಹಿತರನ್ನು ಕಾಣಹೋದಾಗ, "ಈ ತಿಂಡಿ ಕಾಮತರಿಗೆ ಕೊಡಿ ಅಂದ್ರೆ...." ಎಂದು ಗೃಹಿಣಿ ಕೂಗಿದಾಗ ಪುಲಕಿತನಾದ ಪತಿ, "ನಿನ್ನ ಕಾಲ್ಗುಣ ಚೆನ್ನಾಗಿದೆ ನೋಡಯ್ಯ! ಯಾವಾಗಲೂ ನೀನು ನೀನು ಎನ್ನುವ ಪತ್ನಿ **ಈಗ** ಕೊನೆಗೊಮ್ಮೆ ಬಹುವಚನದಿಂದ ಸಂಬೋಧಿಸುತ್ತಿದ್ದಾಳೆ" ಎಂದು ಸಂತೋಷ ವ್ಯಕ್ತಪಡಿಸಿದ. ಇಷ್ಟಾದರೂ ಪತ್ನಿ, ನೀನು,

ನೀವು ಎಂಬುದನ್ನು ತಾರತಮ್ಯವಿಲ್ಲದೇ ಕೆಲ ಹೊತ್ತಿನ ಮೇಲೆ ಬಳಸಲಾರಂಭಿಸಿದಳು. ನಮಗೆ ಹೀಗೆ ಆಗಬಾರದೆಂದು ಮೊದಲಿನಿಂದಲೂ ನಿನ್ನನ್ನು ಏಕವಚನದಿಂದಲೇ ಕರೆಯಬೇಕೆಂದಿದ್ದೇನೆ.೧

ನಮ್ಮ ವಿವಾಹದ ನಿಶ್ಚಿತಾರ್ಥದ ವೈಖರಿ, ವಿಶಿಷ್ಟವಾದದ್ದೆನ್ನಬೇಕು. ಪಾಶ್ಚಿಮಾತ್ಯರು ಒಬ್ಬರನ್ನೊಬ್ಬರು ಚೆನ್ನಾಗಿ ಅರಿತು, ಸಹಜೀವನವನ್ನೂ ನಡೆಸಿ ಕೊನೆಗೊಮ್ಮೆ ಬೆರಳಿಗೆ ಉಂಗುರ ತೊಡಿಸಿ ಮದುವೆಗೆ ನಾಂದಿ ಹಾಕುತ್ತಾರೆ. ಹಳಬರು, ಒಳ್ಳೇ ದಿನ ನೋಡಿ, ಕನ್ಯೆಯ ಮನೆಗೆ ಆಗಮಿಸಿ, ಸಿಹಿ ತಿಂದು ವಧು-ವರರಿಗೆ ಆರತಿ ಬೆಳಗಿ, ಉಡುಗೊರೆ ಕೊಟ್ಟು ಪರಸ್ಪರ ಪರಿಚಯದ ಏರ್ಪಾಡು ಮಾಡುತ್ತಿದ್ದರು. ಆಧುನಿಕರೆನಿಸಿಕೊಂಡವರು ವಿವಾಹ ಪೂರ್ವದಲ್ಲೇ ಮೋಜಾಗಿರಲು ಯಾವ ಆಕ್ಷೇಪಣೆಯನ್ನೂ ಎತ್ತುವದಿಲ್ಲ. ಅದೇ ನಾವಿಬ್ಬರೂ ಹಿಂದಿನ ಕಾಲದವರಿಗಿಂತ ಹಳಬರೆಂದು ತೋರುತ್ತದೆ! ಮದುಮಗ ರಾಜಸ್ತಾನದ ಪುಟ್ಟ ಹಳ್ಳಿಯಾದ ಜೊಬನೇರದಲ್ಲಿ. ಮದುಮಗಳು ಕನ್ನಡ ಗಂಡುಮೆಟ್ಟಿನ ಸ್ಥಳವಾದ ಧಾರವಾಡದಲ್ಲಿ. ಕನ್ಯಾಪಿತರು ರಾಯಚೂರಿನಲ್ಲಿ ನಮ್ಮಿಬ್ಬರ ಉಪಸ್ಥಿತಿಯಿಲ್ಲದೇ ವಿವಾಹದ ನಿಶ್ಚಯ ತಾಂಬೂಲ ನಡೆದದ್ದು ಉತ್ತರಕನ್ನಡ ಜಿಲ್ಲೆಯ ಹೊನ್ನಾವರದಲ್ಲಿ! ಯಾರೊಬ್ಬರೂ ನಿನಗೆ ಹೂ ಮುಡಿಸಲಿಲ್ಲ. ಉಡುಗೊರೆ ಕೊಡಲಿಲ್ಲ. ನನಗಾರೂ ಉಂಗುರ ತೊಡಿಸಲಿಲ್ಲ. ಇಷ್ಟಾದರೂ ಇದು ನಮ್ಮಿಬ್ಬರ ವೈವಾಹಿಕ ಜೀವನಕ್ಕೆ ನಾಂದಿ ಎಂಬುದು ಮಾತ್ರ ಸತ್ಯ.

ಚಿಕ್ಕ ವಯಸ್ಸಿನಿಂದಲೂ ನಾನೊಬ್ಬ ಕನಸುಗಾರ. ಹತ್ತು ವರ್ಷ ತುಂಬುವ ಮೊದಲೇ ಭಾವೀ ಪತ್ನಿಯ ಬಗ್ಗೆ ಯೋಚಿಸಲಾರಂಭಿಸಿದ್ದೆ! ಇಷ್ಟರಲ್ಲಿ 'ಅವಳು' ನನಗಾಗಿ ಜನ್ಮ ತಳೆದಿರಲೇಬೇಕು. ಆಕೆ ಯಾರೆಂದು ಮೊದಲೇ ತಿಳಿದು ಒಮ್ಮೆ

---

೧ ವಿವಾಹದ ನಂತರವೂ ನನ್ನವಳು ಮಾನಸಿಕವಾಗಿ ಬೆಳೆಯುತ್ತಲೇ ಇದ್ದು ಡಾಕ್ಟರೇಟು ಗಿಟ್ಟಿಸಿ, ಮೂರು ಪುಸ್ತಕ ಪ್ರಕಟಿಸಿ, ಅಕಾಡೆಮಿ ಬಹುಮಾನ ಪಡೆದು ಆಕಾಶವಾಣಿ ನಿರ್ದೇಶಕಿಯಾಗಿ ಇನ್ನಿತರರು 'ತಾವು ಮೇಡಂ,' ಎಂದೆಲ್ಲ ಗೌರವ ಕೊಟ್ಟು ಮಾತನಾಡಿಸಿದರೂ ನಾನು ಮಾತ್ರ ಯಾವ ಯತ್ನವಿಲ್ಲದೇ ಏಕವಚನದಿಂದಲೇ ಸಂಬೋಧಿಸುತ್ತೇನೆ. ಆದರೆ ಅವಳು ಮಾತ್ರ ಹಿಂದಿನಂತೆಯೇ 'ರಾಯರೇ, ದೊರೆಗಳೇ' ಎಂದೇ ಕರೆಯುತ್ತಾಳೆ!

ಮುಖದರ್ಶನವಾಗುವಂತಿದ್ದರೆ........? ಅವಳು ಸುಂದರಿಯಾಗಿದ್ದಿರಬೇಕು. ಅದರೊಂದಿಗೆ ಜಾಣೆಯೂ ಆಗಿದ್ದರೆ....ಅವಳಾರು ಎಂದು ಇದೀಗಲೇ ಪತ್ತೆ ಮಾಡಲು ಸಾಧ್ಯವಾಗುವಂತೆ ಇದ್ದರೆ....ಇತ್ಯಾದಿ. ಹದಿಹರೆಯದಲ್ಲಿ ವಿಚಾರ ಲಹರಿ ಬೇರೆಯೇ ದಿಕ್ಕನ್ನು ಹಿಡಿಯುತ್ತಿತ್ತು. ಕೇಳುವ ಪ್ರಶ್ನೆಗಳು ನೂರು ಇದ್ದರೆ, ಹೇಳುವ ಸಂಗತಿಗಳು ಸಾವಿರ ಇರುತ್ತಿದ್ದವು. ಭಾವೀ ಪ್ರೇಯಸಿಯೊಂದಿಗೆ ಮಾತನಾಡಲು ಸಿಗದಿದ್ದರೆ ಹೋಗಲಿ, ಅವಳು ಸ್ಥಾನೀಯಳಾಗಿದ್ದರೆ ಚೀಟಿಗಳನ್ನು ಅದಲು ಬದಲು ಮಾಡುವ, ದೂರದವಳಾದರೆ ಪತ್ರಸಲ್ಲಾಪ ನಡೆಸುವ ಸ್ವಾತಂತ್ರ್ಯ ವಾದರೂ ಇದ್ದಿರಬೇಕಾಗಿತ್ತು! ಎಂದು ಚಡಪಡಿಸಿದ್ದೂ ಇದೆ. ಕಾಲೇಜ ವಿದ್ಯಾರ್ಥಿ ಯಾಗಿದ್ದಾಗ, ಶರತ್ ಕಾದಂಬರಿಗಳು ಇಷ್ಟವಾಗುವ ದಿನಗಳಲ್ಲಿ 'ಅವಳು' ಕಥಾ ನಾಯಕಿಯಂತೆ, ದಯಾಮಯಿ; ತ್ಯಾಗಿ, ಪ್ರೇಮಮಯಿಯಾಗಿರಬೇಕೆಂಬ ಆದರ್ಶ ಮನೆಮಾಡಿಕೊಂಡಿತ್ತು....ನನ್ನ ಪುರಾಣವೇ ಹೆಚ್ಚಾಯಿತು ಎಂದೆಯಾ? ಬೇರೇ ನಾದರೂ ಹೇಳಲಾ?

ನನ್ನ ಜೀವನ ನಿನ್ನೊಂದಿಗೆ ಹಾಸು ಹೊಕ್ಕಾಗಲಿದೆ, ಎಂದು ಅರಿವಾಗಿದ್ದ ರಿಂದ ಅಂತರ್‌ಮುಖಿಯಾಗಿಬಿಟ್ಟಿದ್ದೇನೆ. ಏನೇನೋ ವಿಚಾರಗಳು ಸದಾಕಾಲವೂ ಮಿದುಳನ್ನು ಆವರಿಸಿಕೊಂಡಿರುವದರಿಂದ ಮೈಮೇಲೆ ಪರಿವೆಯೇ ಇರುವದಿಲ್ಲ. ಇಂದು ಮುಂಜಾನೆ ಏಳುತ್ತಿದ್ದಂತೆ, ಈ ಕೋಮಲಾಂಗಿಗೆ ನಾನು ಯೋಗ್ಯನಾದ ವನೇ? ಎಂಬ ಪ್ರಶ್ನೆ ಭುಗ್! ಎಂದು ತಲೆಎತ್ತಿ ಕಾಡಲಾರಂಭಿಸಿತು. ರೂಪ-ರಂಗಿನ ಬಗ್ಗೆ ಎಂದೂ ತಲೆ ಕೆಡಿಸಿಕೊಳ್ಳದವನು, ಕನ್ನಡಿಯೆದುರು ನಿಂತು ಪ್ರಪ್ರಥಮ ಬಾರಿ ಎವೆಯಿಕ್ಕದೇ ಕೆಲ ನಿಮಿಷ ನನ್ನನ್ನು ನಾನು ನೋಡಿಕೊಂಡೆ. ತಲೆಕೂದಲು ಕಿವಿಗಳನ್ನು ಆಕ್ರಮಿಸಿಕೊಂಡು ಬಿಟ್ಟಿವೆ! ಎಂದು ಹೋಗಿ ಹಜಾಮತಿ ಮಾಡಿಸಿಕೊಂಡು ಬಂದೆ. ಮುಖ, ಕ್ಷೌರಕ್ಕೆ ಅರಚಿಕೊಂಡರೆ, ಹೊಟ್ಟೆ, ಕಾಫಿಗೆ ಕೂಗಿಕೊಂಡಿತು. ಮಗ್ ತುಂಬ ಕಾಫಿ, ಲೋಟ ತುಂಬ ದಾಡಿಗೆ ಬಿಸಿ ನೀರು ತಂದು ಕಾರ್ಯೋನ್ಮುಖಿಯಾದೆ. ಇದೇ ಸಮಯಕ್ಕೆ ನನ್ನವಳು ಕಾಫಿ ಸವಿಯು ತ್ತಿರಬಹುದೇ? ಉತ್ತರ ಕರ್ನಾಟಕದಲ್ಲಿ ಬೆಳೆದಿದ್ದರಿಂದ ಚಹಾದ ಮೇಲೆ ಪ್ರೀತಿ ಹೆಚ್ಚಾಗಿರಬಹುದು. ಎಂದೆಲ್ಲ ವಿಚಾರಿಸುತ್ತ ಕಾಫಿ ಸವಿದು, ಕ್ಷೌರ ಮುಗಿಸಿದ್ದೆ. ರೇಝರ್ ತೊಳೆಯುವದಕ್ಕಾಗಿ ಬಚ್ಚಲಿಗೆ ಹೋಗುತ್ತೇನೆ-ಕಣ್ಣೇ ನಂಬಲಾಗದು. ಬಿಸಿ ನೀರು ಕುಡಿದು, ಕಾಫಿಯಿಂದ ಕ್ಷೌರಮಾಡಿಕೊಂಡಿದ್ದೆ! ಬೆಪ್ಪುತನಕ್ಕೆ ನಗುತ್ತಿ

ಯಲ್ಲವೇ? ನಗು, ಬೇಕಾದಷ್ಟು ನಗು. ಹೊಟ್ಟೆ ಬಿರಿಯುವಷ್ಟು ನಗು. ಆದರೆ ಗೆಳತಿಯರಿಗೆ ಮಾತ್ರ ಈ ಘಟನೆ ತಿಳಿಯಗೊಟ್ಟರೆ, ಚರ್ಮ ಸುಲಿದಿಡುತ್ತೇನೆ. ತಿಳಿಯಿತೇ? ಖಬರದಾರ್!

ಸುಂದರ ಪ್ರೇಮ ಪತ್ರವೊಂದನ್ನು ಬರೆಯಬೇಕೆಂದು ನನ್ನದು ಬಹಳ ವರ್ಷಗಳ ಆಶೆ. ಆದರೆ ಹೇಗೆ ಬರೆಯಬೇಕು ಎಂದು ತಿಳಿಯದು. ನೀನೇನಾದರೂ ಅರಿತಿದ್ದರೆ ತಿಳಿಸುವ ಕೃಪೆ ಮಾಡುವಿಯಾ?

ಇಂತಿ ನಿನ್ನ ಮದುಮಗ,

○

೧. ಪರಿಚಯ

ಜೊಬನೇರ, ೨೬-೧೨-೧೯೬೫

ವರಸ ಮತ್ತು ಅವನ ಕುಟುಂಬದವರ ಬಗ್ಗೆ ತಿಳಿದುಕೊಳ್ಳಲು ನಿನ್ನ ದಿಲ್ಲಿಯ ದೊಡ್ಡಮ್ಮ, ಅಲ್ಲಿಯೇ ಇರುವ ನಮ್ಮ ಊರಿನ ಗೃಹಿಣಿಯೊಂದಿಗೆ ಸಂಪರ್ಕಿಸಿದ್ದು ತಿಳಿಯಿತು. ಶ್ರೀಮತಿ ಭಕ್ತಾ, ವಿವಾಹಪೂರ್ವದಲ್ಲಿ ಇಂದಿರಾ ಆಗಿದ್ದಳು, ಏಳು ವರ್ಷಗಳ ದೀರ್ಘಕಾಲ ಸಹಪಾಠಿಯಾಗಿದ್ದರೂ ಒಮ್ಮೆಯೂ ಅವಳನ್ನು ಮಾತನಾಡಿಸುವ ಗೊಡವೆಗೆ ಹೋಗಿರಲಿಲ್ಲವೆಂದರೆ ನಂಬುವಿಯಾ? ಅವಳೂ ಕೂಡ, ನಮ್ಮದೊಂದು ಆದರ್ಶ ಕುಟುಂಬ; ವರನು ಬುದ್ಧಿವಂತ, ಸಜ್ಜನ, ಸಂಭಾವಿತನೆಂದು ಸಾರಿದ್ದರಿಂದ ನಿನ್ನ ಮಾವಶಿಯವರಿಗೆ ನೆಮ್ಮದಿಯಾಗಿರ ಬೇಕು. ಪಾಪ, ಹುಡುಗಿಯರಿಗೆ ತಮ್ಮ ವೈವಾಹಿಕ ಜೀವನದ ಬಗ್ಗೆ ಎಷ್ಟೊಂದು ದುಗುಡ, ಶಂಕೆ, ಕಾತರತೆಗಳಿರುತ್ತವಲ್ಲವೇ? ವರನ ಕುಂದುಕೊರತೆಗಳು ಎಷ್ಟೇ ಇದ್ದರೂ ಅವನೊಬ್ಬ ಅದ್ವಿತೀಯನೆಂದೇ ವಧುವಿಗೆ ಆಶ್ವಾಸನೆ ನೀಡಲಾಗುತ್ತದೆ. ನೀನು ವರಿಸಲಿರುವ ವ್ಯಕ್ತಿ ಅಮೇರಿಕದಿಂದ ಡಾಕ್ಟರೇಟು ಪದವಿ ಪಡೆದ ಭಾರೀ ವಿಜ್ಞಾನಿ, ಉಜ್ವಲ ಭವಿಷ್ಯ ಅವನಿಗಾಗಿ ಕಾದಿದೆ, ಎಂಬ ಭರವಸೆ ನಿನಗೆ ಕೊಟ್ಟಿರ ಬಹುದು. ಇಷ್ಟಾದರೂ ಎಷ್ಟೋ ಜನರಲ್ಲಿ ವಿವಾಹದ ನಂತರ ಒಂದೊಂದೇ ಒಡಕುಗಳು ಹೊರಬರಲಾರಂಭಿಸಬಹುದು. ವರನು ಅತಿ ಸಿಡುಕಿನ ಸ್ವಭಾವದವ ನಿರಬಹುದು, ಗರ್ವಿಷ್ಟನಿರಬಹುದು, ಸುರಾದೇವಿಯ ಉಪಾಸಕನಿರಬಹುದು, ದುಂದುಗಾರಿಕೆ ತನ್ನ ಜನ್ಮಸಿದ್ಧ ಹಕ್ಕು ಎಂದು ಪರಿಗಣಿಸಿರಬಹುದು. ಗುಪ್ತ ಕಾಯಿಲೆಯಿಂದ ನರಳುತ್ತಿರಬಹುದು. ನಪುಂಸಕನೂ ಆಗಿರಬಹುದು! ಅಮೇರಿಕೆ ಯಲ್ಲಿ ವಿವಾಹಿತನಿರಬಹುದು. ಇವೆಲ್ಲ ಸಾಧ್ಯತೆಗಳಿದ್ದರೂ ನೀನು ತಲೆ ಕೆಡಿಸಿ ಕೊಳ್ಳದೇ ಹಗಲುಗನಸುಗಳನ್ನು ಕಾಣುತ್ತಿರುವದು ಮೋಜಿನ ಮಾತಲ್ಲವೇ? ಇವುಗಳಲ್ಲಿ ಒಂದಾದರೂ ಕೊರತೆಯಿದ್ದರೆ ಏನು ಮಾಡುತ್ತೀಯಾ? ಸುಧಾರಿಸಲು ಸಕಲ ಪ್ರಯತ್ನ ಮಾಡಿ, ಆಗದಿದ್ದರೆ ವಿವಾಹ ವಿಚ್ಛೇದನೆ ಮಾಡಿಕೊಳ್ಳುವಿಯೇನು?

ಹೆದರದಿರು. ಅಂತಹ ಪ್ರಸಂಗ ಬಾರದು!

ನಮ್ಮ ಪೂರ್ವಜರು, ಉತ್ತರಕನ್ನಡ ಜಿಲ್ಲೆಯ ಹೊನ್ನಾವರ ಹತ್ತಿರದ ಭಾಸ್ಕೇರಿಯ ಕೃಷಿಕರು. ನಮ್ಮಜ್ಜ ವಾಸುದೇವ ಕಂಮ್ತಿ (ಕೃಷಿಕ, ತೋಟಗಾರರು, ಕಾಮತ ಶಬ್ದವನ್ನು ಹೀಗೆ ಅಪಭ್ರಂಶ ಮಾಡುವದು ವಾಡಿಕೆ)ಯವರು ಬಡಕುಟುಂಬದ ಏಳ್ಗೆಗಾಗಿ ಎಲಡಿಕೆ ವ್ಯಾಪಾರ ಪ್ರಾರಂಭಿಸಲು ನಾಲ್ಕಾಣೆಯೊಂದಿಗೆ ದೊಡ್ಡೂರಾದ ಹೊನ್ನಾವರವನ್ನು ಸೇರಿಕೊಂಡರಂತೆ. ಭಾರಿ ಹಾನಿಗೊಳಗಾಗಿ ತೊಡಗಿಸಿದ ಬಂಡವಲು ಅರ್ಧವಾದರೂ ಧೃತಿಗೆಡದೇ ವ್ಯಾಪಾರವನ್ನು ಮುಂದುವರಿಸಿದ್ದರಿಂದ. ನೂರು ರೂಪಾಯಿಗಳಷ್ಟು ಉಳಿತಾಯ ಮಾಡಲು ಸಾಧ್ಯವಾಯಿತು. ನೂರಹತ್ತು ಮೈಲಿ (೧೭೬ ಕಿ. ಮೀ.) ದೂರದ ಹುಬ್ಬಳ್ಳಿಗೆ ಎತ್ತಿನಗಾಡಿಯಲ್ಲಿ ಪ್ರಯಾಣ ಮಾಡಿ, ಹೊನ್ನಾವರದಲ್ಲಿ ಪ್ರಪ್ರಥಮ ಬಟ್ಟೆ ಅಂಗಡಿಯನ್ನು ಪ್ರಾರಂಭಿಸಿದರು. ಅವರಿಗೆ ರಾಮು, ಭಿಕ್ಕು, ಲಕ್ಷ್ಮಣ ಎಂಬ ಮೂವರು ಮಕ್ಕಳು. ಕಿರಿಯ ಲಕ್ಷ್ಮಣನು ಒಂದು ವರ್ಷದವನಿರಬೇಕಾದರೆ, ವಾಸುದೇವ ಕಾಮತರು ಸ್ವರ್ಗವಾಸಿಗಳಾದ್ದರಿಂದ ಹಿರಿಮಗ ರಾಮನೇ ಸಕಲ ಜವಾಬ್ದಾರಿ ಹೊರಬೇಕಾಯಿತು. ಸತ್ಯಯುಗದ ರಾಮನು ದೇವರ ಅವತಾರವೆಂದು ಪರಿಗಣಿಸಲ್ಪಟ್ಟರೆ ಕಲಿಯುಗದ ಈ ರಾಮ ನೂರಾರು ಜನರನ್ನು ಮೀರಿಸಿದ ಅಸಾಧಾರಣ ವ್ಯಕ್ತಿಯಾಗಿದ್ದರು, ಎಂದು ಎದೆ ತಟ್ಟಿ ಹೇಳಬಲ್ಲೆ. ಹೊನ್ನಾವರದಲ್ಲಿ ರಾಮ ಕಾಮತರ ಕುಟುಂಬಕ್ಕೆ ಸೇರಿದ ವ್ಯಕ್ತಿ ಎಂದರೆ, ಯಂತ್ರೋಪಕರಣಗಳ ಮೇಲೆ 'ಜರ್ಮನಿಯಲ್ಲಿ ತಯಾರಿಸಿದ್ದು' ಎಂದು ಬರೆದಂತೆ!

ಲಕ್ಷ್ಮಣರೇಖೆಯನ್ನು ಎಳೆಯುವ ಪ್ರಸಂಗ ತಂದುಕೊಳ್ಳದ ರಾಮ ಕಾಮತರ ಸೋದರ ಲಕ್ಷ್ಮಣ ಕಾಮತರೇ ನಿನ್ನ ಭಾವೀ ಮಾವ. ಅವಿಭಕ್ತ ಕುಟುಂಬದಲ್ಲಿ ಬೆಳೆದ ನಾವೆಲ್ಲ ತಂದೆ–ತಾಯಿಗಳನ್ನು ಕಾಕಾ–ಕಾಕಿ, ಎಂದು ಪ್ರೀತಿಯಿಂದ ಕರೆಯುತ್ತೇವೆ. ಎರಡು ಕುಮಾರಿಯರ ನಂತರ ನಿನ್ನ ಈ ಕೃಷ್ಣ, ಭೂಮಿಗೆ ಇಳಿದು ಬಂದ. ಹುಡುಗಿಯರೆಂದರೆ ಬಾಳೆಗಿಡ, ಮಗನೆಂದರೆ ಕಲ್ಪವೃಕ್ಷವೆಂದು ತಾಯಿಗೆ ಯಾರೋ ಬೋಧಿಸಿದ್ದರಿಂದ, ನಾನು ಅವರ ಅಚ್ಚುಮಚ್ಚಿನವನಾದೆ. ಅಂತೆಯೇ ಆಪ್ಪಾ! ಎಂದು ಬೋಧಿಸಲಾರಂಭಿಸಿದರು. ಶ್ರೀಕೃಷ್ಣನಿಗೆ ಸಹಸ್ರಾರು ಸಖಿಯರಿದ್ದರೆ, ಈ ಕೃಷ್ಣನಿಗೆ ಹಲವಾರು ಹೆಸರುಗಳಾದರೂ ಇವೆ. ನಮ್ಮೂರಿನಲ್ಲಿ ಕಾಮತರ ದೊಡ್ಡ ಹಿಂಡೇ ಇದ್ದುದರಿಂದ ಶಾಲಾ ಗೆಳೆಯರೆಲ್ಲ

'ಕೆ. ಎಲ್' ಎಂದು ಗುರುತಿಸಿದರೆ, ಕಾಲೇಜಿನ ಗೆಳೆಯರು ಕಾಮತ್ಯಾ ಎಂದು ಕರೆಯುತ್ತಿದ್ದರು. ಅಕ್ಕಂದಿರು ಕೃಷ್ಣಾನಂದ ಎಂದರೆ, ತಮ್ಮ-ತಂಗಿಯರು 'ಅಣ್ಣ' ನೆನ್ನುತ್ತಾರೆ. ಸೋದರಮಾವನ ಹೆಸರು ಆನಂದ ಎಂದು. ಹೀಗಾಗಿ ಮಾಮಿಯವರು 'ಕೃಷ್ಣ' ಎಂದು ಕರೆಯುತ್ತಾರೆ. ಮಾವಶಿ ಗಂಡ, ಕೃಷ್ಣರಾಯರಿದ್ದುದರಿಂದ ಅವರು 'ಆನಂದ' ಎಂದು ಕೂಗುತ್ತಾರೆ. ಆತ್ಮೀಯ ಗೆಳೆಯರು 'ಕಾಮ್ತೀss' ಎಂದರೆ ನಾಲಿಗೆ ಹೊರಳದ ಅಮೇರಿಕನ್ನರಾದರೋ 'ಕ್ರಿಶ್' ಇಲ್ಲವೇ 'ಕ್ರಿಸ್' ಎಂದು ಗುರುತಿಸುತ್ತಾರೆ.[೨] ರಾಜಸ್ತಾನಿಗಳು ಮಾಸ್ಟರ್‌ಸಾಬ್ ಎಂದರೆ, ಸಹೋದ್ಯೋಗಿಗಳು, ಡಾ. ಕಾಮತ್, ವಿದ್ಯಾರ್ಥಿಗಳು ಡಾಕ್ಟರ್‌ಸಾಬ್, ಹಿಂದಿವಾಲಾರು 'ಅಂಕಲ್‌ಜಿ', ಚಿಕ್ಕಮಕ್ಕಳು 'ಚಾಚಾಜಿ' ಎಂದು ಕರೆಯುವದುಂಟು. ನೀನು ಏನೆಂದು ಕರೆಯಬೇಕೆಂದು ಇನ್ನೂ ನಿರ್ಧರಿಸಿಲ್ಲವೇ?

ಈ ಹಿಂದೆಯೇ ನಮ್ಮವರೆಲ್ಲರ ಪರಿಚಯ ಮಾಡಿಕೊಡಬೇಕಾಗಿತ್ತು. ಈಗ ಇದರೊಂದಿಗೆ ಕಳಿಸಿದ ಗುಂಪಿನ ಚಿತ್ರದಿಂದ ಅದನ್ನು ಮಾಡಲು ಯತ್ನಿಸುತ್ತಿದ್ದೇನೆ. ನಟ್ಟನಡುವೆ ಕುಳಿತವರು ನಮ್ಮೆಲ್ಲರ ಕಾಕಾ. ಅವರು ವ್ಯಾಪಾರಿಗಳಾದರೂ ಎಂದೂ ವ್ಯಾಪಾರಿ ಬುದ್ಧಿ ತೋರಿಸಿದವರಲ್ಲ. ಅವರನ್ನು ಪ್ರೀತಿಸಿದಷ್ಟೆ ಹೆದರುತ್ತೇವೆ ಕೂಡ. ರೇಗುವದಾಗಲಿ, ಸುಳ್ಳು ಹೇಳುವದಾಗಲಿ ಅವರ ಜಾಯಮಾನಕ್ಕೆ ಹೇಳಿದ್ದಲ್ಲ. ಶಾಲೆಗೆ ಹೋಗದ ಪತ್ನಿಯನ್ನು ಸರಿಸಮಾನಳು ಎಂದು ನಡೆಸಿಕೊಳ್ಳುವಷ್ಟು ಸುಸಂಸ್ಕೃತರು. ನಮ್ಮ ಕಾಕಿ, ತೀರ ಭೋಳೆ ಸ್ವಭಾವದವರು. ಅವರ ಹೃದಯ ವಿಶಾಲತೆಗೆ ಮೇರೆಯೇ ಇಲ್ಲ. ಗೃಹವೈದ್ಯ ಬಲ್ಲ ಅವರು ಊರವರಿಗೆ ಒಂದಿಲ್ಲೊಂದು ರೀತಿಯಿಂದ ನೆರವಾಗುತ್ತಲೇ ಇರುವದರಿಂದ ಅವರನ್ನು ಅರಿಯದವರಿಲ್ಲ. ಅವರಿಬ್ಬರ ನಡುವೆ ನಿಂತವ ಕಿರಿಯ ತಮ್ಮ ಗಜಾನನ. ತುಂಬ ಚುರುಕು. ಕಲೆಗಳಲ್ಲಿ ವಿಪರೀತ ಆಸಕ್ತಿ. ಎಡಕ್ಕೆ ಕುಳಿತವನು ಹಿರಿಯ ತಮ್ಮ ಉಮೇಶ. ಬಟ್ಟೆ ವ್ಯಾಪಾರವನ್ನು ಈಗಾಗಲೇ ಸಿದ್ಧಿಸಿಕೊಂಡಿದ್ದರಿಂದ ಕಾಕಾರಿಗೆ ಸ್ವಲ್ಪ ಬಿಡುವು ಸಿಗುವಂತಾಗಿದೆ. ಬಲಕ್ಕೆ ಕುಳಿತವ ಮೂರನೆಯ-ಸೋದರ

---

೨. ನೋಡಿ: ಮನೋಹರ ಗ್ರಂಥಮಾಲೆಯವರೇ ೧೯೬೯ ರಲ್ಲಿ ಪ್ರಕಟಿಸಿದ 'ನಾನೂ ಅಮೇರಿಕೆಗೆ ಹೋಗಿದ್ದೆ' ಪ್ರವಾಸ ಕಥನದ 'ನಾಮಾಂತರ' ಅಧ್ಯಾಯವನ್ನು.

ತುಳಸೀದಾಸ. ವಿದ್ಯೆಗಿಂತ ವ್ಯಾಪಾರದತ್ತ ಒಲವು ಜಾಸ್ತಿ! ನಿಂತವರಲ್ಲಿ ಮೊದಲಿಗಳು ಸುಮಿತ್ರಾ. ಬಿ.ಎ.ಗೆ ಓದುತ್ತಿದ್ದಾಳೆ. ಎಲ್ಲರಲ್ಲಿಯೂ ಒಂದಾಗಿ ಹೋಗುವ ಸ್ವಭಾವದವಳು. ಎರಡನೆಯವಳು ಪುಷ್ಪಾ. ಗೃಹಕೃತ್ಯದಲ್ಲಿ ಎತ್ತಿದಕೈ. ಮೂರನೆಯವಳು ಮಾಲಿನಿ. ಸದಾಕಾಲ ನನ್ನನ್ನು ಗೋಳು ಹೊಯ್ದುಕೊಳ್ಳುತ್ತಲೇ ಇರುತ್ತಾಳೆ. ನಿನ್ನ ಹೆಸರು ಬಲು ಬಿಗಿಯಂತೆ. ಅಡ್ಡ ಹೆಸರು ಅಸಹ್ಯವಂತೆ! ವಿವಾಹದ ನಂತರ ಹೆಸರು ಬದಲಾಗುತ್ತದೆ ಎಂದಾಗ ಏನು ಹೆಸರಿಡುತ್ತಿ? ಎಂದು ಪೀಡಿಸಲಾರಂಭಿಸಿದಳು. 'ಮಂಕಾಳಿ' ಎಂದು ಬಂದ ಉತ್ತರದಿಂದ ಭಾರಿ ಖುಷಿಪಟ್ಟಳು. ಗುಪ್ತ ಹೆಸರೇನು? ಎಂದಾಗ ಅದು ಗುಪ್ತವಾಗಿಯೇ ಇದ್ದರೆ ಚೆನ್ನ, ಎಂದರೂ ಬಿಡದೇ ದುಂಬಾಲು ಬಿದ್ದಳು. ಕೊನೆಗೆ ಸೋತು 'ಸುಬ್ಬಿ' ಎಂದಾಗ ಚಪ್ಪಾಳೆ ತಟ್ಟಿ ಸಂತೋಷಪಟ್ಟಳು. ಕೊನೆಯಲ್ಲಿ ನಿಂತವಳು ಸಣ್ಣ ತಂಗಿ ಮಂಗಳಾ. ಮಾತಿನಲ್ಲಿ, ಕೆಲಸದಲ್ಲಿ ಭಾರೀ ಜೋರು. ಕೆಲವೇ ದಿನಗಳಲ್ಲಿ ನೀನೂ ಇವರಲ್ಲಿ ಒಬ್ಬಳಾಗಲಿರುವಿ.

ಇನ್ನುಳಿದ ಆಪ್ತರ ಪರಿಚಯ ಮಾಡಿಕೊಡಲೇ? ಭಾಸ್ಕೇರಿಯಿಂದ ಕಾಮ್ತಿಯವರ ಇನ್ನೊಂದು ಶಾಖೆ ಹೊನ್ನಾವರಕ್ಕೆ ಬಂದು ತಳಊರಿತು. ಈ ಬಣದವರೂ ಜವಳಿ ವ್ಯಾಪಾರ ಪ್ರಾರಂಭಿಸಿದರು. ಸ್ಪರ್ಧೆಯ ಬದಲಾಗಿ ಸಹಕಾರ-ಸ್ನೇಹಗಳನ್ನೇ ಕಾಮತ ಕುಟುಂಬ ಯಶಸ್ಸಿನ ತಳಹದಿಯನ್ನಾಗಿ ಸ್ವೀಕರಿಸಿತು. ದಾಯಾದಿಗಳಲ್ಲಿ ಮತ್ಸರ, ಅಸೂಯೆ, ಅಸಹಕಾರಗಳೇ ಅಧಿಕವಾಗಿರುವದು ತೀರ ಸಾಮಾನ್ಯ. ನಮ್ಮ ಊರಿನ ಹೆಸರಾಂತ ಕುಟುಂಬದ ಬಂಧುಗಳು ಆಸ್ತಿ-ಪಾಸ್ತಿಗಳಿಗಾಗಿ ಕಚ್ಚಾಡಿ ಕೋರ್ಟಿಗೆ ಹೋಗಲು ಖ್ಯಾತ ವಕೀಲ ಕಿಣಿಯವರ ಮೊರೆ ಹೊಕ್ಕಾಗ, ಅವರು ಮನಸ್ವಿ ಬೈದು, "ಮೊದಲು ಊರನ್ನು ಸುಲಿದು ಆ ಬಳಿಕ ನಿಮ್ಮವರನ್ನೇ ಹರಿದು ತಿನ್ನಿರಿ........ ಕಾಮತ ಬಂಧುಗಳನ್ನು ನೋಡಬಾರದೇ?" ಎಂದು ಕೈಮಾಡಿ ತೋರಿಸಿದ್ದರಂತೆ. ಭಾಸ್ಕೇರಿ ಕಾಮ್ತಿಗಳಿಗೆ ಸಹಕಾರತತ್ವ, ಅನುವಂಶಿಕವಾಗಿ ಬಂದಿರಬೇಕು. ಅಂತೆಯೇ ಅವರು ಊರನ್ನು ಕೊಳ್ಳೆ ಹೊಡೆಯದಿದ್ದರೂ, ಧನಿಕರಾಗಲು ಹಿಂದೆ ಬೀಳಲಿಲ್ಲ. ಆಸ್ತಿ-ಪಾಸಿಗಳಿಗಾಗಿ ಎಂದೂ ಕಾದಾಡಲಿಲ್ಲ. ಕೆಲವರು ವಕೀಲರಾಗಿ, ಸಮಾಜ ಸೇವಕರಾಗಿಯೂ ಹೆಸರುವಾಸಿಯಾಗುವದರ ಜೊತೆಗೆ ಜನರ ಪ್ರೀತಿ-ಆದರಗಳಿಗೆ

ಪಾತ್ರರಾಗಿದ್ದಾರೆ. ಆದ್ದರಿಂದ ನೀನೂ ಹೆಸರಿನ ಹಿಂದೆ ಭಾಸ್ಕೇರಿ ಎಂದು ಸೇರಿಸಿದರೆ ಜನರು ಗೌರವದಿಂದ ಕಾಣುವಂತಾಗಬಹುದು.

ಕಾಕಿಯವರ ಬಳಗ ಅತ್ಯಂತ ದೊಡ್ಡದು. ದೇಶಾದ್ಯಂತ ಹರಡಿಕೊಂಡಿದೆ ಎಂದರೂ ನಡೆದೀತು. ಮದುವೆ-ಮುಂಜಿಗಳಿಗೆ ಅವರೆಲ್ಲ ಒಟ್ಟು ಸೇರಿದಾಗ, ಅವರಾಡುವ ಕೊಂಕಣಿಯಲ್ಲಿ ವಿಸ್ಮಯ ತರುವಷ್ಟು ವಿವಿಧ ಪ್ರಕಾರಗಳಿವೆ. ಗೋವಾದ ಮಾವಶಿಯವರು ಪೋರ್ಚಗೀಸ್ ಮಿಶ್ರಿತ ಪ್ಯೂರ್ ಮೂಲ ಕೊಂಕಣಿ ಮಾತನಾಡಿದರೆ, ಶೃಂಗೇರಿಯ ಚಿಕ್ಕಮ್ಮ ಕನ್ನಡ ಮೇಲುಗೈಯಾದ ಕನ್‌ಕೊಂಕಣಿ ಮಾತನಾಡುವರು. ಕೊಲ್ಲಾಪುರದ ಮಾಮಿಯವರಿಗೆ ಮರಾಠಿ-ಕೊಂಕಣಿಗಳಲ್ಲಿಯ ಅಂತರವೇ ಈ ವರೆಗೆ ತಿಳಿದಿಲ್ಲ! ಅವರ ಯಜಮಾನ, ನನ್ನ ಸೋದರಮಾವ, ಐ.ಎ.ಎಸ್ ಪರೀಕ್ಷೆ ಪಾಸು ಮಾಡಿ ಮಹಾರಾಷ್ಟ್ರ ಸರಕಾರದ ದೊಡ್ಡ ಹುದ್ದೆಯಲ್ಲಿದ್ದಾರೆ. ನಿನ್ನ ಚಿಕ್ಕಪ್ಪ, ಅವರ ವಿದ್ಯಾರ್ಥಿ ಹಾಸ್ಟೆಲಿನಲ್ಲೇ ಇದ್ದರಂತೆ. ಆಗಲೇ ತಮ್ಮ ಅಣ್ಣನ ನಾದಿನಿಯಲ್ಲಿ ಅನುರಕ್ತರಾದ ಅವರ ಪ್ರಣಯ-ಪ್ರಸಂಗವನ್ನು ಮಾಮಾರ ಬಾಯಿಂದಲೇ ಕೇಳುವದು ಮೋಜಾಗಿರುತ್ತದೆ. ಇಂದಿಗೂ ಅವರ ಜೋಡಿ, ನವಪ್ರೇಮಿಗಳಂತೆ ಒಬ್ಬರಿಗಾಗಿ ಇನ್ನೊಬ್ಬರು ಹಾಸುಹೊಕ್ಕಾಗಿ ಬದುಕುತ್ತಿರುವದು ಅಚ್ಚರಿಯಲ್ಲವೇ?

○

೩. ರೂಪ ಲಾವಣ್ಯ

ಜೊಬನೇರ, ೨೦-೧-೧೯೬೬

ನಿನ್ನಪ್ಪ, ರಾಯಚೂರಿನ ಪೋಸ್ಟ ಮಾಸ್ತರ್ ಆದರೂ ಅದೇ ಅಂಚೆ ಖಾತೆಯವರು, ಜೊಬನೇರ್-ಧಾರವಾಡಗಳ ನಡುವೆ ಅಂಚೆಯನ್ನು ವಿದ್ಯುತ್ ವೇಗದಿಂದ ತಲುಪಿಸುವ ವ್ಯವಸ್ಥೆ ಮಾಡಿರದ್ದರಿಂದ ಏಕಪಕ್ಷೀಯವಾಗಿ ಪತ್ರ ಬರೆಯಲಾರಂಭಿಸಿದ್ದೇನೆ. ಮೊನ್ನೆ ಈ ಪುರಾಣಭಟ್ಟರು, ಕಥಾನಾಯಕನು ಕಾಫಿಯಿಂದ ಕ್ಷೌರ ಮಾಡಿಕೊಂಡ ಕಥೆ ವಿವರಿಸಿದ್ದರಲ್ಲವೇ? ಇವತ್ತು ಮುಂದಿನದನ್ನು ಆಲಿಸುವಂಥವಳಾಗು! ಕ್ಷೌರ ಮಾಡಿಕೊಂಡ ನಂತರ ಕನ್ನಡಿಯಲ್ಲಿ ಅಪಾದ ಮಸ್ತಕ ನೋಡಿಕೊಂಡಾಗ ಜಿಗುಪ್ಸೆಯಾಯಿತು. ಕೊಂಚ ಬೋಳು ಕಾಣಿಸಿಕೊಳ್ಳುತ್ತಿರುವ ತಲೆ, ಗುಳಿಬಿದ್ದ ಕಣ್ಣುಗಳು, ಉದ್ದ ಮೂಗು, ಜೊಂಡಿಗ ಮೀಸೆ, ಡೊಳ್ಳು ಹೊಟ್ಟೆ....ಛೀ! ಈ ನೆಂಟಸ್ತಿಕೆಗೆ ಒಪ್ಪಿಕೊಳ್ಳಲೇಬಾರದಿತ್ತು! ನನ್ನವಳು ಚೆಲುವೆ. ತಲೆತುಂಬ ಅಪರೂಪದ ಕಪ್ಪಾದ ದಟ್ಟ ಕೇಶರಾಶಿ. ದಪ್ಪದಪ್ಪ ಜೋಡಿ ಜಡೆಗಳು, ಮೊಣಕಾಲುಗಳನ್ನು ಅಳೆಯಲು ಹೊರಟಂತೆ ಅನಿಸುತ್ತದೆ. ಹುಣ್ಣಿಮೆಯ ಚಂದ್ರನನ್ನು ನೆನಪಿಸುವ ಮುಖಮಂಡಲ. ಕಾಡಿಗೆ ಹಚ್ಚಿಕೊಳ್ಳುವ ಪ್ರಮೇಯವೇ ಬಾರದಂತಹ ನೇತ್ರಗಳು. ಗೌರವರ್ಣ, ತುಂಬಿಕೊಂಡ ಮೈ, ಕೈ, ಹೀಗಿದ್ದರೂ ನನ್ನನ್ನು ಏಕೆ ಒಪ್ಪಿಕೊಂಡಳು? 'ಪಾಲಿಗೆ ಬಂದದ್ದೇ ಪಂಚಾಮೃತ' ತತ್ವಜ್ಞಾನ ಹೀಗೆ ಮಾಡಿಸಿತೆ? ಇಲ್ಲವೇ ತೌರಿನ ಮೃಷ್ಟಾನ್ನ ಭೋಜನಕ್ಕಿಂತ ಗಂಡನ ಗಂಜಿ ಲೇಸೆಂಬ ನಿರ್ಧಾರಕ್ಕೆ ಬಂದಿರಬಹುದೇ? ಮನಸ್ಸಿಲ್ಲದಿದ್ದರೆ ಈಗಲೂ ನಾವು ಜೀವನದ ಬೇರೆ ಬೇರೆ ದಾರಿ ತುಳಿಯೋಣವೆಂದು ಬರೆದು ಬಿಡಲೇ........ಹೀಗೆ ಹೊರಟಿತ್ತು ವಿಚಾರ ಲಹರಿ. ಒಮ್ಮೆಲೆ ದುಡುಕುವದು ಸರಿಯಲ್ಲವೆಂದು ನುಡಿಯಿತು ವಿವೇಕ. ಮೊನ್ನೆ ಕೇವಲ ಬಿಸಿನೀರಿನಿಂದ ನಾಶ್ತಾ ಮುಗಿಸಿದ್ದರಿಂದ ಇಂದು ಎಚ್ಚರಿಕೆಯಿಂದ ಹೊಗೆಯಾಡುವ ಕಾಫಿ ತಯಾರಿಸಿ ಸಾರಾಸಾರ ವಿಚಾರ ಮಾಡಲಾರಂಭಿಸಿದೆ....

....ಈ ದೀರ್ಘಾವಧಿಯಲ್ಲಿ ನನ್ನನ್ನು ಯಾರೂ ಕುರೂಪಿ ಎನ್ನುವ ಸಾಹಸ ಮಾಡಿರಲಿಲ್ಲ. ಬದಲಾಗಿ ಮಗುವಿದ್ದಾಗ ಕರ್ಪೂರದ ಗೊಂಬೆಯಂತೆ ಇದ್ದೆನೆಂದು ಮಾತೋಶ್ರೀಯವರು ಸದಾಕಾಲ ಹೇಳುತ್ತಲೇ ಇರುತ್ತಾರೆ. ಹಾಗಿದ್ದರೆ ನಿಜ ವಾಗಿ ಹೇಗೆ ಕಾಣುತ್ತೇನೆ ಎಂದು ಪರೀಕ್ಷೆ ಆಗಿಯೇ ಹೋಗಲಿ ಎಂದು ಕಾರ್ಯೋ ನ್ಮುಖಿಯಾದೆ. ಕೈ-ಕಾಲಿನ ಉಗುರುಗಳನ್ನು ಕತ್ತರಿಸಿಯಾಯಿತು. ಮುಖ ಕಾಣುವಂತೆ ಬೂಟುಗಳನ್ನು ಪಾಲಿಶ್ ಮಾಡಿದಾಯಿತು. ಬ್ರಿಲ್‌ಕ್ರೀಮ್ ಸವರಿ ತಲೆ ಕೂದಲನ್ನು ಮಾಟವಾಗಿ ಬಾಚಿಕೊಂಡಾಯಿತು. ಪೊದೆ ಮೀಸೆಗಳು, ತಲವಾರದ ಆಕಾರವನ್ನು ತಳೆದವು. ಎಂದಿಲ್ಲದ ಸ್ನೋದಿಂದ ಮುಖ ಘಮಘಮಿಸ ಲಾರಂಭಿಸಿತು. ಮಡಿವಾಳನು ತಂದುಕೊಟ್ಟ ಶುಭ್ರ ಶರ್ಟು-ಪ್ಯಾಂಟು ಧರಿಸಿ ಅವಕ್ಕೊಪ್ಪುವ ಕಂಠ-ಲಂಗೋಟ ಕಟ್ಟಿಕೊಂಡು ಕೋಟನ್ನು ಮೈಗೇರಿಸಿಕೊಂಡು ಕನ್ನಡಿಯ ಮುಂದೆ ನಿಂತಾಗ, ಕಣ್ಣುಗಳನ್ನು ನಂಬುವದು ಕಷ್ಟವಾಯಿತು. ಅಮೇರಿಕೆ ಯಿಂದ ಮರಳಿದವನೆಂದು ಈಗ ಯಾರೂ ಶಂಕಿಸಲಾರರು! ಅನಿಸಿತು. ಇನ್ನಿತರರು ಸದಾಕಾಲವೂ ತಮ್ಮ ಬಾಹ್ಯರೂಪದ ಆಕರ್ಷಕತೆಯ ಬಗ್ಗೆ ಸಾಕಷ್ಟು ಕಾಳಜಿ ವಹಿಸುವದರಿಂದ ತಕ್ಕಮಟ್ಟಿಗೆ ಚೆನ್ನಾಗಿಯೇ ಕಾಣುತ್ತಾರೆ. ಅವರ ಮೇಲ್ಪಂಕ್ತಿ ಯನ್ನು ಅನುಸರಿಸಿದರೆ ನಾನೂ ಎದ್ದು ಕಾಣಬಲ್ಲೆ, ಅನಿಸಿತು. ಆ ಕೂಡಲೇ ಸ್ಟುಡಿಯೋ ಒಂದಕ್ಕೆ ಧಾವಿಸಿ, ಭಾವಚಿತ್ರವೊಂದನ್ನು ತೆಗೆಯಿಸಿ ನಿನಗೆ ಕಳಿಸಿ ಕೊಡೋಣವೆನಿಸಿತು. ಆದರೆ ಈ ಜೊಬನೇರದ ಕಗ್ಗಳ್ಳಿಯಲ್ಲಿ ಛಾಯಾಚಿತ್ರ ಗಾರರು ಯಾರೂ ಇಲ್ಲವೆಂದು ನೆನೆಸಿಕೊಂಡಾಗ ಉತ್ಸಾಹಕ್ಕೆ ನೀರೆರೆಚಿದಂತಾಯಿತು.

ಸೌಂದರ್ಯದ ಬಗ್ಗೆ ಬರೆಯುವಾಗ, ಹಿಂದೊಮ್ಮೆ ನೋಡಿ ನಲಿದ ಒಂದು ಏಕಾಂಕ ನಾಟಕ ನೆನಪಿಗೆ ಬರುತ್ತದೆ. ಕಾಲೇಜ-ವಿದ್ಯಾರ್ಥಿಯಾಗಿದ್ದಾಗ ಮೂರು ವಾರದ ಎನ್. ಸಿ. ಸಿ. ತರಬೇತಿಗೆ ಮುಂಬೈಗೆ ಹೋಗಿದ್ದೆ. ಒಂದು ರಾತ್ರಿಯ ವಿನೋದಾವಳಿಯಲ್ಲಿ ಮುಂಬಯಿ ತಂಡದವರು ಈ ವಿಷಯದ ಕುರಿತಾದ ಕಿರು ಮರಾಠಿ ನಾಟಕ ಆಡಿದ್ದರು. ಇಂದಿಗೂ ಅದು ಕಣ್ಣಿಗೆ ಕಟ್ಟಿದಂತಿದೆ. ನವಜವ್ವನೆ ಕಥಾ ನಾಯಕಿ ಅಪೂರ್ವ ಸುಂದರಿ, ಜಾಣೆಯಾಗಿದ್ದರೂ ಹುಟ್ಟುಕುರುಡಿಯಾಗಿದ್ದ ರಿಂದ ವಿವಾಹ, ಸಮಸ್ಯೆಯಾಗಿ ಪರಿಣಮಿಸುತ್ತದೆ. ಕೊನೆಗೂ ನಿರ್ದಯರಾದ ಪಾಲಕರು ಅತ್ಯಂತ ಕುರೂಪಿಯಾದ ಸಾಮಾನ್ಯನೊಬ್ಬನಿಗೆ ಧಾರೆಯೆರೆದು ಕೊಡುತ್ತಾರೆ. ಅವನಲ್ಲಿ ಧನ, ಸೌಂದರ್ಯಗಳಿಲ್ಲದಿದ್ದರೂ ಪ್ರೀತಿಗೆ ಏನೇನೂ

ಕೊರತೆ ಇಲ್ಲದ್ದರಿಂದ ಅವರಿಬ್ಬರೂ ತೀರ ಅನ್ಯೋನ್ಯವಾಗಿರುತ್ತಾರೆ. ಕೆಲಕಾಲದ ನಂತರ ವಿದೇಶೀ ಅಕ್ಷುತಜ್ಞರು, ಖರ್ಚಿಲ್ಲದೇ ಸುಂದರಿಗೆ ದೃಷ್ಟಿದಾನ ಮಾಡಿಸುವದಾಗಿ ಆಮಂತ್ರಣ ಕಳಿಸುತ್ತಾರೆ. ತಾವು ಹೀಗೆಯೇ ಸುಖಿಯಾಗಿರುವಾಗ ದೃಷ್ಟಿಯ ಅವಶ್ಯಕತೆ ಇಲ್ಲವೆಂದು ಪತ್ನಿ ವಾದಿಸಿದರೂ, ಪತಿ, ತುಂಬಕಷ್ಟಪಟ್ಟು ಹಣ ಹೊಂದಿಸಿ ನೇತ್ರ-ತಜ್ಞರಿಂದ ಆಪರೇಶನ್ ಮಾಡಿಸಿಯೇ ಬಿಡುತ್ತಾನೆ. ಸಕಲವೂ ಸುಸೂತ್ರವಾಗಿ ನಡೆದಿದ್ದರಿಂದ ಮರುದಿನ ಅವಳ ಕಣ್ಣಿನ ಬ್ಯಾಂಡೇಜು ಬಿಡಿಸಿದಾಗ, ಸುಂದರ ಜಗತ್ತೇ ಅವಳಿಗಾಗಿ ತೆರೆದು ನಿಲ್ಲುವದು, ಎಂದು ಸರ್ಜನರು ಸಾರಿದಾಗ, ಪತಿಯ ಆನಂದಕ್ಕೆ ಕೊನೆ ಮೊದಲಿಲ್ಲ. ಅಂತೆಯೇ ಅವಳ ಭೇಟಿಗೆ ಹೋಗಲು ಗುಲಾಬಿಗುಚ್ಛವೊಂದನ್ನು ಖರೀದಿಸಲು ಹೋದಾಗ, ಅಂಗಡಿಕಾರನು ಇಂಥವನನ್ನೂ ಪ್ರೀತಿಸುವವರು ಇದ್ದಾರೆಯೇ! ಎಂದು ವಿಸ್ಮಯ ಪಡುವಂತೆ ದುರುಗಟ್ಟಿ ನೋಡಿದಾಗ, ಪತಿಯ ಎದೆ ಡವ ಡವ ಏಕ ಪ್ರಕಾರವಾಗಿ ಬಡಿದುಕೊಳ್ಳಲಾರಂಭಿಸುತ್ತದೆ. ಪತ್ನಿ ತನ್ನ ನಿಜಸ್ವರೂಪವನ್ನು ಕೊನೆಗೊಮ್ಮೆ ನೋಡಿ ತಾತ್ಸಾರ ಮಾಡಿದರೆ! ಅಳುಕುತ್ತಲೇ ಆಸ್ಪತ್ರೆಗೆ ಧಾವಿಸುತ್ತಾನೆ. ಕೇವಲ ಧ್ವನಿಯಿಂದಲೇ ಮನದನ್ನನನ್ನು ಗುರುತಿಸಿದ ಅವಳ ಸಂತೋಷಕ್ಕೆ ಕೊನೆ ಮೊದಲಿರುವದಿಲ್ಲ. ಅವನು ತನ್ನ ದುಗುಡವನ್ನು ವಿವರಿಸಿದಾಗ, ಅವಳು ತಿರುಗಿ ಕುರುಡಿಯಾಗಲು ತನ್ನದೇನೂ ಅಭ್ಯಂತರವಿಲ್ಲ. ಆದರೆ ನಿನ್ನನ್ನು ಬಿಟ್ಟು ಒಂದು ಕ್ಷಣವೂ ಬದುಕಲಾರೆ! ಎಂದು ತನ್ನ ಅಚಲ ನಿರ್ಧಾರವನ್ನು ಹೇಳುತ್ತಾಳೆ.[೩] ಇದಕ್ಕಾಗಿಯೇ ಪ್ರೇಮ ಕುರುಡು, ಎಂದು ಹಿರಿಯರು ಅನ್ನುತ್ತಿರಬೇಕಲ್ಲವೇ?

ದೈಹಿಕ ಸೌಂದರ್ಯಕ್ಕೆ ಅತಿ ಮಹತ್ವ ಕೊಡುವ ಅಮೇರಿಕನ್ನರೂ, ವೈಚರ್ಮದೊಳಗಿನ ಸೌಂದರ್ಯ ಏಕಪ್ರಕಾರದ್ದೇ ಎಂದು ನಂಬಿದ್ದಾರೆ. ಮಾನವನು ಸೌಂದರ್ಯೋಪಾಸಕನಾಗುವದು ಮುಖ್ಯ. ಮೆರಿಲಿನ್ ಮನ್ರೋಳಂತಹ ರೂಪರಾಣಿಯ ಜೀವನ, ಮರಣಗಳ ಪರಿಯನ್ನು ಅರಿತ ಅವರು 'ಜೀವನದುದ್ದಕ್ಕೂ ಸುಖಿಯಾಗಬೇಕೆಂದಿದ್ದರೆ, ಕುರೂಪಿಯನ್ನು ಪತ್ನಿಯನ್ನಾಗಿಸು' (If you want to be happy rest of your life, make an ugly girl

---

೩. ಆನಂದವರ್ಟಿಯವರ ಪ್ರಸಿದ್ಧ ನಾಟಕ 'ರಾಣಿ ಚಾ ಬಾಗ್'ದ ಸಂಕ್ಷಿಪ್ತ ರೂಪ.

your wife) ಹೇಳುವದುಂಟು. ಭಾರತೀಯ ನಾರಿಗೆ, 'ಪತಿ ನಿನ್ನವನಾಗಿಯೇ ಉಳಿದು, ನೆಮ್ಮದಿ ಪಡೆಯಲು ಕುರೂಪಿಯನ್ನು ವರಿಸು' ಎಂಬ ದಿವ್ಯ ಮಂತ್ರವನ್ನು ಉಪದೇಶಿಸಲೇ! ಎಂದು ಯೋಚಿಸುತ್ತಿದ್ದೇನೆ. ಆದರೆ ಸುರೂಪ-ಕುರೂಪಗಳಲ್ಲಿ ಭೇದ ಕಲ್ಪಿಸುವದೇ ಕಷ್ಟಕ್ಕಿಟ್ಟುಕೊಂಡಿದೆ. ನನ್ನ ಮಟ್ಟಿಗೆ ನೀನು ಒಳ್ಳೆ ಸುಂದರಿಯಾದರೂ ಅಮೇರಿಕನ್ನರು ಸೌಂದರ್ಯ, ಎದೆ, ನಡು, ಸೊಂಟಗಳ, ಎತ್ತರ, ತೂಕಗಳ ಮಾಪನವನ್ನು ಅವಲಂಬಿಸಿರುವದರಿಂದ ಆ ಅಳತೆಗೋಲು ಬಳಸಿದರೆ, ಈ ಅಭಿಪ್ರಾಯ ಸಮರ್ಥಿಸಿಕೊಳ್ಳಲಾಗುವದೇ ಎಂಬ ಅನುಮಾನ ಇದ್ದೇ ಇದೆ!

ನಮ್ಮ ವಯಸ್ಸು ಹೆಚ್ಚಾದಂತೆ ರೂಪಲಾವಣ್ಯಗಳು ಬದಲಾಗುತ್ತವೆ. ಬೆನ್ನು ಬಾಗಿ, ಕಣ್ಣು ಮಂಜಾದಾಗ, ಕಿವಿ ಕೇಳದಾದಾಗ, ಅಂಗಸೌಷ್ಠವಕ್ಕೆ ಯಾರು ತಾನೆ ಅಗ್ರಸ್ಥಾನ ಕೊಟ್ಟಾರು? ಆಗ ನೆನಪು ಕೂಡ ಮಸುಕು-ಮಸುಕಾಗುತ್ತದೆ. ಆದ್ದರಿಂದ ನಮ್ಮ ಈ ಪತ್ರಗಳನ್ನು ಕಾದಿಡುವದೇ ಉಚಿತವೆನಿಸುತ್ತದೆ. ಮೊಮ್ಮಕ್ಕಳೊಂದಿಗೆ, ಬಿಡುವಾದಾಗ ಓದಿಸಿ ಗತದಿನಗಳನ್ನು ನೆನೆಸಿ ಆನಂದಿಸೋಣ, ಆಗದೇ?

○

೪. ಮೇಘದೂತ

ಜೊಬನೇರ, ೨೪-೧-೧೯೬೬

ಇಂದು ನಿನ್ನ ಹುಟ್ಟು ಹಬ್ಬ: ಹುಟ್ಟುವದೇ ಒಂದು ಮಹಾಸಾಧನೆ ಎಂದು ತಿಳಿಯುವ ವರ್ಗಕ್ಕೆ ಸೇರಿದವನು ನಾನಲ್ಲ. ಕುರಿ-ಕೋಣಗಳೂ ಹುಟ್ಟುತ್ತವೆ. ತಿಂದುಂಡು ಜೀವಿಸುತ್ತವೆ. ಮಕ್ಕಳು-ಮರಿ ಪಡೆಯುತ್ತವೆ. ಯಮನ ಕರೆ ಬಂದಾಗ ಓಗೊಟ್ಟು ನಿರ್ಗಮಿಸುತ್ತವೆ. ಇವುಗಳಷ್ಟೇ ಮಾನವನು ಕತ್ತೆ-ಕುನ್ನಿಗಳಂಥ ಪ್ರಾಣಿ ವರ್ಗಕ್ಕೆ ಸೇರಿದವನೆಂದು ನನ್ನ ವಿಶ್ವಾಸ. ಬುದ್ಧಿಯ ಪ್ರಮಾಣವಷ್ಟೇ ವ್ಯತ್ಯಾಸವಲ್ಲವೇ? ಬುದ್ಧಿಯ ಕೊಡವನ್ನೇ ಹೊತ್ತು ಹುಟ್ಟಿ ಬಂದ ಮಾನವನು ತನ್ನ ಜೀವಮಾನದಲ್ಲಿ ಸಾಧಿಸುವದೇನನ್ನು? ಎಂಬುದಕ್ಕೆ ಅತಿ ಮಹತ್ವ. ನಿರ್ಗಮಿಸಿದ ನಂತರ ಭಾವೀಪೀಳಿಗೆಗೆ ಏನಾದರೂ ಉಳಿಸಿ, ಬಿಟ್ಟು ಹೋದರೆ, ಅವನ ಹುಟ್ಟಿನಲ್ಲಿ ಅಲ್ಪವಾದರೂ ಸಾರ್ಥಕತೆ ಕಾಣಬಹುದು. ಅಂತೆಯೇ ನಾನು ಈ ವರೆಗೆ ಹುಟ್ಟು ಹಬ್ಬ, ವಿವಾಹ ವಾರ್ಷಿಕ, ಷಷ್ಟ್ಯಬ್ದಿಗಳನ್ನು ಆಚರಿಸಿಲ್ಲ! ಮುಂದೆಯೂ ಅವಕ್ಕೆ ಮಹತ್ವ ಕೊಡಬಾರದೆಂಬ ದೃಢ ವಿಶ್ವಾಸ ನನ್ನದು. ಆಗಮಿಸಿದವರ ಆದರಾತಿಥ್ಯಕ್ಕೆ ಹಣದ ಹೊಳೆ ಹರಿಸಿ, ಅವರಿಂದ ಅಭಿನಂದಿಸಿಕೊಳ್ಳುವದರಲ್ಲಿ ಯಾವ ಪುರುಷಾರ್ಥವೂ ಕಾಣದು. ಅದರ ಬದಲಿಗೆ ಈ ಅವಕಾಶ ಬಳಸಿ ಗಟ್ಟಿ ಕೆಲಸ ಮಾಡಿ ಮುಗಿಸಿದರೆ, ಅದೇ ಒಂದು ಸಾಧನೆಯಾದೀತು. ಆ ಉದ್ದೇಶದಿಂದಲೇ ನಿನಗೆ ಈ ಹುಟ್ಟುಹಬ್ಬದ ಪತ್ರ.

ನೀನು ಇತಿಹಾಸದ ವಿದ್ಯಾರ್ಥಿನಿಯಲ್ಲವೇ? ಅಂತೆಯೇ ಇಂದಿನ ಶುಭಾಶಯದ ಪತ್ರದ ಹಾಳೆ, ಕವರು ಅಂಚೆ-ತಿಕೀಟುಗಳನ್ನೆಲ್ಲ ಚಾರಿತ್ರಿಕ ಹಿನ್ನೆಲೆಯುಳ್ಳವನ್ನೇ ಬಳಸಿದ್ದೇನೆ. ಅಂಚೆ ತಿಕೀಟನ್ನು ನೋಡಿದೆಯಾ? ವಿರಹವೇದನೆ ಸಹಿಸಲಾರದ ಯಕ್ಷನು ಮೋಡಗಳಿಗೆ ತನ್ನ ಯಾತನೆಯನ್ನು ಅರುಹಿ, ಪ್ರೇಯಸಿಗೆ ತನ್ನ ಸಂದೇಶವನ್ನು ತಲುಪಿಸುವಂತೆ ಅಂಗಲಾಚುತ್ತಿದ್ದಾನೆ. ಕಾಳಿದಾಸನ ಸುಪ್ರಸಿದ್ಧ ಕಾವ್ಯ ಮೇಘದೂತದ ಮೇಲೆ ಆಧಾರಿತ. ಶಾಲಾ-ವಿದ್ಯಾರ್ಥಿಯಾಗಿದ್ದಾಗಲೇ

ಯಕ್ಷನ ಬವಣೆಗಾಗಿ ಪರಿತಪಿಸಿದ್ದೆ. ಎಂಟು ವರ್ಷಗಳ ಹಿಂದೆ ಈ ಅಂಚೆ-ಚೀಟಿ ಪ್ರಕಟವಾದಾಗ ಕೊಂಡು, ಹೋದಲ್ಲೆಲ್ಲ ಒಯ್ದಿದ್ದೆ. ಈ ವಿರಹಿಯು ವೇದನೆಯ ಕಲ್ಪನೆ ನಿನಗೇನಾದರೂ ಬರಲು ಸಾಧ್ಯವೇ? ಎಂದು ಅರಿಯಲು ಅದನ್ನು ನಿನಗೆ ಕಳಿಸುತ್ತಿದ್ದೇನೆ. ಪತ್ರದ ಕವರು ನೋಡು. ಜರ್ಮನ್ ವಿಮಾನ ಕಂಪನಿ, 'ಲುಫ್ತಾಂರ್ಝಾ'ದವರು ದಯಪಾಲಿಸಿದ್ದು. ಅದರ ಮೇಲೆ ಕಂಗೊಳಿಸುವ ಬೋಯಿಂಗ್ ವಿಮಾನ, ನಮ್ಮ ಪೂರ್ವಜರ ಪುಷ್ಪಕ ವಿಮಾನವನ್ನು ಪ್ರತಿನಿಧಿಸುತ್ತದೆ. ಪತ್ರ ಮೂಲಕ ಕೇವಲ ಸಂದೇಶವನ್ನು ಕಳಿಸುವದಕ್ಕಿಂತ ಈ ವಿಮಾನವನ್ನೇರಿ ನೀನೇ ಇಲ್ಲಿ ಬರುವದು ಉತ್ತಮವಲ್ಲವೇ? ಪತ್ರದ ಸುಂದರ, ಬಾಡದ ಹೂವುಗಳನ್ನು ಹೊತ್ತ ಹಾಳೆ ನೋಡಿದೆಯಾ? ತಿಳಿ ಗುಲಾಬಿಯ ಈ ಅಂದವಾದ ಲೆಟರ್‌ಹೆಡ್‌ನ್ನು ಸಾಯರೆಕ್ಯೂಸಿನ ಪುಸ್ತಕದ ಒಂದು ಅಂಗಡಿಯಲ್ಲಿ ಕಂಡಾಕ್ಷಣ ಮೆಚ್ಚಿಕೊಂಡು ಕೊಂಡುಬಿಟ್ಟಿದ್ದೆ. ಇನ್ನು ಕವರು? ಗಗನ ವಿಹಾರಿಯಾದಾಗ ಆತ್ಮೀಯರಿಗೆ ಬರೆದ ಪತ್ರಗಳನ್ನು ಕಳಿಸಲೆಂದೇ 'ಏಯರ್ ಫ್ರಾನ್ಸ್'ದವರು ದಯಪಾಲಿಸಿದ್ದು. ಇಷ್ಟೆಲ್ಲ ಸಾಧನ-ಸಾಮಗ್ರಿ ಜೋಡಿಸಿ ಅಭಿನಂದನೆಗಳನ್ನು ಕಳಿಸುವದು ಸಾಮಾನ್ಯ ಮಾತೇ? ಕಾಳಿದಾಸನ ಯಕ್ಷನಿಗಿಂತ ಈ ವಿಷಯದಲ್ಲಿ ನಾನು ಭಾಗ್ಯಶಾಲಿ ಎನ್ನಲೇಬೇಕು!

ಜೀವನವನ್ನು ರೂಪಿಸಿಕೊಳ್ಳುವದು ನಮ್ಮ ಕೈಯಲ್ಲೇ ಇದೆ. ಒಂದು ಸಂಸಾರ ಆದರ್ಶಪ್ರಾಯವಾಗಬೇಕಾದರೆ ಏನೇನು ಸಾಧಿಸಬೇಕೆಂದು ಗುರುತಿಸಿ, ಅದಕ್ಕಾಗಿ ಬೆನ್ನು ಮುರಿ ದುಡಿಯಬೇಕು. ದೊಡ್ಡ ಅಧಿಕಾರಿಯಾಗಿ ಕೈಗೆ-ಕಾಲಿಗೆ ಆಳುಗಳನ್ನಿಟ್ಟು ಅಗರ್ಭ ಶ್ರೀಮಂತನಾಗಿ ಮೆರೆಯಬೇಕೆಂದು ಎಂದಿಗೂ ಕನಸು ಕಂಡವನಲ್ಲ. ಬದಲಿಗೆ ಎಷ್ಟೇ ಸಣ್ಣ ಕೆಲಸವಿದ್ದರೂ ನಿಷ್ಠೆಯಿಂದ ಮೈ ಮುರಿ ದುಡಿದು, ಮನಸ್ಸಿಗೆ ತೃಪ್ತಿಯಾಗುವಂತೆ ಮಾಡಿ ಮುಗಿಸಬೇಕೆಂಬ ಹವ್ಯಾಸ. ವಿಶ್ವದಲ್ಲಿಯೇ ಅತಿ ಮುಂದರಿದ ರಾಷ್ಟ್ರವೆನಿಸಿಕೊಂಡ ಅಮೇರಿಕೆಯ ಪ್ರಸಿದ್ಧ ನ್ಯೂಯಾರ್ಕ ವಿಶ್ವವಿದ್ಯಾಲಯದಲ್ಲಿ ಅತ್ಯುನ್ನತ ವ್ಯಾಸಂಗಮಾಡಿ ಮುಗಿಸಲು ಕರೆದೊಯ್ದ ದೈವವೇ ರಾಜಸ್ಥಾನದ ಈ ಕುಗ್ರಾಮಕ್ಕೆ ತಂದು ಬಿಟ್ಟಿದೆ. ಇಲ್ಲಿಯ ಜನರ ಬಗ್ಗೆ ಅವರ ಜೀವನದ ರೀತಿ-ನೀತಿಗಳ ಬಗ್ಗೆ ಒಮ್ಮೆಯೂ ಜಿಗುಪ್ಸೆಯಾಗಲಿಲ್ಲ. ಅನಾಕರ್ಷಕವೆನಿಸಲಿಲ್ಲ. ಬದಲಾಗಿ ನಾನೂ ಅವರಲ್ಲಿ ಒಬ್ಬನಾಗಿದ್ದರೆ ಜೀವನವನ್ನು ಸರಿಯಾಗಿ ಅರ್ಥೈಸಿಕೊಳ್ಳುತ್ತಿದ್ದೇನೇ? ಎಂದು ಆಶ್ಚರ್ಯ

ಪಡುತ್ತೇನೆ. ನಸುಕಿನ ಐದು ಗಂಟೆಗೇ ಈ ಹಳ್ಳಿಯ ಧರ್ಮಿಷ್ಟರು ಸೇರಿ ಭಜನಾ ಮಂಡಳಿಯೊಂದನ್ನು ಹೊರಡಿಸುತ್ತಾರೆ. ಒಬ್ಬನು ಢೋಲಕ್ ಬಡಿದರೆ, ಇನ್ನೊಬ್ಬನು ತಾಳ ಬಾರಿಸುತ್ತಾನೆ. ಹೆಂಗಳೆಯರು ಚಪ್ಪಾಳೆ ಹಾಕುತ್ತ ಶ್ರೀರಾಮನ ಸ್ತುತಿ ಹಾಡುತ್ತ ಹತ್ತಿರದ ಮಂದಿರಕ್ಕೆ ಹೋಗುತ್ತಾರೆ. ಕೃಷಿ ಕಾಲೇಜಿನ ವಿದ್ಯಾವಂತರು ಮಾತ್ರ 'ಇವರ ಮನೆ ಹಾಳಾಗಲಿ! ಮುಂಜಾನೆಯ ಸಕ್ಕರೆ-ನಿದ್ರೆ ಹಾಳು ಮಾಡುತ್ತಾರೆ' ಎಂದು ಹಗಲೆಲ್ಲ ಅವರಿಗೆ ಶಾಪ ಹಾಕುವದ ರಲ್ಲಿಯೇ ಕಳೆಯುತ್ತಾರೆ. ಬೆಳಿಗ್ಗೆ ಊರ ಹೆಂಗಳೆಯರು ಗೃಹಕೃತ್ಯಕ್ಕೆ ಬೇಕಾ ಗುವ ನೀರು ತರಲು, ಮಣ್ಣಿನ ಮಡಕೆಗಳನ್ನು ಹೊತ್ತು ಊರಹೊರಗಿರುವ ಬಾವಿಗೆ ಧಾವಿಸುತ್ತಾರೆ. ಅವರ ವರ್ಣಮಯವಾದ ಓಢಣಿ, ಪೋಲಕ, ಘಾಗರಾ ಗಳು ರಸಿಕರನ್ನು ಆಕರ್ಷಿಸವೇ ಇದ್ದಾವೇ? ನನ್ನವಳೂ ಇಂಥದೇ ಅಲಂಕಾರ ಮಾಡಿಕೊಂಡು ನೀರಿಗೆ ಹೊರಟಿದ್ದರೆ, ನಾನೂ ಕ್ಯಾಮರಾದೊಂದಿಗೆ ಹಿಂದೆ ಹಿಂದೆ ಹೋಗಬಹುದಾಗಿತ್ತು, ಎಂದು ಮೇಘದೂತದ ಯಕ್ಷನಂತೆ ಭಾವಾವಿಷ್ಟನಾದರೆ ಸಾಲದು. ಜೀವನದಲ್ಲಿ ಏನನ್ನು ಸಾಧಿಸಬೇಕೆಂದಿದ್ದೇನೆ? ಎಂದು ಈಗಾಗಲೇ ವಿಚಾರ ವಿಮರ್ಶೆ ಮಾಡಿ ಒಂದು ನಿರ್ಣಯಕ್ಕೆ ಬರುವದು ಉತ್ತಮವೆನಿಸುತ್ತದೆ. ದುಡ್ಡೇ ದೊಡ್ಡಪ್ಪ ಎಂದು ನಂಬಿದ್ದರೆ ವಂಶ ಪರಂಪರಾಗತವಾಗಿ ಬಂದ ಬಟ್ಟೆ ವ್ಯಾಪಾರ ಮುಂದರಿಸಿಕೊಂಡು ಹೋಗಿ ಧನಿಕನಾಗಬಹುದಿತ್ತು. ಆದರೆ ಇನ್ನಿತ ರರಿಗಿಂತ ಭಿನ್ನನಾಗಿ ಬೆಳೆಯಬೇಕೆಂದು ಕನಸುಕಟ್ಟಿ ಏನೆಲ್ಲ ಸಾಹಸಗಳನ್ನು ಮಾಡಿದೆ. ಆದ್ದರಿಂದ ಹಣಸಂಪಾದನೆಗಾಗಿ ಯಾಂತ್ರಿಕವಾಗಿ ಜೀವಿಸುವದು ನನ್ನ ಆದರ್ಶ ಗಳಿಗೆ ತಿಲಾಂಜಲಿ ಕೊಟ್ಟಂತೆ. ವ್ಯಾಪಾರಿಗಳಾದ ನಮ್ಮ ಕುಟುಂಬದಲ್ಲಿ ನನಗೆ ಮಾತ್ರ ಹೆಚ್ಚಿನ ವ್ಯಾಸಂಗ ಮಾಡಲು ಏಕೆ ಅವಕಾಶ ಕಲ್ಪಿಸಿಕೊಟ್ಟರು ಎಂದು ನಿನಗೆ ಕುತೂಹಲ-ಆತಂಕಗಳಾಗಿರಬೇಕಲ್ಲವೇ? ಯಾರ ಮುಂದೆಯೂ ಬಾಯಿ ಬಿಡುವದಿಲ್ಲವೆಂದು ಆಶ್ವಾಸನೆ ಕೊಟ್ಟರೆ ಮಾತ್ರ ಹೇಳುತ್ತೇನೆ. ನನ್ನಂಥವನನ್ನು ವ್ಯಾಪಾರಕ್ಕೆ ಹಾಕಿದರೆ, ಕೈಯಲ್ಲಿದ್ದ ಹದಿನೈದು ರೂಪಾಯಿಗಳನ್ನು ಇಪ್ಪತ್ತೈದು ರೂಪಾಯಿಗಳನ್ನಾಗಿ ಮಾಡುವ ಕಲೆ ಕೈಗೂಡದೇ ಇದ್ದದ್ದೇ ಇದಕ್ಕೆ ಮುಖ್ಯ ಕಾರಣವೇದರೆ ನಂಬುವಿಯಾ? ಕಲಿಯಲು ಬಾರದವರು, ವಿದ್ಯೆ ಹತ್ತದವರು ಮಾತ್ರ ವ್ಯಾಪಾರ ಮಾಡುತ್ತಾರೆ ಎಂಬುದು ನಿನ್ನ ನಂಬಿಕೆಯಾಗಿರಬೇಕಲ್ಲವೇ? ಕೇವಲ ಮಾತಿನ ಚಮತ್ಕಾರದಿಂದಲೇ ಸರಕನ್ನು ಮಾರಿ, ಗಿರಾಕಿಯ ಜೇಬಿನಲ್ಲಿದ್ದ

ಹಣವನ್ನು ತನ್ನ ಗಲ್ಲಾಪೆಟ್ಟಿಗೆಗೆ ಸೇರಿರಲು ತುಂಬ ಚಾಣಾಕ್ಷತೆ ಬೇಕು. ಅಂತೆಯೇ ನಾನು ಹಣವಂತನಾಗುವ ಬದಲು ವಿದ್ಯಾವಂತನಾಗಿದ್ದೇನೆ!

ಜೀವನದಲ್ಲಿ ನನಗೆ ಅತೀವ ಶ್ರದ್ಧೆ, ಆಸಕ್ತಿ. ಅದರ ಆಳವನ್ನು ಅರಿಯಲು ಸದಾಕಾಲ ಹವಣಿಸುತ್ತಿರುತ್ತೇನೆ. ಪ್ರವಾಸವೆಂದರೆ ಅಚ್ಚು-ಮೆಚ್ಚು. ಶಾಲಾ ವಿದ್ಯಾರ್ಥಿಯಾಗಿದ್ದಾಗ ಕಾಲು ನಡಿಗೆಯಲ್ಲಿ ಪ್ರಾರಂಭವಾದ ಈ ಗೀಳು ಹೆಮ್ಮರ ವಾಗಿ ಬೆಳೆದಿದೆ. ಅಂತೆಯೇ ಭಾರತ, ಅಮೇರಿಕ-ಯುರೋಪಗಳಲ್ಲಿ ಸಾಧ್ಯ ವಿದ್ದಷ್ಟು ಅಲೆದೆ. ದೂರದ ಈ ರಾಜ್ಯದಲ್ಲಿ ನೌಕರಿ ಒಪ್ಪಿಕೊಳ್ಳಲು ಅದೇ ಕಾರಣ. ನೋಡಿ, ಅನುಭವಿಸಿದ್ದನ್ನು ಚಿತ್ರಗಳಲ್ಲಿ ಕಾದಿರಿಸುವ ಹಂಬಲದಿಂದಾಗಿ ಛಾಯಾಗ್ರಹಣ ಕಲಿಯಬೇಕಾಯಿತು. ಇದಕ್ಕಾಗಿ ಯಾವ ಗುರುವನ್ನೂ ಅವ ಲಂಬಿಸದೇ ಸ್ವಸಾಧನೆಯಿಂದ ಪಡೆದ ಪರಿಣತಿಯಿಂದಾಗಿ ಸಂತುಷ್ಟನಿದ್ದೇನೆ. ನನ್ನ ಅನಿಸಿಕೆ, ವಿಚಾರ, ಅನುಭವಗಳನ್ನು ಇನ್ನಿತರರೊಂದಿಗೆ ಹಂಚಿಕೊಳ್ಳಲು ಸವಿಸ್ತಾರ ವಾದ ಪತ್ರಗಳನ್ನು ಆಗಾಗ ಬರೆಯುತ್ತಿರುತ್ತೇನೆ. ಅವುಗಳ ಪ್ರತಿಗಳೆಲ್ಲ ನನ್ನಲ್ಲಿ ದ್ದರೆ ಎಷ್ಟು ಚೆನ್ನಾಗಿರುತ್ತಿತ್ತು! ಎಂದು ಆಗಾಗ ಅನಿಸುತ್ತಿರುತ್ತದೆ. ಬಹು ಸಂಖ್ಯಾತರು ಈ ಪತ್ರಗಳನ್ನು ಕಾದಿರಿಸುವದಿಲ್ಲ ಎಂಬುದು ಸತ್ಯ. ಅವನ್ನು ನನಗೇ ಹಿಂದಿರುಗಿಸಿದರಾದರೂ ಕೃತಜ್ಞನಾಗಿರುತ್ತಿದ್ದೆ. ನನಗೆ ಬಂದ ಪತ್ರಗಳ ನ್ನೆಲ್ಲ ವ್ಯವಸ್ಥಿತವಾಗಿ ಇಟ್ಟಿರುತ್ತೇನೆ. ಈ ಸಂಗ್ರಹಕ್ಕೆ ನಿನ್ನವನ್ನು ಎಷ್ಟು ಸೇರಿಸುತ್ತಿಯೋ ನೋಡು. ಹಿಂದೊಮ್ಮೆ ಕಲಾಕಾರನಾಗಬೇಕೆಂದು ಕನಸು ಕಟ್ಟಿದ್ದೆ. ಆದರೆ ಅನೇಕ ಕಾರಣಗಳಿಗಾಗಿ ಅದು ಕೈಗೂಡಲಿಲ್ಲ. ಇಷ್ಟಾದರೂ ಆಗೊಮ್ಮೆ ಈಗೊಮ್ಮೆ ಕಲೆಯ ಗೀಳು ತಲೆ ಹೊಕ್ಕಾಗ, ಡ್ರಾಯಿಂಗ ಹಾಳೆ, ಪೆನ್ಸಿಲ್, ಕುಂಚ, ಬ್ರಶ್‌ಗಳೊಂದಿಗೆ ಒಂದಾಗಿಬಿಡುತ್ತೇನೆ. ಅಂತಹ ಪ್ರಸಂಗಗಳಲ್ಲಿ ನಿಸರ್ಗ, ಹೂವು, ಹಕ್ಕಿ, ವ್ಯಕ್ತಿಗಳು ಮೂಡಿ ಬಂದಾಗ ಪರಮಾನಂದವಾಗುತ್ತದೆ. ನಿನ್ನನ್ನು ಚಿತ್ರಿಸ ಬೇಕೆಂದು ಹಂಬಲವಾಗಿದೆ. ಸಾಧ್ಯವಾದರೆ ಕಿರಿಯ ಭಾವಚಿತ್ರ ಕಳಿಸುವ ಕೃಪೆ ಮಾಡುವಿಯಾ?

ನೀನು ವರಿಸಹೊರಟ ವ್ಯಕ್ತಿಗೆ ಎಂತೆಂತಹ ಹುಚ್ಚುಗಳು ಇವೆ, ಎಂಬ ಕಲ್ಪನೆ ಈಗ ನಿಚ್ಚಳವಾಗಿ ಬಂದಿರಬೇಕಲ್ಲವೇ? ಆದರೆ ನಿನ್ನ ಪಾಲಿಗೆ ಬಂದವು, ನಾನು ಮತ್ತು ನನ್ನ ಹೆಚ್ಚಿನ ಲಾಭದಾಯಕವಲ್ಲದ ಡಿಗ್ರಿಗಳು ಮಾತ್ರ! ಆದ್ದರಿಂದ

ವೈವಾಹಿಕ ಜೀವನದಲ್ಲಿ ಗಗನ ತಾರೆಗಳನ್ನು ನಿರೀಕ್ಷಿಸುವಂತೆ ಇಲ್ಲ. ಬೇರೇನೂ ಆಶ್ವಾಸನೆ ಕೊಡಲಾಗದಿದ್ದರೂ ನನ್ನದೆಂಬ ಚರಾಚರ ಆಸ್ತಿಯೆಲ್ಲ ನಿನಗೆ. ನಾವಿಬ್ಬರೂ ಆದರ್ಶ ದಂಪತಿಗಳಾಗಬೇಕೆಂಬ ಕನಸು. ಆದರೆ ನಿನ್ನ ನಿರೀಕ್ಷೆ-ಆಕಾಂಕ್ಷೆಗಳೇನು ಎಂದು ತಿಳಿಯದ್ದರಿಂದ ಇದು ಸಾಧ್ಯವೇ ಎಂಬ ಅನುಮಾನ ಇದ್ದೇ ಇದೆ. ನನ್ನ ಜೀವನ ಯೋಜನೆಯಲ್ಲಿ ದೈಹಿಕ ಸುಖಗಳು, ಐಷಾರಾಮಗಳಿಗೆ ಯಾವ ಗಣ್ಯ ಸ್ಥಾನವೂ ಇಲ್ಲ. ನನ್ನ ಪರಿಚಯದ ಹೆಚ್ಚಿನ ದಾಂಪತ್ಯಗಳಲ್ಲಿ ಶರೀರಗಳೆರಡು ಜೊತೆಯಾಗಿ ಬಾಳಿ ಬದುಕಿದರೂ ಅವರ ಹೃದಯಗಳು ಕಾಶಿ-ರಾಮೇಶ್ವರಗಳಲ್ಲಿರುತ್ತವೆ. ಅದೇ ನಾವಿಬ್ಬರೂ ಉತ್ತರ-ದಕ್ಷಿಣ ಧ್ರುವಗಳಲ್ಲಿದ್ದರೂ ಹೃದಯಗಳು ಒಂದಾಗಿರಬೇಕು ಎಂಬ ಆಸೆ. ಇದಕ್ಕಾಗಿ ಒಬ್ಬರು ಇನ್ನೊಬ್ಬರನ್ನು ಅರಿತು ಹೊಂದಿಕೊಳ್ಳಲು ಸಕಲ ಯತ್ನ ಮಾಡಿ ಆದರ್ಶ ಸಾಧನೆಗಾಗಿ ತ್ಯಾಗ ಮಾಡಲು ಸಿದ್ಧರಾದಾಗ ಮಾತ್ರ ಇದನ್ನು ಸಾಧಿಸಬಹುದು. ನಾವಿಬ್ಬರೂ ರಚನಾತ್ಮಕ ಕಾರ್ಯಗಳಲ್ಲಿ ಬಿಡುವಿನ ವೇಳೆಯನ್ನು ತೊಡಗಿಸಬೇಕು. ಆದಾಯದ ಅಲ್ಪ ಭಾಗವನ್ನು ಅಸಹಾಯಕರ ನೆರವಿಗೆ ಬಳಸಬೇಕು ಎಂಬುದು ನನ್ನ ಆಶಯ ಮನಸಾ ಯತ್ನಿಸಿದರೆ ಅಸಾಧ್ಯವಾದ ಆದರ್ಶಗಳೇನಲ್ಲ. ಈ ದಿಸೆಯಲ್ಲಿ ಪ್ರಯತ್ನಿಸಲು ಒಪ್ಪಿಕೊಳ್ಳೋಣ. ಆಗದೇ? ಒಳ್ಳೆಯ ಹುಡುಗಿ.

೫. ಜನಾಭಿಪ್ರಾಯ

ಜೊಬನೇರ, ೩೦-೧-೧೯೬೬

ಅಮೇರಿಕೆಯಿಂದ ಭಾವೀ ಪತ್ನಿಗಾಗಿ ಏನು ತಂದಿರುವೆನೆಂದು ಹೇಳಲೇ ಬೇಕೇ? ಒಂದೇ ಒಂದು ವಸ್ತು ಬಿಟ್ಟು ಬೇರೇನನ್ನೂ ತರಲಿಲ್ಲವೆಂದರೆ ನಂಬು ವಿಯಾ? ತಂದದ್ದಾದರೂ ಏನು? ಎಂದು ತಿಳಿಯುವ ತವಕವಿದ್ದಿರಬಹುದಲ್ಲವೇ? ಅದನ್ನು ತಿಳಿದುಕೊಳ್ಳುವದನ್ನು ಮುಂದೆ ಹಾಕಿದರೆ ಚೆನ್ನಾಗಿರುತ್ತಿತ್ತು. ಈಗಲೇ ಹೇಳಬೇಕೆ? ನನ್ನನ್ನು ಬಿಟ್ಟು ಬೇರೇನೂ ತರುವ ಗೋಜಿಗೆ ಹೋಗಲಿಲ್ಲ ಎಂದು ಒಪ್ಪಿಕೊಳ್ಳುತ್ತೇನೆ. ಇದೇನು ಮಹಾ? ಎಂದು ಮುಖ ಮುರಿಯಬೇಡ ಮತ್ತೆ! ಮನಸ್ಸು ಮಾಡಿದರೆ ಸಾಕಷ್ಟು ಸೀರೆ, ಆಭರಣ, ಸುಗಂಧ ದ್ರವ್ಯ, ಗೃಹ ಸಲಕರಣೆ ಗಳನ್ನು ತರಬಹುದಾಗಿತ್ತು. ಆದರೆ ಧೀಮಂತರು ಯಾವಾಗಲೂ ವಿಚಾರ ಮತ್ತು ಭಾವನಾ ಪ್ರಧಾನವಾದ ಜೀವನವನ್ನು ನಡೆಸಬೇಕೆನ್ನುವದರಲ್ಲಿ ನನ್ನದು ಅಚಲ ವಿಶ್ವಾಸ. ಹಾಗೆ ಮಾಡದಿದ್ದಲ್ಲಿ ಅವರಲ್ಲಿ ತ್ಯಾಗ, ಪ್ರಾಣಿದಯೆ, ಸೌಂದರ್ಯ ದೃಷ್ಟಿ, ಕಲೋಪಾಸನೆ ಹಾಗೂ ಆತ್ಮಶುದ್ಧಿಗಳು ಮನೆ ಮಾಡಿಕೊಳ್ಳಲಾರವು. ಮಾನವನ ಬೇಡಿಕೆಗಳಿಗೆ ಕೊನೆಮೊದಲಿಲ್ಲ. ಅಂತೆಯೇ ಇದ್ದುದರಲ್ಲಿ ತೃಪ್ತಿ ಪಡೆಯುವದು ಒಂದು ಸಾಧನೆ ಅನಿಸದಿರದು. ಐಷಾರಾಮದ ಸಾಮುಗ್ರಿಗಳಿಗಾಗಿ ಆಸೆಪಡುತ್ತ ಪಾಶ್ಚಿಮಾತ್ಯರು ತೊಳಲಾಡುತ್ತಿದ್ದಾರೆ. ಅತ್ಯಾಧುನಿಕರೆನಿಸಿಕೊಳ್ಳುವ ಹಪಾಪಿಯ ಭಾರತೀಯರು ಅವರನ್ನು ಅನುಕರಣೆ ಮಾಡುತ್ತಿರುವದು ತೀರ ಅವಮಾನಕರ. ಸಿಗರೇಟು, ಅಮಲಿನ ವಸ್ತುಗಳು, ಮದ್ಯ, ಮಾನಿನಿಯರು, ಸಿನೇಮಾ, ದೀರ್ಘವಾದ ಇರುಳು ಜೀವನ ವಿಫುಲವಾಗಿ ಲಭ್ಯವಿದ್ದ ಅಮೇರಿಕೆ ಯಲ್ಲಿ ನಾಲ್ಕು ವರ್ಷಗಳ ಸುದೀರ್ಘವಾದ ಕಾಲ ವಾಸ ಮಾಡಿಯೂ ಅಪ್ಪಟ ಭಾರತೀಯಳಿಗೆ ಒಪ್ಪುವ ವರನಾಗಿ ಹಿಂದಿರುಗುವದು ಸಣ್ಣ ಸಾಧನೆಯೇನಲ್ಲ. ಅಲ್ಲಿದ್ದಷ್ಟು ದಿನವೂ ಕಾಫಿ, ಕೊಕೊಕೋಲಾ ಕೂಡ ಸೇವಿಸದೇ ಎಳೆ ಮಗುವಿನಂತೆ ಹಾಲಿನ ಮೇಲೆಯೇ ಇದ್ದೆ. ಜೊಬನೇರದಲ್ಲಿ ಯಾವನೇ ವಸತಿ ಸೌಕರ್ಯ

ಗಳಿಲ್ಲದ್ದರಿಂದ ವಿಭಾಗದ ಮುಖ್ಯಸ್ಥರಲ್ಲೇ ತಾತ್ಕಾಲಿಕವಾಗಿ ಬೀಡು ಬಿಡಬೇಕಾಗಿ ಬಂದಿದ್ದರಿಂದ ಅವರ ಆಳು ಮಾಡಿಕೊಡುವ ತಿಳಿ ಚಹವನ್ನು ಅಲ್ಪ ಸ್ವಲ್ಪ ಸೇವಿಸಲಾರಂಭಿಸಿದ್ದೇನೆ.[೪]

ನನ್ನ ಜಾತಕದ ಬಲಾಬಲಗಳನ್ನು ಹೇಳಲೇ? ಇನ್ನೂ ಶಾಲಾ ವಿದ್ಯಾರ್ಥಿಯಾಗಿದ್ದಾಗ, ಸೋದರಮಾವನ ಮದುವೆಗೆ ಹೋಗಿದ್ದೆ. ಕಾಕಿಯವರಿಗೆ ಮನೆಗೆಲಸಕ್ಕೆ ನೆರವಾಗಲು ಸೊಸೆಯೊಬ್ಬಳನ್ನು ತರುವಂತೆ ಅಜ್ಜನವರು ಆಗ್ರಹಪಡಿಸಿದ್ದರು. ಅವರು ಸೂಚಿಸಿದ ಕನ್ಯೆ ಅತ್ಯಾಕರ್ಷಕಗಳಿದ್ದುದರಿಂದ 'ಒಲ್ಲೆ' ಎನ್ನಲು ಕಷ್ಟವಾಯಿತೆಂದು ಒಪ್ಪಿಕೊಳ್ಳುತ್ತೇನೆ! ಈಗ ಅವಳು ಐದು ಮಕ್ಕಳ ತಾಯಾಗಿದ್ದಾಳೆ. ಸ್ನಾತಕೋತ್ತರ ಶಿಕ್ಷಣ ಮುಗಿಸಿದ ನಂತರ ಇನ್ನೊಮ್ಮೆ ಕಂಕಣಬಲ ಕೂಡಿ ಬಂದಂದಿತ್ತು. ವಿವಾಹಕ್ಕೆ ಬೆಳೆದು ನಿಂತ ಮಗಳನ್ನು ಕೊಟ್ಟು ಅಳಿಯನನ್ನು ಬರಮಾಡಿಕೊಳ್ಳುವ ಹವಣಿಕೆಯುಲ್ಲಿ ಹಿರಿಯ ಸೋದರಮಾವ ಇದ್ದಾರೆ. ಎಂಬ ಸುಳಿವು ಸಿಕ್ಕಿತು. ರಕ್ತ ಸಂಬಂಧಿಗಳಲ್ಲಿ ವಿವಾಹ ಮಾಡಿಕೊಂಡರೆ, ಮಾನಸಿಕ ರೋಗ, ಹಿಮೋಫೆಲಿಯಾಗಳಂಥ ರೋಗಗಳನ್ನು ಮಕ್ಕಳು ಹೊಂದುವ ಸಾಧ್ಯತೆ ಹೆಚ್ಚು ಎಂದು ವಿಜ್ಞಾನ ಜಗತ್ತಿನ ಒಂದು ಅಭಿಪ್ರಾಯ ಇರುವದರಿಂದ ಈ ಸಂಬಂಧದಲ್ಲಿ ಆಸಕ್ತಿ ಇಲ್ಲವೆಂದು ಕಾಕಾ-ಕಾಕಿಯವರಿಗೆ ಮೊದಲೇ ಸೂಚನೆ ಕೊಟ್ಟಿದ್ದೆ. ಆದರೂ ಆಪ್ತರು ಬಂದು ಅವರನ್ನು ಒತ್ತಾಯಿಸಿದಾಗ, ನುಣುಚಿಕೊಳ್ಳಲು ದಾರಿ ಕಾಣದೇ ವರನು ಒಪ್ಪಿದರೆ ತಮ್ಮ ಅಭ್ಯಂತರವೇನೂ ಇಲ್ಲವೆಂದು ಹೇಳಿಬಿಟ್ಟರು. ಆಗ ನನ್ನ ನಿರ್ಧಾರಕ್ಕೆ ಅಂಟಿಕೊಳ್ಳದಿದ್ದರೆ ಇದಾಗಲೇ ಎರಡು ಮಕ್ಕಳ ತಂದೆಯಾಗುವ ಸಾಧ್ಯತೆ ಇತ್ತು. ಹಕ್ಕಿನ ಕನ್ಯೆಯನ್ನು ಬೇಡವೆಂದು ಹೇಳಿದ್ದರಿಂದ ಬೇರೆಯವಳೊಡನೆ 'ಪ್ರೇಮ' ಇರಲೇಬೇಕೆಂಬ ಊಹಾಪೋಹಗಳು ಅಡ್ಡಿ-ಆತಂಕಗಳಿಲ್ಲದೇ ಹರಡಿಕೊಂಡವು. ನಮ್ಮವರಿಗೆ ಗಂಡು-ಹೆಣ್ಣುಗಳಲ್ಲಿ ಇರಬಹುದಾದಂತಹ ಸಂಬಂಧ ಒಂದೇ ಒಂದು, ಪತಿ-ಪತ್ನಿಯರದು!

ಮಕ್ಕಳಿಗೆ ವಿದ್ಯಾಬುದ್ಧಿ ಕೊಡುವಂತೆ ಅವರಿಗೆ ಜೀವನದ ಸಂಗಾತಿಯನ್ನೂ ಗೊತ್ತುಪಡಿಸುವದು ಪಾಲಕರದೇ ಸಕ್ರಿಯ ಕೆಲಸವೆಂದು ಮೊದಲಿನಿಂದಲೂ

---

೪ ನೋಡಿ: ಅಕ್ಷರ ಪ್ರಕಾಶನ ಸಾಗರದವರು ೧೯೭೪ ರಲ್ಲಿ ಪ್ರಕಟಿಸಿದ 'ನಾ ರಾಜಸ್ಥಾನದಲ್ಲಿ' ಗ್ರಂಥದ 'ಪರಿಚಯ' ಅಧ್ಯಾಯ ೪.

ನಾನು ತಳೆದ ಧೋರಣೆ. ಜೀವನದ ಅತ್ಯಧಿಕ ಭಾಗವನ್ನು ವಿದ್ಯಾರ್ಜನೆಯಲ್ಲಿ ತೊಡಗಿಸಿದ್ದರಿಂದಲೋ ಏನೋ, ಈಗ ಬಾಳ ಸಂಗಾತಿಯನ್ನು ಆರಿಸುವದು ಸಮಸ್ಯೆ ಎನಿಸಲಾರಂಭಿಸಿತು. 'ಉತ್ತಮ ವರ'ನೊಬ್ಬ ಅಮೇರಿಕೆಯ ವ್ಯಾಸಂಗ ಮುಗಿಸಿ ಸ್ವದೇಶಕ್ಕೆ ಹಿಂದಿರುಗಿದ ವಾರ್ತೆ, ಕಾಡುಕಿಚ್ಚಿನಂತೆ ಹಬ್ಬಿರಬೇಕು. ಕನ್ಯಾಭಾರ ಇಳಿಸಿಕೊಳ್ಳಬೇಕೆನ್ನುವವರೆಲ್ಲ ಜಾತಕದೊಂದಿಗೆ ಕಾಕಾರ ಸಂಪರ್ಕ ಬೆಳೆಸಲಾರಂಭಿಸಿದರು. ಮನೆಯಲ್ಲಿ ಹಿತವಾದ ಸ್ವತಂತ್ರ ವಾತಾವರಣ ಇದ್ದುದ ರಿಂದ ಯಾವ ಮುಚ್ಚುಮರೆ ಇಲ್ಲದೇ ಎಲ್ಲರೂ ತಂತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬಹುದಾಗಿತ್ತು. ಅಂತೆಯೇ ರಾತ್ರಿಯೂಟದ ನಂತರ ಎಲ್ಲರೂ ಪಡ ಸಾಲೆಯಲ್ಲಿ ಸೇರಿ ಬಂದ ಕನ್ಯೆಯರ ಕುರಿತಾದ ವಿಚಾರ-ವಿನಿಮಯ ಗೋಷ್ಠಿ ಯನ್ನು ನಡೆಸುತ್ತಿದ್ದೆವು. ವಿನೋದ, ರಸನಿಮಿಷಗಳಿಗೆ ಏನೇನೂ ಕೊರತೆ ಇದ್ದಿರ ಲಿಲ್ಲ. ಮಂಗಳೂರಿನ ಕನ್ಯೆಯ ಪಿತನು ಮುಂಬೈ ಮಹಾನಗರದಲ್ಲಿ ಹೊಟೇಲ ಇಟ್ಟು ಧನ ಸಂಪಾದಿಸಿದ್ದರಿಂದ ಒಂದು ಲಕ್ಷ ವರದಕ್ಷಿಣೆ ಕೊಡುವದಾಗಿ ಸಾರಿದ್ದ. "ಇವಳನ್ನು ವರಿಸಿದರೆ ನೀನೇ ಒಂದು ಕಾಫಿ ಅಂಗಡಿ ಇಡಬಹುದು ಇಲ್ಲವೇ ಮಾವನ ಹಾಟೇಲಿನ ಮ್ಯಾನೇಜರ್ ಆಗಬಹುದು" ಎಂದರು ಕಾಕಾ. "ಟನ್ ಭಾರದವಳ ಕೈ ಹಿಡಿದರೆ ಕಳ್ಳಕಾಕರ ಭಯವಿಲ್ಲ. ಫೌಜದಾರಳನ್ನಾಗಿ ಮಾಡಿ ನಿಶ್ಚಿಂತೆಯಿಂದಿರಬಹುದು" ಎಂದಳು ತಂಗಿ. 'ಆಕಾಶವಾಣಿಯವಳನ್ನು ಒಪ್ಪಿ ಕೊಂಡರೆ ರೇಡಿಯೋ ಕೊಳ್ಳುವ ಅವಶ್ಯಕತೆಯೇ ಇಲ್ಲ' ಎಂಬ ವ್ಯಾವಹಾರಿಕ ಸೂಚನೆ ಬಂದಿತು. ವರನಿಗಿಂತ ಹದಿನೈದು ವರ್ಷ ಚಿಕ್ಕವಳಿಂದ ಹಿಡಿದು ಅವನಿ ಗಿಂತ ಮೂರು ವರ್ಷ ಹಿರಿಯವಳಾದ ಕನ್ಯೆಯರ ಜಾತಕಗಳು ಬಂದಿದ್ದವೆಂದರೆ ನಂಬುವಿಯಾ? ಅದರಂತೆ ಮಾಧ್ಯಮಿಕ ಶಾಲೆಯಲ್ಲಿ ಅನುತ್ತೀರ್ಣರಾದವರಿಂದ ಹಿಡಿದು ಡಾಕ್ಟರೇಟ ಮುಗಿಸಿದವರೂ ಇದ್ದರು! ಅಂತೆಯೇ ಆಯ್ಕೆ ಗೊಂದಲ ಮಯವಾಗಿತ್ತು. ಸಂಸಾರ ಹೂಡಬೇಕಾದವನೇ ಆಯ್ಕೆ ಮಾಡಲಿ ಎಂದು ಹಿರಿ ಯರ ಅಂಬೋಣವಾದರೆ ಅದು ಅವರಿಗೇ ಸೇರಿದ್ದು ಎಂಬುದು ವರನ ಹಟ. ವಾದ-ವಿವಾದದ ನಂತರ ಕೊನೆಯ ಆಯ್ಕೆಯಲ್ಲಿ ಇಬ್ಬರು ಕನ್ಯೆಯರ ಸೇರ್ಪಡೆ ಯಾಗಿ ಅವರಲ್ಲಿ ಒಬ್ಬಳನ್ನು ಒಪ್ಪಿಕೊಳ್ಳುವದೆಂದು ಸರ್ವಾನುಮತದಿಂದ ಠರಾ ವಾಯಿತು. ಒಬ್ಬಳು ಪುಣೆ ಕಾಲೇಜೊಂದರ ಪ್ರಿನ್ಸಿಪಾಲರ ಮಗಳು. ಮುಂಬೈಯ ಟಾಟಾ ಇನ್‌ಸ್ಟಿಟ್ಯೂಟಿನಲ್ಲಿ ಸಂಶೋಧನಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದಳು.

ಎರಡನೆಯವಳು ರಾಯಚೂರಿನ ಪೋಸ್ಟ ಮಾಸ್ತರರ ಮಗಳು. ಧಾರವಾಡ ಆಕಾಶ ವಾಣಿಯಲ್ಲಿ ಕೆಲಸಕ್ಕಿದ್ದಾಳೆ. ಮೊದಲನೇ ಕನ್ಯಾಪಿತೃ ನೇರವಾಗಿ ಸಂಪರ್ಕಿಸದೇ ಬೇರೆ ಯಾರೋ ಜಾತಕ ಮತ್ತು ಫೋಟೋಗಳನ್ನು ಪೂರೈಸಿದ್ದರಿಂದ ಅವರಿಗೆ ನಿಜಕ್ಕೂ ಈ ಸಂಬಂಧದಲ್ಲಿ ಆಸಕ್ತಿ ಇದೆಯೋ ಎಂದು ತಿಳಿಯಲಾರದೇ ಕೈಬಿಡ ಬೇಕಾಯಿತು. ಎರಡನೆಯ ಕನ್ಯೆ ಗೋಕರ್ಣ ಪರತಗಾಳಿ ಮಠಕ್ಕೆ ಸೇರಿದವ ಳಾಗಿರದೇ ಚಿತ್ರಾಪುರ ಮಠಕ್ಕೆ ಸೇರಿದವಳಾಗಿದ್ದಳು.*

ಆಕಾಶವಾಣಿ ಕನ್ಯೆಗೆ ವರಾನ್ವೇಷಣೆ ಮಾಡುವಾಗ ತಂದೆ ಗಣೇಶರಾಯರಿಗೆ ಯಾರೋ ನನ್ನ ಹೆಸರನ್ನು ಸೂಚಿಸಿದ್ದರಿಂದ ವರನ ಅಭಿಪ್ರಾಯ ತಿಳಿಯಲು ಅಮೇರಿಕೆಗೇ ಪತ್ರ ಬರೆದಿದ್ದರು. ವಿದ್ಯಾರ್ಜನೆಗೆ ಬಂದವನಿಗೆ ಇದೆಲ್ಲಿಯ ಗ್ರಹ ಚಾರ ಬಡೆಯಿತು! ಎಂದು ಈ ವಿಚಾರವೆಲ್ಲ ಪಾಲಕರಿಗೆ ಸೇರಿದ್ದು ಎಂದು ಅವ ರಿಗೆ ಉತ್ತರ ಬರೆದು ಅದರ ಪ್ರತಿಯೊಂದಿಗೆ ಬಂದ ಮೂಲಪತ್ರವನ್ನೂ ಕಾಕಾ ರಿಗೆ ಕಳಿಸಿದ್ದ. ಆ ನಂತರ ಯಾವ ಬೆಳವಣಿಗೆಯೂ ಆಗಲಿಲ್ಲವಂತೆ. ಈ ಮಾತಿಗೆ ಅದಾಗಲೇ ವರ್ಷವೊಂದು ಕಳೆದದ್ದರಿಂದ ಕನ್ಯೆ ವಿವಾಹ ಮಾಡಿಕೊಂಡು ಸುಖಿ ವಾಗಿರಬಹುದು ಎಂದುಕೊಂಡಿದ್ದೆವು. ಆದರೆ, ನಿಜವಾದ ಸಂಗತಿ ಭಿನ್ನವಾಗಿತ್ತು. ಅಮೇರಿಕೆಯಿಂದ ಮರಳಿ ಬಂದು ನಾನು ಅಂಕೋಲೆಗೆ ಹೋಗಿದ್ದಾಗ ನಿಮ್ಮಪ್ಪ, ತಮ್ಮ ಅಣ್ಣನನ್ನು ಕರೆದುಕೊಂಡು ನಮ್ಮ ಮನೆಗೆ ಬಂದಿದ್ದರಂತೆ. ಇಬ್ಬರ ಜಾತಕ ಇಪ್ಪತ್ತೆಂಟು ಗುಣಗಳಿಂದ ಕೂಡಿ ಬರುತ್ತದೆಂದು ಅರಿತ ಗಣೇಶರಾಯರು ವರನ ಖಚಿತ ಅಭಿಪ್ರಾಯಕ್ಕೆ ಒತ್ತಾಯಿಸಿದರಂತೆ. ಅದಕ್ಕೆ ಕಾಕಾರವರು ಇಂದಿನ ದಿನಗಳಲ್ಲಿ ಮ್ಯಾಟ್ರಿಕ್ ಆದವರೂ ತಂದೆಯ ಮಾತು ಕೇಳದಿದ್ದಾಗ ಅಮೇರಿಕನ್ ಡಾಕ್ಟರೇಟು ಪದವೀಧರನಿಗೆ ಹೇಗೆ ಒತ್ತಾಯ ಮಾಡಲಿ? ಎಂದು ಕೇಳಿದರಂತೆ. ಹೇಗಿದ್ದರೂ ಇಷ್ಟರಲ್ಲಿ ಅವನು ತನ್ನ ಸಹಪಾಠಿ, ಸಹೋದ್ಯೋಗಿಗಳನ್ನು ಭೇಟಿಯಾಗಲು

* ಸಾರಸ್ವತ ಮತ್ತು ಗೌಡ ಸಾರಸ್ವತ ಬ್ರಾಹ್ಮಣರಲ್ಲಿ ಅತ್ಯಲ್ಪ ಅಂತರ ವಿದ್ದರೂ ಅನೇಕ ವರ್ಷಗಳವರೆಗೆ ಅಂತರ್-ವಿವಾಹಗಳು ಆಗುತ್ತಿರಲಿಲ್ಲ. ಆದರೆ ಕೆಲ ವರ್ಷಗಳ ಹಿಂದೆ ಎಲ್ಲ ಕೊಂಕಣಿ ಬ್ರಾಹ್ಮಣರು ಒಂದೇ ಎಂದು ಪರಿಗಣಿಸಲ್ಪಡಬೇಕೆಂದು ನಾಲ್ಕು ಮಠಗಳ ಸ್ವಾಮಿಗಳೇ ಜಂಟಿ ಹೇಳಿಕೆ ನೀಡಿದ್ದರಿಂದ ಸಹಾಯವಾಗಿದೆ.

ಧಾರವಾಡಕ್ಕೆ ಹೋಗಲಿದ್ದಾನೆ. ಆಗ ಕನ್ಯೆಯನ್ನೇ ಮಾತನಾಡಿಸಿ ಒಂದು ನಿರ್ಧಾರಕ್ಕೆ ಬರಲು ಸೂಚಿಸುತ್ತೇನೆ ಎಂದರಂತೆ.

ಧಾರವಾಡಕ್ಕೆ ಬಂದೆ. ಬುರ್ಡೆ ಮಾಸ್ತರರನ್ನು ಕಾಣಲು ಬಂದರೂ ಅವರು ದೂರದ ರಾಯಚೂರಿಗೆ ಅದಾಗಲೇ ಹೊರಟು ಬಿಟ್ಟದ್ದರಿಂದ ಮಗಳನ್ನೇ ಮಾತನಾಡಿಸಿದ್ದೆ. ಇಬ್ಬರ ಜೀವನದ ಆದರ್ಶ, ಅಭಿರುಚಿ, ಹವ್ಯಾಸಗಳು ತೀರ ಹತ್ತಿರದವು ಎಂದು ಕಂಡುಬಂದದ್ದರಿಂದ ಈ ಕನ್ಯೆ ಒಪ್ಪಿಗೆಯಾಗಿದೆ ಎಂದು ಕಾಕಾರಿಗೆ ಬರೆದು ತಿಳಿಸಿದ್ದೆ. ಧಾರವಾಡಕ್ಕೆ ಒಂಟಿ ಸಲಗನಾಗಿ ಬಂದರೂ ರಾಜಸ್ಥಾನಕ್ಕೆ ಪ್ರಯಾಣ ಬೆಳೆಸುವಾಗ ಪಾರಿವಾಳದ ಜೋಡಿಯ ಕಲ್ಪನೆ ಗರಿಗೆದರಿಸಿಕೊಂಡು ಹೊರಟಿದ್ದೆ. ಈಗಾದರೋ ನನ್ನ ಸ್ಥಿತಿ ತ್ರಿಶಂಕುವಿನದಾಗಿದೆ! ಅವಿವಾಹಿತನೂ ಅಲ್ಲ, ವಿವಾಹಿತನೂ ಅಲ್ಲ. ಮುಂಬರುವ ಜೀವನದ ಹಗಲುಗನಸು ಕಾಣುವದಲ್ಲದೇ ಬೇರೇನೂ ಮಾಡಲಾಗುತ್ತಿಲ್ಲ.... ಜ್ಯೋತ್ಸ್ನಾ, ಇಂದಿನ ದಿನಗಳಲ್ಲಿ ನನಗೆ ಜೋಡಿ ಜಡೆ, ಜಂಬ, ಜ್ಯೋತಿ, ಜೋಗುಳ, ಜೋಕುಮಾರಗಳಂತಹ ಶಬ್ದಗಳು ವಿಶೇಷವಾಗಿ ಸೇರುತ್ತವೆ. ನಿನಗೆ ಕಾಗೆ, ಕಾವಿ, ಕಪಿ, ಕತ್ತೆ, ಕೀಟ, ಕೀಲಿ ಮುಂತಾದ ಶಬ್ದಗಳು ಆಕರ್ಷಿಸುತ್ತಿರಬಹುದೆ?

○

೬. ಸಲಹೆಗಳು

ಜೊಬನೇರ, ೧೫-೨-೧೯೬೬

ಇಂದು ಮುಂಜಾನೆಯಿಂದ ನಮ್ಮ ಓಣಿಯಲ್ಲಿ ಮಂಗಲವಾದ್ಯಗಳು ಭೋರ್ಗರೆಯುತ್ತಿವೆ. ಯಾರೋ ವಿವಾಹವಾಗಲು ಹೊರಟಂತೆ ಇದೆ. ಹೆಂಗಳೆಯರೆಲ್ಲ ರಂಗುರಂಗಿನ ವೇಷ-ಭೂಷಣಗಳನ್ನು ಧರಿಸಿ, ಆ ಮನೆಯಿಂದ ಈ ಮನೆಗೆ ಓಡಾಡಿಕೊಂಡಿದ್ದಾರೆ. ಪುರುಷರು ತಮ್ಮ ಸಕಲ ಚಟುವಟಿಕೆಗಳನ್ನು ಮೂಲಿಗೊತ್ತಿ ಹೆಂಗಳೆಯರನ್ನು ಹಿಂಬಾಲಿಸುತ್ತಿದ್ದಾರೆ! ಮೆರವಣಿಗೆಯಲ್ಲಿ ಪಾಲುಗೊಂಡವರೆಲ್ಲ ಗೊಂಡೆ, ಹೂವಿನ ಹಾರ ಹಾಕಿಕೊಳ್ಳುವದು ಇಲ್ಲಿಯವರ ವೈಶಿಷ್ಟ್ಯ. ಕಣ್ಣಲ್ಲಿ ಕಣ್ಣಿಟ್ಟು ವಿವಾಹದ ವಿವರಗಳನ್ನು ನೋಡುತ್ತಿದ್ದಂತೆ ನಾನೂ ರಾಜಸ್ಥಾನಿ ಪದ್ಧತಿಯಲ್ಲಿ ಮದುವೆಯಾದರೆ! ಎಂಬ ವಿಚಾರದಿಂದಲೇ ರೋಮಾಂಚನವಾಯಿತು. ನೀನು ನಾಲವತ್ತು ಗಜದ ಲಹಂಗಾ (ಘಾಗರಾ), ಧರಿಸಿ ಕನ್ನಡ ಚೂರು ಧರಿಸಿದ ರವಕೆ (ಕಂಚಲೀ) ತೊಡಬೇಕು. ಕೈತುಂಬ ಹೊಳೆಹೊಳೆಯುವ ಅರಗಿನ ಬಳೆಗಳಿರಬೇಕು. ಕಾಲಲ್ಲಿ ಭಾರವಾದ ಕಾಲಂದುಗೆ (ಪೈಜಣ), ಸೊಂಟಕ್ಕೆ ಕರಧನಿ, ಬೈತಲೆಯಲ್ಲಿ 'ಬೋರ್'. ಎರಡೂವರೆ ಗಜದ ಓಢಣಿಯಿಂದ ಸಾಲಂಕೃತ ಸೌಂದರ್ಯ ಇಣುಕುತ್ತಿರಬೇಕು. ವೀರಯೋಧನ ಪೋಷಾಕಿನಲ್ಲಿದ್ದ ವರನು ಅಶ್ವಾರೋಹಿಯಾಗಿ ಬಂದು ವಧುವನ್ನು ತನ್ನವಳನ್ನಾಗಿ ಮಾಡಿಕೊಳ್ಳಬೇಕು. ನಮ್ಮೂರವರಿಗೆ ಇಂಥ ಅಪೂರ್ವ ಸುಸಂಧಿ ತಂದು ಕೊಡೋಣವೆ?

ರಾಜಸ್ಥಾನಿಗಳ ಉಡುಪುಗಳೆಲ್ಲ ಮೆಚ್ಚಿಗೆಯಾದರೂ ವಿವಾಹದ ಹೆಸರಿನಲ್ಲಿ ದುಂದುಗಾರಿಕೆ ಹೇಗೆ ಮೆಚ್ಚುವದು? ನಮ್ಮ ಮದುವೆಗಾಗಿ ನಿಮ್ಮ ತಂದೆ ಆರು ಸಾವಿರ ರೂಪಾಯಿ ಖರ್ಚು ಮಾಡುವ ಸಿದ್ಧತೆಯಲ್ಲಿ ಇದ್ದಾರೆಯೇ? ಶಿವ, ಶಿವಾ! ಬೆವರು ಸುರಿದು ಸಂಪಾದಿಸಿದ ಹಣ ಹೀಗೆ ಪೋಲು ಮಾಡುವದಕ್ಕೆ ವಿಚಾರವಂತರೆಲ್ಲ ವಿರೋಧಿಸಲೇಬೇಕು. ವರದಕ್ಷಿಣೆ ಬೇಡವೆಂದರೂ, ಯಾವುದೇ ರೀತಿಯ ವರ-ಪೋಷಾಕಿನ ವರೋಪಚಾರದ ಅವಶ್ಯಕತೆ ಇಲ್ಲವೆಂದೂ, ದಿಬ್ಬಣದಲ್ಲಿ ಹತ್ತಿಪ್ಪತ್ತು

ಜನರಿಗಿಂತ ಹೆಚ್ಚು ಜನ ಬರುವದಿಲ್ಲವೆಂದರೂ ಇಷ್ಟೆಲ್ಲ ವೆಚ್ಚದ ವಿವಾಹ ಏಕೆ ಮಾಡಬೇಕು? ಎಂದು ತಿಳಿಯದಾಗಿದೆ. ನನಗಂತೂ ಸಂಸ್ಕೃತ ಪಂಡಿತರು ವೈದಿಕ ಮಂತ್ರಗಳನ್ನು ಘೋಷಿಸುತ್ತ ಸಪ್ತಪದಿ ಹೂಮಾಲೆಗಳನ್ನು ಹಾಕಿಕೊಳ್ಳುವದರಲ್ಲಿ ಮದುವೆಯ ಕಾರ್ಯಕ್ರಮ ಮುಗಿಸಿದರೆ ಅದಕ್ಕಿಂತ ಸಂತೋಷದ ಸಂಗತಿ ಬೇರೊಂದಿಲ್ಲ. ಮದುವೆಗಾಗಿ ಮೀಸಲಿಟ್ಟ ಹಣವನ್ನು ಬ್ಯಾಂಕಿನಲ್ಲಿ ಠೇವಣಿಯಾಗಿ ಟ್ಟರೆ, ಆಪತ್ಕಾಲದಲ್ಲಿ ನೆರವಿಗೆ ಬರುವದಲ್ಲವೇ? ತಂದೆಯವರ ಮನಸ್ಸನ್ನು ಬದಲಿಸುವಂತೆ ಕಾಯಾ ವಾಚಾ ಮನಸಾ ಯತ್ನಿಸು.

ಕೊನೆಗೊಮ್ಮೆ ನಿನ್ನ ಕಿರು ಭಾವಚಿತ್ರ ಕಳಿಸಿದ್ದರಿಂದ ನೆಮ್ಮದಿಯೆನಿಸಿತು-ಮುಖಾಮುಖಿ ಭೇಟಿಯಾದಾಗ, ನಿನ್ನನ್ನು ಸರಿಯಾಗಿ ನೋಡಲಾಗಿರಲಿಲ್ಲ. ಈಗ ಚಿತ್ತವನ್ನು ದೃಷ್ಟಿ ಬೀಳುವಷ್ಟು ಹೊತ್ತು ಎವೆಯಿಕ್ಕದೇ ನೋಡಿದರೂ ನೆಮ್ಮದಿಯಾಗದ್ದರಿಂದ ಭೂತಗನ್ನಡಿಯಿಂದ ಇನ್ನಷ್ಟು ಹೊತ್ತು ನೋಡಿದೆ. ನಡುರಾತ್ರಿಯ ತನಕ ಏನೇನೋ ಹಗಲುಗನಸುಗಳನ್ನು ಕಾಣುತ್ತಾ ಧಿಗ್ಗನೆ ಎದ್ದು ಇನ್ನೊಮ್ಮೆ ನಿನ್ನ ಫೋಟೊ ನೋಡಿ ಮಲಗಿದ ಮೇಲೆಯೇ ಸುಖ ನಿದ್ರೆ ಬಂದಿತು. ಅದನ್ನು ಇಲ್ಲಿಯ ಯಾರಿಗೂ ತೋರಿಸಬಾರದು ಎಂದುಕೊಂಡರೂ, ಬಿ. ಪಿ. ಅವರು (ಕೀಟ ವಿಭಾಗದ ಮುಖ್ಯಸ್ಥರಾದ ಡಾ. ಶ್ರೀ ವಾಸ್ತವರಲ್ಲಿ ಕೆಲದಿನಗಳಿಗಾಗಿ ವಾಸ್ತವ್ಯ ಹೂಡಿದಾಗ) ಒಂದೇ ಸವನೆ ಕೇಳುತ್ತಲೇ ಇದ್ದುದರಿಂದ ತೋರಿಸಲೇ ಬೇಕಾಯಿತು. ಅವರು ಪತ್ನಿಗೆ ತೋರಿಸಲು, ಆ ಲಕ್ಷ್ಮೀದೇವಿ ಕುಣಿಯುತ್ತ ಹೋಗಿ ಎಲ್ಲರಿಗೂ ತೋರಿಸಿಕೊಂಡು ಬಂದರು. ಹಿಂದೆ ಕನ್ನಡದಲ್ಲಿ ಬರೆದದ್ದರ ಅರ್ಥ ಏನೆಂದು ವಿಚಾರಿಸಿದರು. ಎಷ್ಟು ಕಲಿತಿದ್ದಾಳೆ, ಏನು ಮಾಡುತ್ತಾಳೆ? ಅಡಿಗೆ ಬರುತ್ತದೆಯೇ? ಹೊಲಿಗೆ, ಸಂಗೀತದಲ್ಲಿ ಆಸಕ್ತಿ ಇದೆಯೇ? ಎಂದು ಸಹಸ್ರ ಪ್ರಶ್ನೆಗಳ ಸುರಿಮಳೆಯಾಯಿತು. ಕನ್ಯೆ ಸುಂದರಿಯಿದ್ದಾಳೆ? ಆಕರ್ಷಕವಾಗಿದ್ದಾಳೆ, ಆದರ್ಶ ಮಹಾರಾಷ್ಟ್ರಿಯನ್ ಗೃಹಿಣಿಯ ಲಕ್ಷಣಗಳಿವೆ! ಎಂದು ಏನೇನೋ ಹೇಳಿದರು. ಬಿ.ಪಿ. ಯವರಂತೂ“ಕೇಶರಾಶಿ ವಿಪುಲವಾಗಿದೆ. ಈ ರಾಶಿಯಲ್ಲಿ ಸಿಕ್ಕಿಹಾಕಿಕೊಂಡು, ಬಿದ್ದಿರಾ? ಜೋಡಿ ಜಡೆ ಎಳೆಯುಲು ಚೆನ್ನಾಗಿರುತ್ತವೆ.” ಎಂದು ಕಣ್ಣು ಮಿಟುಕಿಸಿ ನಕ್ಕರು. ಅವರ ಪಾಲಿಗೆ ಬಂದವಳು ಚೋಟುದ್ದ ಜಡೆಯವಳು, ಎಂದು ಇಲ್ಲಿ ಸ್ಮರಿಸಿಕೊಳ್ಳಬಹುದು. ಅವರ ಅತ್ತೆ (ನಾನಿಜಿ) ಎರಡು ವರ್ಷದ ಮೊಮ್ಮ

ಗಳಿಗೆ ಆಂಟಿಜಿಗೆ ನಮಸ್ಕಾರ ಮಾಡಲು ಹೇಳಿದಾಗ, ಅವಳು ನಿನ್ನ ಭಾವಚಿತ್ರಕ್ಕೆ ಭಯಭಕ್ತಿಯಿಂದ ನಮಸ್ಕಾರ ಮಾಡಿದ್ದು ನೋಡಿ ಮೋಜೆನಿಸಿತು. ಈಗ ಅವರ ಮನೆಗೆ ಬಂದವರಿಗೆಲ್ಲ ನಮ್ಮ ವಿವಾಹದ ಬಗ್ಗೆ ಡಂಗುರ ಸಾರಿ ಫೋಟೊ ತೋರಿಸು ವಂತೆ ಮಾಡುತ್ತಾರೆ!

ಈ ಸಣ್ಣ ಹಳ್ಳಿಯಲ್ಲಿ ನನ್ನ ಮದುವೆಯ ಸಮಾಚಾರ, ಕಾಡುಗಿಚ್ಚಿನಂತೆ ಹರಡಿತು. ಮೊದಲು ತಿಳಿಸದೇ ಪರೋಕ್ಷವಾಗಿ ಅರಿಯುವಂತಾದದ್ದಕ್ಕೆ ಅನೇಕರು ಆಕ್ಷೇಪವೆತ್ತಿದರು. ಕುಟುಂಬದ ಹೆಸರು 'ಕ' ದಿಂದ ಪ್ರಾರಂಭಿಸುವವರು ಜೊಬ ನೇರಕ್ಕೆ ಬರುವ ಮೊದಲು ಮದುವೆಯಾಗಿರದಿದ್ದರೆ, ಇಲ್ಲಿ ಇದ್ದಾಗಲೇ ಆ ಶುಭ ಕಾರ್ಯ ಮುಗಿಸಿಕೊಳ್ಳದಿದ್ದರೆ ಆಜನ್ಮ ಬ್ರಹ್ಮಚಾರಿಯಾಗಿರುವದು ತೀರ ಸಾಮಾನ್ಯ ವೆಂದು ಅನೇಕಾನೇಕ ಉದಾಹರಣೆಗಳಿಂದ ವಿವರಿಸಿದರು. ದೂರದ ಊರಿನ ಮದುವೆಗೆ ತಮಗೆಲ್ಲ 'ಬರಾತ್' ಮಾಡಿಕೊಂಡು ಬರಲಾಗುವದಿಲ್ಲ. ಆದ್ದರಿಂದ ಕನ್ಯೆಯನ್ನೆ ಇಲ್ಲಿಗೆ ಬರಮಾಡಿಕೊಳ್ಳುವಂತಾದರೆ, ರಾಜಸ್ಥಾನಿ ಪದ್ಧತಿಯಲ್ಲಿ ಅದ್ಧೂರಿಯಾಗಿ ವಿವಾಹವನ್ನು ನೆರವೇರಿಸುವೆವು! ಎಂದು ಪಟಾಕಿ ಹಾರಿಸಿದರು. ಹಿರಿಯರಿಗೆ ಬರಲಾಗದಿದ್ದರೆ ನಮ್ಮ ಕಾಲೇಜ್ ಡೀನರಿಗೇ ಕನ್ಯಾದಾನ ಮಾಡುವಂತೆ ವಿನಂತಿಸಿಕೊಳ್ಳಬಹುದೆಂದು ಸೂಚಿಸಿದರು. ಮಾವನನ್ನು ಸುಲಿ ಯುವದು ಹೇಗೆ ಎಂದು ಕೊಟ್ಟ ಉಪದೇಶಕ್ಕೆ ಕೊನೆ ಮೊದಲಿರಲಿಲ್ಲ. ಜೊಬ ನೇರದಲ್ಲಿ ವಿಪರೀತ ಚಳಿ-ಸೆಕೆಗಳು. ಉಣ್ಣೆಯ ಸೂಟ್, ಬೆಚ್ಚಗಿನ ರಜಾಯಿ, ಫೋನು, ವಾತ-ನಿಯಂತ್ರಣ ಮುಂತಾದವನ್ನು ಗಿಟ್ಟಿಸಲು ಬರುತ್ತದಂತೆ! ಓಡಾಟ ಕ್ಕಾಗಿ ಸ್ಕೂಟರ್ ಕೇಳೆಂದು ಒಬ್ಬನೆಂದರೆ ಕಾರು ಬೇಕೆನ್ನುವದೇ ಮೇಲು ಎಂದು ಇನ್ನೊಬ್ಬನೆಂದ! ಈ ಕೊಂಪೆಯಲ್ಲಿ ಪತ್ನಿಯನ್ನು ಕರೆದುಕೊಂಡು ಬಂದರೆ ಮರು ದಿನವೇ ಅವಳು ಪಲಾಯನ ಮಾಡಿಯಾಳು! ಎಂದು ನಿರಾಶಾವಾದಿಯೊಬ್ಬ ಹೇಳಿ ದರೆ, ಅವಳು ಇರುವಂತೆ ಮಾಡಬೇಕಾದರೆ ಜೊಬನೇರ ಭೂಲೋಕದ ನರಕ ಎಂದು ಬಣ್ಣಿಸು, ಅಂದರೆ ನಿಜ ಸಂಗತಿ ಊಹಿಸಿದಷ್ಟು ಕೆಟ್ಟದಾಗಿಲ್ಲವೆಂದು ಎಲ್ಲ ವನ್ನೂ ತಾಳಿಕೊಂಡಾಳು ಎಂದು ವ್ಯವಹಾರ ಕುಶಲಿಯೊಬ್ಬನೆಂದ. ಇದ್ದ ನೌಕ ರಿಗೆ ರಾಜೀನಾಮೆ ಕೊಡುವದರಲ್ಲಿ ಯಾವ ಅರ್ಥವೂ ಇಲ್ಲ. ಜೈಪುರಕ್ಕೆ ವರ್ಗ ಮಾಡುವವರೆಗೆ ಅಲ್ಲಿಯೇ ಇರಲಿ ಎಂದು ಮಾರವಾಡಿಯೊಬ್ಬ ಅಭಿಪ್ರಾಯಪಟ್ಟ. ಇದಾಗಲೇ ಕೃಷಿ ಕಾಲೇಜಿನವರು ಶಿಕ್ಷಕ ವರ್ಗಕ್ಕೆ ಕೊಡಮಾಡಿದ ಗೋದಿ

ಪಚ್ಚೆಸರು, ಎಳ್ಳು ಮುಂತಾದವನ್ನು ಕೊಂಡು ಇಟ್ಟುದರಿಂದ, ನಾನೊಬ್ಬ ಒಳ್ಳೆ ಗೃಹಸ್ಥನಾಗುವೆನೆಂದು ಸಹೋದ್ಯೋಗಿ ಅಭಿಮಾನದಿಂದ ಬೆನ್ನು ಚಪ್ಪರಿಸಿದ.

ಇಂಗ್ಲಂಡ-ಅಮೇರಿಕಾಗಳಿಂದಲೂ ಅಭಿನಂದನೆಯ ಪತ್ರಗಳು ಬರಲಾರಂಭಿಸಿವೆ. ಸಾಯರೆಕ್ಯೂಸಿನ ಕುಚೋದ್ಯಗಳನ್ನೆಲ್ಲ ಭಾಭಿಜಿಯವರಿಗೆ ವರದಿ ಮಾಡಲೇ? ಎಂದು ನನ್ನ, ರೂಂಮೇಟಾಗಿದ್ದ ಅರುಣ ಆಚಾರ್ಯನು ಹೆದರಿಸಿದ್ದಾನೆ. ಕುಮಾರಿಯಾಗಿದ್ದರೆ ನನ್ನನ್ನೇ ವರಿಸುತ್ತಿದ್ದೆ, ಎಂದು ಈತನೇ ಒಮ್ಮೆ ಹಲುಬಿದ್ದ. ಕಲಕತ್ತೆಯಲ್ಲಿ ಬೀಡುಬಿಟ್ಟ ಗುಜರಾಥಿಗಳವರು. ಪರ್ದು ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ನಡೆಸಿದ ಬೀಳಗಿಯ ಆಚಾರ್ಯನು ಏನು ಬರೆದಿದ್ದಾನೆ ಗೊತ್ತೆ? ಉತ್ತಮ ವರನನ್ನು ಸೆರಗಿನಲ್ಲಿ ಕಟ್ಟಿಕೊಂಡಿದ್ದಕ್ಕಾಗಿ ನಿನಗೆ ಅಭಿನಂದನೆ ತಿಳಿಸು ಎಂದು! ಸಿಯಾಟಲ್‌ನ ವಾಶಿಂಗ್ಟನ್ ವಿಶ್ವವಿದ್ಯಾಲಯದಲ್ಲಿದ್ದ ಡಾ|| ನಾಡಕರ್ಣಿ ಅವರು ಒಬ್ಬರಿಗಾಗಿ ಇನ್ನೊಬ್ಬರನ್ನು ಮಾಡಿದಂತೆ ಜೀವಿಸಬೇಕೆಂದಿದ್ದಾರೆ. ಡೀನ್ ಶರ್ಲೆ ಅವರು, ವೈಯಕ್ತಿಕ ಪತ್ರ ಬರೆದು, ವಿವಾಹ ಸ್ಥಳವಾದ ಕುಮಟಾ (ಉತ್ತರ ಕನ್ನಡ ಜಿಲ್ಲೆ) ಸಾಯರೆಕ್ಯೂಸಿನಿಂದ ವಿಪರೀತ ದೂರ ಇರುವದರಿಂದ ವಿವಾಹಕ್ಕೆ ಹಾಜರಾಗಲು ಆಗದಿದ್ದರೂ ನಿಮ್ಮಿಬ್ಬರ ವೈವಾಹಿಕ ಜೀವನ ಸುಖ-ಶಾಂತಿಮಯವಾಗಲೆಂದು ಹಾರೈಸುತ್ತೇನೆ ಎಂದಿದ್ದಾರೆ. ನನ್ನ ಪ್ರೊಫೆಸರ್ ಮ್ಯಾಕ್ ಎಂಡ್ರೂಸರು ತನ್ನ ಮೆಚ್ಚಿನ ವಿದ್ಯಾರ್ಥಿಗೆ ಉತ್ತಮ ಗೃಹಜೀವನ ಕೋರಿದ್ದಾರೆ. ನನ್ನ ಅಮೇರಿಕನ್ ಸಹಪಾಠಿ ಬಿಲ್ ಸಿಸ್ಲಾ ಮತ್ತು ಹೆಂಡತಿ ಜಿನಾ ಪತ್ರ ಮುಖೇನ ತಮಗಾದ ಆನಂದ ತಿಳಿಸಿ 'ನಿಮ್ಮ ವಿವಾಹ ಪದ್ಧತಿ ನಮ್ಮದಕ್ಕಿಂತ ತೀರ ಭಿನ್ನವಾಗಿರಬೇಕಲ್ಲವೇ? ಮರೆಯದೇ ನಿಮ್ಮಿಬ್ಬರ ಛಾಯಾಚಿತ್ರ ಕಳಿಸಿ' ಎಂದಿದ್ದಾರೆ. ಇಷ್ಟು ಸಾಲದೆಂಬಂತೆ, ಅವರ ಪದ್ಧತಿಯಂತೆ ನವ ವಿವಾಹಿತರಿಗಾಗಿ, ಬಟ್ಟೆಗಳ ದೊಡ್ಡ ಪೊಟ್ಟಣವನ್ನೇ ಉಡುಗೊರೆಯಾಗಿ ಅಂಚೆಯಿಂದ ಕಳಿಸಿದ್ದಾರೆ! ಸಾಯರೆಕ್ಯೂಸನಲ್ಲಿ ಇದ್ದ ಎಲ್ಲ ಅಂತರ್ರಾಷ್ಟ್ರೀಯ ವಿದ್ಯಾರ್ಥಿಗಳು ಸೇರಿ ಒಂದು ಅಭಿನಂದನಾ ಪತ್ರ ಕಳಿಸಿದ್ದಾರೆ. ಲಂಡನ್ನಿನಲ್ಲಿರುವ ಬಾಲ್ಯ ಸ್ನೇಹಿತ ನಕುಲನು ಇಂಥ ಸದವಕಾಶ ಕಳೆದುಕೊಳ್ಳುತ್ತಿದ್ದೆನಲ್ಲ! ಎಂದು ಮರುಗಿದ್ದಾನೆ.

ಫೆಬ್ರುವರಿ ೨೩ನೇ ತಾರೀಖಿಗೆ ನಿನ್ನ ಮದುವೆಯ ಆಮಂತ್ರಣವನ್ನು ನಿನಗೆ ಕಳಿಸಿದ್ದೇನೆ. ಅದನ್ನು ನೋಡಿ ತುಂಬಾ ತಮಾಷೆಯೆನಿಸಿರಬೇಕಲ್ಲವೇ?

ಮದುವೆಯ ಮಂಟಪದಲ್ಲಿ ಇದನ್ನೆಲ್ಲ ನೆನೆಸಿಕೊಂಡು ಕಿಸಕ್ಕನೆ ನಗಬೇಡ ಮತ್ತೆ! ಪೋಕ್ತಳಾಗಿ ನಡೆದುಕೊಳ್ಳಬೇಕು, ತಿಳಿಯಿತೇ? ಮದುವೆ ಮಂಟಪದಲ್ಲಿ ಭೇಟಿಯಾಗೋಣ, ಆಗದೇ?೬

ಂ

೬. ವಿವಾಹದ ನಂತರ ಆರು ತಿಂಗಳ ಜೀವನದ ವಿವರಗಳು ಪ್ರೇಯಸಿಗೆ ಬರೆದ ಪತ್ರಗಳಲ್ಲಿ ಸಿಗುತ್ತಿಲ್ಲವಾದ್ದರಿಂದ ಎಲ್ಲವನ್ನೂ ಊಹೆಗೆ ಬಿಡಲಾಗಿದೆ. ಈ ಅವಧಿಯಲ್ಲಿ ಒಂದು ತಿಂಗಳು ಕಾಶ್ಮೀರದಲ್ಲಿ ಕಳೆದದ್ದನ್ನು ಮುಚ್ಚಿಡಲಾಗದು!

೭. ಶುಭ ವಾರ್ತೆ

ಜೊಬನೇರ, ೪-೮-೧೯೭೬

ನಾವು ತಂದೆ-ತಾಯಿ ಆಗಲಿದ್ದೇವೆ ಎಂಬ ಶುಭವಾರ್ತೆ ಅರಿತು ಆದ ಆನಂದ ಅನಂತವಾದದ್ದು. ಪತಿ-ಪತ್ನಿಯಲ್ಲಿರುವ ಆಕರ್ಷಣೆಯೇ ಸಂತಾನೋತ್ಪತ್ತಿಗೆ ನಾಂದಿ. ಒಬ್ಬರಿಗಾಗಿ ಇನ್ನೊಬ್ಬರು ಬದುಕಬೇಕೆಂದಿರುವ ಸಂಸಾರಕ್ಕೆ ಬರಲಿರುವ ಸಂತಾನ ಕಲಶವಿಟ್ಟಂತಾಗುವದು. ಪತಿಗಿಂತ ಪಿತನ ವರ್ಚಸ್ಸು, ಪ್ರಭಾವ ಹೆಚ್ಚಿಗೆಯೆಂದು ಭಾಸವಾಗಹತ್ತಿದೆ. ತಾಯಿಯಾಗುವವಳಿಗೆ ತನ್ನದೇ ರಕ್ತ-ಮಾಂಸಗಳಿಂದ ಇನ್ನೊಂದು ಪುಟ್ಟ ಮಾನವ ರೂಪ ಉದಯವಾಗಲಿದೆ ಎಂದರೆ ಅದೆಷ್ಟು ಅಭಿಮಾನವಿದ್ದಿರಬೇಕಲ್ಲವೇ? ಉತ್ಪತ್ತಿ, ಸೃಷ್ಟಿಯ ನಿಯಮ. ಅದನ್ನು ಪರಿಪಾಲಿಸಿದಾಗಲೇ ಜೀವನದಲ್ಲಿ ಸಾರ್ಥಕತೆ ಕಾಣುತ್ತದೆ. ಗಂಡು-ಹೆಣ್ಣಿನ ಭೇದಭಾವವಿಲ್ಲದಿದ್ದರೂ ನಾವು ಪುತ್ರರತ್ನವನ್ನೇ ಪಡೆಯಲಿದ್ದೇವೆ, ಎಂದು ಅನಿಸುತ್ತದೆ. ಕೃತಕ ಕುಟುಂಬ ಯೋಜನೆಯಲ್ಲಿ ಭ್ರೂಣ ಹತ್ಯೆಯಲ್ಲಿ ನನಗೆ ವಿಶ್ವಾಸವಿಲ್ಲ. ಪ್ರತಿ ಮಗುವೂ ದೇವದತ್ತ ವಿಶಿಷ್ಟ ಕೊಡುಗೆಯಾದ್ದರಿಂದ ಅದನ್ನು ಧ್ವಂಸಗೊಳಿಸುವ ಅಧಿಕಾರ ಯಾರಿಗೂ ಇಲ್ಲ. ಆದರೆ ಕಾಮಾಂಧನಾದ ಮಾನವ ಎಂತೆಂತಹ ಕ್ರೂರ ಕೃತ್ಯಗಳನ್ನು ಮಾಡುತ್ತಾನೆ ಎಂಬುದನ್ನು ನೆನೆಸಿಕೊಂಡಾಗ ಮೈ ಜುಂ ಎನ್ನುತ್ತದೆ. ಸ್ವೇಚ್ಛಾಚಾರಿಯಾದವರು ಜೀವನದ ಅರ್ಥವನ್ನೆ ಮಾಡಿಕೊಳ್ಳುತ್ತಿಲ್ಲ, ಎಂಬುದು ವಿಷಾದದ ಸಂಗತಿ. ವೈದ್ಯಕೀಯ ಶಾಸ್ತ್ರದಲ್ಲಿ ಆದ ಪ್ರಗತಿ ಮಾನವನನ್ನು ಇನ್ನೂ ಅಧೋಗತಿಯತ್ತ ಎಳೆದೊಯ್ಯಲಾರಂಭಿಸಿದೆ, ಎಂದು ಅನಿಸುತ್ತದೆ.

ಈ ಸಮಾಚಾರ ಕೇಳಿ ಕಾಕಾ-ಕಾಕಿಯರು ತುಂಬ ಸಂತೋಷ ಪಡುವದರಲ್ಲಿ ಸಂಶಯವೇ ಇಲ್ಲ. ಬಾಬಾ (ಮಾವಯ್ಯ) ನವರು, ದಪ್ಪ ದಪ್ಪ ಪುಸ್ತಕಗಳನ್ನು ಓದಿಸಲು ಒಬ್ಬ ವಿದ್ಯಾರ್ಥಿ ದೊರಕಲಿದ್ದಾನೆಂದು ಗೆಲುವಾಗಬಹುದು. ಮಕ್ಕಳಿಗೆ ಇಟ್ಟಂತಹ, ಅಪರೂಪದ ಹೆಸರನ್ನು ಹುಡುಕಲು, ಪುರಾಣ, ಕಾವ್ಯ, ವೇದೋಪನಿಷತ್ತುಗಳನ್ನು ತಿರುವಿ ಹಾಕಲು ಪ್ರಾರಂಭಿಸಿರಬಹುದು. ಬಾಯಿಗೆ ಸುಲಭವಾಗಿ ಬರದ ಬಿಕ್ಕಟ್ಟಿನ ಹೆಸರುಗಳು ಬೇಡವೇ ಬೇಡ. ಉದ್ದ ಹೆಸರಿಟ್ಟು ನಂತರ ಮುದ್ದಿನ ಮೊಟಕು ನಾಮದಿಂದ ಕರೆಯುವದು ಸರಿಯಲ್ಲ. ಅರ್ಥಪೂರ್ಣ ಹೆಸರು

ಇಡುವಲ್ಲಿ ಬಂಗಾಲಿಗಳು ಹೆಸರುವಾಸಿ. ಆದರೆ ಒಂದೇ ಕೊರತೆಯೆಂದರೆ ಉಚ್ಚಾರದ ಅಪಭ್ರಂಶ. 'ವರುಣ' ಎಂದು ನಾಮಕರಣ ಮಾಡಿ 'ಬೊರುನ್' ಎಂದು ಸಂಬೋಧಿಸುತ್ತಾರೆ. ರಾಜಸ್ಥಾನಿಗಳು ತಾವು ವೀರಿದ ಶೂರರೆಂದು ಸಾರಲು ತಮ್ಮ ಹೆಸರಿಗೆ ಸಿಂಹ, ಸಿಂಗ್ ಎಂದು ಕೋಡು ಸೇರಿಸುತ್ತಾರೆ. ನಮ್ಮ ಪುತ್ರನು ರಾಜಸ್ಥಾನದ ವೀರ ಧರೆಯಲ್ಲಿ ಇಳಿದು ಬರಲಿರುವದರಿಂದ ಅವನಿಗೂ ಈ ಪ್ರತ್ಯಯ ಹಚ್ಚೋಣವೇ? ಮತ್ತೆ ಕನಸಿನ ರಾಜ್ಯದಲ್ಲಿ ವಿಹರಿಸುತ್ತ ಏನೇನೋ ಬರೆಯುತ್ತಿದ್ದೇನೆಂದು ಕಾಣುತ್ತದೆ. ಈ ಶುಭವಾರ್ತೆಯನ್ನು ಇದಾಗಲೇ ಧಾರವಾಡದ ಸ್ನೇಹಿತೆಗೆ ಬರೆದು ಬಿಟ್ಟಿರುವೆಯಾ? ಅವರು ಇದನ್ನು ರಾಷ್ಟ್ರೀಯ ವಾರ್ತೆ ಎಂಬಂತೆ ಧಾರವಾಡ ಆಕಾಶವಾಣಿಯವರಿಗೆಲ್ಲ ಬಿತ್ತರಿಸದೇ ಇರುವರೇ?

ಮುಂಬರುವ ದಿನಗಳಲ್ಲಿ ಆರೋಗ್ಯದ ಕಾಳಜಿ ವಹಿಸುವದು ಅತಿ ಮುಖ್ಯ. ಝುನಾನಾ ಆಸ್ಪತ್ರೆಗೆ ಹೋಗಿ ವಿವರವಾಗಿ ಪರೀಕ್ಷಿಸಿಕೊಳ್ಳು. ನಿಯತಕಾಲಿಕ ಪರೀಕ್ಷೆಗೆ ವಾರಕ್ಕೊಮ್ಮೆಯಾಗದಿದ್ದರೆ ತಿಂಗಳಿಗೊಮ್ಮೆಯಾದರೂ ಹೋಗುತ್ತಿರಬೇಕು. ಡಾಕ್ಟರಣಿ ಬರೆದು ಕೊಟ್ಟ ಔಷಧೋಪಚಾರಗಳನ್ನು ಚಾಚೂ ತಪ್ಪದೇ ಸೇವಿಸುವದು. ಬೆಳೆಯುವ ಮಗುವಿಗೆ ಕ್ಯಾಲ್ಶಂ ಅವಶ್ಯಕತೆ ಭಾರೀ ಇರುವದು. ಹಸಿರು ತರಕಾರಿ–ಹಣ್ಣು–ಹಂಪಲುಗಳನ್ನು ಯಥೇಷ್ಟವಾಗಿ ಉದರಕ್ಕೆ ಇಳಿಸುತ್ತಿರಬೇಕು. ಯಾವುದೇ ಭಾರವಾದ ವಸ್ತುವನ್ನು ಎತ್ತುವ ಸಾಹಸ ಮಾಡಬೇಡ. ಇನ್ನೊಂದು ಕಿವಿ ಮಾತೆಂದರೆ, ತೃತೀಯ ತಿಂಗಳಲ್ಲಿ ಕಾಲಿಡುತ್ತಿದ್ದಂತೆ ಶರೀರದಲ್ಲಿ ಹಾರ್ಮೋನ ಉತ್ಪಾದನೆಯಲ್ಲಿ ಬದಲಾವಣೆಯಾಗುತ್ತಿರುವಾಗ ಗರ್ಭಪಾತವಾಗುವ ಸಾಧ್ಯತೆ ಅತಿ ಹೆಚ್ಚು. ಆದ್ದರಿಂದ ಈ ಅವಧಿಯಲ್ಲಿ ಅತ್ಯಂತ ಎಚ್ಚರಿಕೆಯನ್ನು ವಹಿಸಬೇಕು. ಯಾವುದರ ಬಗ್ಗೆಯೂ ಅಲ್ಪವಾದರೂ ಸಂದೇಹ ಬಂದರೆ, ಮಾಲಕರ ಹೆಂಡತಿ 'ಮಾತಾಜಿ'[೭]ಯ ಹತ್ತಿರ ಪರಿಹಾರ ಕೇಳಲು ಹಿಂದೆ ಮುಂದೆ

೭ ಪತ್ನಿಯ ಸೇವೆಯನ್ನು ಜಯಪುರದ ಆಕಾಶವಾಣಿಗೆ ವರ್ಗಾಯಿಸಿದ್ದರಿಂದ ಜೊಬನೇರ–ಜಯಪುರಗಳ ನಡುವೆ ವೇಗದ ಸಾರಿಗೆ ಇಲ್ಲದ್ದರಿಂದ ಆಕಾಶವಾಣಿಯ ಹತ್ತಿರವೇ ಇದ್ದ ಶರ್ಮಾ ಅವರ ಮನೆಯಲ್ಲಿ ಪತ್ನಿ ಒಬ್ಬಳೇ ಬಿಡಾರ ಹೂಡಬೇಕಾಯಿತು. ಶರ್ಮಾ ದಂಪತಿಗಳು ಈ ಬಾಡಿಗೆದಾರಳನ್ನು ಮಗಳಂತೆ, ಅವರ ಮಕ್ಕಳು ಅಕ್ಕನಂತೆ ನೋಡಿಕೊಳ್ಳಲಾರಂಭಿಸಿದ್ದರಿಂದ ಎಷ್ಟೊ ದುಗುಡ ಕಡಿಮೆಯಾಯಿತು.

ನೋಡಬೇಡ. ಇನ್ನು ಮೇಲೆ ಬಸ್ಸಿನಲ್ಲಿ ಜೊಬನೇರಕ್ಕೆ ಬರುವ ಸಾಹಸ ಮಾಡ ಬೇಡ. ಬಿಡುವಾದಾಗಲೆಲ್ಲ ನಾನೇ ಅಲ್ಲಿಗೆ ಬರುತ್ತೇನೆ. ಕಾಲು ಶತಮಾನದ ಹಿಂದೆ ಟ್ಯಾಫ್ಯಾಡ್ ಜ್ವರದ ರೂಪದಲ್ಲಿ ಬಂದು ದೈವವು ನನ್ನತ್ತೆ ಶಾರದಾಬಾಯಿಯವ ರನ್ನು ಕೊಂಡೊಯ್ಯದಿದ್ದರೆ ಇಂದು ಅವರು ಮಗಳ ಸಹಾಯಕ್ಕೆ ಓಡಿಬಾರದೇ ಇರುತ್ತಿರಲಿಲ್ಲ, ಎಂದು ನೆನೆಸಿಕೊಂಡಾಗ ಕಣ್ಣುಗಳು ತೇವವಾದವು.

ಪುತ್ರನು ಅವತರಿಸಲಿದ್ದಾನೆಂದು ಮೈಮರೆತು ಕೂಡ್ರುವಂತಿಲ್ಲ. ಮುಂದೆ ನಮ್ಮ ಜವಾಬ್ದಾರಿಗಳು ಇನ್ನೂ ಹೆಚ್ಚಾಗಲಿರುವದರಿಂದ ಈಗಿನಿಂದಲೇ ಪೂರ್ವ ಸಿದ್ಧತೆ ಮಾಡಿಕೊಳ್ಳುವದು ಉತ್ತಮ. ಮಾನವನ 'ಬೇಕು'ಗಳಿಗೆ ಕೊನೆಮೊದಲಿಲ್ಲ. ಇದ್ದುದರಲ್ಲಿಯೇ ತೃಪ್ತಿ ಪಟ್ಟು ನಾಲ್ಕು ಪುಡಿಕಾಸು ಉಳಿಸಿದವನೇ ಜಾಣ. ಮಗ ನನ್ನು ಕಾಲೇಜಿಗೆ ಸೇರಿಸಬೇಕಾಗಿ ಬಂದಾಗ, ಮಗಳು ಮದುವೆಗೆ ಬೆಳೆದು ನಿಂತಾಗ, ತಮ್ಮ ಹಣಕಾಸಿನ ದುರವಸ್ಥೆಗೆ ಕಂಗಾಲಾಗುವವರಿಗೆ ಏನೇನೂ ಕೊರತೆಯಿಲ್ಲ. ಅಂಥ ಸ್ಥಿತಿ ಎದುರಿಸುವ ಮನಸ್ಸು ಇಲ್ಲದ್ದರಿಂದ ಮಗುವಿನ ಭವಿಷ್ಯದ ದೃಷ್ಟಿ ಯಿಂದ ಈಗಿನಿಂದಲೇ ಕೊಂಚ ಉಳಿತಾಯ ಮಾಡಬೇಕೆಂದಿರುವೆ. ಅಂದರೆ ಇಪ್ಪತ್ತು ವರ್ಷಗಳ ನಂತರ ಈ ಮೊತ್ತ ಎಷ್ಟಾಗುತ್ತದೆಂದರೆ, ನಿನಗೇ ದಿಗ್ಭ್ರಮೆ ಯಾದೀತು! ನಮ್ಮ ಸಂಸಾರವನ್ನು ಯೋಜನಾಬದ್ಧವಾಗಿ ನಡೆಸಿದರೆ, ಮುಂಬರುವ ಅದೆಷ್ಟೋ ಕಷ್ಟ-ತಾಪತ್ರಯಗಳು ತಮ್ಮಷ್ಟಕ್ಕೆ ದೂರವಾಗುವವು. ಮಾನವನು ಅನೇಕಾನೇಕ ತೊಂದರೆಗಳನ್ನು ಮುಂದಾಲೋಚನೆಯಿಲ್ಲದೇ ತಾನೇ ಆಮಂತ್ರಿಸಿ ಕೊಳ್ಳುತ್ತಾನೆ ಎಂಬುದರಲ್ಲಿ ಸಂಶಯವೇ ಇಲ್ಲ. ಈಗ ನಾವು ಹೊರಟಿರುವ ದಾರಿ ಯಲ್ಲಿ ಏರು-ಪೇರುಗಳು, ಮುಳ್ಳು-ಕಂಟಿಗಳು ತೀರ ಕಡಿಮೆ.

ಅಮೇರಿಕೆಯ ಪ್ರವಾಸ ಕಥನದ ಮೊದಲ ಅಧ್ಯಾಯ ಮೆಚ್ಚುಗೆಯಾಯಿತು ಎಂದು ಅರಿತು ಸಂತಸ ಪಟ್ಟೆ. ಅದನ್ನು ಈಗಲೇ ಪ್ರತಿ ಮಾಡಲು ಪ್ರಾರಂಭಿಸು ವದು ಬೇಡ. ಎಲ್ಲವನ್ನೂ ಬರೆದು ಮುಗಿಸಿದ ನಂತರ ಪ್ರತಿ ಅಧ್ಯಾಯವೂ ಇನ್ನೊಂದರೊಂದಿಗೆ ಹಾಸು ಹೊಕ್ಕಾಗಿದೆಯೋ ಎಂದು ಇನ್ನೊಮ್ಮೆ ಪರಾಮರ್ಶಿಸ ಬೇಕು. ಅವಶ್ಯವೆನಿಸಿದರೆ ಬದಲಾವಣೆ ಮಾಡಬೇಕು. ನಾನು ಸಾಹಿತ್ಯವನ್ನು ಅಭ್ಯಾಸ ಮಾಡಿಲ್ಲ. ಓದಿಲ್ಲ. ಶಾಲಾ-ಕಾಲೇಜ ಪತ್ರಿಕೆಗಳಿಗೆ ಕೂಡ ಲೇಖ, ಕತೆ-ಕವನಗಳನ್ನು ಬರೆದಿಲ್ಲ. ಪ್ರೇಯಸಿಗೆ ಪತ್ರ ಬರೆಯುವದಕ್ಕೂ, ಸಾಹಿತ್ಯ ನಿರ್ಮಾ ಣಕ್ಕೂ ಆಕಾಶ-ಪಾತಾಳಗಳ ಅಂತರವಿದೆಯಲ್ಲವೇ? ಇಷ್ಟಾದರೂ ಪತಿಯನ್ನು

ಬರಹಗಾರನಾಗಿ ಮಾಡಬೇಕೆಂಬ ಹುಚ್ಚು ನಿನಗೆ. ಈ ದೃಢ ಸಂಕಲ್ಪದಿಂದಲೇ ಬರದದ್ದೆಲ್ಲ ಮೆಚ್ಚಿಗೆಯಾಗುತ್ತಿರಬಹುದೇ? ಎಂಬ ಸಂಶಯವೂ ಇಲ್ಲದಿಲ್ಲ. ಆದ್ದರಿಂದ ಈ ಹಸ್ತ ಪ್ರತಿಯು ಪ್ರಕಾಶನಕ್ಕಾಗಿ ಧಾರವಾಡದ ಮನೋಹರ ಗ್ರಂಥ ಮಾಲೆಯ ಜಿ. ಬಿ. ಜೋಶಿಯುವರೊಡನೆ ಸಂಪರ್ಕ ಬೆಳೆಸುವದು ಬೇಡ. ಅವರ ಅಟ್ಟದ ಮುಂದಿನಿಂದ ಅನೇಕ ಬಾರಿ ಹಾದು ಹೋಗಿದ್ದರೂ ಮೆಟ್ಟಿಲುಗಳನ್ನು ಹತ್ತಿ ಮೇಲೆ ಹೋಗುವ ಎದೆಗಾರಿಕೆ ತೋರಿಸಿಲ್ಲ. ಕನ್ನಡದಲ್ಲಿ ಉತ್ತಮ ಸಾಹಿತ್ಯವನ್ನು ಪ್ರಕಾಶಿಸಿದ ಖ್ಯಾತಿ ಅವರದಲ್ಲವೇ? ಹಸ್ತಪ್ರತಿ ಬಾಲಿಶವಾಗಿದೆ, ಎದುರಿಗಿನ ಕೆರೆಯಲ್ಲಿ ಜಲಸಮಾಧಿ ಮಾಡಿ! ಎಂದು ಉಪದೇಶ ಮಾಡಿದರೆ ಏನು ಮಾಡುವದು ಎಂಬ ದುಗುಡು.

ಈ ವಾರಾಂತ್ಯದಲ್ಲಿ ಜಯಪುರಕ್ಕೆ ಬರುವಾಗ ನಿನ್ನ ಸೂಚನೆಯಂತೆ, ಕಾಲೇಜಿನವರು ಕೊಡಮಾಡಿದ ಗೋದಿ, ತಗಣಿ ಔಷಧ, ಪುಡಿ ಸಕ್ಕರೆ, ಕಡಲೆ ಹಿಟ್ಟು, ಬೋರ್ನವಿಟಾದ ಡಬ್ಬಿಗಳನ್ನು ತರುತ್ತೇನೆ. ಸಹೋದ್ಯೋಗಿಗಳೆಲ್ಲ ಜಯಪುರದಿಂದ ಸಾಮಾನುಗಳನ್ನು ಹೊತ್ತು ತರುತ್ತಿರುತ್ತಾರೆ. ಭಟನಾಗರನಂತೂ ಜಯಪುರದಿಂದ ಪಾನ ಬೀಡಾ ಕೂಡ ತರಿಸಿ ಹಗಲೆಲ್ಲ ಮೆಲುಕಾಡಿಸುತ್ತಿರುತ್ತಾನೆ. ನಮ್ಮ ಸಂಸಾರ ಉಳಿದವರಿಗಿಂತ ಭಿನ್ನ ಅಲ್ಲವೇ?

○

೮. ಪರಿವರ್ತನೆ

ಜೊಬನೇರ, ೧೦-೯-೧೯೬೬

ಪ್ರೇಮ-ಪತ್ರಗಳನ್ನು ನಿರೀಕ್ಷಿಸಿ, ಇದ್ದ ಬಿಡುವನ್ನೆಲ್ಲ ಬಳಸಿ ವಧುವಿಗೆ ಉದ್ದುದ್ದ ಪತ್ರಗಳನ್ನು ಬರೆದಿದ್ದೆ. ಆದರೆ ಅವಳು ಇವುಗಳ ಅವಶ್ಯಕತೆ ತನಗಿಲ್ಲ. ಎಂಬಂತೆ ಉತ್ತರ ಬರೆಯುವ ಗೋಜಿಗೇ ಹೋಗಿರಲಿಲ್ಲ. ಎಂದಾದರೂ ಎರಡು ಸಾಲಿನ ಮೊಟಕು ಪತ್ರ ಬಂದರೆ ಅದೇ ಮಹಾ ಸುದಿನ. ಆದರೆ ಇಂದಿನ ದಿನಗಳಲ್ಲಿ ಮನದನ್ನೆ ಕೊಂಚ ರಸಿಕಳಾಗುತ್ತಿದ್ದಾಳೆ. ಕವಯತ್ರಿಯಾಗುತ್ತಿದ್ದಾಳೆ. ಪ್ರತಿ ವಾರಾಂತ್ಯದಲ್ಲಿ ಜಯಪುರಕ್ಕೆ ಬರುತ್ತಿದ್ದರೂ ಈ ಭೇಟಿಗಳ ನಡುವೆ ನೀನಾಗಿ ಪತ್ರ ಬರೆಯಲು ಆರಂಭಿಸಿರುವಿ ಎಂದರೆ ಅಪಾರ ಪರಿವರ್ತನೆ ಆಗಿರಲೇ ಬೇಕು. ಇಂದಿನ ಪತ್ರವಂತೂ ಒಂದು ಕವಿತೆಯಂತೆ ಇತ್ತು. ಎಷ್ಟೋ ಸಲ ಓದಿ, ಎಷ್ಟೋ ವಿಧದಲ್ಲಿ ಅರ್ಥೈಸಲು ಯತ್ನಿಸಿದೆ. ನಲ್ಲನ ಬಗ್ಗೆ ಪ್ರೀತಿ-ಕಳಕಳಿ ಉಕ್ಕಿ ಬಂದಾಗ ಮಾತ್ರ ಇಂಥ ಬರವಣಿಗೆ ಸಾಧ್ಯ. ನಮ್ಮ ಅನ್ಯೋನ್ಯತೆ ಬೆಳೆಯುತ್ತಲೇ ಇರಬೇಕೆಂದು ಆಸೆ. ಇದರ ದ್ಯೋತಕವಾಗಿ ನಮ್ಮ ಮಗು ಧರೆಗೆ ಇಳಿದು ಬರಲಿದೆ.

ವಿವಾಹದ ನಂತರ ನಿನ್ನಲ್ಲಾದ ಪರಿವರ್ತನೆಯನ್ನು ಕಣ್ಣಲ್ಲಿ ಕಣ್ಣಿಟ್ಟು ಪರೀಕ್ಷಿಸುತ್ತಿದ್ದೇನೆ. ಅಭಿಮಾನವನ್ನೂ ಪಡುತ್ತಿದ್ದೇನೆ. ಹಣ ಇರುವದು ಖರ್ಚು ಮಾಡುವದಕ್ಕಾಗಿ. ಕೈಗೊಂದು ಕಾಲಿಗೊಂದು ಆಳುಗಳನ್ನು ಇಟ್ಟುಕೊಂಡರೆ, ಓದು-ಬರೆಹಗಳನ್ನು ಸಾಧಿಸಬಹುದೆಂಬ ನಂಬಿಕೆಯಲ್ಲಿ ಅಚಲವಾದ ವಿಶ್ವಾಸವಿಟ್ಟ ಕುಟುಂಬದಲ್ಲಿ ಹುಟ್ಟಿ ಬೆಳೆದು, ಈ ಪ್ರೌಢ ಪ್ರಾಯದಲ್ಲಿ ಅದಕ್ಕೆ ವಿರುದ್ಧವಾದ ಜೀವನ ನಡೆಸುವದು, ಸುಲಭಸಾಧ್ಯವೇನಲ್ಲ. ನನ್ನವಳು ಈ ಚಮತ್ಕಾರ ಸಾಧಿಸಿಯಾಳು, ಎಂದು ಯಾರಾದರೂ ಹೇಳಿದ್ದರೆ ನಂಬುತ್ತಲೇ ಇರಲಿಲ್ಲ. ಆದರೆ ಕಣ್ಣಿಗೆ ಕಾಣುವದನ್ನು ನಂಬದಿರುವದು ಹೇಗೆ? ಕೇಂದ್ರ ಸರಕಾರದ ಆಕಾಶವಾಣಿ

ಯಂಥ ಸಂಸ್ಥೆಯಲ್ಲಿ ಅಧಿಕಾರಿಣಿಯಾಗಿದ್ದು, ಅಡಿಗೆಯವಳು, ಹೊರಗಿನ ಕೆಲಸದವಳು ಇಲ್ಲದೇ ಎಲ್ಲ ಕೆಲಸಗಳನ್ನು ತಾನೇ ತೂಗಿಸಿಕೊಂಡು ಹೋಗುತ್ತಾಳೆ, ಎಂದರೆ ಯಾರು ನಂಬಿಯಾರು? ಪತಿ, ಬರೆದದ್ದನ್ನೆಲ್ಲ ಅಂದವಾಗಿ ಅಂದವಾಗಿ ಪ್ರತಿ ಮಾಡಿಕೊಡುತ್ತಾಳೆ. ಇಷ್ಟಾಗಿ ಒಂದು ವರ್ಷದಲ್ಲಿ ಆಕಾಶವಾಣಿ ವಾಚನಾಲಯದಲ್ಲಿದ್ದ ಗ್ರಂಥಗಳನ್ನು ಈ ಮೇಡಂ ಓದಿದಷ್ಟು ಬೇರಾರೂ ಪ್ರಯೋಜನ ಮಾಡಿಕೊಂಡಿಲ್ಲವೆಂದು ಅಲ್ಲಿಯ ಗ್ರಂಥ ಭಂಡಾರಿಗ, ಯಾವ ಮುಚ್ಚುಮರೆಗಳಿಲ್ಲದೇ ಸಾರಿದನಂತೆ. ಇದರಿಂದ ತಮಗೆ ಆಫೀಸಿನ ಕೆಲಸ ಬಿಟ್ಟು ಬೇರಾವ ಕೆಲಸ ಮಾಡಲು, ಇತರ ಹವ್ಯಾಸಗಳನ್ನು ಬೆಳೆಸಿಕೊಳ್ಳಲು ವೇಳೆಯೇ ಸಿಗುತ್ತಿಲ್ಲ ಎಂದು ಪ್ರತಿಪಾದನೆ ಮಾಡುವವರು, ಢೋಂಗಿಗಳೆಂದು ಅರ್ಥವಾಗುವದಿಲ್ಲವೇ?

ಅತಿಥಿ ದೇವೋಭವ ಎನ್ನುವ ಕಾಲ ಒಂದಿತ್ತಂತೆ. ಆದರೆ ಇಂದಿನ ಅತಿಥಿಗಳು ತಲೆ ಚಿಟ್ಟು ಹಿಡಿಸುವದರಿಂದ ಅವರು ಬಾರದಿದ್ದರೇ ಚೆನ್ನಾಗಿತ್ತು ಎಂದು ಅನಿಸದಿರದು. ಅವರೆಲ್ಲ ಧಾವಿಸಿ ಬರುವದು ನಮ್ಮ ಮೇಲಿನ ಪ್ರೀತಿ, ಆದರ, ಅಭಿಮಾನಗಳಿಂದ ಎಂದು ತಪ್ಪಿ ಕೂಡಾ ಭಾವಿಸಬಾರದು. ರಾಜಸ್ಥಾನದ ರಾಜಧಾನಿಯಲ್ಲಿ ಬಿಡಿ ಕಾಸೂ ಖರ್ಚು ಮಾಡದೇ ವಸತಿ, ಊಟ, ತಿಂಡಿಗಳ ವ್ಯವಸ್ಥೆಯಾಗುವಾಗ ರಜಾ ದಿನಗಳ ಸುಖವನ್ನೇಕೆ ಅನುಭವಿಸಬಾರದು? ಎಂಬುದು ಬರುವವರ ವಿಚಾರ ಸರಣಿ. ಅವರನ್ನು ಬರಮಾಡಿಕೊಳ್ಳಲು ಮೂವತ್ತೈದು ಮೈಲು ದೂರದ ಜೊಬನೇರದಿಂದ ಜಯಪುರಕ್ಕೆ ಧಾವಿಸಬೇಕು. ಅವರ ಆದರಾತಿಥ್ಯಕ್ಕೆ ನಾವು ರಜೆ ಹಾಕಬೇಕು. ಚಂದ್ರಮಹಲ್, ಹವಾಮಹಲ್, ಜಂತರ್-ಮಂತರ್, ಆಮೇರ್‌ಗಳನ್ನು ತೋರಿಸಲು ಕರೆದೊಯ್ಯಬೇಕು. ಬಂದ ಅತಿಥಿಗಳಿಗೆ ನಾವು ಹೇಗೆ ಜೀವನ ನಡೆಸುತ್ತಿದ್ದೇವೆ, ಅದಕ್ಕೆ ಹೊಂದಿಕೊಂಡು ಹೋಗಬೇಕೆಂಬ ತಾರತಮ್ಯಗಳು ಕೂಡ ಇರುವದಿಲ್ಲ. ಅವರೇನೋ ದೊಡ್ಡ ಬಂಗಲೆಯನ್ನು ತಮ್ಮದಾಗಿ ಮಾಡಿಕೊಂಡು ಅದರಲ್ಲಿ ಎಲ್ಲ ತರದ ಸವಲತ್ತುಗಳನ್ನು ಕಲ್ಪಿಸಿಕೊಂಡಿರಬಹುದು. ಆದರೆ ಇಷ್ಟು ಮಾತ್ರಕ್ಕೆ ನಿಮ್ಮ ಮನೆಯಲ್ಲಿ ಸೋಫಾಗಳಿಲ್ಲವೇ? ರೆಫ್ರಿಜಿರೇಟರ್ ಕೊಂಡಿಲ್ಲವೇ? ಗ್ಯಾಸ್ ಸಿಕ್ಕಿಲ್ಲವೇ? ಎಂದು ಚುಚ್ಚು ಮಾತನಾಡುವ ಅಧಿಕಾರ ಎಲ್ಲಿಂದ ಬರುತ್ತದೆ? ಸೋಫಾ ಇಲ್ಲದಿದ್ದರೆ ಮೂಡಾ (ಬೆತ್ತದ ಖುರ್ಚಿ)ಗಳಿವೆಯಲ್ಲ? ಬತ್ತಿಯ ಸ್ಟೋವಿನ ಮೇಲೆಯೇ ಸೊಗಸಾದ ಅಡಿಗೆ ಮಾಡಿ ಬಡಿಸುತ್ತಾರೆಂಬ ಪ್ರಶಂಸೆ ದೂರವೇ ಉಳಿಯಿತು. ಬಾಯಿ ತೆರೆದರೆ

ಕೊಂಕು ಮಾತುಗಳು.

ಈ ವಾರದ ಜಯಪುರ ಭೇಟಿಯನಂತರ, ಬರುವ ಅತಿಥಿಗಳ ಬಗ್ಗೆ ಇನ್ನಷ್ಟು ಜಿಗುಪ್ಸೆ ಹುಟ್ಟಿಕೊಂಡಿದೆ. ಪ್ರವಾಸದಲ್ಲಿ ಧರಿಸಿದ್ದು, ನಿದ್ರಿಸುವಾಗ ಹಾಕಿಕೊಂಡಿದ್ದು, ಅಂಡರವೇರ್, ಬನಿಯನ್ ಮತ್ತೊಂದು, ಮಗುದೊಂದು ಎಂದು ರಾಶಿ ಬಟ್ಟೆಗಳನ್ನು ತೊಳೆಯಲು ಹಾಕಿ, ತಾವು ಒನಪು-ಒಯ್ಯಾರದ ಹೊಸ ಬಟ್ಟೆಗಳನ್ನು ಧರಿಸಿ ನಗರ ಸುತ್ತಾಡಲು ಹೊರಟರು. ಹಿಂದಿರುಗಿ ಬರುವಷ್ಟರಲ್ಲಿ ಶುಭ್ರವಾಗಿ ತೊಳೆದು ಗರಿಗರಿಯಾಗಿ ಒಣಗಿಸಿ, ಮಡಿಕೆ ಮಾಡಿ ಇಟ್ಟ ಬಟ್ಟೆಯ ರಾಶಿಯನ್ನು ಮೆಚ್ಚುತ್ತ 'ಪರವಾಯಿಲ್ಲ ನಿಮ್ಮ ಕೆಲಸದವಳು ಮಡಿವಾಳನಂತೆ ಬಟ್ಟೆಗಳನ್ನು ಸ್ವಚ್ಛವಾಗಿ ತೊಳೆಯುತ್ತಾಳೆ.' ಎಂದಾಗ ನನಗೆ ಕರುಳು ಕಿವಿಚಿದಂತೆ ಆದರೂ, ನೀನು ಮಾತ್ರ ಪ್ರಫುಲ್ಲವದನೆಯಾಗಿ ಅವರ ಬೆಪ್ಪುತನಕ್ಕೆ ಮುಗುಳುನಗೆ ಸೂಸುತ್ತ ನಿಂತಿದ್ದಿ. ಆಕಾಶವಾಣಿಯ ಅಧಿಕಾರಿಣಿಯೇ ಇದನ್ನೆಲ್ಲ ಅವರಿಗಾಗಿ ಮಾಡಿಟ್ಟಿದ್ದಳು, ಎಂಬ ಮಾತು ಎಂದಾದರೊಮ್ಮೆ ಅವರ ತಲೆಯಲ್ಲಿ ಮಿಂಚಬಹುದು, ಎಂದು ಅನಿಸುವದೇ ಇಲ್ಲ. ಸೊಗಸಾದ ಊಟ ಉಂಡು, ಸೇಬಿನ ಹೋಳು ತಿನ್ನುತ್ತ ಅವರೆಲ್ಲ ವಿಶ್ರಾಂತಿ ಪಡೆಯುತ್ತಿದ್ದಾಗ, ನೀನು ಮುಸುರೆ ಭಾಂಡಿ ತಿಕ್ಕುತ್ತಿದ್ದಿ. 'ಪತ್ನಿ ಎಲ್ಲಿ?' ಎಂದು ಯಾರೂ ಕೇಳುವ ತೊಂದರೆ ತೆಗೆದುಕೊಳ್ಳದೇ ಇದ್ದಾಗ ರೇಗಿತ್ತು. ಇಷ್ಟಾದರೂ ಅವರು ಮಲಗಿ ಏಳುವಾಗ ಚಹಾ-ತಿಂಡಿ ಸಿದ್ಧವಾಗಿದ್ದವು. ೨-೩ ದಿನ ಆತಿಥ್ಯವನ್ನು ಯಥೇಷ್ಟವಾಗಿ ಸೇವಿಸಿ, ಪ್ರಯಾಣಕ್ಕಾಗಿ ಊಟ-ತಿಂಡಿಗಳನ್ನು ಕಟ್ಟಿಸಿಕೊಂಡು ಹೊರಡುವಾಗ ಹೇಳಿದ ಮಾತು, 'ಮುಂಬಯಿಗೆ ಬಂದಾಗ ಫೋನ ಮಾಡಿ, ರವಿವಾರ ಚಹಕ್ಕೆ ನಮ್ಮಲ್ಲಿ ಬನ್ನಿ!' ಮೈ ಉರಿಯುವಂತೆ ಮಾಡಿತ್ತು. ಇಷ್ಟಾದರೂ ಮುಂದಿನ ವರ್ಷ ಜುಲೈ ತಿಂಗಳಲ್ಲಿ ಇಲ್ಲಿಗೆ ಬನ್ನಿ. ಹವಾಮಾನ ಆಲ್ಹಾದಕರವಾಗಿರುತ್ತದೆ. ನಾಲ್ಕು ದಿನ ಹೆಚ್ಚೇ ರಜೆ ಪಡೆದರೆ ವಿಶ್ರಾಂತಿ ತೆಗೆದುಕೊಳ್ಳಲು ಅನುಕೂಲವಾಗುತ್ತದೆ', ಎಂದಾಗ ನೀನು ಅತಿಮಾನವಳಿರಬಹುದೇ? ಅನಿಸಿತ್ತು. ಇಷ್ಟಾಗಿ ಅವರು ಯಾರು? ಎಂದು ಇದಕ್ಕೂ ಪೂರ್ವದಲ್ಲಿ ತಿಳಿದಿರಲೇ ಇಲ್ಲ. ನಿನಗೂ ದೂರದ ಸಂಬಂಧಿಕರಂತೆ.

ಗಳಿಸುತ್ತಿರುವ, ಅಧಿಕಾರದಲ್ಲಿರುವ ಬಹುಸಂಖ್ಯಾತ ಮಹಿಳೆಯರು, ಒನಪು-ವೈಯ್ಯಾರ, ಆಭರಣ, ಸುಖ ಕೊಡುವ ಸಾಧನಗಳನ್ನು ತಮ್ಮವನ್ನಾಗಿ ಮಾಡಿ

ಕೊಳ್ಳುವ ಹವ್ಯಾಸ ಬೆಳೆಸಿಕೊಂಡಿರುತ್ತಾರೆ. ಮನೆಯನ್ನು ಆಧುನಿಕ ಸಲಕರಣೆಗಳಿಂದ ಸುಸಜ್ಜಿತಗೊಳಿಸಿದ ನಂತರ ಒಡವೆಗಳನ್ನು ಮಾಡಿಸುತ್ತಾರೆ. ಇಷ್ಟಾದ ನಂತರ ಓಡಾಡಲು ಕಾರು ಇಲ್ಲದಿದ್ದರೆ ಹೇಗೆ? ಅದೂ ವಿದೇಶದ್ದು ಇದ್ದರೆ ನೆಟ್ಟಗೆ. ಬಹುಶ: ನೀನೊಬ್ಬಳೇ ಇದಕ್ಕೆ ಅಪವಾದವಿದ್ದಿರಬೇಕು. ಗೃಹಕೃತ್ಯದ ಯಾವ ಕೆಲಸವನ್ನೂ ಮಾಡಲು ಹಿಂದೆ ಮುಂದೆ ನೋಡದವಳು ನನ್ನ ಪಾಲಿನ ಗೃಹ ದೇವತೆಯೇ!

○

೯. ಚಕ್ಕಡಿಯ ಸವಾರಿ

ಜೊಬನೇರ, ೫-೧-೧೯೬೭

ನಮ್ಮಪ್ಪ, ಸಾಮಾನ್ಯವಾಗಿ ಎಲ್ಲೂ ಹೋಗುತ್ತಿರಲಿಲ್ಲ. ಮಕ್ಕಳನ್ನು ಎಲ್ಲಿಗಾದರೂ ಕಳಿಸಲು ಸುಲಭವಾಗಿ ಒಪ್ಪುತ್ತಿರಲಿಲ್ಲ. ಆದರೂ ನನ್ನನ್ನು ತಿರುಗಾಟದ ತವಕ ಬಾಲ್ಯದಿಂದಲೂ ಅಂಟಿಕೊಂಡು ಬಿಟ್ಟಿದೆ. ಮೊದಲ ಬಾರಿಗೆ ಎತ್ತಿನ ಗಾಡಿಯಲ್ಲಿ ಪ್ರಯಾಣ ಮಾಡಿದಾಗ, ಮುಂದಿರುವ ದೊಡ್ಡ ಬೂದಿ ರಾಶಿಯಿಂದ ಹೇಗೆ ನುಸುಳಿಕೊಂಡು ಹೋಗಬಹುದು ಎಂದು ವಿಸ್ಮಯಪಟ್ಟಿದ್ದೆ. ಪರಿಚಿತ ಹುಡುಗರೊಂದಿಗೆ ಕಾಡು-ಮೇಡುಗಳಲ್ಲಿ ಬರಿಗಾಲಿನಿಂದ ತಿರುಗಾಡಲು ಪ್ರಾರಂಭಿಸಿದಾಗ, ಅವು ದೂರದ ಪರ್ವತಾವಳಿಗಳು ಎಂದು ತಿಳಿವು ಉಂಟಾಗಿತ್ತು. ತಿರುಗಾಟದಲ್ಲಿ ಸಂಗಡಿಗರು ಕೆಚ್ಚೆದೆಯನ್ನು ಮೆಚ್ಚಿಕೊಂಡರೂ, ಕಲ್ಲು-ಮುಳ್ಳುಗಳು ನಿರ್ದಾಕ್ಷಿಣ್ಯವಾಗಿ ತಮ್ಮ ಇರುವಿನ ಪರಿಚಯ ಮಾಡಿಕೊಡದೇ ಇರುತ್ತಿರಲಿಲ್ಲ. ಒಂದೆರಡು ದಿನ, ಸುಣ್ಣ-ಬೆಲ್ಲ ಇಲ್ಲವೆ ಅರಿಸಿನ-ಎಣ್ಣೆಗಳ ಪೋಲ್ಟೀಸು ಕಟ್ಟಿಕೊಂಡು, ಗಾಯಗಳು ಒಣಗಿದವೆಂದರೆ ತಿರುಗಿ ಕಾಡಿನ ಕರೆಗೆ ಓಗೊಡುತ್ತಿದ್ದೆವು. ಕಾಸಿಲ್ಲದೇ ತಿಂದು ತೇಗಬಹುದಾಗಿದ್ದ ಗೇರು, ನೇರಳ, ಚಾಂಪೇಡ, ಮುಳ್ಳು ಹಣ್ಣುಗಳು ಪ್ರಬಲವಾದ ಆಕರ್ಷಣೆಯಾಗಿದ್ದವು.

ಎ. ಎನ್. ಮೂರ್ತಿರಾಯರ 'ಗಾಡಿಯ ಪ್ರಯಾಣ' ಓದಿ ಮೆಚ್ಚುವ ಹಲವು ವರ್ಷ ಮೊದಲೇ ನಾನು ಅಪೂರ್ವವಾದ ಗಾಡಿ ಪ್ರಯಾಣದ ಸಾಹಸವನ್ನು ಮಾಡಿದ್ದೆ ಎಂದರೆ ನೀನು ನಂಬುವಿಯೋ ಇಲ್ಲವೋ! ನನ್ನ ಹಿರಿಯ ಅಕ್ಕ ನಿನ್ನ ತವರೂರಾದ ಕುಮಟಾದಲ್ಲಿ ಇದ್ದರು. ಅಲ್ಲಿ ಹೋದಾಗ, ಹನ್ನೆರಡು ಮೈಲು ದೂರದ ಹೊನ್ನಾವರಕ್ಕೆ ಚಕ್ಕಡಿಯಲ್ಲಿ ಸವಾರಿ ಮಾಡುವ ಅಭಿಲಾಷೆಯನ್ನು ಭಾವಯ್ಯನವರಿಗೆ ತಿಳಿಸಿದಾಗ, ಕೂಡಲೇ ಒಪ್ಪಿಕೊಂಡು ಬಿಟ್ಟರು. ಗಾಡಿಯ ಹನುಮಂತನಿಗೆ ಕರೆ ಹೋಯಿತು. ಮೋಟಾರ ಗಾಡಿಯ ಮಾನ, ತನ್ನ ಚಕ್ಕಡಿಗೆ ದೊರೆಯಲಿದೆ ಎಂದು ಅವನ ಉತ್ಸಾಹಕ್ಕೆ ಕೊನೆ ಮೊದಲಿಲ್ಲ. ಗೊಬ್ಬರ ಸಾಗಿ

ಸುತ್ತಿದ್ದ ಬಂಡಿಗೆ ಚೆನ್ನಾಗಿ ಅಭ್ಯಂಜನ ಮಾಡಿ ಚೊಕ್ಕಟಗೊಳಿಸಿದ. ಜೋಡಿ ಎತ್ತುಗಳನ್ನು ಕೆರೆಗೆ ಕರೆದೊಯ್ದು ಮೊಯಿಸಿ ಅವುಗಳ ನಿಜವಾದ ಸ್ವರೂಪ ಗೋಚರಿಸುವಂತೆ ಮಾಡಿದ ಕೋಡುಗಳಿಗೆ ಕೆಂಬಣ್ಣ ಸವರಿ, ಗಂಟೆಗಳ ಮಾಲೆ ಯನ್ನು ಕೊರಳಿಗೆ ಸೇರಿಸಿದ. ಗಾಲಿಗಳ ಕೀಲುಗಳಿಗೆ ಎಣ್ಣೆ ಸುರಿದ. ಬಿದಿರಿನ ಚಾಪೆಗಳನ್ನು ಅರೆವರ್ತುಲವಾಗಿ ಚಕ್ಕಡಿಗೆ ಜೋಡಿಸಿ ಕಟ್ಟಿದ. ಸವಾರಿಗಳಿಗೆ ಕೂಡ್ರಲು, ಮಲಗಲು ಹುಲ್ಲು ಹಾಸಿದ. ಪೋಲಿಸರ ಕಣ್ಣಲ್ಲಿ ಮಣ್ಣೆರಚಲು, ಕಂಡೂ ಕಾಣದಂತಹ ಕಿರಿಯ ಕಂದೀಲು ಹೊತ್ತಿಸಿದ. ಭರ್ಜರಿ ಊಟ ಮುಗಿಸಿ ಬಂಡಿ ಏರಿದಾಗ, ಮದುವೆಗೆ ಹೊರಟ ಮದುಮಗನ ಗೆಲುವು ನನ್ನದಾಗಿತ್ತು. ಬಸ್ಸಿನ ಕಾಸು ಉಳಿಸಲು ಇನ್ನಿಬ್ಬರು ಪರಿಚಯದವರು ಗಾಡಿಯಲ್ಲಿ ನುಸುಳಿ ಕೊಂಡರು.

ಗಿಣಿ ಗಿಣಿ ಗಂಟೆಯ ನಾದಕ್ಕೆ ಬಂಡಿ ಚಲಿಸಲಾರಂಭಿಸಿತು. ಬಾನಿನಲ್ಲಿ ಹುಣ್ಣಿಮೆಯ ಚಂದ್ರ. ಬೆಳದಿಂಗಳಿನಲ್ಲಿ ಗಿಡ–ಮರಗಳ ಅಂದ ಚೆಂದವೇ ಬೇರೆ. ಆಗಿನ್ನೂ ಯುವತಿಯರ ಸೊಬಗಿಗೆ ಮನ ಸೋಲುವ ವಯಸ್ಸಲ್ಲ. ಹೀಗಾಗಿ ಉಪಮೆಗಳು ಹೊಳೆಯುತ್ತಿರಲಿಲ್ಲ ಯಾವುದೋ ಅರಿಯದ ಲೋಕದಲ್ಲಿ ವಿಹರಿಸು ವಂತಹ ಅಪೂರ್ವ ಅನುಭವ. ಸುಂಕದ ಕಟ್ಟೆ ದಾಟಿದ ಒಡನೆ ಹನುಮಂತನು ದೀಪವಾರಿಸಿ ಹಾಡಲು ಪ್ರಾರಂಭಿಸಿದ. ಸ್ಥಳೀಯ ಪಾಳೆಗಾರನ ಮೇಲೆ ಕೆಳದಿಯ ಸೈನ್ಯ ಹಲ್ಲೆ ನಡೆಸಿದಾಗ ಅವನು ತೋರಿಸಿದ ಜಾಣ್ಮೆಯ ವಿವರಗಳು ಆ ಹಾಡಿನಲ್ಲಿ ಇದ್ದವು. ಬೆನ್ನಟ್ಟಿ ಬರುವ ಸೈನ್ಯದಿಂದ ರಕ್ಷಿಸಿಕೊಳ್ಳಲು ವೀರನು, ಬೆಲ್ಲವನ್ನು ಮೈಗೆ ಸವರಿಕೊಂಡು ಪೊದೆಯೊಂದರಲ್ಲಿ ಅವಿತುಕೊಂಡ. ಬೆಲ್ಲಕ್ಕೆ ಆಕರ್ಷಿತವಾದ ಜೇನು ಗಳಿಂದಾಗಿ ವೈರಿಗಳು ಕಾಡು ಜೇನಿನ ಗೂಡು ಎಂದು ಭ್ರಮಿಸಿ ಮುಂದುವರಿದುದ ರಿಂದ ಪಾಳೇಗಾರನು ಬದುಕಿಕೊಂಡನಂತೆ. ಹಾಡುವದನ್ನು ಮುಂದುವರಿಸಲು ಸೂಚಿಸಿದಾಗ ಸಾರಥಿ ಒಂದರ ಹಿಂದೊಂದು ಕೊಂಕಣಿ ಜಾನಪದ ಗೀತಗಳನ್ನು ಹಾಡುತ್ತಲೇ ಇದ್ದ. ಕೊನೆಗೊಮ್ಮೆ ಅವನನ್ನು ತಡೆಯಲು, 'ಈ ಚಂದ್ರನು ನಿಮ್ಮ ಊರಿನವನೋ ನಮ್ಮ ಊರಿನವನೋ ಎಂದು ಪ್ರಶ್ನಿಸಿದೆ. ಗಾಬರಿಗೆಟ್ಟು, ಆಮೇಲೆ ಅರ್ಥವಾದವನಂತೆ ನಕ್ಕು, 'ನಿಮ್ಮ ಊರಿನವನು ಇಲ್ಲಿಗೆ ಬರಲು ಹೇಗೆ ಸಾಧ್ಯ? ಎಂದು ಮರು ಪ್ರಶ್ನೆ ಕೇಳಿದ!

ಅಳುವೆ ಕೋಡಿ ದಾಟುತ್ತಿದ್ದಂತೆ, 'ಈಗ ಧಾರೇಶ್ವರ ಘಟ್ಟ ಬರುತ್ತಿದೆ.

ಮುಕ ಮೇಲೇರಿದಂತೆ ಮುಂದೆ ಮುಂದೆ ಸರಿದುಕೊಳ್ಳಿ' ಹನುಮಂತನೆಂದ. ಇದ ರಿಂದ ಸೃಷ್ಟಿ-ಸೌಂದರ್ಯ ಸವಿಯಲು ಆತಂಕವಾಗುತ್ತಿದ್ದರೂ ಅವನ ಆಜ್ಞೆಯನ್ನು ಮೀರುವ ಸಾಹಸವಾಗಲಿಲ್ಲ. ಈ ಹೊಸ ಏರ್ಪಾಡು ಚಂದ್ರನಿಗೂ ಮನಸ್ಸಿಗೆ ಬರಲಿಲ್ಲವೆಂದು ತೋರುತ್ತದೆ. ಮೋಡಗಳಲ್ಲಿ ಅವಿತುಕೊಂಡು ಬಿಟ್ಟ. ನೋಡ ನೋಡುತ್ತಿದ್ದಂತೆ ಗಗನ ಮಂಡಲವೆಲ್ಲ ಕಾರ್ಮೋಡಗಳಿಂದ ಕವಿಯಿತು. ಗುಡುಗು ತನ್ನ ಆರ್ಭಟವನ್ನು ತೋರಿಸಲಾರಂಭಿಸಿತು. ಏಕಪ್ರಕಾರವಾಗಿ ಮಿಂಚಲಾರಂಭಿ ಸಿತು. ದೊಡ್ಡ ಮಳೆ ಮುತ್ತುಗಳು ಚಾಪೆಯ ನೆತ್ತಿಯ ಮೇಲೆ ಸಿಡಿಯಲಾರಂಭಿಸಿ ದವು. ಇವುಗಳಿಗೆ ಕಲಶಪ್ರಾಯವಾಗಿ ಅಬ್ಬರದ ಗಾಳಿ ಬೀಸಲಾರಂಭಿಸಿತು. ಪ್ರಕೃತಿಯ ಕೋಪವನ್ನು ಎದುರು ಹಾಕಿಕೊಳ್ಳುವದು ಸರಿಯಲ್ಲವೆಂದು ಬಂಡಿ ಯನ್ನು ರಸ್ತೆಯ ಅಂಚಿನಲ್ಲಿ ನಿಲ್ಲಿಸಿ, ಎತ್ತಿನೊಂದಿಗೆ ದೇವಾಲಯವೊಂದರ ಆಶ್ರಯ ಪಡೆದೆವು. ಚಕ್ಕಡಿಯ ಸವಾರಿಗಳು ಶರಣಾಗತರಾದದ್ದರಿಂದ ವರುಣ ದೇವನ ಸಿಟ್ಟು ಶಾಂತವಾಗಿ, ಪ್ರಸನ್ನತೆಯಿಂದ ಮರಳಿದ.

ಗಾಡಿಯೊಳಗಿನ ಹುಲ್ಲು ತಪತಪ ತೊಯ್ದು ಹೋಗಿತ್ತು. ಹೊದಿಸಿದ ಜಾಪೆಯಿಂದ ಟಪಕ್, ಟಪಕ್ ಎಂದು ನೀರಹನಿಗಳು ಏಕಪ್ರಕಾರವಾಗಿ ತೊಟ್ಟಿಕ್ಕುತ್ತಲೇ ಇದ್ದವು. ಜೋಡೆತ್ತುಗಳು ಬೆಚ್ಚಗೆ ನಿಂತಲ್ಲಿಯೇ ನಿಲ್ಲಬಯಸಿದ್ದ ರಿಂದ ಬಾರಕೋಲಿನ ಏಟುಗಳನ್ನು ಪಡೆಯಬೇಕಾಯಿತು. ಕಗ್ಗತ್ತಲಿನಲ್ಲಿ ಹರಿ ಯುವ ನೀರಿನ ಸದ್ದು, ಭೀತಿ ಹುಟ್ಟಿಸುವಂತಹದು. ಕಂದೀಲಿನಲ್ಲಿ ನೀರು ಸೇರಿ ಕೊಂಡದ್ದರಿಂದ ಅದರ ಬೆಳಕು ಪಡೆಯುವಂತೆ ಇರಲಿಲ್ಲ. ಹನುಮಂತನು ಜೇಬಿ ನಿಂದ ಹೊರಗೆಳದ ಬೀಡಿಯ ಕಟ್ಟು ಒದ್ದೆಯಾಗಿತ್ತು. ಸಾಲದ್ದಕ್ಕೆ ಬೆಂಕಿ ಪೊಟ್ಟಣ ಹೊತ್ತಿಕೊಳ್ಳಲು ನಿರಾಕರಿಸಿತು. ತನ್ನ ಎಲ್ಲ ಸಿಟ್ಟನ್ನು ಮನಸ್ವಿ ಎತ್ತುಗಳನ್ನು ಬೈದು ತೀರಿಸಿಕೊಂಡ. ಸವಾರಿಗಳಿಗೆ ಮಲಗಲು ಸಾಧ್ಯವಾಗದೇ ತೂಕಡಿಸುತ್ತ ಕೂಡ್ರಬೇಕಾಯಿತು. ಮೂಕ ಪ್ರಾಣಿಗಳು ತತ್ತರ ವೆತ್ತರ ಕಾಲು ಹಾಕುತ್ತ ನಾಗಾ ಲೋಟದಿಂದ ಓಡಿದವು. ಮುಂದೆ ಹೊರಟ ಬಂಡಿಯನ್ನು ಹಿಂದೆ ಹಾಕಿದಾಗ ಚಾಲಕನು ತೃಪ್ತಿಯಿಂದ ನೊಗದ ಮೇಲೆಯೇ ನಿದ್ದೆ ಹೋದ.

ಮಳೆಗಾಲದ ಈ ಗಾಡಿ ಪ್ರಯಾಣದ ಸಾಹಸಕ್ಕೆ ಹೋಗಲೇ ಬಾರದಿತ್ತು, ಅನಿಸಿತು. ದೂರದ ಪರ್ವತಾವಳಿಗಳು, ಗಿಡ-ಮರಗಳು ಭೂತಾಕಾರವಾಗಿ ತೋರುತ್ತಿದ್ದವು. ಎತ್ತುಗಳು ಮಾತ್ರ ಮುಗ್ಧ ನಿಷ್ಠೆಯಿಂದ ಏಕಪ್ರಕಾರವಾಗಿ

ಮುಂದೆ ಸಾಗುತ್ತಲೇ ಇದ್ದವು. ಅವು ತುಳಿಯುತ್ತಿರುವದು ನಮ್ಮೂರ ರಸ್ತೆಯಲ್ಲ' ಎಂಬ ಸಂಶಯು ಸುಳಿಯಿತು. ಆದರೆ ಯಾರೂ ಅದರ ಬಗ್ಗೆ ತಲೆ ಕೆಡಿಸಿಕೊಂಡಂತೆ ತೋರಲಿಲ್ಲ. ಅನತಿ ದೂರದಲ್ಲಿ ಕೊಳ್ಳಿ ಕಂಡಂತಾದಾಗ ಎದೆ ಧಸ್ಸೆಂದಿತು. ಆದರೆ ಹತ್ತಿರ ಬರುತ್ತಿದ್ದಂತೆ ಕಂಬಳಿಕೊಪ್ಪೆ ಹೊತ್ತುಕೊಂಡ ಇಬ್ಬರು ಹಳ್ಳಿಗರು ತೆಂಗಿನ ಸೂಡುಗಳೊಂದಿಗೆ ಕಂಡರು. 'ಬರುವ ಊರು ಯಾವುದು? ಎಂದು ಧೈರ್ಯ ತಂದುಕೊಂಡು ವಿಚಾರಿಸಿದಾಗ, 'ಚಂದಾವರ' ಎಂಬ ಚುಟುಕು ಉತ್ತರ ನೀಡಿ ಮುಂದುವರಿದರು. ಹಳದೀಪುರದಿಂದ ಕವಲುದಾರಿಯೊಂದು ಮಾಂಡಲಿಕರಾಗಿದ್ದ ಕದಂಬರ ಹಿಂದಿನ ರಾಜಧಾನಿಯಾಗಿದ್ದ ಚಂದಾವರಕ್ಕೆ ಹೋಗುತ್ತಿತ್ತು ಅಲ್ಲಿ ರೋಮನ್ ಕ್ಯಾಥೊಲಿಕ ಚರ್ಚ ಇದ್ದು ಪ್ರತಿವರ್ಷವೂ 'ಫೆಸ್ತ' (ಜಾತ್ರೆ) ಸಂಭ್ರಮದಿಂದ ಏರ್ಪಡುವದು ಗೊತ್ತಿದ್ದ ವಿಷಯುವಾಗಿತ್ತು. ಆ ಊರು ನೋಡ ಬೇಕೆಂಬ ಹಂಬಲ ಬಹಳ ಕಾಲದಿಂದ ಇದ್ದರೂ ಹಾದಿ ತಪ್ಪಿದಾಗ ಅಲ್ಲಿ ಮುಟ್ಟು ವದು ಸರಿ ಎನಿಸಲಿಲ್ಲ, ಮುಂದೆ ಮುಂದೆ ಹೊರಟಿದ್ದ ಚಕ್ಕಡಿಯನ್ನು ಎತ್ತುಗಳು ಹಿಂಬಾಲಿಸಿದ್ದರಿಂದ ಅಡ್ಡದಾರಿ ಹಿಡಿದು ಚಂದಾವರಕ್ಕೆ ಹೊರಟಿದ್ದವು. ಹನು ಮಂತನನ್ನು ಎಬ್ಬಿಸಿ ನಿಜಸ್ಥಿತಿ ವಿವರಿಸಿದಾಗ ಅವನು ಹೌಹಾರಿ, 'ಕಡಿವಾಣ' ಎಳೆದು ಎತ್ತುಗಳನ್ನು ನಿಲ್ಲಿಸಿ, ತನ್ನ ತಪ್ಪಿಗೆ ಅವುಗಳನ್ನು ಥಳಿಸಿದ.

ಚಂದಾವರಕ್ಕೆ ಹೋಗಿ ಅಂಗಡಿ ಸಾಲುಗಳನ್ನು ದಾಟಿ ಹೊನ್ನಾವರ ತಲುಪ ಬಹುದಾಗಿತ್ತು. ಆದರೆ ಅದು ಬಲೇ ಸುತ್ತಾದ ದಾರಿಯಾದ್ದರಿಂದ ತಿರುಗಿ ಹಳದೀ ಪುರಕ್ಕೆ ಹೋಗಿ. ನೇರವಾಗಿ ಹೋಗುವದೇ ವಾಸಿ ಎಂದು ತೀರ್ಮಾನವಾಯಿತು. ಅಗ್ರಹಾರದಲ್ಲಿ ಯಾವನೋ ಪುಣ್ಯಾತ್ಮನು ಆ ಅವೇಳೆಯಲ್ಲಿ ಬೆಲ್ಲದ ಚಹ ಮಾಡಿ ಕೊಟ್ಟು ಪುಣ್ಯ ಕಟ್ಟಿಕೊಂಡ. ಎತ್ತುಗಳಿಗೂ ಒಂದಿಷ್ಟು ಮೇವು ಸಿಕ್ಕಿದ್ದರಿಂದ ಬಂಡಿ ರಭಸದಿಂದ ಓಡಲಾರಂಭಿಸಿತು. ಮುಂಜಾನೆಯ ಎಳೆಬಿಸಿಲಿನಲ್ಲಿ ಹೊರಟ ದಾರಿ ಹೋಕರೆಲ್ಲ ಬಂಡಿಯಲ್ಲಿ ಮುದುಡಿಯಾಗಿ ಕುಳಿತ ಸವಾರಿಗಳನ್ನು ಮರುಕ ದಿಂದ ನೋಡಿ ಮುಗುಳ್ನಕ್ಕು ಮುಂದೆ ಸಾಗುತ್ತಿದ್ದರು. ಇಷ್ಟು ವರ್ಷ ಕಳೆದರೂ ನನ್ನ ಮೊದಲ ಗಾಡಿಯ ಪ್ರಯಾಣ ನೆನೆಸಿಕೊಂಡಾಗ ನಗುಬಾರದೇ ಇರುವದಿಲ್ಲ.

○

೧೦. ಬಯಕೆಯೂಟ

ಜೊಬನೇರ ೨೩-೨-೧೯೬೭

ನವಗರ್ಭಿಣಿಯರು ತಮ್ಮವರಿಂದ ಅದೆಷ್ಟು ಸೇವೆ, ಉಪಚಾರ, ಪುರಸ್ಕಾರಗಳನ್ನು ಪಡೆದುಕೊಳ್ಳುತ್ತಾರೆಂದು ನೋಡಿ, ಕೇಳಿ ಅರಿತಿರುವೆ. ಬೆಳಗಿನ ಜಾವದಿಂದ ವಾಕರಿಕೆ, ಸುಸ್ತು ಎಂದು ವಿಶ್ರಾಂತಿ ಪಡೆದರೆ, ಇನ್ನಿತರ ದಿನಗಳಲ್ಲಿ ಸುಲಭವಾಗಿ ಸಿಗದ ತಿಂಡಿ-ತಿನಿಸುಗಳನ್ನು ಅಪರೂಪದ ಹಣ್ಣುಹಂಪಲುಗಳನ್ನು ತಿಂದು ತೇಗುತ್ತಿರುತ್ತಾರೆ. ಆಪ್ತೇಷ್ಟರು ತಮ್ಮ ಸೇವೆ ಮಾಡಿದಷ್ಟು ಕಡಿಮೆ ಎಂಬ ರೀವಿ ಬೇರೆ. ಇಡೀ ದಿನ ವಿರಾಮ ಮಾಡುತ್ತಿದ್ದರೂ ರಾತ್ರಿ ನಿದ್ರೆ ಬಾರದು, ಎಂಬ ದೂರು. ತನ್ನ ಈ ಅವಸ್ಥೆಗೆ ಪತಿಯೇ ಕಾರಣನೆಂಬ ಅಸಡ್ಡೆ. ಆರು ತಿಂಗಳು ಮುಗಿಯುವದರೊಳಗೆ ಅತ್ತೆ ಮನೆಯವರು ಹಬ್ಬದೂಟ ಆರತಕ್ಷತೆ ಏರ್ಪಡಿಸಬೇಕು. ಯಥಾನುಶಕ್ತಿ ಸೀರೆ ಆಭರಣಗಳ ಉಡುಗೊರೆ ಬರಬೇಕು. ನವರಾತ್ರಿಯ ದುರ್ಗೆಯಂತೆ ವಿವಿಧ ಅಲಂಕಾರ ಮಾಡಿಕೊಂಡು ಛಾಯಾಚಿತ್ರಗಳನ್ನು ತೆಗೆಯಿಸಿಕೊಳ್ಳಬೇಕು. ಮುಂಬೈನಗರದಲ್ಲಿ ಗರ್ಭಿಣಿಯರ ಭಾವಚಿತ್ರ ತೆಗೆಯುವದರಲ್ಲೆ ಪರಿಣತಿ ಪಡೆದ ಸ್ಟುಡಿಯೋಗಳಿವೆ. ಅವುಗಳು ಪ್ರಚಾರಕ್ಕಾಗಿ ಹೊರಗೆ ತೂಗುಹಾಕಿದ ಛಾಯಾಚಿತ್ರಗಳನ್ನು ವೀಕ್ಷಿಸುವದೇ ವಿನೋದಾವಳಿಯೆನಿಸುವದು. ಶ್ರೀಕೃಷ್ಣ ಪರಮಾತ್ಮನಂತೆ ವೇಷ ಹಾಕಿಕೊಂಡು ಕೊಳಲು ನುಡಿಸುವುದು, ರಾಧೆಯಾಗಿ ಚಂದ್ರಬಿಂಬದ ಮೇಲೆ ಸವಾರಿ ಮಾಡುವದು, ಕಾಮದೇವನಾಗಿ ರತಿಯ ವಶೀಕರಣಕ್ಕಾಗಿ ಪುಷ್ಪಬಾಣವನ್ನು ಪ್ರಯೋಗಿಸುವಂತೆ ನಿಲ್ಲುವದು, ಬಗೆಬಗೆಯ ಕೇಶಾಲಂಕಾರ, ಹೂವಿನ ಅಲಂಕಾರ, ಭಾರೀ ಭಾರೀ ಸೀರೆಯುಟ್ಟು, ವಿವಿಧ ಆಭರಣಗಳನ್ನು ತೊಟ್ಟ ಗರ್ಭಿಣಿಯರ ಛಾಯಾಚಿತ್ರಗಳು ಅಲ್ಲಿರುತ್ತವೆ. ದಶಕದ ಹಿಂದೆಯೇ ನನ್ನವಳಿಗೆ ಎಂಥ ಅಲಂಕಾರ ಶೋಭಿಸಬಹುದು ಎಂಬ ವಿಚಾರದಿಂದಲೇ ನಾಚಿಗೆಯಾಗಿತ್ತು!

ತವರುಮನೆಗೆ ಹೋದನಂತರ ಗರ್ಭವೈಭವದ ಹೊಸ ಅಧ್ಯಾಯವೆ ಪ್ರಾರಂಭವಾಗುವದು. ಪತಿಯ ಅಲಕ್ಷ, ನಾದಿನಿಯರ ಅಸಡ್ಡೆ, ಅತ್ತೆಯ ಅಸಹನೆ ಕುತಂತ್ರಗಳನ್ನು ತಮ್ಮವರಿಗೆ ಹೇಳಿದಷ್ಟೂ ಕಡಿಮೆಯೇ! ಈ ಹಿನ್ನೆಲೆಯಲ್ಲಿ ತಾಯಿ ತಂಗಿಯರು, ಅಣ್ಣ-ತಮ್ಮಂದಿರು ತನು, ಮನ, ಧನಗಳಿಂದ ಬಸಿರಿಯರ ಸೇವೆ ಕಂಕಣಬದ್ಧರಾಗಿರುತ್ತಾರೆ. ತಿರುಗಿ ಭರ್ಜರಿ ಔತಣದೂಟವಾಗಬೇಕು. ಉಡುಗೊ ಕೊಡಬೇಕು. ಛಾಯಾಚಿತ್ರ ತೆಗೆಸಬೇಕು. ಈ ಸಮಾರಂಭದ ಮುಂದೆ ಗಂಡ ಮನೆಯುವರದು ಏನೇನೂ ಅಲ್ಲ, ಎಂದೆನಿಸುವ ಪ್ರಯತ್ನ ಎದ್ದು ಕಾಣುತ್ತದೆ ನಂತರ ಬಾಲ್ಯಸಂಗಾತಿ, ಸಹಪಾಠಿ, ಗೆಳತಿ, ಆಪ್ತರಲ್ಲಿ ಊಟಕ್ಕೆ ಕರೆದ ಉಪಚರಿಸಬೇಕು. ಇವೆಲ್ಲ ಮುಗಿಸುವ ಮೊದಲೇ ಪ್ರಸೂತಿಯಾದವರು 'ಅದೆಷ್ಟು ಒಳ್ಳೊಳ್ಳೆ ಅವಕಾಶಗಳು ಜಾರಿಕೊಂಡವಲ್ಲ!' ಎಂದು ಮರುಗದೇ ಇರುವದಿಲ್ಲ ನನ್ನವಳಿಗೆ ಇವುಗಳಲ್ಲಿ ಒಂದಂಶವೂ ದೊರಕಲೇ ಇಲ್ಲವೆಂದು ನೆನೆದಾಗೊಮ್ಮೆ ಕಸಿವಿಸಿಯಾಗುತ್ತದೆ. ವಿವಾಹದ ಹೊಸದರಲ್ಲಿ 'ನೀವೇ ನನ್ನ ಸರ್ವಸ್ವ' ಎಂದು ನೀನು ಉದ್ಗರಿಸಿದ್ದು ನೆನಪಿದೆಯೇ? ಎಲ್ಲರೂ ಹೀಗೇ ಹೇಳುತ್ತಿರಬಹುದು ನವವಿವಾಹಿತರು. ಕೆಲವರು ಪತಿಯೇ ದೇವರು ಅನ್ನುವವರು ಇಲ್ಲದಿಲ್ಲ. ಬೇರಾರು ಇಂಥ ಮಾತುಗಳನ್ನು ಹೆಚ್ಚಾಗಿ ಪರಿಗಣಿಸದಿದ್ದರೂ ನಾನು ಮಾತ್ರ ಈ ಮಾತನ್ನು ಒರೆಗಲ್ಲಿಗೆ ಹಚ್ಚಿ ಪರೀಕ್ಷಿಸಬೇಕೆಂದಿದ್ದೇನೆ.

ಈ ವಾರಾಂತ್ಯದಲ್ಲಿ ಜಯಪುರಕ್ಕೆ ಬಂದಾಗ ನಿನ್ನ ಬಯಕೆಯೂಟದ ಕಾರ್ಯಕ್ರಮ ಇಟ್ಟುಕೊಂಡಿದ್ದೇನೆ. ನಂಬುತ್ತೀಯಾ? ನನಗೆ ಮೆಚ್ಚಿಗೆಯಾದ ನವಿಲುಹಸುರು ಬಣ್ಣದ ಬಿನ್ನಿ ಶಾಟ್ ರೇಶಿಮೆ ಸೀರೆಯನ್ನು ಖರೀದಿಸಿದ್ದೇನೆ ಪೋಲಕ ಹೊಲಿಸಿದ್ದೇನೆ. ಹಲವು ಬಗೆಯ ತರಕಾರಿ, ಹಣ್ಣು-ಹಂಪಲು ಹ ಗಳನ್ನು ಕೊಂಡು ತಂದು ನಾನೇ ಹಬ್ಬದಡಿಗೆ ಮಾಡುವೆ. ಬಾಸುಂದಿ, ಕೆನೆಹಾ ಫ್ರುಟಸೆಲೆಡ್ ತಯಾರಿಸುವೆ. ಪಲ್ಯ, ತಾಳ್ಳು, ಹಪ್ಪಳ, ಸಂಡಿಗೆ, ವಡೆ, ಉಪ್ಪಿ ಕಾಯಿ, ಪೂರಿ, ಭಜಿಗಳ ವಿಶೇಷ ಊಟ. ಬೇರಾರನ್ನೂ ಆಮಂತ್ರಿಸ ನೀನೊಬ್ಬಳೇ ವಿಶೇಷ ಅತಿಥಿ. ಚೆನ್ನಾಗಿ ಊಟ ಮಾಡಿ ವಿಶ್ರಾಂತಿಯ ನಂತರ ಮುಖ್ಯ ಕಾರ್ಯಕ್ರಮ ಹೀಗಿದೆ. ಮಾರುದ್ದ ಜಡೆಯನ್ನು ಹೂವುಗಳಿಂ ಅಲಂಕರಿಸುವೆ. ಹೊಸ ಸೀರೆಯನ್ನು ಹೇಗೆ ಉಡಬೇಕು ಎಂದು ನಿರ್ದೇಶಿಸು ಆರತಿ ಬೆಳಗುವೆ. ನಂತರ ಛಾಯಾಗ್ರಹಣದ ಕಾಯಕ್ರಮ. ನಿಂತು, ಕುಳಿತು, ಎದ

ನಿಂದ, ಹಿಂಬದಿಯಿಂದ, ವಿವಿಧ ಸೀರೆ ಮತ್ತು ಕೇಶಾಲಂಕಾರದ ಛಾಯಾಗ್ರಹಣ ಮಾಡುವೆ. ಇಷ್ಟೇ ಅಲ್ಲದೇ ನೀನು ಒಪ್ಪಿದರೆ ಜೋಡಿಯಾಗಿಯೂ, ಭಾವಚಿತ್ರ ತೆಗೆಯುವೆ. ಇದು ಹೇಗೆ ಸಾಧ್ಯವೆಂದು ನಿನ್ನ ಸಮಸ್ಯೆ ಇದ್ದಿರಬೇಕಲ್ಲವೇ? ನನ್ನ ಜರ್ಮನ್ ಎಕ್ಸ್ಲಾಕ್ಟಾ ಕ್ಯಾಮರಾದಲ್ಲಿ ಸರ್ವ ರೀತಿಯ ಏರ್ಪಾಡುಗಳೂ ಇವೆ. ಎಲ್ಲವನ್ನೂ ಸಿದ್ಧಮಾಡಿ, ನಾವೂ ಸಿದ್ಧರಾಗಿ ನಿಂತ ನಂತರ ಕ್ಯಾಮರಾ ಗುರಿಯಿಟ್ಟರೆ ತನ್ನಷ್ಟಕ್ಕೆ ಕ್ಲಿಕ್ ಮಾಡಬಲ್ಲುದು. ಈ ಎಲ್ಲ ಚಟುವಟಿಕೆಯಿಂದಾಗಿ ಅತ್ತೆ, ತಾಯಿ, ಪತಿ, ಅಡಿಗೆಯವ, ಸಖಿ, ಛಾಯಾಚಿತ್ರಗಾರ ಮೊದಲಾದವರನ್ನು ಒಬ್ಬನಲ್ಲಿಯೇ ಗುರುತಿಸುವಂತಾಗುವದಿಲ್ಲವೇ?

ಉದರದಲ್ಲಿ ಬೆಳೆಯುತ್ತಿರುವ ಮಗುವಿನ ಚಟುವಟಿಕೆಗಳನ್ನು ಅರಿತು ತುಂಬಾ ಮೋಜೆನಿಸಿತು. ಯಾವುದಾದರೂ ಕೆಲಸದಲ್ಲಿ ಮೈಮರೆತಾಗ ತುಳಿತದಿಂದ ತನ್ನ ಇರವಿನ ಬಗ್ಗೆ ಎಚ್ಚರಿಸುತ್ತಾನೆಯೇ? ಕಲಿಯುಗದ ಮಕ್ಕಳು, ಹುಟ್ಟುವ ಮೊದಲೇ ಗೂಂಡಾಗಿರಿಯ ಸ್ವಯಂ ತರಬೇತಿಯನ್ನು ಹೊಟ್ಟೆಯಲ್ಲಿ ಮಾಡುತ್ತಿರುವಂತೆ ಕಾಣುತ್ತದೆ. ನೆರೆಹೊರೆಯ ಮಕ್ಕಳು ಪಟಾಕ್ಷಿ ಸಿಡಿಸಿದಾಗೊಮ್ಮೆ ಬೆಚ್ಚಿ ಬೀಳುತ್ತಾರೆಯೇ? ಬರುವ ವರ್ಷಗಳಲ್ಲಿ ನೀನೂ ಪಟಾಕಿಗಳನ್ನು ಬೇಕಷ್ಟು ಹಾರಿಸುವಿಯಂತೆ ಎಂದು ತಿಳಿಹೇಳಿದಾಗ ಸಮ್ಮತಿಸುವಂತೆ ಸುಮ್ಮನಿರುತ್ತಾನೆಯೇ? ಬಹಳಷ್ಟು ಆಶ್ವಾಸನೆಗಳನ್ನು ಕೊಡಲು ಹೋಗಬೇಡ. ಅವುಗಳನ್ನು ಈಗಲೇ ನಮೂದಿಸಿಕೊಂಡು, ಮುಂದೆ ತನ್ನ ಬೇಡಿಕೆಗಳನ್ನು ಮುಂದೆ ಇಟ್ಟರೆ ಕಷ್ಟಕ್ಕಿಟ್ಟುಕೊಂಡೀತು! ನಾವೆಲ್ಲ ಪಾಲಕರ ಆಜ್ಞಾಧಾರಕರಾಗಿ ನಡೆದುಕೊಂಡರೂ ಮಿತ ಸಂತಾನದ ಈ ಪೀಳಿಗೆಯವರು ತಂದೆ-ತಾಯಿಗಳನ್ನೆ ತರಾಟೆಗೆ ತೆಗೆದುಕೊಂಡರೆ ಆಶ್ಚರ್ಯವಿಲ್ಲ.

ಅಂತರಂಗದ ತಳಮಳವನ್ನು ನಿವೇದಿಸಿಕೊಳ್ಳಲೇ? ಪ್ರಸೂತಿಯ ದಿನ ಹತ್ತಿರ ಬಂದಂತೆ, ಹೇಗೆ ವ್ಯವಸ್ಥೆ ಮಾಡುವದು, ಹೇಗೆ ಮುಂದುವರಿಯುವದು ಎಂಬ ಸಮಸ್ಯೆಗಳು ಪೀಡಿಸಹತ್ತಿವೆ. ನೀನೇನೋ ಪತಿಯೇ ಗತಿಯೆಂದು ನಂಬಿರುವಿ. ಆದರೆ ನಮ್ಮವರ ನೆರವು ಇಲ್ಲದೇ ಎಲ್ಲವನ್ನೂ ನನ್ನಿಂದ ತೂಗಿಸಿಕೊಂಡು ಹೋಗಲು ಸಾಧ್ಯವೇ? ಎಂಬ ಅಳುಕು ಪ್ರಾರಂಭವಾಗಿದೆ. ಯಾರು ಮಾರ್ಗದರ್ಶನ ಮಾಡಬೇಕಿತ್ತೋ ಅವರೇ 'ಪ್ರಸೂತಿ ವ್ಯವಸ್ಥೆ ಹೇಗೆ? ಎಲ್ಲಿ ನಡೆಯಬೇಕೆ'ಂಬುದರ ಬಗ್ಗೆ ಪ್ರತಿದಿನವೂ ವಿರೋಧಾಭಾಸವಾಗುವ ವಿಚಾರ ತಿಳಿಸಲಾರಂಭಿಸಿದ್ದಾರೆ! ಅಂತೆಯೇ ನಮ್ಮ ಹಿತವನ್ನು ನಾವೇ ಸಾಧಿಸಬೇಕಾಗುವದು. ನಾನೊಬ್ಬ

ಆಶಾವಾದಿ, ಧೈರ್ಯಶಾಲಿ. ಸತ್ತಾದರೂ ಗೆಲ್ಲಬೇಕು ಎಂಬ ದೃಢಸಂಕಲ್ಪದವನು. ಸಕಾಲದಲ್ಲಿ ನೆರವಿಗೆ ಬಾರದವರ ಬಗ್ಗೆ ತಲೆ ಕೆಡಿಸಿಕೊಳ್ಳದೇ ಹೆರಿಗೆಯ ಕುರಿತಾದ ಎಲ್ಲ ತಯಾರಿ ಪ್ರಾರಂಭಿಸೋಣ.೮ ಬಡಬಗ್ಗರು, ಭಿಕ್ಷುಕರು ಮರದ ನೆರಳನ್ನೆ ಮೊರೆಹೊಕ್ಕು ಬಾಣಂತನ ಮುಗಿಸಿ. ಮಗುವಿನೊಂದಿಗೆ ಮುಂದರಿಯುವದಿಲ್ಲವೇ? ನಾವು ಅವರಿಗಿಂತ ಆರ್ಥಿಕವಾಗಿ ಸಾವಿರ ಪಾಲು ವಾಸಿ ಎಂದು ಮುಂದರಿಯೋಣ ಆಗದೇ?

○

೮. ಸಕಲ ಸುಸಜ್ಜಿತ ಸ್ವಾಗತದ ಏರ್ಪಾಡು ಮಾಡುವ ಮೊದಲು, ಮ ಅವತರಿಸಿ ಬರಲು ನಿರಾಕರಿಸಿತು. ಬಾಬಾ, ಕಾಕಿ ಮತ್ತು ಅಕ್ಕ ಜಯಪುರಕ್ಕೆ ಬಂದು ಇಳಿದ ನಂತರವೇ ೨೩-೩-೧೯೬೭ ಕ್ಕೆ ವಿಕಾ ಕಾಮತನು ಧರೆಗೆ ಇಳಿದುಬಂದು ಎಲ್ಲರಿಂದ ಬೆನ್ನು ತಟ್ಟಿಸಿಕೊಂಡನು.

೧೧. ಪ್ರಕಾಶಕರ ಪತ್ರ

ಜೊಬನೇರ, ೨೫–೫–೧೯೬೭

ನಿನ್ನ ಚೊಚ್ಚಿಲು ಕೃತಿಯಾದ ಪುತ್ರ 'ವಿಕಾಸ್‌ಸಿಂಗ್'ನನ್ನು ಪಡೆದು ಕನಸಿನ ಲೋಕದಲ್ಲಿ ವಿಹರಿಸುತ್ತಿರಬಹುದಲ್ಲವೇ? ನನ್ನ ಚೊಚ್ಚಿಲು ಕೃತಿ, ಅಮೇರಿಕೆಯ ಕುರಿತಾದ ಪ್ರವಾಸ ಕಥನ, ಪ್ರಕಟನೆಗೆ ಸ್ವೀಕೃತವಾಗಿದೆ ಎಂದು ಸಾರಲು ಈ ಪತ್ರ ಬರೆಯುತ್ತಿದ್ದೇನೆ. ಧಾರವಾಡದ ಮನೋಹರ ಗ್ರಂಥಮಾಲೆಯ ಸಂಪಾದಕರಾದ ಶ್ರೀ ಜಿ. ಬಿ. ಜೋಶಿಯವರು ೧೮–೩–೧೯೬೭ ರಂದು ಬರೆದ ಪತ್ರ ಹೀಗಿದೆ:

ಪ್ರಿಯ ಶ್ರೀ ಕೆ. ಎಲ್. ಕಾಮತರಿಗೆ,

ಸವಿನಯ ವಂದನೆಗಳು. ನಾನು ನಿಮಗೆ ಬರೆಯುತ್ತಿರುವದು ಇದು ಮೊದಲನೆಯ ಪತ್ರ. ಮನಸ್ಸು ಬಿಚ್ಚಿ ಬರೆಯುವಂತೆ ಮಾಡಿದ ನಿಮ್ಮ ಬರವಣಿಗೆಯೇ ಇದಕ್ಕೆ ಕಾರಣವೆನ್ನಬಹುದು. ವಿಷಯಕ್ಕೆ ಹೋಗುವ ಮೊದಲು ಸಾಂದರ್ಭಿಕ ಉಪಚಾರ ಅಷ್ಟು ಮುಗಿಸಿಬಿಡುತ್ತೇನೆ. ತಡವಾಗಿ ಉತ್ತರ ಬರೆಯುತ್ತಿರುವದಕ್ಕೆ ಮೊದಲು ಕ್ಷಮೆ ಕೇಳಿ ಆಮೇಲೆ ಕಾರಣ ಕೊಡುತ್ತೇನೆ. ನಾನು ಕಳೆದ ತಿಂಗಳು ೨೫ಕ್ಕೆ ಇಲ್ಲಿಂದ ಮದ್ರಾಸಕ್ಕೆ ಹೋಗಿದ್ದವನು, ಮೊನ್ನೆ ಮಧ್ಯಾಹ್ನ ತಾನೆ ತಿರುಗಿ ಬಂದೆ. ಬರುವದರೊಳಗಾಗಿ ನಿಮ್ಮ ಎರಡು ಪತ್ರಗಳೂ (೨೭–೨–೧೯೬೭ ಮತ್ತು ೨–೩–೧೯೬೭) ಹಸ್ತಪ್ರತಿಯೂ, ಫೋಟೊಗಳೂ ಬಂದು ಕಾದು ಕುಳಿತ್ತಿದ್ದವು. ಬಂದ ಇತರ ಪತ್ರಗಳನ್ನೆಲ್ಲ ಬಿಟ್ಟು ಮೊದಲು ನೋಡಿದ್ದೇ ನಿಮ್ಮ ಪತ್ರ. ಹಸ್ತಪ್ರತಿಯನ್ನೂ ಕೈಗೆ ತೆಗೆದುಕೊಂಡೆ. ಓದಿಯೇ ಬಿಡಬೇಕೆಂಬ ಹಂಬಲ ಹುಟ್ಟಿತು. ಓದಿ ಮುಗಿಸಿಯೇ ನಿಮಗೆ ಬರೆದರಾಯಿತೆಂದು ತಡೆದೆ. ಸಾಯಂಕಾಲ, ಇಡೀ ರಾತ್ರಿ ಓದಿ ಮುಗಿಸಿದ್ದೇನೆ. ಈಗ ಬರೆಯುತ್ತಿದ್ದೇನೆ.

ಬರವಣಿಗೆಯನ್ನು ನಾನು ಮೆಚ್ಚಿದ್ದೇನೆ. ನನ್ನ ಮಾಲೆಯಲ್ಲಿ ಹಾಕಲು ಏನೂ ಅಡ್ಡಿಯಿಲ್ಲವೆಂದು ಗೊತ್ತು ಮಾಡಿದ್ದೇನೆ. ಇದೇ ಬೇಸಿಗೆಯ ಸೂಟಿಯಲ್ಲಿ ಕುರ್ತಕೋಟಿಯವರು ಹೇಗೂ ಇಲ್ಲಿಗೇ ಬರಲಿದ್ದಾರೆ. ಅವರಿಗೆ ಹಸ್ತಪ್ರತಿ ಕೊಟ್ಟು ಓದಿಸಿ ಅವರ ಅಭಿಪ್ರಾಯ, ಸೂಚನೆಗಳನ್ನು ಪಡೆದು, ನಿಮಗೆ ಮತ್ತೆ

ಬರೆಯುತ್ತೇನೆ. ಆದರೆ ಹಸ್ತಪ್ರತಿ ಗ್ರಂಥಮಾಲೆಗೆ ಸ್ವೀಕೃತವಾಗಿದೆಯೆಂದು ನೀವು ತಿಳಿದುಕೊಳ್ಳಬಹುದು. ಗ್ರಂಥದ ಹೆಸರು, ಒಳಗಿನ ಪ್ರಕರಣಗಳ ಹೆಸರುಗಳ ಬಗ್ಗೆ ವಿಚಾರಿಸಿ, ನಿಮಗೆ ಮತ್ತೆ ಬರೆದು ತಿಳಿಸುತ್ತೇನೆ. ಅಂತೂ ನಿಮ್ಮ ಮನೆಯವರಿಗೇ ಈ ಒಳ್ಳೆಯ ಕೃತಿ ಬರುವಂತೆ ಮಾಡಿದ ಶ್ರೇಯಸ್ಸು ಹೋಗುತ್ತದಲ್ಲವೇ?

ಗ್ರಂಥಮಾಲೆಯ ಬಗ್ಗೆ ಒಂದೆರಡು ಮಾತು ತಿಳಿಸಬೇಕೆನ್ನಿಸಿತು. ಪುಸ್ತಕಗಳನ್ನು ಪ್ರಸಿದ್ಧಿಸುವದು ವ್ಯಾಪಾರ ದೃಷ್ಟಿ ಎಂಬುದು ಮಾಲೆಯ ಮಟ್ಟಿಗೆ ಬಹು ಅಂಶದಲ್ಲಿ ಕಡಿಮೆ ಇದೆ ಎಂದು ಹೇಳಬಯಸುತ್ತೇನೆ. ಮಾಲೆಗೆ 'ಗುಣ' ಮುಖ್ಯ. ಅದಕ್ಕಾಗಿಯೇ ಕೈಸುಟ್ಟುಕೊಂಡಿದ್ದೂ ಉಂಟು. ಆದರೂ ಆ ತರಹದ ಪುಸ್ತಕಗಳನ್ನು ಪ್ರಕಟಿಸುವದರಲ್ಲಿ ಒಂದು ಸಾಹಸದ ಆನಂದವಿದೆ. ಅದನ್ನೇ ಈ ಮೂವತ್ತು ಮೂರು ವರ್ಷ ಮಾಡುತ್ತ ಬಂದಿದ್ದೇನೆ. ನೀವೂ ಮಾಲೆಯನ್ನು ಬರೇ ವ್ಯಾಪಾರ ದೃಷ್ಟಿಯಿಂದ ನೋಡಬಾರದೆಂಬ ಆಸೆಯಿಂದ ಈ ಮಾತು ಬರೆಯುತ್ತಿದ್ದೇನೆ. ದಯವಿಟ್ಟು ಅನ್ಯಥಾ ಭಾವಿಸಬೇಡಿ. ನೀವು ಎಂಟು–ಹತ್ತು ತಿಂಗಳು ಹಸ್ತಪ್ರತಿ ತಯಾರಿಸುವಲ್ಲಿ ಪಟ್ಟಶ್ರಮ ಸಾರ್ಥಕವಾಗಿದೆ. ನೀವು ಪಟ್ಟ ಕಷ್ಟ ಫಲಪ್ರದವಾಗಿದೆ–ಬರವಣಿಗೆಯಲ್ಲಿ, ನಿಮ್ಮ ಒಂದು ಫೋಟೊ ಕಳಿಸಿಕೊಡಿ. ಅವಶ್ಯಬೇಕು ಅದು. ನಿಮ್ಮ ಹತ್ತಿರ ಇದ್ದ ಅಮೇರಿಕೆಯ ಜೀವನದ ಉಳಿದ ಫೋಟೋಗಳನ್ನು ಕಳಿಸಿಕೊಡಿ. ಅಂದರೆ ನಮಗೆ ಆಯ್ದುಕೊಳ್ಳಲು ಅನುಕೂಲವಾಗುತ್ತದೆ.

ನೀವು ಅಭ್ಯಾಸ ಮಾಡಿದ ಕೀಟಶಾಸ್ತ್ರದ ಬಗ್ಗೆ ಈ ಬರವಣಿಗೆಯಲ್ಲಿ, ಅಷ್ಟೊಂದು ಬಂದಂತೆ ತೋರಲಿಲ್ಲ. ಆ ಸಂಶೋಧನದ ಬಗ್ಗೆ, ಅದರ ಮಹತ್ವ ಆ ಕೀಟಗಳ ರೇಖಾಚಿತ್ರಗಳು, ಪ್ರಯೋಗ ಶಾಲೆಯಲ್ಲಿ ನೀವು ಕೈಕೊಂಡ ಪ್ರಯೋಗಗಳು, ಆ ಬಗ್ಗೆ ಫೋಟೊಗಳು–ಈ ಬಗ್ಗೆ ಒಂದು ಪ್ರಕರಣ ಬರೆದಿದ್ದರೆ ಇನ್ನೂ ಒಳ್ಳೆಯದಾಗಿರುತ್ತಿತ್ತು ಎಂದು ನನಗನಿಸಿತು. ಬಹಳ ತಾಂತ್ರಿಕ ಆಗಬಹುದೆಂದು ನೀವು ಬಿಟ್ಟಿರಬಹುದು. ಆದರೂ ಆ ವಿಷಯಕ್ಕೆ ಬರೆಯುವದು ನಮ್ಮ ಜನಕ್ಕೆ ಬೋಧಪ್ರದವಾದೀತೆಂದು ನನ್ನ ತಿಳುವಳಿಕೆ. ಈಗಲೂ ನಿಮಗೆ ಇದು ಸಮರ್ಪಕವೆನಿಸಿದರೆ, ನಿಮ್ಮ ಸಂಶೋಧನೆಯ ಬಗ್ಗೆಯೇ ಒಂದು ಅಧ್ಯಾಯ ಬರೆಯಬಹುದು. ನಮ್ಮಲ್ಲಿಯ ಕೀಟಗಳಿಗೂ ತುಲನೆ ಮಾಡಿ. ನನಗನಿಸಿದ್ದು

ಸರಿಯೇ? ನಿಮಗೆ ಬೇಡ ಎನಿಸಿದರೆ ಬಿಟ್ಟುಬಿಡಬಹುದು. ಆದರೆ ಕೀಟಗಳ ಬಗ್ಗೆಯೂ ನಮ್ಮಲ್ಲಿರುವ ಅಜ್ಞಾನ ಹೋಗಬೇಕಲ್ಲವೇ? ನಮ್ಮಲ್ಲಿಯ ರೈತನಿಗೂ ಅದು ಉಪಯೋಗವಾದೀತು. ವಿಚಾರಿಸಿ ನಿಮ್ಮ ಅಭಿಪ್ರಾಯ ತಿಳಿಸಿ.

ಶ್ರೀಮತಿ ಜ್ಯೋತ್ಸ್ನಾ ಅವರಿಗೆ ನನ್ನ ಆತ್ಮೀಯ ಮೆಚ್ಚಿಗೆ ತಿಳಿಸಿ. ಬರಲಿರುವ ಹೊಸ ಕಣ್ಣುಗಳಿಗೆ ಆಯುಷ್ಯ ಕೋರಿ ಮುಗಿಸುತ್ತೇನೆ.

ನೋಡಿದೆಯಾ? ನಿನ್ನ ಸೂಚನೆ ಮನ್ನಿಸಿ ಜಿ. ಬಿ. ಜೋಶಿಯವರೊದನೆ ಸಂಪರ್ಕ ಬೆಳೆಸಿದ್ದೇ ಉತ್ತಮವಾಯಿತು. ಪ್ರಪ್ರಥಮ ಕೃತಿಯನ್ನು ಉತ್ತಮ ಸಾಹಿತ್ಯವನ್ನೆ ಓದುಗರಿಗೆ ನೀಡಲು ಕಂಕಣಬದ್ಧವಾದ ಮಾಲೆಯು ಪ್ರಕಟನೆಗೆ ಸ್ವೀಕರಿಸಿದ್ದು ಒಂದು ಪ್ರಮುಖ ಸಾಧನೆಯೆಂದೇ ಅನ್ನಬೇಕು. ಬರವಣಿಗೆ ಪ್ರಾರಂಭಿಸಿದಾಗ ನಮ್ಮಲ್ಲಿ ಭಿನ್ನಾಭಿಪ್ರಾಯಗಳಿದ್ದವು. ವಿಸ್ತೃತವಾಗಿ ವಿವರಿಸಿ ಬರೆಯಬೇಕೆಂದು ಪತ್ನಿಯ ವಾದ. ಹತ್ತು ವಾಕ್ಯಗಳಲ್ಲಿ ಹೇಳಬೇಕಾದ್ದನ್ನು ಒಂದರಲ್ಲಿಯೇ ಹೇಳುವಂತಾದರೆ, ಅದು ಒಳ್ಳೆಯ ಬರವಣಿಗೆ ಎಂಬುದು ನನ್ನ ವಾದ. ಕೊನೆಗೆ ನಾವಿಬ್ಬರೂ ಸೋಲದಿದ್ದರೂ ಹಸ್ತಪ್ರತಿ ಗೆದ್ದಿತು. ಯಾವುದೇ ಕೆಲಸವನ್ನು ಆಸಕ್ತಿಯಿಂದ ಶ್ರಮವಹಿಸಿ ಮಾಡಿದರೆ, ಯಶಸ್ಸು ನಮ್ಮದಾಗುತ್ತದೆ ಎಂಬುದಕ್ಕೆ ಇದಕ್ಕೂ ಬೇರೆ ಉದಾಹರಣೆ ಬೇಕೇ?[೯] ನಿನ್ನ ಸಹಕಾರ ಇದ್ದರೆ ಇನ್ನೂ ಕೆಲವು ಪುಸ್ತಕಗಳನ್ನು ರಚಿಸಬಲ್ಲೆ ಎಂಬ ಹುಮ್ಮಸ ಬಂದಿದೆ. ನಿನ್ನ ಮಗ, ಗಿಂಡಿ, ಸ್ವಲ್ಪ ದೊಡ್ಡವನಾಗಲಿ. ಆನಂತರ ನೋಡೋಣವಂತೆ.

---

೯. ಈ ಪ್ರವಾಸ ಕಥನ "ನಾನೂ ಅಮೇರಿಕೆಗೆ ಹೋಗಿದ್ದೆ" ಹೆಸರಿನಿಂದ ೧೯೬೯ ರಲ್ಲಿ ಪ್ರಕಟವಾಗಿ, ಜನಪ್ರಿಯವಾದ್ದರಿಂದ ಒಂದೇ ವರ್ಷದಲ್ಲಿ ಮರುಮುದ್ರಣ ಕಂಡಿತು. ಆನಂತರವೂ ಇನ್ನೂ ಮೂರು ಮುದ್ರಣ ಕಂಡಿತಲ್ಲದೇ ಮಾಲೆಯ ಸುವರ್ಣ ಸಂಚಿಕೆ 'ಪುಟ ಬಂಗಾರ' ದ ಸಂಪುಟದಲ್ಲೂ ಸೇರ್ಪಡೆಯಾಯಿತು. ಕರ್ನಾಟಕ ಸಾಹಿತ್ಯ ಆಕಾಡಮಿಯ ಪ್ರಥಮ ಬಹುಮಾನ ಪಡೆಯಿತಲ್ಲದೇ ಕರ್ನಾಟಕ, ಬೆಂಗಳೂರು ವಿಶ್ವವಿದ್ಯಾಲಯಗಳಿಂದ ಪಠ್ಯಪುಸ್ತಕವಾಯಿತು.

○

೧೨. ತಿರುಗಾಟದ ತೀಟೆ

ಜೊಬನೇರ, ೧೮-೮-೧೯೬೭

ಕಿಸೆ–ಕಾಸು, ತಿರುಗಾಟದ ಖರ್ಚಿಗಾಗಿ ಹಣ ಕೊಡದ ದಿನಗಳಲ್ಲಿಯೂ ದೂರದೂರದ ಸೌಂದರ್ಯಭರಿತ ತಾಣಗಳನ್ನು ನೋಡಿ ಬರಲು ನಾನು ಏನೇನೂ ಕೊರತೆ ಮಾಡಿಕೊಳ್ಳಲಿಲ್ಲ. ಸಮನಾದ ಅಭಿರುಚಿಯುಳ್ಳ ಸ್ನೇಹಿತರೆಲ್ಲ ಸೇರಿ ನಮ್ಮ ಹೆಸರಿನ ಒಂದೊಂದು ಅಕ್ಷರ ಸೇರಿಸಿ 'ಸುಕೀರ್ತಿ ಸಂಘ'ವನ್ನು ಸ್ಥಾಪಿಸಿಕೊಂಡಿದ್ದೆವು. ಅದರ ಆರು ಸದಸ್ಯರು[೧೦] ನಡು ಬೇಸಿಗೆಯಲ್ಲಿ ಗೇರಸೊಪ್ಪಾ ಧಬಧಬೆ (ಜೋಗ್ ಫಾಲ್ಸ![೧೧]) ಯ ದರ್ಶನ ಪಡೆಯಲು ಹೊರಟೆವು. ಹದಿನೆಂಟು ಮೈಲಿ ನಾವೆಯಲ್ಲಿ ಪ್ರಯಾಣ ಮಾಡಿ, ಗೇರಸೊಪ್ಪೆಯ ನಗರ ಬಸದಿ[೧೨] ನೋಡಲು ಹೋದಾಗ ಜಿಗಳೆ (ಕಾನೊಟ)ಗಳು ಮುಕ್ತ ಕಂಠದಿಂದ ಬರಮಾಡಿಕೊಂಡು ರಕ್ತದಾನ ಮಾಡಿ ಮೆತ್ತಗಾದವು. ಅವುಗಳು ಬಿಸಿರಕ್ತಕ್ಕೆ ಆಕರ್ಷಿತವಾಗಿ ಧಾವಿಸಿ ಬಂದು ಒಂದಿಷ್ಟೂ ನೋವಾಗದಂತೆ ರಕ್ತಹೀರುವ ಮಾಯಾ ವಿದ್ಯೆಯನ್ನು ಕರಗತ ಮಾಡಿಕೊಂಡದ್ದರಿಂದ ಒಂದು ವರ್ಷಕ್ಕಾಗುವಷ್ಟು

---

೧೦. ಇವರಲ್ಲಿ ಇಬ್ಬರು ಇಂದಿಲ್ಲ. ಅತ್ಯಂತ ಆತ್ಮೀಯ ಗೆಳೆಯ, ರಾಜಾರಾಮ ಶಾಸ್ತ್ರಿ ೧೯೬೦ ರಲ್ಲಿ ಭಿಲಾಯಿಯ ರೇಲು ಅಪಘಾತಕ್ಕೆ ಬಲಿಯಾದ. ನೆರಳಿನಂತೆ ಬೆಳೆದ ನಕುಲ ರೇಡಕರನು ೧೯೭೯ ರಲ್ಲಿ ಕ್ಯಾನ್ಸರ್‌ಗೆ ತುತ್ತಾದ.

೧೧. ಮುಂಬಯಿ ಇಲಾಖೆಯಿಂದ ಮೈಸೂರ ರಾಜ್ಯ (ಈಗಿನ ಕರ್ನಾಟಕ)ಕ್ಕೆ ನಮ್ಮನ್ನು ಸೇರ್ಪಡೆ ಮಾಡಿದನಂತರ ಈ ಆಂಗ್ಲಮಯ ಶಬ್ದ ಬಳಸಲೇ ಬೇಕಾಗಿದೆ.

೧೨. ಗೇರಸೊಪ್ಪೆಯ ಜೈನ ರಾಣಿ, ಚೆನ್ನಭೈರಾದೇವಿಯ ರಾಜಧಾನಿಯಾಗಿತ್ತು.

ಆಹಾರವನ್ನು ಹೀರಿ ಅದೃಶ್ಯವಾಗಿಬಿಡುತ್ತವೆ ಶರೀರದಿಂದ ಬಸಿಯುವ ರಕ್ತ ಕಂಡಾಗಲೇ ಅವುಗಳ ಮೋಸ ಅರಿವಾಗಬೇಕು. ಈ ರಕ್ತಪಾತ ತಡೆಯುವ ಗುಂಗಿನಲ್ಲಿ ಜೈನ ತೀರ್ಥಂಕರರ ಪ್ರತಿಮೆಗಳಿಗೆ ಯೋಗ್ಯವಾದ ಗೌರವಸಂದಾಯವಾಗಲೇ ಇಲ್ಲ. ಗೇರಸೊಪ್ಪೆಗೆ ಹಿಂದಿರುಗುತ್ತಿದ್ದಂತೆ ಈ ಪರಾವಲಂಬಿಗಳಿಂದ ಹೇಗೆ ಲಾಭ ಪಡೆಯಬಹುದು ಎಂಬ ಚರ್ಚೆ ಆಯಿತು. ಮುಂಬಯಿಯ ಮಾರವಾಡಿ ಧನಿಕರು ಕೊಬ್ಬಿದವ್ಯ ಹೇಗೆ ಕರಗಿಸಬೇಕೆಂದು ಅರಿಯದೇ ಕಂಗಾಲಾಗುವದರಿಂದ ಅವರನ್ನು ಕಗ್ಗತ್ತಲಿನ ಕೋಣೆಯಲ್ಲಿ ಕೂಡಹಾಕಿ, ಜಿಗಳೆಗಳಿಂದ ರಕ್ತ ಹೀರಿಸಿ, ಅವರನ್ನು ಕರಗಿಸಿ ನಾವೂ ಧನಿಕರಾಗಬಹುದೆಂದು ಸರ್ವಾನುಮತದಿಂದ ಒಪ್ಪಿಕೊಂಡೆವು.

ಸಾಕಷ್ಟು ತಿರುಗಾಡಿ ಹೊಟ್ಟೆ ತಾಳಹಾಕಲಾರಂಭಿಸಿದಾಗ ಆ ಹಳ್ಳಿಯಲ್ಲಿ ಒಂದೂ ಹೋಟೇಲು ಇಲ್ಲದ್ದು ಲಕ್ಷ್ಯಕ್ಕೆ ಬಂದಿತು. ಕೊನೆಗೆ ಬಡ ಮಹಿಳೆಯೊಬ್ಬಳು ೧೩ ಅಡಿಗೆ ಮಾಡಿ ಬಡಿಸಲು ಒಪ್ಪಿಕೊಂಡಳು.ಆದರೆ ಹದಿ ವಯಸ್ಸಿನ ಯುವಕರಿಗೆ ಅವಳು ಬಡಿಸಿದ ಅನ್ನ, ತೊವ್ವೆ, ಹಪ್ಪಳಗಳು ರಾವಣನ ಹೊಟ್ಟೆಗೆ ಕಾಸಿನ ಮಜ್ಜಿಗೆಯಾಗಿ ಪರಿಣಮಿಸಿದವು. ನಾವು ಒಯ್ದದ್ದೇ ಅತ್ಯಲ್ಪ ಹಣವಾದ್ದರಿಂದ ಅವಲಕ್ಕಿ-ಚುರಮುರಿಗಳನ್ನೂ ಕೊಂಡು ತಿನ್ನುವಂತಿರಲಿಲ್ಲ. ಅಕ್ಕಿ ಗಿರಣಿಯ ಸಾಹುಕಾರರು ಬತ್ತ ಒಣಗಿಸುವ ಅಂಗಳವನ್ನೇ ಮಲಗಲು ಬಿಟ್ಟು ಕೊಡುವ ಔದಾರ್ಯ ತೋರಿಸಿದರು. ಗಂಟುಮೂಟೆ ಬಿಚ್ಚಿ ಹಾಸಿಕೊಳ್ಳುತ್ತಿದ್ದಂತೆ ಇದ್ದ ಎರಡೇ ಸಾಮಾನುಗಳನ್ನು ಯಾರಾದರೂ ಕದ್ದು ಒಯ್ದರೆ........ ಎಂಬ ಸಮಸ್ಯೆ ತಲೆದೋರಿತು. ಸಾಲದ್ದಕ್ಕೆ ನಾವೇ ಹಣ ಕೂಡಿಸಿ, ಶಾಲೆ ಕೊಡಿಸಿದ ಹದಿನೇಳು ರೂಪಾಯಿಗಳ ಹೊಸ ಕೆಮೆರಾವನ್ನೂ ಜೊತೆಯಲ್ಲಿ ತಂದಿದ್ದೆವು. ಅಂತೆಯೇ ಕ್ಯಾಮರಾ ಮತ್ತು ಕೈಚೀಲಗಳನ್ನು ನೇಣಿಗೆ ಪೋಣಿಸಿ ಅದರ ಒಂದು ತುದಿಯನ್ನು ಮೊದಲಿಗನಾಗಿ ಮಲಗಿದವನ ಎಡಗಾಲಿಗೂ ಇನ್ನೊಂದು ಅಂಚನ್ನು

---

೧೩ ಎರಡು ದಶಕಗಳ ನಂತರ ಅದೇ ಮಹಿಳೆಯ ಮನೆಯಲ್ಲಿ ಊಟಮಾಡುವ ಅವಕಾಶ ದೊರೆಯಿತು. ಅವಳ ಮಕ್ಕಳೆಲ್ಲ ಬೆಳೆದು ಸ್ಥಿತಿವಂತರಾಗಿರುವದನ್ನು ಕಂಡು ಖುಷಿಯೊಯಿತು.

ಕೊನೆಯುವನ ಬಲಗಾಲಿಗೂ ಬಿಗಿಯಾಗಿ ಬಿಗಿದೆವು. ಕಳ್ಳನು ಯಾವುದಾದರೂ ಸಾಮಾನಿಗೆ ಕೈ ಹಾಕಿದಾಕ್ಷಣ ಇಬ್ಬರೂ ಝಗ್ಗನೆ ಎದ್ದು, ನಮ್ಮನ್ನೆಲ್ಲ ಎಬ್ಬಿಸಿ ಚೋರಶಿಖಾಮಣಿಯ ಹೆಣ ಹಾಕಿಬಿಡಬೇಕೆಂಬುದೇ ನಮ್ಮ ಈ ಏರ್ಪಾಡಿನ ಇಂಗಿತ. ಹೊಟ್ಟೆ ಹಸಿದಿದ್ದರೂ ದಣಿವಿನಿಂದಾಗಿ ನಿದ್ರಾದೇವಿ ಕ್ಷಣಾರ್ಧದಲ್ಲಿ ಪ್ರತ್ಯಕ್ಷಳಾಗಿಬಿಟ್ಟಳು. ನಡುರಾತ್ರಿಯಲ್ಲಿ ಸಕಲರೂ ಏಕಕಾಲಕ್ಕೆ ಎಚ್ಚೆತ್ತರು. ಯಾವ ಕಳ್ಳ-ಕಾಕರು ಬಾರದಿದ್ದರೂ ಮಳೆರಾಯ, ಪ್ರತ್ಯಕ್ಷನಾಗಿ ನಮ್ಮೆಲ್ಲರನ್ನು ಧಾರಾಳವಾಗಿ ಆಶೀರ್ವದಿಸಲಾರಂಭಿಸಿದ್ದ! ಕೈದಿಗಳಂತೆ ಕಾಲಿಗೆ ನೇಣುಕಟ್ಟಿಕೊಂಡ ವರ ಪಾಡು ಹೇಳತೀರದು. ದಾರ ಬಿಚ್ಚಿ ಮೊದಲು ಕ್ಯಾಮರಾವನ್ನು ನಮ್ಮ ಶರ್ಟುಗಳಲ್ಲಿ ಸುತ್ತಿ ಅದರ ಸುರಕ್ಷಿತತೆಯನ್ನು ನೋಡಿಕೊಂಡೆವು. ಆದರೆ ಗಿರ ಣಿಯ ಒಳಗಿನವರೆಲ್ಲ ಬಾಗಿಲು ಮುಚ್ಚಿ ಗೊರಕೆ ಹೊಡೆಯಲಾರಂಭಿಸಿದ್ದರಿಂದ ಎಲ್ಲಿ ಆಶ್ರಯ ಪಡೆಯುವದೆಂದು ತಿಳಿಯದೇ ಮರದಡಿಯಲ್ಲಿ ನಿಲ್ಲಬೇಕಾಯ್ತು. ನಮ್ಮ ಕೆಚ್ಚೆದೆ ವರುಣನಿಗೆ ಮೆಚ್ಚಿಗೆಯಾಗಿರಬೇಕು. ಕೂಡಲೇ ಭೂಲೋಕದಿಂದ ಕಣ್ಮರೆ ಯಾದ.

ಮರುದಿನ ನಸುಕಿನಲ್ಲೆದ್ದು ನಿಸರ್ಗವನ್ನೇ ಕಕ್ಕಸವಾಗಿ ಬಳಸಿ, ನಾಶ್ತಾಕ್ಕೆ ಏನು ಮಾಡುವದು? ಎಂದು ಯೋಚಿಸಲಾರಂಭಿಸಿದೆವು. ಅಪರಿಚಿತನೊಬ್ಬ ನಮ್ಮ ಮಾತು ಕೇಳಿಸಿಕೊಂಡು ನಡುದಾರಿಯ ಹಳ್ಳಿಯೊಂದರಲ್ಲಿ ಒಳ್ಳೆಯ ಅಲ್ಪೋಪಹಾರ ಸಿಗುವದೆಂದು ಭವಿಷ್ಯ ನುಡಿದ. ಸಕಲ ಸಾಮಾನುಗಳನ್ನು ಬೆನ್ನಿಗೇರಿಸಿ, ಇಕ್ಕಟ್ಟಾದ ಕಾಡಿನ ಕಾಲು ದಾರಿ ತುಳಿಯುತ್ತ ನಮ್ಮ ತಂಡ ಹೊರಟಿತು. ಒಬ್ಬಿಬ್ಬ ಹುಡುಗಿಯರು ಜೊತೆಗಿದ್ದರೆ ಸ್ಫೂರ್ತಿ ಸಿಗುತ್ತಿತ್ತು ಎಂದನೊಬ್ಬ ರಸಿಕ. ಹರಟೆ ಸಹಪಾಠಿಗಳತ್ತ ಸರಿಯಿತು. ಮೋಹಿನಿ, ಎಂಥವರನ್ನೂ ಮೋಹದಲ್ಲಿ ಸಿಲುಕಿ ಸುವ ಮೋಹಕತೆ ಹೊಂದಿದವಳು ಎಂದ ಒಬ್ಬ. ಮಾಧುರಿ ನಸುಕಪ್ಪಾದರೂ ನಗುವಿನಲ್ಲಿ ಮಾಧುರ್ಯ ತುಳುಕುತ್ತದೆ ಎಂದ ಇನ್ನೊಬ್ಬ. ನಿರುಪಮಾ ಸುಂದರಿ ಯಾಗಿದ್ದರೂ ಜಂಬದಕೋಳಿ ಎಂದು ಕೆಣಕಿ ಕೈ ಸುಟ್ಟುಕೊಂಡ ಮೂರನೆಯವ ನೆಂದ. ಅದಾರೋ ಹಿಂಬಾಲಿಸುವವರು ಚಪ್ಪಾಳೆ ತಟ್ಟಿ ನಿಲ್ಲುವಂತೆ ವಿನಂತಿಸಿ ಕೊಂಡದ್ದರಿಂದ ಕುಮಾರಿಯರೆಲ್ಲ ಸ್ಮೃತಿಪಟಲದಿಂದ ಮಾಯವಾಗಿಬಿಟ್ಟರು. ನಾವೆಲ್ಲಿ ಹೊರಟಿದ್ದೇವೆ? ಎಂದು ಆಗಂತುಕನು ವಿಚಾರಿಸಿ ತಾನೂ ಅಲ್ಲಿಗೇ ಹೊರ ಟಿದ್ದೇನೆ, ಕಾಡಿನ ಒಳಹಾದಿಯಿಂದ ನುಸುಳಿಕೊಂಡು ಹೋದರೆ ಬಲುಬೇಗ ಮುಟ್ಟ

ಬಹುದೆಂದ. ಅವನ ಮಾತಿನಲ್ಲಿ ವಿಶ್ವಾಸವಿಡದ್ದರಿಂದ ವಾಯುವೇಗದಿಂದ ಮುಂದುವರಿದ. ಅವನು ಎಲ್ಲಿಂದ ಬಂದು ಎಲ್ಲಿಗೆ ಹೋದನೆಂದು ತಿಳಿಯಲೇ ಇಲ್ಲ. ಪಿಶಾಚಿಗಳು ಹಾಗೆ ಬಂದು ಆಮಂತ್ರಿಸುತ್ತವೆ, ಎಂದು ಭೀರು, ಧರ್ಮಿಷ್ಠ ಮಿತ್ರನೊಬ್ಬ ವಿವರಿಸುತ್ತಿದ್ದಾಗ, ಕಾಡಿನಿಂದ ಕೂಗಿ ಕರೆವಂತೆ ಕೇಳಲಾರಂಭಿಸಿತು. ೧೪ ಮುಂದೇನು ಗತಿ ಎಂದು ಪೆಚ್ಚಾಗಿ ನಿಂತಾಗ, ಉಚ್ಚೆಯಿಂದ ವರ್ತುಲ ನಿರ್ಮಿಸಿ, ಕೈಯಲ್ಲಿ ಜನಿವಾರ ಹಿಡಿದು ನಿಂತರೆ ಪಿಶಾಚಿಗೆ ಮೈಮುಟ್ಟುವ ಧೈರ್ಯವೇ ಇರುವದಿಲ್ಲವೆಂದು ಅವನೇ ಸೂಚಿಸಿದ. ಎಲ್ಲರೂ ಅದೇ ರೀತಿಯಲ್ಲಿ ಭಯಗ್ರಸ್ತರಾಗಿ ನಿಂತ ಲೀಲೆ ನೆನೆದಾಗ ಇಂದಿಗೂ ನಮ್ಮ ಮಂಕು ಬುದ್ಧಿಗೆ ನಗು ಬಾರದೇ ಇರುವದಿಲ್ಲ.

ಬಿಸಿಲು ಕಾವೇರುತ್ತಿದ್ದಂತೆ, ಹಸಿವು, ಬಾಯಾರಿಕೆ, ಸೆಕೆಗಳು ಸ್ಪರ್ಧೆಯಿಂದ ಬೆನ್ನಟ್ಟಿಕೊಂಡು ಬಂದವು. ಎದುರಿನ ಮಡುವಿನ ನೀರಿನಿಂದ ಕೈ, ಕಾಲು, ಮುಖಗಳನ್ನು ತೊಳೆದುಕೊಂಡು ಬಾಯಾರಿಕೆಯನ್ನು ನಿವಾರಿಸಿಕೊಂಡದ್ದಾಯಿತು. ಹಸಿವು ಅಸಹನೀಯವಾದಾಗ, ಕಾಡಿನ ಹಣ್ಣು-ಹಂಪಲುಗಳಿಗಾಗಿ ಹುಡುಕಾಡೋಣವೇ ಎನಿಸಿತು. ಆದರೆ ಅಲ್ಲಿರಬಹುದಾದಂತಹ ವಿಷಸರ್ಪ, ವಿಷವೃಕ್ಷ, ವಿಷಕನ್ಯೆಯರಿಗೆ ಬೆದರಿ ಆಚೆ ಈಚೆ ಕಣ್ಣು ಹಾಯಿಸಲು ಕೂಡ ಹೋಗಲಿಲ್ಲ. ಅನತಿ ದೂರದಲ್ಲಿ ನಾಶ್ತಾದ ಆಶ್ವಾಸನೆ ಕೊಟ್ಟವನು ಬರುವದನ್ನು ನೋಡಿ ಸರ್ವರೂ ಅವನನ್ನು ತರಾಟೆಗೆ ತೆಗೆದುಕೊಳ್ಳಬೇಕೆನ್ನುವಾಗಲೇ "ನೀವೇನಾದರೂ ಕಾಡಿನ ಪಾಲಾಗಿರಬಹುದೇ? ಎಂದು ಅಂಜಿ ಹುಡುಕಿಕೊಂಡು ಬಂದೆ. ಬನ್ನಿ, ಬಿಸಿ ದೋಸೆ, ಚಟ್ನಿ ಚಹಾಗಳು ನಿಮ್ಮ ಬರವಿಗಾಗಿ ಕಾದಿವೆ" ಎಂದಾಗ ಈತನೇ ಅಂಗಡಿಯ ಮಾಲಕನೆಂಬ ಗುಟ್ಟು ರಟ್ಟಾಯಿತು. ಬಿದಿರಿನ ಬೆಂಚಿನ ಮೇಲೆ ಕುಳಿತು ದೋಸೆಗಳನ್ನು ಉದರಕ್ಕೆ ಇಳಿಸುತ್ತಿದ್ದಂತೆ, ಹಸಿವು ಇನ್ನಷ್ಟು ಹೆಚ್ಚಿತು. ಆ ಬಡಪಾಯಿಗೆ ಬಂದವರು ಬಕಾಸುರನ ವಂಶಜರು ಎಂದು ಅರಿವಾಗದ್ದರಿಂದ ತಿಂಡಿ-ಚಹಾದ ಕೊರತೆ ಬಿತ್ತು. ನಡು ಬಿಸಿಲಲ್ಲಿ, ನಡು ಕಾಡಿನಲ್ಲಿ ಹೊಟ್ಟೆ ತಂಪಾಗಿಸಿದ್ದಕ್ಕೆ ಅನೇಕ ಕೃತಜ್ಞತೆಗಳನ್ನು ಸಲ್ಲಿಸಿದೆವು. ಈಗ ಹೊಟ್ಟೆ ಭಾರವಾದ್ದರಿಂದ ನಡಿಗೆ ನಿಧಾನವಾಯಿತು. ಊಟಕ್ಕೆ ಮಾವಿನ ಗುಂಡಿಗೆ ಮುಟ್ಟುವದರೊಳಗಾಗಿ

೧೪ ಕೋತಿ ಸಂಸಾರದ ಸದಸ್ಯರು ಗಂಡಾಂತರದಲ್ಲಿ ಸಿಕ್ಕಿಹಾಕಿಕೊಂಡಾಗ, ಮುಖ್ಯಸ್ಥನು ಅವರಿಗೆ ಕೂಗಿ ಈ ರೀತಿ ಎಚ್ಚರಿಕೆ ಕೊಡುತ್ತಾನೆ.

ಕಾಲಿಗೆ ಬಾಸುಂಡೆಗಳು ಎದ್ದಿದ್ದವು. ಯಾವುದೋ ಕಟ್ಟಡದ ಜಗಲಿಗೆ ಬೆನ್ನು ತಾಗಿಸಿದಾಗ ಘೋರ ನಿದ್ರೆ ಎಲ್ಲರನ್ನೂ ಆವರಿಸಿಬಿಟ್ಟಿತ್ತು.

ಕಣ್ಣು ತೆರೆದಾಗ ಸೂರ್ಯದೇವನು ಮುಳುಗುವದರಲ್ಲಿ ಇದ್ದ. ಬ್ರಿಟಿಶ ಬಂಗಲೆಯಿಂದ ಹೊಂಬಣ್ಣದ ಬೆಳಕಿನಲ್ಲಿ ಜಲಧಾರೆ ನೋಡುತ್ತಿದ್ದಂತೆ ರಸಾನುಭವ ವಾಯಿತು. ರಾತ್ರೆಯೆಲ್ಲ ಅಲ್ಲಿಯೇ ಕಳೆಯೋಣವೆಂದು ಅನಿಸಿದರೂ ಅಲ್ಲಿ ವಿದ್ಯುತ್ ಪೂರೈಕೆ ಇರಲಿಲ್ಲ. ೧೫ ಊಟದ ವ್ಯವಸ್ಥೆ ಮಾಡಿರಲಿಲ್ಲ. ಕತ್ತಲಾದ ನಂತರ, ಮೈಸೂರ ಬಂಗ್ಲೆಯತ್ತ ಹೋಗಲು ಬಿಡುವದಿಲ್ಲವೆಂದು ಯಾರೋ ಹೇಳಿದ್ದರಿಂದ, ಮೊದಲು ಶರಾವತಿ ನದಿಯನ್ನು ದಾಟಿಕೊಂಡೆವು. ವರ್ಣಮಯ ವಿದ್ಯುದ್ದೀಪದ ಬೆಳಕಿನಲ್ಲಿ ಜಲಪಾತವನ್ನು ಎಷ್ಟು ಹೊತ್ತು ನೋಡಿದೆವೆಂದು ತಿಳಿಯದು. ಆ ನಂತರ ಊಟ ಸಿಗದೇ ಮತ್ತೆ ಏಕಾದಶಿ ಮಾಡಬೇಕಾದೀತೆಂದು ಯಾರೋ ಎಚ್ಚರಿಸಿದ್ದರಿಂದ ವಿದ್ಯುತ್ ಮಂಡಳಿಯ ಕ್ಯಾಂಟೀನಿಗೆ ಧಾವಿಸಿದೆವು. ಅವನು ಪೂರೈಸಿದ ಪಿಂಡಕ್ಕೆ ಬಳಸುವ ಮುದ್ದೆ, ಅನ್ನ, ಸಾರು, ಹೊಟ್ಟೆಗೆ ರವಾನೆ ಮಾಡಿ ಶಾಲೆಯೊಂದರ ಹೊರ ಜಗಲಿಯಲ್ಲಿ ರಾತ್ರೆಯನ್ನು ಕಳೆದೆವು. ಮರು ಮುಂಜಾನೆ, ಪ್ರಾತರ್ವಿಧಿಗೆ ಊರ ಹೊರಗೆ ಹೋದಾಗ ಅಲ್ಲಿಯ ಕಿರುಜಲಧಾರೆ ನೋಡಿ ಪುಲಕಿತರಾದೆವು. ಹಲ್ಲುಜ್ಜಿ, ಮನಸ್ವಿ ಸ್ನಾನವನ್ನೂ ಮಾಡಿದೆವು. ತಿಂಡಿ ಕಾಫಿ ಹುಡುಕಿಕೊಂಡು ಹೋದಾಗ, ನಮ್ಮಲ್ಲಿಯ ಒಬ್ಬನು, ಚಿಕಿತ್ಸಕ ಬುದ್ಧಿಯುಳ್ಳವನು ಈ ಝರಿ, ಎಲ್ಲೋ ಮೇಲಿನ ಬಚ್ಚಲು ಕಕ್ಕಸದಿಂದ ಉಗಮವಾಗುವಂತೆ ಇದೆಯಲ್ಲ! ಎಂದು ರಾಗವೆಳೆದ. ನಾವೆಲ್ಲ ಅವನ ಬಾಯಿ ಮುಚ್ಚಿಸಿದರೂ

---

೧೫ ಅಂದು ಶರಾವತಿ ನದಿ, ಬ್ರಿಟಿಶರ ಆಧೀನದಲ್ಲಿದ್ದ ಮುಂಬಯಿ ಪ್ರಾಂತವನ್ನು ಮಹಾರಾಜರ ಮೈಸೂರ ಸಂಸ್ಥಾನದಿಂದ ಬೇರ್ಪಡಿಸುತ್ತಿತ್ತು. ವಿಶ್ವೇಶ್ವರಯ್ಯನವರ ಮುಂದಾಲೋಚನೆಯಿಂದಾಗಿ ಮೈಸೂರ ಬಂಗಲೆ ವಿದ್ಯುತ್ ದೀಪಗಳಿಂದ ಝಘ ಝಘಿಸುತ್ತಿದ್ದರೂ ಬ್ರಿಟಿಶರದು ಘೋರ ಅಂಧಕಾರದಲ್ಲಿ ಮುಳುಗಿತ್ತು. ನದಿಗೆ ಸೇತುವೆ ಇಲ್ಲದ್ದರಿಂದ, ಹರಗೋಲಿಗೆ ಹೋಲುವಂತಹ ನಾವೆಯನ್ನು ಬಳಸಬೇಕಾಗಿತ್ತು. ಉತ್ತರ ದಂಡೆಯ ಮೇಲಿದ್ದಾಗ ಅಮವಾಸ್ಯೆಯ ದಿನ ನೆನಪಿಗೆ ಬಂದರೆ ನದಿ ದಾಟಿದಾಕ್ಷಣ ಹುಣ್ಣಿಮೆಯ ರಾತ್ರೆ ಎನಿಸಿತು.

ಅವನ ಸಂಶೋಧನೆ ಅಕ್ಷರಶಃ ನಿಜವೆಂದು ಅರಿತಾಗ, ಪ್ರತಿಯೊಬ್ಬರೂ ತಮ್ಮ ಅಂಗಾಂಗಗಳಿಗೆ ಯಾವ ದುರ್ನಾತ ಬರುತ್ತದೆಂದು ಪರೀಕ್ಷಿಸಿ ಮೂಗು ಹಿಡಿದು ಕೊಂಡರು. ಏಕಪ್ರಕಾರವಾಗಿ "ಥೂ!" ನಡೆದೇ ಇತ್ತು. ಕಣಿವೆಗೆ ಇಳಿದು ಜಲ ಪಾತದ ಮಡುವಿನಲ್ಲಿ ಶುಭ್ರವಾಗಿ ಸ್ನಾನಮಾಡುವದು ಒಂದೇ ಉಪಾಯವೆಂದು ಸರ್ವಾನುಮತದಿಂದ ಠರಾವಾಯಿತು.

ಕಾಲುಗಳು ಯಾಂತ್ರಿಕವಾಗಿ ಮೆಟ್ಟಿಲು ಇಳಿಯುತ್ತಿದ್ದಂತೆ, ಪ್ರತಿಯೊಬ್ಬರೂ ಝರಿ ಹೇಗೆ ಮೋಸಮಾಡಿತು, ಎಂದು ರಸಿಕತೆಯಿಂದ ವರ್ಣಿಸಲಾರಂಭಿಸಿದರು. ಎದುರಿಗೆ ಹುಡುಗ-ಹುಡುಗಿಯರ ತಂಡವೊಂದು ಕೆಲೆಯುತ್ತ ಹೊರಟಿದ್ದರಿಂದ ಬಾಯಿ ವಿಶ್ರಾಂತಿ ಪಡೆದು, ಕಣ್ಣುಗಳು ಚುರುಕಾದವು. ಅವರೆಲ್ಲ ಪ್ರಶಸ್ತವಾದ ಬಂಡೆಯೊಂದನ್ನು ಆರಿಸಿ, ಪವಡಿಸಿ, ಪಂತಿಯನ್ನು ಪ್ರಾರಂಭಿಸಿದ್ದರಿಂದ ನಾವು ಮುಂದೆ ಹಾದು ಹೋದೆವು. ಗಾಳಿ ಬೀಸಿದಾಗೊಮ್ಮೆ ಜಲಪಾತದಿಂದ ಹೊರ ಡುವ ಮಂಜು ಕಣಿವೆಯಲ್ಲೆಲ್ಲ ಹರಡಿಕೊಂಡು, ಬಟ್ಟೆಗಳನ್ನು ಒದ್ದೆಮಾಡುವದ ರಿಂದ ತೊಟ್ಟ ಬಟ್ಟೆಗಳನ್ನು ದೂರದಲ್ಲಿಟ್ಟು ಸ್ನಾನಕ್ಕೆ ಇಳಿದೆವು. ಜಾರುವ ಬಂಡೆಗಳ ಮೇಲೆ ಇನ್ನಷ್ಟು ಜಾರುತ್ತ ಆಳವಿಲ್ಲದಲ್ಲಿ ಮನಸ್ವಿ ಜಲಕ್ರೀಡೆ ನಡೆಸಿದೆವು. ಆಗೊಮ್ಮೆ ಈಗೊಮ್ಮೆ ಸೂರ್ಯ ಕಿರಣಗಳು ನೀರನ್ನು ಹೊಕ್ಕಾಗ ಸಪ್ತವರ್ಣಗಳು ಪ್ರತ್ಯಕ್ಷವಾಗುತ್ತಿದ್ದವು. ಮುಂಜಾನೆ ನಾಶ್ತಾ ಕೂಡ ಮಾಡಿಲ್ಲ ಎಂದು ಕೊನೆ ಗೊಮ್ಮೆ ಹಸಿದ ಹೊಟ್ಟೆ. ಅರಚಿಕೊಳ್ಳಲಾರಂಭಿಸಿದಾಗ, ಎದ್ದು ಬಂದು ಬಟ್ಟೆ ಗಾಗಿ ಹುಡುಕಾಡಿದರೆ ಯಾರ ಬಟ್ಟೆಯೂ ಸಿಗದು! ಏನೂ ಮಾಡಲು ತೋಚದೇ ತೋಯ್ದ ಬಟ್ಟೆಗಳ ಮೇಲೆಯೇ, ಮೇಲೆ ಹತ್ತಿ ಬಂದೆವು. ಗರಿಗರಿಯಾದ ಸೀರೆ ಉಟ್ಟು ಕಪ್ಪು ಚಶ್ಮಾ ಧರಿಸಿದ ಹುಡುಗಿಯರ ತಂಡ ನಮ್ಮ ನಿಜಸ್ವರೂಪ ನೋಡಿ ಗೊಳ್ಳೆಂದು ನಕ್ಕಿತು. ನಗು, ಕಿಲಿಕಿಲಿಗೆ ಪರಿವರ್ತನೆ ಹೊಂದಿ ಕೊನೆಗೊಮ್ಮೆ ನಿಂತಾಗ, ಮರಾರಿಯಲ್ಲಿ, ನಿಮ್ಮ ಬಟ್ಟೆಗಳನ್ನು ಗಿಡಗಂಟಿಗಳಲ್ಲಿ ಅಡಗಿಸಿಟ್ಟಿದ್ದೇವೆ, ಹುಡುಕಿಕೊಳ್ಳಿ ಎಂದಿತು ಗೋಪಿಯರ ತಂಡ. ಇದೆಲ್ಲಿಯ ಕಲಿಯುಗದ ಕೃಷ್ಣ-ಗೋಪರ ವಸ್ತ್ರಾಪಹರಣ! ಎಂದು ಅವರನ್ನು ಮನಸ್ವಿ ಶಪಿಸುತ್ತ ಇನ್ನೊಮ್ಮೆ ಕಣಿವೆ ಇಳಿದು, ಬಟ್ಟೆಗಳನ್ನು ಹುಡುಕಿ ಧರಿಸಿ, ಮೇಲೇರಿ ಬರಬೇಕಾಯಿತು. ಇಷ್ಟು ವರ್ಷ ಗಳ ನಂತರವೂ ಅವರು ಹೀಗೇಕೆ ಮಾಡಿದರು? ಎಂದು ತಿಳಿಯದು. ಅವರು ಸ್ನಾನಕ್ಕೆ ಇಳಿಯದ್ದರಿಂದ ಗೋಪಿಕಾ ವಸ್ತ್ರಹರಣ ಮಾಡುವದು ಸಾಧ್ಯವಿರಲಿಲ್ಲ.

ಬದಲಾಗಿ ನಮಗೆಲ್ಲ ಅವಮಾನ ಮಾಡಿದ ಈ ದ್ರೌಪದಿಗಳ ವಸ್ತ್ರಾಪಹರಣ ಮಾಡು ವಂತಿದ್ದರೆ! ಎಂಬ ಕಲ್ಪನೆಯಿಂದಲೇ ನಮಗೆಲ್ಲ ರೋಮಾಂಚವಾಗಿತ್ತು. ಅಲ್ಲಿ ಇಲ್ಲಿ ಸುತ್ತಾಡಿ ಒಂದು ವಾರದ ನಂತರ ಹಿಂದಿರುಗಿ ಬಂದಾಗ ತಲಾ ಹದಿನೇಳು ರೂಪಾಯಿಗಳಷ್ಟು ಮಾತ್ರ ಖರ್ಚು ಬಂದಿತ್ತು. ಅಂದು ತೆಗೆದ ಛಾಯಾಚಿತ್ರಗಳನ್ನು ಇಂದಿಗೂ ಸಂರಕ್ಷಿಸಿಕೊಂಡು ಬಂದಿದ್ದೇನೆ.

ಈ ಯುವ ಸಾಹಸದ ಘಟನೆಯನ್ನು ನನ್ನ ನೆನಪಿನಂಗಳದಿಂದ ಆಯ್ದು ನಿನ್ನ ಹುಟ್ಟು ಹಬ್ಬಕ್ಕಾಗಿ ಬರೆದಿದ್ದೇನೆ. ಹೊಟೇಲಿಗೆ ಕರೆದೊಯ್ಯುವದು, ಚಲಚ್ಚಿತ್ರ ತೋರಿಸುವದು, ಸೀರೆ ಕೊಡಿಸುವದು ಮುಂತಾದವುಗಳಲ್ಲಿ ನನಗೆ ವಿಶ್ವಾಸವಿಲ್ಲ. ಇಂಥ ರಸಭರಿತ ಸ್ವಾನುಭವದ ಪತ್ರ ಬರೆಯುವಾಗ ಈಗಲೂ ಪುಳಕಿತನಾಗುತ್ತೇನೆ. ಓದುವಾಗ ನಿನಗೂ ಅಷ್ಟು ಖುಷಿಯಾದರೆ ನಮ್ಮದು ಅನುರೂಪ ಜೋಡಿಯೆಂದುಕೊಳ್ಳುವೆ.

○

೧೩. ಅತಿಥಿಗಳು

ಜೊಬನೇರ, ೭-೨-೧೯೬೮

ಭಾರತೀಯ ಸಂಸ್ಕೃತಿಯಲ್ಲಿ, 'ಅತಿಥಿ ದೇವೋಭವ' ಎಂಬ ಮಾತನ್ನು ವೇದ ವಾಕ್ಯವೆಂದು ಪಾಲಿಸುವ ಕಾಲವೊಂದಿತ್ತು, ನಿಜ. ಸಂಪರ್ಕ, ಸಾರಿಗೆಯ ಸೌಕರ್ಯ ಗಳು ಅತಿ ವಿರಳವಾಗಿದ್ದ ದಿನಗಳಲ್ಲಿ ಆಪ್ತೇಷ್ಟರನ್ನು ಕಾಣಲು ಹಂಬಲಿಸುವದು ಸ್ವಾಭಾವಿಕವಾಗಿತ್ತು. ಅಂತೆಯೇ ನೆಂಟಸ್ತಿಕೆ, ಮದುವೆ-ಮುಂಜಿಗಳಲ್ಲಿ ಪಾಲು ಗೊಳ್ಳಲು, ನೆಂಟರಲ್ಲಿ ಪಯಣ ಬೆಳಸಿ, ಎಂಟು-ಹತ್ತು ದಿನ ಊಟ-ಉಪಚಾರ ಗಳನ್ನು ಸ್ವೀಕರಿಸುವದು ತೀರ ಸಾಮಾನ್ಯವಾಗಿತ್ತು. ಈ ಭೇಟಿಗಳು ಸಕಲರಿಗೂ ನವಚೇತನ ಕೊಡುವ ಸದವಕಾಶಗಳಾಗಿದ್ದವು. ಮನೆಯ ಯಜಮಾನರು ಅತಿಥಿ ಗಳನ್ನು ಆಮಂತ್ರಿಸಿ ಸ್ವಾಗತಿಸುವ ಕಾಲ ಅದಾಗಿತ್ತು. ಬಹುಕಾಲ ತಮ್ಮಲ್ಲಿ ಯಾರೂ ಬಾರದಿದ್ದರೆ ಗೃಹಸ್ಥ-ಗೃಹಿಣಿಯರು ನೊಂದುಕೊಳ್ಳುತ್ತಿದ್ದರು. ಅಂದಿನ ಜೀವನ ಹಾಯಿದೋಣಿಯಾಗಿದ್ದರೆ, ಇಂದಿನದು ಯಂತ್ರಚಾಲಿತ ನೌಕೆಯಾಗಿದೆ. ಯಾರಿಗೂ ಯಾವುದಕ್ಕೂ ಬಿಡುವೇ ಸಿಗುತ್ತಿಲ್ಲ. ಆದರೆ ಅತಿಥಿಗಳು ಮಾತ್ರ ಆತಿಥ್ಯದ ಅಧಿಕಾರ ಬಿಟ್ಟುಕೊಡಲು ತಯಾರಿಲ್ಲ.

ಬಂದವರಿಗಾಗಿ ಕಾಕಿಯುವರು ದುಡಿಯುವದನ್ನು ನೋಡಿದರೆ ಕರುಳು ಕಿವುಚಿ ದಂತಾಗುತ್ತದೆ. ನಿಮ್ಮನ್ನು ನೋಡಿ ಹೋಗೋಣವೆಂದು ಬಂದೆ, ಎಂದ ಒಬ್ಬ. ಹೊನ್ನಾವರದ ಸೊಗಸಾದ ಮೀನಿನ ನೆನಪಾಯಿತು! ಎನ್ನುವನು ಇನ್ನೊಬ್ಬ. ವರನ ಹುಡುಕಾಟಕ್ಕಾಗಿ ಬರಲೇಬೇಕಾಯಿತು ಎಂಬ ವಾದವನ್ನು ಹೂಡುವನು ಮಗುದೊಬ್ಬನು. ಅದಾಗಲೇ ಅಡಿಗೆ ಮುಗಿಸಿ ವಿಶ್ರಾಂತಿಸುತ್ತಿದ್ದ ವರು, ಎದ್ದು ಹೋಗಿ ತಿರುಗಿ ಒಲೆ ಹೊತ್ತಿಸಬೇಕು. ಬರೇ ಬಸಳೆ, ಹರವೆ ಸೊಪ್ಪಿನ ವ್ಯಂಜನಗಳಿದ್ದರೆ, ಹೋಳೀ ಬಾಳೆಕಾಯಿ ತರಲು ಯಾರನ್ನಾದರೂ ಓಡಿಸ ಬೇಕು. ಜೊತೆಯಲ್ಲಿ ಪರಿಚಿತರನ್ನು ಎಳೆದುಕೊಂಡು ಬರುವವರಿದ್ದಂತೆ, ಮಧ್ಯ ರಾತ್ರೆಯಲ್ಲಿ ಹಸಿದ ಹೊಟ್ಟೆ ಹೊತ್ತು ಬರುವವರೂ ಇದ್ದಾರೆ. ಈರುಳ್ಳಿ-

ಬೆಳ್ಳುಳ್ಳಿ ತಿನ್ನದವರೂ ಒಮ್ಮೊಮ್ಮೆ ಪ್ರತ್ಯಕ್ಷರಾದಾಗ ಯಾವ ಅಡಿಗೆ ಮಾಡುವ ದೆಂದು ತೋಚದು. ಕೋತಂಬರಿ ಸೊಪ್ಪಿನ ದರ್ಶನ ಮಾತ್ರದಿಂದಲೇ ವಾಕರಿಕೆ ತೆಗೆಯುವವರನ್ನು ಕಂಡರೆ ಜಿಗುಪ್ಸೆ ಆಗದೇ ಇದ್ದೀತೇ? ಶನಿವಾರ, ಸೋಮ ವಾರ, ಏಕಾದಶಿಗಳನ್ನು ಪಾಲಿಸುವವರಿಗಾಗಿ ಚಪಾತಿ, ಪಲ್ಯ ಹಣ್ಣು-ಹಂಪಲ ಗಳ ಫಳಾರ ಬೇರೆ ಪೂರೈಸಬೇಕು. ಒಮ್ಮೆ ದೂರದ ಸಂಬಂಧಿಯೊಬ್ಬರು ಅಪೇಳಿಯಲ್ಲಿ ಬಂದಿಳಿದರು. ಮುಂಜಾನೆ ಧರಿಸಿದ ಹ್ಯಾಟನ್ನು ಮಲಗುವಾಗ ಮಾತ್ರ ತೆಗೆದಿರಿಸುವ ಅವರನ್ನು ಮಕ್ಕಳೆಲ್ಲ 'ಹ್ಯಾಟ್ ಮಾಮ' ನೆಂದೇ ಗುರುತಿಸು ತ್ತಿದ್ದರು. ಹೊತ್ತಿಲ್ಲದ ಹೊತ್ತಿನಲ್ಲಿ ಬಂದವರಿಗೆ ಏನು ಅಡಿಗೆ ಮಾಡುವದೆಂದು ತಲೆ ಕೆರೆದುಕೊಳ್ಳುತ್ತಿದ್ದಾಗ, ತಾವು ರಾತ್ರಿಯೂಟ ಬಿಟ್ಟು ಹದಿನೆಂಟು ವರ್ಷ ಗಳಾದವು! ಎಂದು ಉದ್ಗರಿಸುವ ಔದಾರ್ಯ ತೋರಿದರು. ಹಾಲು ಸ್ವೀಕರಿಸ ಬಹುದಲ್ಲ ಎಂದಾಗ ಚಪಾತಿ ಪಲ್ಯ ನಡೆಯುತ್ತದೆಂದರು. ನಾಲ್ಕಾರು ಚಪಾತಿ-ಪಲ್ಯ, ಚಟ್ನಿ ಮಾಡಿ ಮೊಸರು ಒದಗಿಸಿ, ಊಟ ಬಿಟ್ಟ ಅತಿಥಿಗಳನ್ನು ಸತ್ಕರಿಸ ಬೇಕಾಯಿತು.

ಕೆಲವು ಅತಿಥಿಗಳು ಇನ್ನೂ ವಿಚಿತ್ರ. ಗೃಹಿಣಿಗೆ ತೊಂದರೆ ಬೇಡವೆಂದಲೋ, ತಾಳ್ಮೆಯ ಅಭಾವದಿಂದಲೋ ತಾವೇ ಬಡಿಸಿಕೊಂಡು ಉಣ್ಣಲು ಪ್ರಾರಂಭಿಸು ತ್ತಾರೆ. ಹುರಿದ ಮೀನು, ತಾಳ್ಳು, ಚಟ್ನಿಗಳನ್ನು ಇತರರಿಗೆ ಇಡದೇ ಮುಗಿಸುವ ವರಿದ್ದಾರೆ. ಇನ್ನೂ ಕೆಲವರು ತಾವು ಪುಕ್ಕಟೆಯಾಗಿ ಊಟಮಾಡುವದಿಲ್ಲವೆಂದು ತೋರ್ಪಡಿಸಲು ಎಂಟಾಣೆಯ ಕೆಸುವಿನ ಗಡ್ಡೆ ಅಥವಾ ಮೀನು ಮರಿಯನ್ನು ಹೊತ್ತು ತರುತ್ತಾರೆ. ಅದನ್ನು ಆಗಲೇ ಮಾಡಲು ಪ್ರಾರಂಭಿಸುವದು ಒಂದು ಸಮಸ್ಯೆಯಾಗಿಬಿಡುತ್ತದೆ. ಹಲವರಿಗೆ ಇತರರ ದುಡಿತದ ಪ್ರಮಾಣದ ಕಲ್ಪನೆ ಬರುವಂತೆ ಕಾಣುವದಿಲ್ಲ. ಬಂದಾಗಲೆಲ್ಲ ಊರಲ್ಲಿರುವ ನೆಂಟರನ್ನು ಭೇಟಿ ಮಾಡಲೇಬೇಕೆಂಬ ಹಂಬಲ ಅವರಿಗೆ. ಪಾಚ್ಚಿ, ಚಿಕ್ಕಿ, ಮಾಯಿ, ಮಾವಶಿ ಎಂದು ಊರೆಲ್ಲ ಅಲೆಯುತ್ತಾರೆ. ಸಕಲರಲ್ಲಿ ಊಟ ಅಥವ ಚಹದ ಆಮಂತ್ರಣ ಸ್ವೀಕರಿಸಬೇಕು. ಅತ್ಯುತ್ತಮ ಅಡಿಗೆಯಿರುವ ಮನೆಗೆ ದಾಳಿಯಿಟ್ಟು, ಇಳಿದುಕೊಂಡ ಮನೆಯಲ್ಲಿ ತಿಳಿಸದೇ, ಅವರು ಉಳಿದ ಹೆಚ್ಚಿನ ಅಡಿಗೆಯನ್ನು ಶಾಪ ಹಾಕುತ್ತ ಮುಗಿಸಬೇಕು. ಇಲ್ಲವೆ ಕೆಲಸದಾಕೆಗೆ ಕೊಟ್ಟು ಕೈ ತೊಳೆದುಕೊಳ್ಳಬೇಕು. ಇನ್ನೂ ಒಂದು ವಿಶಿಷ್ಟ ಅತಿಥಿಗಳ ಗುಂಪು ಇದೆ. ಉಚ್ಚ ಅಧಿಕಾರಿಗಳೆಂದು

ಮರೆಯುವವರು. ತಾವು ಎಷ್ಟು ಜನ, ಯಾವ ಹೊತ್ತಿಗೆ ಬರುವವರಿದ್ದೇವೆ. ಯಾವ ಅಡಿಗೆ ಇಷ್ಟ? ಎಂದೆಲ್ಲ ಪತ್ರ ಮುಖೇನ ತಿಳಿಸಿ ನಂತರ ಬಾರದವರು. ಒಂದು ಕ್ಷಮಾ ಪತ್ರವನ್ನಾದರೂ ಬರೆಯಬೇಕೆಂದು ಈ ಅಲ್ಪ ಮತಿಗಳಿಗೆ ಹೇಗೆ ತೋರುವದಿಲ್ಲವೆಂಬುದು ಆಶ್ಚರ್ಯವಲ್ಲವೇ?

ಧಿಮಾಕಿನ ಅತಿಥಿಯೋರ್ವರು ತಮಗೆ ನಸುಕಿನಲ್ಲೇ ಚಹಾ ಬೇಕೆಂದು ಬಜಾಯಿಸಿದರೂ, ಬೆಳಗಿನ ಚಹ-ತಿಂಡಿ, ಗಂಜಿಯೂಟದ ಸಮಯದಲ್ಲೂ ಏಳದೇ ಮಧ್ಯಾಹ್ನದ ಊಟಕ್ಕೆ ಎಬ್ಬಿಸಬೇಕಾದರೆ ಸಾಕು-ಬೇಕಾಗುತ್ತಿತ್ತು. ವ್ಯಾಪಾರಿ ಸೇಟರ ಕುಟುಂಬವೊಂದು ಸ್ವಂತ ಕಾರಿನಲ್ಲಿ ತಿರುಪತಿ ಯಾತ್ರೆ ಮುಗಿಸಿ ಆ ವೇಳೆಯಲ್ಲಿ ಬಂದಿಳಿದರು. ಶ್ರಮ ವಹಿಸಿ, ತಯಾರಿಸಿದ ಅಡಿಗೆಗೆ ಅನ್ಯಾಯ ಮಾಡಿ, ಚಲಚ್ಚಿತ್ರ ನೋಡಲು ಹೊರಟಿತು. ಬಾಣಂತಿಯೋರ್ವಳು ಒತ್ತಾಯದಿಂದ ತನ್ನ ಹಸುಳೆಯನ್ನು ಮಲಗಿಸಿ, ಅವರನ್ನು ಸೇರಿಕೊಂಡಳು. ಅವರೆಲ್ಲ ಚಲಚ್ಚಿತ್ರ ಮಂದಿರ ಸೇರುವ ಮೊದಲೇ ಮಗು ಎಚ್ಚೆತ್ತು ರೊಂಯ್! ಏಕನಾದ ಪ್ರಾರಂಭಿಸಿತು. ಹಾಲು ಕುಡಿಸಿದ್ದಾಯಿತು. ಹೊತ್ತು ತಿರುಗಾಡಿದ್ದಾಯಿತು. ತೊಟ್ಟಿಲು ತೂಗಿದ್ದಾಯಿತು. ಆದರೆ ಅಳು ನಿಲ್ಲದಾದಾಗ, ಪ್ರಸಂಗಾವಧಾನ ಬಳಸಿ, ಅತ್ಯಲ್ಪ ಪ್ರಮಾಣದಲ್ಲಿ ನಿದ್ರಾಮಾತ್ರೆ ಪುಡಿ ಸೇರಿಸಿ ಉದರಕ್ಕೆ ಕಳಿಸಿದಾಗ ಶಿಲಾ ವಿಗ್ರಹದಂತೆ ಮಗು ಗಾಢನಿದ್ರೆಯಲ್ಲಿ ಮೈಮರೆತಿತು. ನಡುರಾತ್ರಿಯ ನಂತರ ಹಿಂದಿರುಗಿದ ತಾಯಿ, ಮಗುವಿನ ಸಭ್ಯತೆಯನ್ನು ಹೊಗಳಿ ಹೊಗಳಿ ಮುದ್ದಿಸಿದಾಗ ಮನೆಯವರೆಲ್ಲ ಮನಸ್ವಿ ನಗದೇ ಇರಲಿಲ್ಲ. ಮುಂಬಯಿಯ ಅತಿಥಿಗಳ ವೈಶಿಷ್ಟ್ಯವೆಂದರೆ ಮಕ್ಕಳಿಗೆ ಶಾಲೆ-ಕಾಲೇಜುಗಳಿಗೆ ರಜೆ, ಊರಿನ ಜಾತ್ರೆ ಎಂದೆಲ್ಲ ನೆಪ ಮಾಡಿ ಒಂದರಿಂದ ನಾಲ್ಕು ವಾರಗಳ ಆತಿಥ್ಯವನ್ನು ಯಥೇಷ್ಟವಾಗಿ ಸ್ವೀಕರಿಸಿ ಹಿಂದಿರುಗುವಾಗ, ಮುಂಬೈ ಮಹಾನಗರಕ್ಕೆ ಬಂದಾಗ ಫೋನ್ ಮಾಡಿ ರವಿವಾರ ಮಧ್ಯಾಹ್ನ ಚಹಕ್ಕೆ ಬನ್ನಿ ಎಂದು ಆಮಂತ್ರಿಸುವರು!

ಏಕ ಪ್ರಕಾರವಾಗಿ ಜೈಪುರಿಗೆ ಬರುವ ಅತಿಥಿಗಳಿಂದ ಜಿಗುಪ್ಸೆಯಾಗಿದೆ. ನಮ್ಮದು ಹೊಸ ಸಂಸಾರ. ಮಿಕ್ಸಿ, ಗ್ರ್ಯಾಂಡರ ರೆಫ್ರಿಜಿರೇಟರಗಳಂತಹ

ಅತ್ಯಾಧುನಿಕ ಸಲಕರಣೆಗಳು ಇಲ್ಲ.[೧೬] ಬತ್ತಿ ಸ್ಟೋವಿನ ಮೇಲೆ ಸ್ನಾನಕ್ಕೆ ನೀರು, ನಾಶ್ತಾ, ಅಡಿಗೆ ಎಲ್ಲ ಆಗಬೇಕು. ಚಿಮಣಿ ಎಣ್ಣೆಯ ಅಭಾವ ಬೇರೆ. ನಾನಿರು ವದು ಮೂವತ್ತೈದು ಕಿಲೋಮೀಟರ ದೂರದ ಜೊಬನೇರಿನಲ್ಲಿ. ನೀನು ಆಕಾಶ ವಾಣಿಯ ಕೆಲಸದಿಂದಾಗಿ ದಿನದ ಹೆಚ್ಚಿನ ವೇಳೆ ಅಲ್ಲಿ ಕಳೆಯಬೇಕು. ಪುಟ್ಟ ಮಗುವಿನತ್ತ ಲಕ್ಷ್ಯ ಪೂರೈಸಬೇಕು. ಇಷ್ಟಿದ್ದೂ ಬಂದವರನ್ನು ಕರೆತರಲು ಜೋಬ ನೇರದಿಂದ ಬರಬೇಕು. ಜೈಪುರ–ಆಮೇರಗಳಲ್ಲಿ ಸುತ್ತಾಡಿಸಬೇಕು. ನೀನು ಅಡಿಗೆಯವಳಾಗಿ, ಹೊರ ಕೆಲಸದವಳಾಗಿ ದುಡಿಯಬೇಕು, ಎಂದು ಅಪೇಕ್ಷಿಸು ವದು ಅಕ್ಷಮ್ಯವಲ್ಲವೇ? ಉಳಿದವರು ಇಂಥ ಪ್ರಸಂಗಗಳಲ್ಲಿ ಹೇಗೆ ಪ್ರತಿಕ್ರಿಯಿ ಸುತ್ತಿದ್ದರೋ ಅರಿಯೆ. ಆದರೆ ನಿನ್ನವನು ಇನ್ನಿತರರಿಗಿಂತ ಬೇರೆಯಲ್ಲವೇ? ಅಂತೆಯೇ ಅನಪೇಕ್ಷಿತ ಅತಿಥಿಗಳ ಬಗ್ಗೆ ಒಂದು ನಿರ್ಧಾರ ಕೈಕೊಂಡಿದ್ದೇನೆ. ಹೊಟೇಲ ಬಾಡಿಗೆ, ತಿಂಡಿ–ತೀರ್ಥಗಳ ಖರ್ಚನ್ನು ಉಳಿಸುವವರಿಂದ ದೂರವೇ ಇರುವದು. ಜಬರ್ದಸ್ತಿ ಬರುವವರನ್ನು ಹೇಗೆ ನಿಯಂತ್ರಿಸುವದು ಎಂಬುದು ಸಮಸ್ಯೆಯಲ್ಲವೇ? ವಿಕಾಸನನ್ನು ಎತ್ತಿಕೊಂಡು ಜೊಬನೇರಿಗೆ ಬಂದು ಬಿಡು. ಎದೆ ಗಾರಿಕೆ ಇದ್ದ ಅತಿಥಿಗಳು ಇಲ್ಲಿ ಬರಲಿ. ಕೊಳಕಾದ ನೀರು, ಸೂಕರ ನಿಯಂತ್ರಿತ ಸಂಡಾಸಗಳ, ಆಧುನಿಕತೆ ಸೋಂಕದ ಈ ಹಳ್ಳಿ ನೋಡಿ ಮರುಪ್ರಯಾಣ ಕೈಕೊಳ್ಳದೇ ಇರರು!

ಮೊದಲಿನಿಂದಲೂ ನಾನು ಏಕಾಂತಪ್ರಿಯ. ಕಲ್ಪನಾಲೋಕದಲ್ಲಿ ವಿಹರಿಸ ಲಾರಂಭಿಸಿದೇನೆಂದರೆ ಎಲ್ಲವನ್ನೂ ಮರೆಯುತ್ತೇನೆ. ಆ ಲೋಕದಲ್ಲಿ ದ್ವೇಷ, ಅಸೂಯೆ, ಬಡತನ, ನರಳುವಿಕೆಗಳಿಗೆ ಅವಕಾಶವೇ ಇಲ್ಲ. ಯಾವ ಐಷಾರಾಮ- ಸಂಪತ್ತುಗಳು ಇಲ್ಲದಿದ್ದರೂ ಚಿಂತೆಯಿಲ್ಲ. ಮನಸ್ಸು ಪ್ರಫುಲ್ಲವಾಗುವಂತಹ ವಾತಾವರಣ ಬೇಕೇ ಬೇಕು. ಅಲ್ಲಿ ನಾನೇ ರಾಜ, ನೀನೇ ರಾಣಿ, ವಿಕಾಸನು ರಾಜಕುಮಾರ. ಇಂತಹ ಜೀವನ ಅಪೇಕ್ಷಿಸುವವನಿಗೆ ಅತಿಥಿಗಳ ಆಗಮನದಿಂದಾ

೧೬ ನೋಡಿ: ತಳುಕಿನ ವೆಂಕಣ್ಣಯ್ಯನವರ ಸ್ಮಾರಕ ಗ್ರಂಥಮಾಲೆ ಮೈಸೂರು ೧೯೮೭ರಲ್ಲಿ ಪ್ರಕಟಿತ 'ಸಂಸಾರದಲ್ಲಿ ಸ್ವಾರಸ್ಯ'ದ ಪ್ರಥಮ ಅಧ್ಯಾಯ. ಇವರು ಹೀಗೇನೇ!

ಗುವ ಜಂಜಡ ಅಸಹನೀಯವಾಗುವದರಲ್ಲಿ ಆಶ್ಚರ್ಯವಿಲ್ಲ. ಅವರ ಸೇವೆಯಲ್ಲಿ ಮಗುವನ್ನೆತ್ತಿ ಮುದ್ದಾಡುವಂತಿಲ್ಲ. ಪತ್ನಿಯೊಡನೆ ವಿಚಾರ-ವಿಮರ್ಶೆ ಮಾಡುವಂತಿಲ್ಲ. ಅಂತೆಯೇ ನಿನಗೂ ಈ ವಿಚಾರಗಳು ಒಪ್ಪಿಗೆಯಾದರೆ ಹೆಚ್ಚಿನ ಅತಿಥಿಗಳನ್ನು ದೂರವೇ ಇಟ್ಟು ಅವರಿಂದ ಆಗುವ ವೇಳೆಯ ಉಳಿತಾಯವನ್ನು ಓದು-ಬರವಣಿಗೆ, ಛಾಯಾಗ್ರಹಣ-ಚಿತ್ರಗಾರಿಕೆಯಲ್ಲಿ ತೊಡಗಿಸೋಣ, ಆಗದೇ?

○

೧೪. ಸತ್ವ ಪರೀಕ್ಷೆ

ಜೊಬನೇರ, ೧೦-೭-೧೯೬೮

ವಿದ್ಯಾರ್ಥಿಗಳ ಮಾಸಿಕ, ವಾರ್ಷಿಕ ಪರೀಕ್ಷೆಗಳನ್ನು ನಡೆಸಿ, ಯೋಗ್ಯತಾನುಸಾರವಾಗಿ ಗುಣ ನೀಡುತ್ತಿದ್ದವನಿಗೆ ಈಗ ಜೀವನದ ಪರೀಕ್ಷಾ ಕಾಲ ಬಂದಿದೆ, ಎನಿಸುತ್ತದೆ. ವಿದೇಶದಲ್ಲಿದ್ದ ಭಾರತೀಯರಿಗೆ ಸ್ವದೇಶಕ್ಕೆ ಬರುವಂತೆ ಮಾಡಲು ಭಾರತ ಸರಕಾರ ಹಾಕಿಕೊಂಡ ಯೋಜನೆಯಂತೆ ಪೂಲ್ ಆಫೀಸರ್ ಎಂಬ ದೊಡ್ಡ ಶಿರೋನಾಮೆ ಕೊಟ್ಟು ಸಣ್ಣ ಸಂಬಳದ ಮೇಲೆ ನನ್ನ ಸೇವೆಯನ್ನು ರಾಜಸ್ಥಾನದ ಕೃಷಿ ವಿಶ್ವವಿದ್ಯಾಲಯಕ್ಕೆ ಕೊಡಮಾಡಿತ್ತಲ್ಲವೇ? ಅರಣ್ಯ ಕಾಲೇಜ, ಡೆಹರಾಡೂನಿಗೆ ನನ್ನ ವರ್ಗಾವಣೆ ಮಾಡುವದಾಗಿ ಪೂಲ್ ಅಧಿಕಾರಿಗಳು ಹೇಳಿದಾಗ, ತಮ್ಮಲ್ಲಿಯೇ ಖಾಲಿ ಇರುವ ರೀಡರ್ ಜಾಗೆಗೆ ನೇಮಿಸಿಕೊಳ್ಳುವದಾಗಿ ವಿಶ್ವವಿದ್ಯಾಲಯದವರು ತಿಳಿಸಿದ್ದರಿಂದ ಇಲ್ಲೇ ಮುಂದರಿಯಲು ಅವಕಾಶ ಮಾಡಿಕೊಟ್ಟರು. ಇಂದಿನ ದಿನಗಳಲ್ಲಿ ವಿಶ್ವವಿದ್ಯಾಲಯದಲ್ಲಿ ವಿಪರೀತ ರಾಜಕಾರಣದಿಂದಾಗಿ, ಸ್ಥಳೀಯ ರಜಪೂತರು ಮತ್ತು ಉತ್ತರ ಪ್ರದೇಶದಿಂದ ವಲಸೆ ಬಂದು ಇಲ್ಲಿ ನೆಲೆಸಿದ ಕಾಯಸ್ಥ ಜನಾಂಗದವರಲ್ಲಿ ಹಗ್ಗದೆಳೆದಾಟ ಪ್ರಾರಂಭವಾಗಿದೆ. ಈ ಎರಡೂ ಬಣಕ್ಕೆ ಸೇರದವರು ಈ ವಿಶ್ವವಿದ್ಯಾಲಯದಲ್ಲಿ ಸೇರಿಕೊಳ್ಳುವ ಸಾಧ್ಯತೆ ಇಲ್ಲವೇ ಇಲ್ಲವೆಂದರೆ ಅತಿಶಯೋಕ್ತಿ ಆಗಲಾರದು. ನನಗೆ ಊರು, ಊರಜನ, ಶಿಕ್ಷಕನ ವೃತ್ತಿ ಇಷ್ಟವಾಗಿದ್ದವೇ ಹೊರತು ಶಿಕ್ಷಕ ವರ್ಗ ಮತ್ತು ಅವರ ರಾಜಕೀಯವಲ್ಲ. ಅಂತೆಯೇ ಈ ನೌಕರಿ ಬಿಡಲು ಸದಾ ಸಿದ್ಧನಾಗಿಯೇ ಇದ್ದೇನೆ. ಆದರೆ ಮುಂದೇನು? ಎಂಬುದು ಬಹುದೊಡ್ಡ ಪ್ರಶ್ನೆ. ನಿರುದ್ಯೋಗದ ಬಗ್ಗೆ ನಾವು ಅಷ್ಟೊಂದು ತಲೆ ಕೆಡಿಸಿಕೊಳ್ಳಬೇಕಾಗಿಲ್ಲವಾದರೂ ಸಮಾಜ ಹುಯಿಲೆಬ್ಬಿಸಬಹುದು. ಒಳ್ಳೆಯ ಭವಿಷ್ಯವಿರುವ ವರನೆಂದು ಮಗಳನ್ನು ಕೊಟ್ಟರೆ, ಗಳಿಸಲಾರದ ಗುಂಡಸು ಈತ! ಪತ್ನಿ ನೌಕರಿಗೆ ರಾಜೀನಾಮೆ ಕೊಟ್ಟು

ಗೃಹಿಣಿಯಾಗಿ ಸುಖದಿಂದ ಇರುವ ಕನಸು ಕಂಡಿದ್ದಳು. ಮಹಾರಾಯತಿ, ಹಾಗೆ ಮಾಡಲಿಲ್ಲ ಯಾವುದೋ ಪೂರ್ವಜನ್ಮದ ಪುಣ್ಯ. ಅನ್ನವಲ್ಲವಾದರೂ ಗಂಜಿ ಯಾದರೂ ಉಣ್ಣಬಹುದು. ಬೆಳೆಯುತ್ತಿರುವ ಕುಟುಂಬ, ಮಕ್ಕಳು–ಮರಿಗಳಿಗೆ ವಿದ್ಯಾ–ಬುದ್ಧಿ ಕೊಡುವದು ತನ್ನ ಜವಾಬ್ದಾರಿ ಎಂದು ಈ ಮೀಸೆ ಹೊತ್ತವನಿಗೆ ತಿಳಿಯಬಾರದೇ?........ಎಂದೆಲ್ಲ ಮಾತನಾಡಿ ನಾಲಿಗೆಯ ತೀಟೆಯನ್ನು ತೀರಿಸಿ ಕೊಳ್ಳಬಹುದು. ಆದರೆ ಇಂಥವುಗೆಲ್ಲ ಸೊಪ್ಪು ಹಾಕುವದು ನನ್ನ ಜಾಯ ಮಾನಕ್ಕೆ ಒಗ್ಗದ ಮಾತು. ನಮ್ಮ ಭವಿಷ್ಯವನ್ನು ನಾವೇ ಚರ್ಚಿಸಿ ರೂಪಿಸಿಕೊಳ್ಳ ಬೇಕು. ಬೇರಾರಿಗೂ ಇದರಲ್ಲಿ ತಲೆ ಹಾಕಲು ಅಧಿಕಾರವೇ ಇಲ್ಲ ಎಂಬುದು ಖಚಿತ ಅಭಿಪ್ರಾಯ. ವಾರಾಂತ್ಯದಲ್ಲಿ ಜೈಪ್ರರಕ್ಕೆ ಬಂದಾಗ ಇಷ್ಟೊಂದು ವಿಚಾರ–ವಿಮರ್ಶೆ ನಡೆಸಲು ಬಿಡುವು ಮತ್ತು ಏಕಾಂತಗಳು ದೊರೆಯದ್ದರಿಂದ ಪತ್ರ ಮುಖೇನ ನನ್ನ ವಿಚಾರಗಳನ್ನು ಮುಂದಿಡುತ್ತಿದ್ದೇನೆ.

ಪ್ರತಿದಿನ ವೃತ್ತಪತ್ರಿಕೆಗಳಲ್ಲಿ ಕಾಣಿಸಿಕೊಳ್ಳುವ ಹತ್ತಾರು ಜಾಹೀರಾತು ಗಳಿಗೆ ಅರ್ಜಿ ಸಲ್ಲಿಸಬಹುದು. ಇಂಟರವ್ಯೂ ಕೊಡಬಹುದು. ಆದರೆ ಹೆಚ್ಚಿನ ಸ್ಥಳಗಳಿಗೆ ಆಯ್ಕೆ ಪೂರ್ವನಿಶ್ಚಿತವೆಂಬುದನ್ನು ಅನುಭವದಿಂದ ಕಂಡುಕೊಂಡ ದ್ದಾಗಿದೆ. ಪರಿಚಯದ ಪ್ರಾಧ್ಯಾಪಕರನ್ನು ಕಂಡು ಮಾತನಾಡಿಸಬಹುದು. ಆದರೆ ಮೂರುವರ್ಷ ದುಡಿಸಿಕೊಂಡ ವಿಶ್ವವಿದ್ಯಾಲಯವೇ ನೌಕರಿಗೆ ಸೇರಿಸಿಕೊಳ್ಳ ದಿದ್ದಾಗ, ಇನ್ನಿತರರು ಸಹಾನುಭೂತಿ ತೋರಿಸುವದಲ್ಲದೇ ಇನ್ನೇನೂ ಮಾಡುವ ದಿಲ್ಲ. ಆದ್ದರಿಂದ ನಿರುದ್ಯೋಗವನ್ನು ಎದುರಿಸಲು ಸರ್ವಸಿದ್ಧತೆ ನಡೆಸಲೇ ಬೇಕು. ಕಲಾಕಾರ, ಸಾಹಿತಿ, ಛಾಯಾ ಚಿತ್ರಕಾರ, ಅಡಿಗೆ ಭಟ್ಟನಾಗಿ ಕೂಡ ನನ್ನ ಸಂಸಾರವನ್ನು ತೂಗಿಸಿಕೊಂಡು ಹೋಗಬಲ್ಲೆ ಎಂಬ ಆತ್ಮವಿಶ್ವಾಸ ನನ್ನದು. ಹಣ ಗಳಿಕೆಯೇ ಯೋಗ್ಯತೆಯ ಮಾಪನವಾಗಬಾರದು. ಗಳಿಕೆಯನ್ನೆ ಅವಲೋಕಿಸಿ ದರೆ ಸಿಂಧಿ–ಮಾರವಾಡಿಗಳು ಅದ್ವಿತೀಯ ಯೋಗ್ಯತಾವಂತರೆನಿಸಿಕೊಳ್ಳಲಾರರೇ? ಕಳ್ಳ–ಕಾಕರ ಆದಾಯ ಇವರದನ್ನೂ ಮೀರಿಸಬಹುದು. ಆದರೆ ಮಾನವನು ಬದ್ಧಿಜೀವಿಯಾಗಿ ಜೀವಿಸಲು ಕಲಿಯಬೇಕು. ಇಲ್ಲದಿದ್ದರೆ ಅವನು ಪಶು–ಪಕ್ಷಿ ಗಳಿಗಿಂತ ಭಿನ್ನ ಹೇಗಾದಾನು? ಧೀಮಂತನೆಲ್ಲರೂ ಕೈತುಂಬ ಸಂಪಾದಿಸುತ್ತಾರೆ, ಎಂದು ನಂಬಲು ಯಾವ ಆಧಾರವೂ ಇಲ್ಲ. ವಿಶ್ವವಿಖ್ಯಾತ ಚಿತ್ರಕಾರ ವಿನ್‌ಸೆಂಟ್ ವ್ಯಾನಗೋ ಒಪ್ಪೊತ್ತಿನ ಊಟಕ್ಕೂ ಸಾಲುವಷ್ಟು ಸಂಪಾದನೆ ಮಾಡಲಿಲ್ಲ.

ಆದರೆ ಅವನು ಬಿಟ್ಟು ಹೋದ ಪ್ರತಿಯೊಂದು ತೈಲ ಚಿತ್ರದ ಇಂದಿನ ಬೆಲೆ ಲಕ್ಷ ಗಟ್ಟಲೆ ಡಾಲರುಗಳು. ಗಳಿಕೆಯತ್ತ ಲಕ್ಷ್ಯ ಕೊಡದೆ ತನಗೆ ಅತಿ ಪ್ರಿಯವೆನಿಸಿದ ಹವ್ಯಾಸ ಕೈಕೊಂಡದ್ದರಿಂದ ಅವನು ಮಹಾನ್ ಕಲಾಕಾರನಾದ. ನನ್ನ ಅಮೇರಿಕನ್ ಪ್ರಾಧ್ಯಾಪಕರಿಗೆ ಇರುವ ಹವ್ಯಾಸಗಳತ್ತ ಲಕ್ಷ್ಯ ಹಾಕಲು ಅವರು ನಿವೃತ್ತಿಗಾಗಿ ಕಾಯಬೇಕಾಯಿತು. ನನಗೂ ಜೀವನದಲ್ಲಿ ಅನೇಕ ಹವ್ಯಾಸಗಳಿವೆ. ನಿರುದ್ಯೋಗಿ ಆಗಲೇಬೇಕಾಗಿ ಬಂದರೆ ತನು, ಮನ, ಧನಗಳನ್ನು ಈ ಹವ್ಯಾಸಗಳಲ್ಲಿ ತೊಡಗಿಸಿ ಪರಿಣತಿ ಕಂಡುಕೊಳ್ಳಬೇಕೆಂದಿರುವೆ. ಇದಕ್ಕೆ ನಿನ್ನ ಒಪ್ಪಿಗೆಯೇ, ಜ್ಯೋತ್ಸ್ನಾ?

ಮುಂಬರುವ ದಿನಗಳಲ್ಲಿ ಇದೇ ವಿಶ್ವವಿದ್ಯಾಲಯದಲ್ಲಿ ನೌಕರಿಯೊಂದನ್ನು ದೊರಕಿಸಲು ಸರ್ವಪ್ರಯತ್ನ ಮಾಡುತ್ತೇನೆ. ಅಲ್ಲದೇ ಜಯಪುರ ವಿಶ್ವವಿದ್ಯಾಲಯದ ಪ್ರಾಣಿಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ| ರಾಮಸ್ವಾಮಿಯವರನ್ನು ಕಾಣುತ್ತೇನೆ. ಯಾವುದಾದರೊಂದು ಹಿಡಟಳ್ಳಿ ಸಿಕ್ಕರೆ ರಾಜಸ್ಥಾನದಲ್ಲೇ ಇರೋಣವಂತೆ. ಅದಾಗದಿದ್ದರೆ ನಮ್ಮ ರಾಜ್ಯದಲ್ಲಿಯೇ ಯತ್ನಿಸಬೇಕೆಂದಿರುವೆ. ಸ್ಥಾಯಿಯಾಗಿರಲು ಧಾರವಾಡ ಅಥವಾ ಬೆಂಗಳೂರು ಒಳ್ಳೇ ನಗರಗಳು. ಆದರೆ ಅವಕಾಶಗಳನ್ನು ಪರಿಗಣಿಸಿದಾಗ, ಬೆಂಗಳೂರಿನಂತಹ ಊರು ಇನ್ನೊಂದಿಲ್ಲ. ಅಲ್ಲಿಯ ಕೃಷಿ ಕಾಲೇಜು ಅರಣ್ಯ ವಿಭಾಗವನ್ನು ಪ್ರಾರಂಭಿಸಲಿದೆಯಂತೆ. ಅದರಲ್ಲಿ ಕೀಟಶಾಸ್ತ್ರದ ಮುಖ್ಯಸ್ಥನ ಸ್ಥಾನಕ್ಕೆ ಅರ್ಜಿ ಸಲ್ಲಿಸಿದ್ದೇನೆ. ಅಲ್ಲಿ ಸಿಕ್ಕರೆ ನಮ್ಮ ಸಕಲ ಸಮಸ್ಯೆಗಳು ಪರಿಹಾರವಾಗುವವು. ಸಿಗದಿದ್ದರೂ ಅಲ್ಲೇ ಸ್ಥಾಯಿಯಾಗಿ ಇರಬೇಕೆಂದು ಆಸೆ. ಅಲ್ಲಿ ಯಾವ ವೃತ್ತಿಯನ್ನು ಕೈಕೊಂಡರೂ ಉದರ–ನಿರ್ವಹಣೆ ಕಷ್ಟದಾಯಕವಾಗಲಿಕ್ಕಿಲ್ಲ. ಆದ್ದರಿಂದ ಕೃಷಿ ಕಾಲೇಜಿನ ಸ್ಥಾನಕ್ಕೆ ಕರೆ ಬಂದರೆ, ಆ ನೆಪದಲ್ಲಿ ಬೆಂಗಳೂರಿಗೆ ಹೋಗಿ, ಏನೇನು ಮಾಡಬಹುದು ಎಂದು ಪತ್ತೆ ಹಚ್ಚಬೇಕೆಂದಿರುವೆ. ಸಹೋದ್ಯೋಗಿ ಸಚಾನರು 'ಈ ಕಾಮತ ಹಕ್ಕಿ ರಾಜಸ್ಥಾನದಿಂದ ಹಾರಿಹೋಗುವಂತೆ ಕಾಣುತ್ತದೆ' ಎಂದ ಭವಿಷ್ಯ ನಿಜವಾಗುವಂತೆ ತೋರುತ್ತದೆ.

ಈ ವಾರಾಂತ್ಯದಲ್ಲಿ ಬರುವಾಗ ಇಲ್ಲಿ ಬಿಟ್ಟು ಹೋದ ವಿಕಾಸನ ಹಾಲಿನ ಬಾಟ್ಲಿ ಮತ್ತು ನಿಪ್ಪಲ್ ಮರೆಯದೇ ತರುತ್ತೇನೆ.

○

೧೫. ಪ್ರವಾಸದಲ್ಲಿ

ಆಗ್ರಾ ದಂಡು ರೇಲ ನಿಲ್ದಾಣ, ೧೩–೯–೧೯೬೮

ಜಯಪುರವನ್ನು ವಿಳಂಬವಾಗಿ ಬಿಟ್ಟರೂ ರೇಲು ಹನ್ನೆರಡು ಗಂಟೆಗೆ ಸರಿಯಾಗಿ ತಾಜಮಹಲ್‌ದ ಊರನ್ನು ಸೇರಿತು. ದಾರಿಯುದ್ದಕ್ಕೂ ರಾಜಸ್ಥಾನವು ಉತ್ತರ ಪ್ರದೇಶದಲ್ಲಿ ಮಾರ್ಪಡುವದನ್ನು ಗುರುತಿಸುತ್ತ ಹೊರಟಿದ್ದೆ. ಉಬ್ಬೆದೆ ಮುಚ್ಚಲು ಅಸಮರ್ಥವಾದ ಕುಪ್ಪಸಗಳು ವಿಸ್ತೃತಗೊಂಡು, ತೋಳುಗಳನ್ನು ಆಕ್ರಮಿಸಿಕೊಂಡು ಬಿಟ್ಟಿದ್ದವು. ರಬ್ಬಾದ ಕೆಂಪು, ಹಳದಿ, ಬಟ್ಟೆಗಳ ಬದಲಾಗಿ ಹಸಿರು, ನೀಲಿ ಬಣ್ಣಗಳು ಪ್ರತ್ಯಕ್ಷವಾದವು. ಉದ್ದ 'ಸೀರೆ'ಗಳನ್ನೇ ರುಮಾಲಾಗಿ ಸುತ್ತಿಕೊಂಡ ತಲೆಗಳ ಬದಲಾಗಿ ಟೋಪಿಗಳು ಕಾಣ ಸಿಕ್ಕವು. ಜೀವಿಸಲೋ ಬೇಡವೋ ಎಂದು ಯೋಚಿಸುವ ವೃಕ್ಷಗಳ ಬದಲಾಗಿ ಹಸಿರು ತೋರಣ ಹೊತ್ತು ನಿಂತ ಕಿರಿದಾದ ಕಾಡುಗಳು ಕಣ್ಣಿಗೆ ಮುದ ನೀಡಿದವು. ಜೋಳ ಮತ್ತು ಬಾಜ್ರಾದ ಬದಲಾಗಿ ಭತ್ತದ ಬೆಳೆ ಬೆಳೆಸಿದ್ದರು. ಬಾಳೆಹಣ್ಣು ಕೊಳ್ಳುವಾಗ ಕಿಲೋಗ್ರಾಮದ ಬದಲಾಗಿ ಡಝನಿನ ಲೆಕ್ಕಾಚಾರ ಎಂದು ಅರಿಯಬೇಕಾಯಿತು. ಭರತಪುರ ಮತ್ತು ಗಡಿ ಸೀಮೆಯಲ್ಲಿ ಹಿಂದಿ ಮಿಶ್ರಿತ ರಾಜಸ್ಥಾನಿ ಕೇಳಿ ಬರುತ್ತಿದೆ. ಸರದಾರಜೀಯ ಹೊಟೇಲಿನಲ್ಲಿ ಊಟ ಮುಗಿಸಿ, ಮುಂದಿನ ರೇಲಿಗೆ ಬಹಳಷ್ಟು ಸಮಯ ಇದ್ದುದರಿಂದ ಕಾಲು ನಡಿಗೆಯಲ್ಲಿ ಊರು ಅಲೆದು, ಜನರ ರೀತಿ ನೀತಿಗಳನ್ನು ವೀಕ್ಷಿಸಿದೆ. ಇಷ್ಟಾದರೂ ಮುಮತಾಜಳ ಗೋರಿ ಇನ್ನೊಮ್ಮೆ ನೋಡಬೇಕು ಎಂದು ಅನಿಸಲಿಲ್ಲ. ಸರಿಯಾಗಿ ಒಂದು ದಶಕದ ಹಿಂದೆ ಆಗ್ರಾಕ್ಕೆ ಭೇಟಿ ಕೊಟ್ಟಿದ್ದೆ. ಬಹಳಷ್ಟು ನಿರೀಕ್ಷಿಸಿ ತಾಜಮಹಲ್ ನೋಡಿದಾಗ ನಿರಾಶೆಯಾಗಿತ್ತು. ಅದೇ ಊರಿನಲ್ಲಿದ್ದ ಕಾಂಬಲಿ ಮಹಾರಾಜರ ದೇಗುಲ ಹೆಚ್ಚು ಪ್ರಭಾವ ಶಾಲಿ ಎನಿಸಿತ್ತು.

ಓರ್ವ ಕೊಂಕಣಿ ದಂಪತಿ, ತಮ್ಮ ಮಗುವನ್ನು ಆಡಿಸುವದನ್ನು ಕಂಡಾಗ ಥಟ್ಟನೆ ವಿಕಾಸನ ನೆನಪಾಯಿತು. ರೇಲು ಗಾಡಿ ಬಾದಿತು. ಓಡುತ್ತೇನೆ.

ನಾಗಪುರ ರೇಲ ನಿಲ್ದಾಣ, ೧೬-೯-೧೯೬೪

ನೀನು ಕೊಟ್ಟ ತಿಂಡಿ, ಹಣ್ಣುಗಳಿಂದ ಹೊಟ್ಟೆ ತುಂಬಿದ್ದರಿಂದ ರೇಲ್ವೆಯ ಕೆಟ್ಟ ಊಟ ಪರೀಕ್ಷಿಸಿ ನೋಡುವ ಗೋಜಿಗೆ ಹೋಗಲೇ ಇಲ್ಲ. ಆಗ್ರಾ ಬಿಡುವಾಗ ಬೀಳಲಾರಂಭಿಸಿದ ಮಳೆ ನಾಗಪುರ ಮುಟ್ಟಿದರೂ ಬಿಟ್ಟಿರಲಿಲ್ಲ. ಮಧ್ಯ ಪ್ರದೇಶ ಮತ್ತು ಮಹಾರಾಷ್ಟ್ರದ ಕೃಷಿಕರು ಈ ಮಳೆಗಾಗಿ ಹಂಬಲಿಸುತ್ತಿದ್ದರು. ವರುಣನು ರಾಜಸ್ಥಾನದ ಮೇಲೂ ಕೃಪಾಕಟಾಕ್ಷ ಬೀರಿದ್ದರೆ ಎಷ್ಟು ಉತ್ತಮವಾಗುತ್ತಿತ್ತು!

ಕೊಲ್ಹಾಪುರ ರಾಜಾರಾಮ ಕಾಲೇಜಿನಲ್ಲಿ ನಿನ್ನ ಚಿಕ್ಕಪ್ಪನ ಪರಿಚಿತರಾದ ನನ್ನ, ಡಾ| ಮಧುಕರ ಮಾಮಾರು ನಾಗಪುರದ ಡಿವಿಜನಲ್ ಕಮೀಷನರ್. ಅವರು ದೊಡ್ಡ ಸರಕಾರಿ ಅಧಿಕಾರದಲ್ಲಿದ್ದರೂ ನಾನೆಂದೂ ಅವರ ನಿವಾಸಕ್ಕೆ ಭೇಟಿ ಕೊಟ್ಟಿರಲಿಲ್ಲ. ಈ ಸೋದರಳಿಯನ ಮೇಲೆ ಅವರಿಗೆ ಹೆಚ್ಚಿನ ಪ್ರೀತಿ-ಅಭಿಮಾನಗಳು. ಹಿಂದೊಮ್ಮೆ ಅಳಿಯನನ್ನಾಗಿ ಮಾಡಿಕೊಳ್ಳುವ ಬಗ್ಗೆಯೂ ಯೋಚಿಸಿದ್ದರೆ ಆಶ್ಚರ್ಯವಿಲ್ಲ. ಮೊದಲ ಬಾರಿಗೆ ಹೋಗುತ್ತಿದ್ದುದರಿಂದಲೋ ಏನೋ, ದಂಪತಿಗಳು ಬಹಳ ಆದರದಿಂದ ಬರಮಾಡಿಕೊಂಡು ಎರಡು ದಿನ ಹೆಚ್ಚಾಗಿಯೇ ತಮ್ಮಲ್ಲಿ ಇರುವಂತೆ ಆಗ್ರಹಿಸಿದರು. ನಮ್ಮ ವಿವಾಹದ ಹಿನ್ನೆಲೆಯನ್ನು ವಿವರವಾಗಿ ವಿಚಾರಿಸಿಕೊಂಡು ತಮ್ಮ ಸಂಶಯ ನಿರಾಧಾರವಾದದ್ದು ಎಂಬ ನಿರ್ಣಯಕ್ಕೆ ಬಂದರು. ಯಾರೋ ಅವರಿಗೆ ನಮ್ಮದು ಗುಪ್ತ ಪ್ರೇಮ, ಬಹಿರಂಗ ವಿವಾಹ ಎಂದು ಹೇಳಿದ್ದರಂತೆ!

ಉಚ್ಚ ಅಧಿಕಾರಿಗಳು ಕ್ಲಬ್ಬುಗಳಲ್ಲಿ ಸಮಯವನ್ನು ಹೇಗೆ ಕಳೆಯುತ್ತಾರೆಂದು ಅರಿಯುವ ಅವಕಾಶವೂ ಸಿಕ್ಕಿತು. ಮೇಲಧಿಕಾರಿಗಳು ಬಂದಾಗೊಮ್ಮೆ ಶಾಲಾ ವಿದ್ಯಾರ್ಥಿಗಳಂತೆ ಎದ್ದು ನಿಲ್ಲುವ ಪರಿಪಾಠ ಮೋಜೆನಿಸಿತು. ಆಗಾಗ ಪೂರೈಸುವ ಚಹಾ ಕುಡಿಯುತ್ತ ಹಣ ಹಾಕಿ ರಮ್ಮಿ ಆಡುವದೇ ಅವರ ಮಹಾನ್ ಮನರಂಜನೆ. ಒಂದು ಸಂಜೆ ಸಿನೇಮಾ ನಟ-ನಟಿಯರನ್ನು ಅಣಕ ಮಾಡುವ ಮಹೇಶಕುಮಾರನ ಕಸರತ್ತು ನೋಡಲು ಹೋಗಿದ್ದೆವು ಚಲಚ್ಚಿತ್ರಗಳನ್ನೆ ನೋಡದವನಿಗೆ ಲತಾ ಮಂಗೇಶಕರ, ಮುಖೇಶರ ಅಣಕಗಳು ಹೇಗೆ ಅರ್ಥವಾಗಬೇಕು?

ನಿನ್ನ ಗಿಂಡಿ (ವಿಕಾಸ) ಏನೆನ್ನುತ್ತಾನೆ?

ಮದ್ರಾಸ ಸೆಂಟ್ರಲ್ ರೇಲ ನಿಲ್ದಾಣ, ೧೮-೯-೧೯೭೮

ಈ ರಾತ್ರೆಯ ರೇಲಿನಿಂದ ಬೆಂಗಳೂರು ಸೇರಬೇಕು. ಆದರೆ ರೇಲ್ವೆ ಕರ್ಮಚಾರಿಗಳು ಹರತಾಳ ಆಚರಿಸುವ ಬೆದರಿಕೆ ಹಾಕಿದ್ದರಿಂದ, ಮಧ್ಯದಲ್ಲೇ ನರಳಾಡಬೇಕಾದ ಪ್ರಮೇಯ ಬಂದರೂ ಆಶ್ಚರ್ಯವಿಲ್ಲ. ಅಂಚೆಯವರಂತೆ ಇವರೂ ಜನಸೇವೆಗಾಗಿ ಟೊಂಕಕಟ್ಟಿ ನಿಂತವರಲ್ಲವೇ? ತಮ್ಮ ಹಿತ ಸಾಧಿಸಿಕೊಂಡ ನಂತರವೇ ಜನರ ಕಲ್ಯಾಣದ ಬಗ್ಗೆ ಯೋಚಿಸುವದು ಅವರ ವೈಶಿಷ್ಟ್ಯ.

ಮಧ್ಯಪ್ರದೇಶ, ಮಹಾರಾಷ್ಟ್ರಗಳಲ್ಲಿ ಮೂರು ದಿನ ಸತತವಾಗಿ ಮಳೆ ಸುರಿದರೂ, ಆಂಧ್ರ-ತಮಿಳುನಾಡುಗಳಲ್ಲಿ ಅದರ ಹೆಸರೇ ಇಲ್ಲ. ಅಂತೆಯೇ ಹೊಂಡ, ಕೆರೆ, ನದಿಗಳು ಬತ್ತಿ ಹೋಗಿವೆ. ಕೃಷ್ಣಾನದಿಯ ಎರಡೂ ತೀರಗಳಲ್ಲಿ ಸಾಕಷ್ಟು ನೀರಿನ ಪೂರೈಕೆ ಇರುವದರಿಂದ ಭತ್ತದ ಬೆಳೆ ಹುಲುಸಾಗಿ ಬೆಳೆದಿದ್ದಾರೆ. ಆನಂತರ ಬರುವ ಮಳಲಪಟ್ಟಿಗಳಲ್ಲಿ ಸಣ್ಣ ಸಣ್ಣ ಬಾವಿಗಳನ್ನು ಅಗೆದು, ಕರಿಮಡಿಕೆಗಳಲ್ಲಿ ನೀರು ತಂದು ಒಂಟಿಕಾಲ ಮೇಲೆ ನಿಂತು ಹೆಂಗಳೆಯರು ತರಕಾರಿಗೆ ನೀರು ಸಿಂಪಡಿಸುವ ದೃಶ್ಯ ಮನೋಹರವಾದದ್ದು. ಖಾರವನ್ನು ಹೆಚ್ಚಾಗಿ ಕಬಳಿಸುವ ಆಂಧ್ರ ನಾರಿಯರು ಖಾರವಾಗಿಯೇ ಇರುತ್ತಾರೆಂದು ಕೇಳಿದ್ದೆ. ತಾವು ಗಂಡಸರಿಗೆ ಏನೇನೂ ಕಡಿಮೆಯಿಲ್ಲವೆಂದು ಸಿದ್ಧಮಾಡುವದಕ್ಕಾಗಿಯೋ ಏನೋ ರೇಲ್ವೆ ರಸ್ತೆಯನ್ನು ನಿರ್ದಾಕ್ಷಿಣ್ಯವಾಗಿ ಪ್ರಾತರ್ವಿಧಿಗಾಗಿ ಬಳಸಿಕೊಳ್ಳುತ್ತಾರೆ. ನೀಲಿ, ಹಸಿರು, ಇಲ್ಲವೆ ಜಾಂಬಳಿ ಸೀರೆ ಉಡುವದು ಪರಿಪಾಠ. ಹಂಚು ಇಲ್ಲವೆ ತಾಳೆಗರಿಯನ್ನು ಆಚ್ಛಾದಿಸಿದ ಗುಡಿಸಲುಗಳನ್ನು ಸ್ವಚ್ಛವಾಗಿ ಇಟ್ಟಿರುತ್ತಾರೆ.

ರೇಲ್ವೆ ನಿಲ್ದಾಣದ ಹತ್ತಿರವಿದ್ದ ಮೂರ್ ಮಾರ್ಕೆಟ್ ದರ್ಶನ ತೆಗೆದುಕೊಂಡೆ. ಬೇಕಾಗಿರದ ಸಾಮಾನುಕೊಳ್ಳಲು ಜೇಬುತುಂಬ ಹಣವಿಲ್ಲದ್ದರಿಂದ ಸಂಸ್ಥಾನಕ್ಕೆ ಹಿಂದಿರುಗಿ ಈ ಪತ್ರ ಬರೆಯುತ್ತಿದ್ದೇನೆ.

ಬೆಂಗಳೂರು, ೨೧-೯-೧೯೭೮

ನಿರೀಕ್ಷಿಸಿದಂತೆ ಕೃಷಿ ವಿಶ್ವವಿದ್ಯಾಲಯದ ಹುದ್ದೆಯ ಸಂದರ್ಶನ ದೊಡ್ಡ ಅಣಕ. ಬಂದ ತಜ್ಞರು ಅರಣ್ಯ ಆಡಳಿತವನ್ನಷ್ಟೇ ಅರಿತವರು. ಅವರಿಗೆ ಪ್ರಾರಂಭಿಸಲಿರುವ ಅರಣ್ಯ ಶಾಸ್ತ್ರದ ಕೋರ್ಸಿನ ಗಂಧಗಾಳಿ ಇದ್ದಂತಿಲ್ಲ!

ನ್ಯೂಯಾರ್ಕ ವಿಶ್ವವಿದ್ಯಾಲಯದ ಅರಣ್ಯ ಕಾಲೇಜಿನಲ್ಲಿ ನಾಲ್ಕು ವರ್ಷ ಕಠಿಣ ಪರಿಶ್ರಮ ಮಾಡಿ ಡಾಕ್ಟರೇಟು ಗಿಟ್ಟಿದವನಿಗೆ ಕೇಳಿದ ಪ್ರಶ್ನೆ ಏನುಗೊತ್ತೆ? ರೇಯಾನ್ ಉತ್ಪಾದನೆಯಲ್ಲಿ ಎದುರಿಸಬೇಕಾದ ಸಮಸ್ಯೆಗಳು ಯಾವವು? ಉತ್ತರ ರೂಪವಾಗಿ 'ನಿಮ್ಮ ತಲೆ' ಎಂದು ಎದ್ದು ಬಂದಿಲ್ಲ. ಅದು ಅವರ ಪೂರ್ವಜನ್ಮದ ಪುಣ್ಯ ಅನ್ನಬೇಕು. ಇಂಥ ಸಂಸ್ಥೆಯಲ್ಲಿ ನೌಕರಿ ಹೇಗೆ ಮಾಡುವದು?

ಈ ನಿರಾಶಾದಾಯಕ ಸ್ಥಿತಿಯಲ್ಲಿಯೂ ಒಂದು ದೂರದ ಆಶಾಕಿರಣ ಮೂಡುವಂತಾಗಿದೆ. ಇಲ್ಲಿಯ ಅಂತರ್ರಾಷ್ಟ್ರೀಯ ನಿಸರ್ಗ–ನಿಯಂತ್ರಣ ಸಂಸ್ಥೆಯಲ್ಲಿ ಕೀಟಶಾಸ್ತ್ರಜ್ಞನ ಸ್ಥಳ ಖಾಲಿ ಇದೆ. ಆದರೆ ನೇಮಕ ಹೊಂದಿದವರು ಪಶ್ಚಿಮ ಬಂಗಾಲದ ಪ್ಲಾಸಿಯಲ್ಲಿ ಸಂಶೋಧನೆ ನಡೆಸಬೇಕಂತೆ. ಸಂಬಳದ ಜೊತೆಗೆ ವಿಶೇಷ ಭತ್ತೆಯೂ ಸೇರಿ ಪ್ರತಿ ತಿಂಗಳು ಒಂದು ಸಹಸ್ರರೂಪಾಯಿಗಿಂತ ಹೆಚ್ಚು ಗಿಟ್ಟಿಸಬಹುದು. ಕೇವಲ ಎರಡು ವರ್ಷ ನೌಕರಿ ಮಾಡಿದರೆ ಹನ್ನೆರಡು ಸಾವಿರ ರೂಪಾಯಿಗಳನ್ನಾದರೂ ಉಳಿತಾಯ ಮಾಡಬಹುದು ಅನಿಸುತ್ತದೆ. ಅಲ್ಲದೇ ಬಂಗಾಲಿಗಳ ನಾಟಕ, ಸಂಗೀತ, ಕಲೆಗಳನ್ನು ಹತ್ತಿರದಿಂದ ನೋಡುವ ಬಹುದಿನದ ಆಸೆ ಈಡೇರುವಂತೆಯೂ ಕಾಣುತ್ತದೆ. ಉಳಿತಾಯ ಮಾಡುವ ಹಣದಿಂದ ನಮಗೆ ಸಂರಕ್ಷಣೆ ದೊರೆಯುವದಲ್ಲದೇ ಬೇರೆ ಹವ್ಯಾಸಗಳತ್ತ ಲಕ್ಷ್ಯ ಪೂರೈಸಲು ಸಾಧ್ಯವಾಗುವದು. ಈ ನೌಕರಿ ನನ್ನದಾಗುವ ಬಗ್ಗೆ ಯಾವ ಸಂಶಯವೂ ಇಲ್ಲ. ಯಾಕೆಂದರೆ ಬಂಗಾಲದಲ್ಲಿ ಕಾಣಿಸಿಕೊಂಡ ನಕ್ಸಲೀಯರ ಗಲಭೆಯಿಂದಾಗಿ ಇನ್ನಿತರರು ಹೋಗಲು ಬಹಳ ಹೆದರುತ್ತಾರೆ. ಆದ್ದರಿಂದ ಈ ಕೆಲಸ ಒಪ್ಪಿಕೊಳ್ಳಲೇ? ಎಂದು ಯೋಚಿಸಿ ನೋಡು. ಇನ್ನೆರಡು ದಿನಗಳಲ್ಲಿ ಮರುಪ್ರಯಾಣ ಬೆಳೆಸುತ್ತೇನೆ.

○

೧೬. ಪಿತರ ಪರಲೋಕ ಪಯಣ

ಹೊನ್ನಾವರ, ೨೦-೧-೧೯೬೯

ತಂದೆಯವರ ನಿಧನದ ವಾರ್ತೆ ಹೊತ್ತ ತಂತಿ,ಜೈಪುರ (ರಾಜಸ್ಥಾನ) ಸೇರುವದರೊಳಗೆ ಒಂದು ದಿನ ಜಾರಿಕೊಂಡಿತ್ತು. ಅದನ್ನು ಹೊತ್ತು ಮೂವತ್ತೈದು ಮೈಲು ದೂರದ ಜೋಬನೇರಕ್ಕೆ ನೀನು ಧಾವಿಸಿ ಬಂದರೆ, ಮನೆಗೆ ಜಡಿದ ಬೀಗ ಮಾತ್ರ ನಿನ್ನನ್ನು ಸ್ವಾಗತಿಸಿತ್ತು. ಎಂದೂ ಎಲ್ಲಿಯೂ ಹೋಗದ ಈ ಗೃಹಸ್ಥ, ಎಲ್ಲಿ ಕಾಣೆಯಾದರು? ಎಂದು ತಡೆದುಕೊಂಡಿದ್ದ ಕಣ್ಣೀರು ಕೋಡಿ ಹರಿಯಲಾರಂಭಿಸಿತ್ತು. ನೀನಿನ್ನೂ ಆರುವರ್ಷದವಳಿದ್ದಾಗಲೇ ಟ್ಯಾಫ್ಯಾಡ್ ಜ್ವರ ನಿನ್ನ ತಾಯಿಯನ್ನು ಆಹುತಿ ತೆಗೆದುಕೊಂಡು ಅನಾಥೆಯನ್ನಾಗಿಸಿತ್ತು. ನೆರೆಹೊರೆಯವರು ಹುಡುಕಿ ಕೊನೆಗೊಮ್ಮೆ ನನ್ನನ್ನು ಕಾಲೇಜಿನ ಕತ್ತಲೆಕೋಣೆಯಿಂದ ಕರೆದುಕೊಂಡು ಬಂದಾಗ, ಅಂತಃಕರಣಿ ಮಾವನನ್ನು ಕಳೆದುಕೊಂಡು ಇನ್ನೊಮ್ಮೆ ಅನಾಥೆಯಾಗಿದ್ದೇನೆ ಎಂದು ಬಿಕ್ಕಿ ಬಿಕ್ಕಿ ಅಳುತ್ತ ನಿಂತಿದ್ದಿ. ಆದರೆ ಸ್ವತಃ ಮಗನೇ ಕಣ್ಣೀರುಹಾಕದೇ, ವ್ಯಸನ ಪಡದೇ, ಮನುಷ್ಯ ಜೀವನದ ಆಗು-ಹೋಗುಗಳಲ್ಲಿ ಇದೆಲ್ಲ ಇದ್ದದ್ದೇ ಎಂಬಂತೆ ನಡೆದುಕೊಂಡದ್ದರಿಂದ ನಿನಗೆ ಅತೀವ ಆಶ್ಚರ್ಯವಾಗಿತ್ತು. ಈ ಸ್ಥಿತ ಪ್ರಜ್ಞತೆಯ ಹಿನ್ನೆಲೆ ಆ ರಾತ್ರೆ ವಿವರಿಸುವಂತಿರಲಿಲ್ಲ. ಮರುದಿನ ಮುಂಜಾನೆ ನೀನು ಜೈಪುರಕ್ಕೆ ಹಿಂದಿರುಗಲೇ ಬೇಕಾಗಿತ್ತು ಅಂತೆಯೇ ಈಗ ಎಲ್ಲವನ್ನೂ ವಿವರವಾಗಿ ಬರೆಯುತ್ತಿದ್ದೇನೆ.

ನಮ್ಮದು ಅಪರೂಪದ ಕುಟುಂಬ. ಕಾಕಾರೇ ಅದನ್ನು ಕಟೆದು ನಿಲ್ಲಿಸಿದ ಶಿಲ್ಪಿ. ಸ್ವಾತಂತ್ರ್ಯ ಪ್ರಿಯರೆನಿಸಿಕೊಳ್ಳುವ ಆಧುನಿಕರಿಗೆ ಸರ್ವಾಧಿಕಾರಿಯಿವರು! ಎನಿಸುವಷ್ಟು ಅವರ ಮಾರ್ಗದರ್ಶನದಲ್ಲಿ ನಮ್ಮ ಸಕಲ ಚಟುವಟಿಕೆಗಳು ನಡೆಯುತ್ತಿದ್ದವು. ಹದಿಮೂರು ಸದಸ್ಯರ ವಿಸ್ತಾರವಾದ ಸಂಸಾರದಲ್ಲಿ ಒಮ್ಮೆಯೂ ಅಪಸ್ವರ ಕೇಳಿ ಬಂದಿಲ್ಲ. ಇದಕ್ಕೆ ಮುಖ್ಯಕಾರಣವೆಂದರೆ, ಮುಖ್ಯಸ್ಥರ ನಿಸ್ವಾರ್ಥತನ. ಅವರೊಬ್ಬರೇ ಸಂಪಾದಿಸುವವರಾದರೂ, ಊಟ-ತಿಂಡಿ, ಆರಾಮು-ವಿರಾಮು

ಗಳಲ್ಲಿ ಎಂದೂ ಸಿಂಹಪಾಲು ಅಪೇಕ್ಷಿಸಲಿಲ್ಲ. ಹೊಟೇಲಿಗೆ ಹೋದವರಲ್ಲ. ಕಾಫಿ–ತಿಂಡಿಗೆ ಹಾತೊರೆದವರಲ್ಲ. ಶೋಕಿಯ ಒಳ್ಳೆ ಬಟ್ಟೆ ಹೊಲಿಸಿದವರಲ್ಲ. ತಮ್ಮ ಅಂದ–ಚೆಂದದ ಬಗ್ಗೆ ತಲೆ ಕೆಡಿಸಿಕೊಂಡವರೇ ಅಲ್ಲ. ಬೀಡಿಸಿಗರೇಟು ಸೇದಲಿಲ್ಲ. ಎಲೆ–ಅಡಿಕೆ ಹಾಕಿಕೊಳ್ಳಲಿಲ್ಲ. ಇಸ್ಪಿಟ್ ಆಡಲಿಲ್ಲ. ಕಾಡು–ಹರಟೆಯಲ್ಲಿ ತೊಡಗಲಿಲ್ಲ. ಪರ–ನಿಂದೆ ಮಾಡಲಿಲ್ಲ. ಸ್ವಾಭಿಮಾನ ಬಿಟ್ಟವರಲ್ಲ. ಮುಂಜಾನೆ ಆರರ ಮೇಲೆ ಎದ್ದವರಲ್ಲ. ರಾತ್ರೆ ಹತ್ತರ ಮೊದಲು ಮಲಗಿದವರಲ್ಲ. ಇಂಥ ಸಾದಾ, ಸಾತ್ವಿಕ ವ್ಯಕ್ತಿ ಇರುತ್ತಾರೆಂದರೆ ಇನ್ನಿತರರು ನಂಬುವಂತಿಲ್ಲ.

ದೇವರದಿಂಡರಲ್ಲಿ ವಿಶ್ವಾಸವಿಟ್ಟವರಲ್ಲ, ದೇವತೆಗಳ ವಿಗ್ರಹ–ಚಿತ್ರಗಳನ್ನು ಪೂಜಿಸಲಿಲ್ಲ, ಕುಟುಂಬದ ಕಲ್ಯಾಣಕ್ಕಾಗಿ ಹರಕೆ ಹೊರಲಿಲ್ಲ, ವ್ಯಾಪಾರದ ಅಭ್ಯುದಯಕ್ಕಾಗಿ ಸತ್ಯನಾರಾಯಣ ಪೂಜೆ ಏರ್ಪಡಿಸಲಿಲ್ಲ, ರಾಹು–ಕೇತುಗಳಿಗೆ ಅಂಜಿದವರಲ್ಲ, ಶಕುನಗಳಿಗೆ ಸೊಪ್ಪು ಹಾಕಿದವರಲ್ಲ, ತಾವೀಜ ಕಟ್ಟಿಸಿಕೊಂಡವರಲ್ಲ, ಮಂತ್ರ ಮಾಟ ಮಾಡಿಸಿದವರಲ್ಲ, ಭವಿಷ್ಯ ಅರಿಯಲು ಜನ್ಮಕುಂಡಲಿ, ಕವಡೆ, ಅಂಜನಗಳ ಮೊರೆ ಹೋಗಲಿಲ್ಲ, ಹೋಮ–ಹವನ ಮಾಡಿಸಲಿಲ್ಲ, ತೀರ್ಥಯಾತ್ರೆಗೆ ಹೋಗಲಿಲ್ಲ, ಅವರ ಪಾಲಿಗೆ ಮನೆಯೇ ದೇಗುಲ, ಸದಾಚಾರವೇ ಪುಣ್ಯ, ಮಕ್ಕಳೇ ಸಂಪತ್ತು, ಅಂತೆಯೇ ಮನೆ, ಮಕ್ಕಳ ಸಕಲ ಚಟುವಟಿಕೆಗಳಲ್ಲಿಯೂ ಅವರಿಗೆ ಆಸಕ್ತಿ. ಮೂರು ದಶಕಗಳ ಅಂತರವಿರುವ ಮಕ್ಕಳೊಡನೆ, ಅವರು ಸರಿ ಸಮಾನರಂತೆ ಮಾತನಾಡಬಲ್ಲರು. ಮಕ್ಕಳೂ ತಂದೆಯನ್ನು ಸ್ನೇಹಿತನಂತೆ ಭಾವಿಸಿ, ತಮ್ಮ ಸಕಲ ಅನಿಸಿಕೆಗಳನ್ನೂ ನಿಸ್ಸಂಕೋಚವಾಗಿ ತೋಡಿಕೊಳ್ಳುವಂತ ಸಜೀವ, ಸಕ್ರಿಯ ವಾತಾವರಣ ಮನೆಯಲ್ಲಿತ್ತು. ಎಂಥ ದೊಡ್ಡ ತಪ್ಪನ್ನು ಕ್ಷಮಿಸುತ್ತಿದ್ದರಾದರೂ ಸುಳ್ಳಿನ ಕಡು ವೈರಿ. ಅಂತೆಯೇ ಅವರಿಂದ ಯಾವುದನ್ನೂ ಮುಚ್ಚಿಡುವ ಸಾಹಸಕ್ಕೆ ನಾವೆಂದೂ ಯತ್ನಿಸಲಿಲ್ಲ.

ತಂದೆಯಿಂದ ಬಂದ ಬಟ್ಟೆಯ ವ್ಯಾಪಾರವನ್ನು ಅವರು ಯಶಸ್ವೀ ರೀತಿಯಿಂದ ನಿರ್ವಹಿಸುತ್ತಿದ್ದರು. ಆದರೆ ಧನ ಸಂಪಾದನೆ, ಅವರ ಧ್ಯೇಯವಾಗಿರಲಿಲ್ಲ. ಮೋಸ, ವಂಚನೆಗಳು ಅವರ ಮಾರ್ಗವಾಗಿರಲಿಲ್ಲ. ನಿರ್ದಿಷ್ಟ ಪ್ರಮಾಣದ ಲಾಭವೇ ಗುರಿ. 'ಎಳ್ಳು ಕೊಂಡಂತೆ ಎಣ್ಣೆ ಮಾರಿದ' ಸೂತ್ರದ ಪ್ರಕಾರ ಕಡಿಮೆ ಬೆಲೆಯಲ್ಲಿ ಖರೀದಿಸಿದ್ದನ್ನು ಸುಲಭ ಬೆಲೆಗೇ ಮಾರುವದು. ಗಿರಾಕಿಗಳಿಗೆ ಅವರ ಮಾತೇ ಗ್ಯಾರಂಟಿ, ಬಂದವರ ಆರ್ಥಿಕ ಸ್ಥಿತಿ, ಜೀವನದ ರೀತಿ–ನೀತಿಗಳ

ಅನುಗುಣವಾಗಿ ಜವಳಿಯನ್ನು ಕೊಡುತ್ತಿದ್ದರಾದ್ದರಿಂದ, ಅವರಲ್ಲಿ ಪರಸ್ಪರ ಯಾವುದೋ ಬಾಂಧವ್ಯ ಬೆಳೆಯಲು ಅನುಕೂಲವಾಗುತ್ತಿತ್ತು. ವಿರಾಮವಿದ್ದರೆ ಗಿರಾಕಿಯ ಗ್ರಾಮದ, ಕುಟುಂಬದ ವಿಷಯವಾಗಿ ಕೇಳಿ ಅರಿಯುವರು. ಈ ಸ್ನೇಹದ ಕುರುಹಾಗಿ ಗಿರಾಕಿಗಳು ತಾವು ಬೆಳೆದ ಕಬ್ಬು, ಅನಾನಸ, ಬಾಳೆಗೊನೆ, ಮೊಗ್ಗೆಕಾಯಿ, ಸೋರೆಕಾಯಿ, ಇಬ್ಬುಳ ಹಣ್ಣುಗಳನ್ನು ಕಾಣಿಕೆಯಾಗಿ ತಂದು ಕೊಡುವ ಪದ್ಧತಿ ಬೆಳೆದಿತ್ತು. ಗಿರಾಕಿಗಳಿಗಾಗಿ ತಂತಿ, ಮನಿಯಾರ್ಡರ್ ಫಾರ್ಮು, ಕಾರ್ಡು ಕವರುಗಳ ದಾಸ್ತಾನು ಇಡುವರಲ್ಲದೇ ಅವುಗಳನ್ನು ತುಂಬಿ ಇಲ್ಲಿಯೇ ಬರೆದು ಕೊಡುತ್ತಿದ್ದರು.

ಸ್ವಾತಂತ್ರ್ಯದಂತೆ ಸ್ವಾವಲಂಬನೆಯತ್ತವೂ ವಿಶೇಷ ಲಕ್ಷ್ಯ ಪೂರೈಸುತ್ತಿದ್ದರು. ಹಿತ್ತಲಲ್ಲಿ ಬಿದ್ದ ತೆಂಗಿನ ಗರಿ, ಕಾಯಿಗಳನ್ನು ಎತ್ತಿ ತರುವದು, ಬೆಳೆದು ನಿಂತ ಬಾಳೆಗೊನೆ ಕಡಿಯುವದು, ಕಡಿದು ಹಾಕಿದ ಸೌದೆಯನ್ನು ಬಚ್ಚಲಲ್ಲಿ ಸೇರಿಸಿ ಇಡುವದು, ಒಡೆದ ಹಂಚುಗಳನ್ನು ಬದಲಿಸುವದು, ಬಿದ್ದ ಪಾಗಾರನ್ನು ಜೋಡಿಸುವದು, ಒಳ ನುಗ್ಗಿದ ದನಕರುಗಳನ್ನು ಓಡಿಸುವದು, ಮುಂತಾದ ಕೆಲಸ ಮಾಡಲು ಎಂದೂ ಹಿಂದೆ, ಮುಂದೆ ನೋಡಿದವರಲ್ಲ. ಯಾವ ಆಳನ್ನೂ ಇಟ್ಟುಕೊಳ್ಳದೇ ಅಂಗಡಿಯನ್ನು ತೆರೆಯುವದು, ಮುಚ್ಚುವದು, ಬಟ್ಟೆಗಳ ಥಾನುಗಳನ್ನು ತೋರಿಸಿ, ಜೋಡಿಸಿ, ಸ್ವಸ್ಥಾನಕ್ಕೆ ಮರಳಿಸುವದು, ಜವಳಿ ಖರೀದಿ ಪತ್ರವ್ಯವಹಾರ, ಹಣಕಾಸಿನ ವ್ಯವಸ್ಥೆ, ಅಂಚೆ-ಬ್ಯಾಂಕುಗಳ ಕೆಲಸಗಳನ್ನು ಅವರೇ ನಿಯಂತ್ರಿಸುತ್ತಿದ್ದರು. ಅಲ್ಲದೇ ಅವಶ್ಯವಿದ್ದಾಗ ಕೋರ್ಟು ಕಚೇರಿಗಳಿಗೂ ಎಡತಾಕಬೇಕಾಯಿತು. ತಾವು ಕರಗತಮಾಡಿಕೊಂಡ ಸಕಲ ಶಿಸ್ತನ್ನು ಮಕ್ಕಳಿಗೆ ಕೊಡಮಾಡುವದರಲ್ಲಿ ಹಿಂದೆ ಬೀಳಲಿಲ್ಲ. ಹಣ್ಣು-ಹಂಪಲು ಕೊಳ್ಳುವಾಗ ಕೊಳೆತವು ನಮ್ಮ ಪಾಲಿಗೆ ಬರದಂತೆ ಎಚ್ಚರವಹಿಸಬೇಕು. ಕಾಳುಕಡಿ ಕೊಳ್ಳುವಾಗ, ತೂಕದ ಕಲ್ಲು ಕಡಿಮೆ ಹಾಕಿದ್ದಾನೆಯೇ ಎಂದು ಪರೀಕ್ಷಿಸಬೇಕು. ಹಣ ಪಾವತಿ ಮಾಡಿದಾಗ, ಜಮಾಮಾಡಿಕೊಂಡ ನಂತರವೇ ಅಲ್ಲಿಂದ ಕಾಲು ಕೀಳಬೇಕು. ಚಿಲ್ಲರೆ ಕಡಿಮೆ ಕೊಟ್ಟಾಗ, ಪ್ರತಿಭಟಿಸಿದಂತೆ, ಹೆಚ್ಚು ಬಂದಾಗ ಹಿಂದಿರುಗಿಸಲು ಹಿಂಜರಿಯಬಾರದು. ಶಾಲೆಗೆ ಪ್ರವೇಶ ದೊರಕಿಸುವದು ಪಠ್ಯ ಪುಸ್ತಕಗಳನ್ನು ಖರೀದಿಸುವದು, ಅವುಗಳನ್ನು ಕೆಡದಂತೆ ಬಾಯಿಂಡ್ ಹಾಕುವದು.ಹಾಳೆಗಳನ್ನು ಜೋಡಿಸಿ ಹೊಲಿದು 'ವಹಿ' ಗಳನ್ನು ಹೊಲಿದುಕೊಳ್ಳುವದು;

ಎಲ್ಲವೂ ಹುಡುಗರ ಜವಾಬ್ದಾರಿಯೇ! ಎಳೆವಯಸ್ಸಿನಲ್ಲಿಯೇ ಬ್ಯಾಂಕಿಗೆ ಹಣ ಕಟ್ಟು ವದು, ಡ್ರಾಫ್ಟ ತರುವದು, ಮನಿಯಾರ್ಡರ ಕಳಿಸುವದರಲ್ಲಿ ತರಬೇತಿ ಕೊಟ್ಟಿದ್ದರು.

ಪಾಠಗಳನ್ನು ಚೆನ್ನಾಗಿ ಓದಿಕೊಳ್ಳಬೇಕು. ಅರಿಯದವನ್ನು ಕೇಳಬೇಕು ಪರೀಕ್ಷೆಗಳಲ್ಲಿ ಉತ್ತರಗಳನ್ನು ಮನಸ್ಸುಗೊಟ್ಟು ಬರೆಯಬೇಕು. ಇಷ್ಟಾಗಿಯೂ ಕಡಿಮೆ ಗುಣ ಬಂದರೆ, ಉತ್ತೀರ್ಣನಾಗದಿದ್ದರೆ, ಅದಕ್ಕಾಗಿ ಎಂದೆಂದೂ ಮರು ಗುವಂತಿಲ್ಲ. ಇವುಗಳೆಲ್ಲ ಜೀವನದಲ್ಲಿ ಇದ್ದವೇ! ಸುಖ ಬಂದಾಗ ಪಟ್ಟ ಆನಂ ಕ್ಕಿಂತ ನೂರು ಪಾಲು ದುಃಖ ಕಷ್ಟ ಬಂದಾಗ ಆಗುತ್ತದೆ ಎಂಬುದೂ ಅವರ ಖಚಿ ವಾದ ಅಭಿಪ್ರಾಯವಾಗಿತ್ತು. ಮಗು ಹುಟ್ಟಿದಾಗ ಆನಂದ ಪಡುವದಕ್ಕಿಂತ ಮುದಿ ಕೊನೆಯುಸಿರು ಬಿಟ್ಟಾಗ ಮರುಗಬಾರದು. ಹುಟ್ಟಿ ಬಂದದ್ದಕ್ಕಾಗಿ ಸಾರ್ಥ ಜೀವನ ನಡೆಸಿದ್ದರೆ, ಅಂಥ ಮೃತರ ಬಗ್ಗೆ ಶೋಕ ಮಾಡುತ್ತಿದ್ದರೆ ಅದ ಅವರಿಗೆ ಅಪಚಾರ ಮಾಡಿದಂತೆ. ಯಾವ ಮಾಪನದಿಂದ ಅಳೆದರೂ ಕಾಕಾ ಅತ್ಯಂತ ಫಲಕಾರಿ ಜೀವನ ನಡೆಸಿದ್ದಾರೆ. ತಮ್ಮ ಕರ್ತವ್ಯ ಪಾಲನೆ ಮುಗಿ ನಂತರ ಯಮನ ಕರೆಗೆ ಓಗೊಟ್ಟು ಪರಲೋಕಕ್ಕೆ ತೆರಳಿದರೆ, ಕಣ್ಣೀರೇ ಹಾಕಬೇಕು? ಇಂಥ ವ್ಯಕ್ತಿ, ನರಳಾಟ, ಕಾಯಿಲೆ ಚೀರಾಟಗಳಿಲ್ಲದೇ ಇಹಲೋ ಯಾತ್ರೆ ಮುಗಿಸಿದ್ದರಿಂದ ನೆಮ್ಮದಿಯ ಉಸಿರು ಬಿಡುವಂತಾಯಿತು. ಇದೆಲ್ಲ ನಿನ ಅಸಾಮಾನ್ಯವೆಂದು ಅನಿಸಿರಬೇಕಲ್ಲವೇ?

ಮಗನನ್ನು ಬರಮಾಡಿಕೊಳ್ಳಲು ಕಾಕಿಯವರನ್ನು ಜೈಪುರಕ್ಕೆ ಬರಲ ವಿನಂತಿಸಿಕೊಂಡಾಗ, ಕಾಕಾರಿಗೆ ಹೃದಯ ವಿಕಾರ ಕಾಣಿಸಿಕೊಂಡಿತ್ತಂತೆ. ಆದ ಅವರೇ, 'ಸಾವಿನ ಕರೆ ಬಂದಾಗ ನೀನು ಇಲ್ಲಿ ಇದ್ದರೂ ಒಂದೇ, ಜೈಪು ದಲ್ಲಿ ಇದ್ದರೂ ಒಂದೇ. ಹೋಗಿ ಬಾ' ಎಂದು ಪ್ರೋತ್ಸಾಹಿಸಿದ್ದರು. ವಿರ ವನ್ನು ಎದುರಿಸಲು ಕಾಕಾರ ತರಬೇತಿ ಎಷ್ಟೊಂದು ಫಲಕಾರಿಯಾಗಿತ್ತೆಂಬ ದನ್ನು ಕಾಕಿಯವರನ್ನು ಕಂಡಾಗ ಅರಿತುಕೊಂಡೆ. ಕಣ್ಣೀರಿಲ್ಲ, ನಿಟ್ಟುಸಿರಿಲ್ಲ ಬದಲಾಗಿ, 'ನಿನ್ನ ಪಿತರಿಗೆ ಎಷ್ಟು ಒಳ್ಳೆಯ ಮರಣ ಬಂದಿತು ಗೊತ್ತಾ ಊಟದ ನಂತರ, ಎಂದಿನಂತೆ ನಮ್ಮನ್ನೆಲ್ಲ ಮಾತನಾಡಿಸಿ, ನಗಿಸಿ, ಕಕ್ಕಸಿ ಹೋಗಿ ಬಂದರು. ಒಳಗೆ ಬರುತ್ತಿದ್ದಂತೆ ಇದ್ದಕ್ಕಿದ್ದಂತೆ ಕುಸಿದರು. ಕ್ಷಣ ರ್ಧದಲ್ಲಿ ಪ್ರಾಣಪಕ್ಷಿ ಹಾರಿ ಹೋಯಿತು. ಪುಣ್ಯ ಮಾಡಿದವರಿಗೆ ಮಾ ಇಂಥ ಸಾವು ಬರುತ್ತದೆ' ಎಂದು ಉದ್ಗರಿಸಿದರು. ಇಂಥ ಸುಸಂಸ್ಕೃತ ತಂದೆ ತಾಯಿಗಳನ್ನು ಹೊಂದಿದ್ದಕ್ಕೆ ಅಭಿಮಾನ ಪಡುತ್ತೇನೆ.

೧೨. ಮುರುಕಲು ಮನೆ ಮೇಲು

ಬೆಂಗಳೂರು, ೩೧-೧-೧೯೬೪

ಮುಂಬಯಿಯ ದಾದರ ರೇಲ್ವೆ ನಿಲ್ದಾಣದಲ್ಲಿ ರಾತ್ರಿ ಪುಣೆಗೆ ಹೊರಡುವ ರೇಲಿನಲ್ಲಿ ವಿಪರೀತ ಗದ್ದಲ. ಹೇಗಾದರೂ ಮಾಡಿ, ಕೂಡ್ರುವ ಸ್ಥಳ ದೊರಕಿಸಿಕೊಂಡರೆ, ಅಲ್ಲಿಯೇ ರೋಗಿಷ್ಟನೊಬ್ಬ ಬಂದು ಸೇರಿಕೊಳ್ಳಬೇಕೇ? ಅವನು ಏಕಪ್ರಕಾರವಾಗಿ ಕೆಮ್ಮುತ್ತ ಉಗುಳುತ್ತಿದ್ದರೂ ಸಿಕ್ಕ ಸ್ಥಳ ಬಿಡುವಂತೆಯೇ ಇರಲಿಲ್ಲ. ಎರಡು ದಿನ ಸತತ ಪ್ರಯಾಣ ಮಾಡಿ ಹೊನ್ನಾವರದ ಸ್ವಗೃಹ ಸೇರುತ್ತಿದ್ದಂತೆ ಮೈ, ಕೈ ನೋವು ಕಾಣಿಸಿಕೊಂಡಿತು, ರಾತ್ರಿ ಬಿಡದ ಕೆಮ್ಮು ಕಾಣಿಸಿಕೊಂಡಿತು. ಡಾಕ್ಟರರು ಪರೀಕ್ಷಿಸಿದಾಗ ಜ್ವರವು ೧೦೪$^{\circ}$ಗೆ ಏರಿತ್ತು. ಜೊತೆಗೆ ವಿಪರೀತ ತಲೆನೋವು. ಇಷ್ಟಾದರೂ ಇನ್ನಿತರರಿಗೆ ತೊಂದರೆಯಾಗದಂತೆ, ರಾಮ-ಕೃಷ್ಣರ ನಾಮ ಜಪಿಸುತ್ತ ಬಿದ್ದುಕೊಂಡಿದ್ದರಿಂದ ನೆರೆದ ಆಪ್ತರು ಕರುಣೆ ತೋರಿಸುವದಲ್ಲದೇ ಇನ್ನೇನೂ ಮಾಡುವಂತಿರಲಿಲ್ಲ. ನಿನಗೆ ತಂತಿಯಿಂದ ತಿಳಿಸಲೇ? ಎಂದು ವಿಚಾರಿಸಿದರು. ಚಿಕ್ಕಮಗುವಿನೊಂದಿಗೆ ರಾಜಸ್ಥಾನದಿಂದ ಅಷ್ಟೊಂದು ಸುಲಭದಲ್ಲಿ ಬರಲಾಗುವದಿಲ್ಲ. ಸುಮ್ಮನೆ ಕಂಗೆಡಿಸುವದರಲ್ಲಿ ಅರ್ಥವಿಲ್ಲವೆಂದು 'ಬೇಡ'ವೆಂದು ಹೇಳಿದೆ. ಎರಡು ದಿನಗಳಲ್ಲಿ ಜ್ವರ ತೊಲಗಿದರೂ, ಮೈ-ಕೈ ನೋವು ಕೆಮ್ಮುಗಳು ಅಂಟಿಕೊಂಡಿದ್ದವು. ಸಿಕ್ಕ ಹೊಸ ನೌಕರಿ ಕೈ ಬಿಟ್ಟು ಹೋಗಬಾರದೆಂದು ಸ್ವಲ್ಪ ಚೇತನ ತುಂಬಿದಾಕ್ಷಣ ಬೆಂಗಳೂರಿಗೆ ಬಂದು ಬಿಟ್ಟೆ.

ನಮ್ಮವರ ಅಷ್ಟೊಂದು ಪ್ರೀತಿ, ಆದರಗಳನ್ನು ಬಿಟ್ಟು ಬಂದದ್ದಕ್ಕಾಗಿ ಪರಿತಪಿಸುವಂತಾಯಿತು. ಚಹ-ಕಾಫಿಗಳ ಅಭ್ಯಾಸವಿಲ್ಲದ್ದರಿಂದ ಬಿಸಿ ಹಾಲು ಕುಡಿದರೆ ಗಂಟಲಿಗೆ ಹಾಯೆನಿಸುತ್ತಿತ್ತು. ಬಿಸಿ ನೀರೇ ಸಿಗದಿದ್ದಲ್ಲಿ ಹಾಲು ಎಲ್ಲಿಂದ ಬರಬೇಕು? ಒಂದೆರಡು ಗಂಟೆ ಕಾಲ ಬೆಚ್ಚಗೆ ಮಲಗಬೇಕು ಅನಿಸಿದರೂ, ರಾತ್ರಿ ಹನ್ನೊಂದರ ಮೊದಲು, ಬೆನ್ನು ಹಾಸಿಗೆಗೆ ತಾಗಿಸುವಂತೆಯೇ ಇಲ್ಲ. ಹೊರ-ಒಳಗಿನ ಚಳಿಯನ್ನು ಸಂರಕ್ಷಿಸಲು ತೆಳುವಾದ ಚಾದರ, ಅಸಮರ್ಥವಾಗಿದ್ದರೂ,

ಕಿಟಕಿಯನ್ನು ಮುಚ್ಚುವಂತಿರಲಿಲ್ಲ. ಮಾನವನು ಇಷ್ಟೊಂದು ಅಸಹಾಯಕನಾಗ ಬಾರದು, ಅಂದುಕೊಂಡೆ. ಏನಿಲ್ಲೆಂದರೆ ಸುಖವಾಗಿ ಮಲಗಲು ಕೊಂಚ ಜಾಗ ಮಾನವ ಮಾತ್ರ ಪ್ರಾಣಿಗೆ ಬೇಕೇ ಬೇಕು ಎನಿಸಿತು. ಛಾದರದ ಒಳಗಡೆ ಮುದು ಮುದ್ದೆಯಾಗಿ ನಡುಗುತ್ತ ಬಿದ್ದುಕೊಂಡಾಗ, ಭಾರತದ ನಿರ್ಭಾಗ್ಯ ಕೋಟಿ ಕಣ್ಣೆ ದುರು ಸುಳಿಯುತ್ತಿತ್ತು. ಅವರೆಲ್ಲ ಜೀವನದ ಉದ್ದಕ್ಕೂ ಈ ಶಿಕ್ಷೆ, ಯಾತನೆ ಅನುಭವಿಸುತ್ತಾರೆಂದು ನೆನಪಾದಾಗ, ನನ್ನದೇನು ಮಹಾ? ಅನಿಸಿತು. ಮೈಕೊರೆ ಯುವ ಸೀತಗಾಳಿ ಸತ್ವ ಪರೀಕ್ಷೆ ನಡೆಸಿಯೇ ಇತ್ತು. ಮುಂಜಾವಿನಲ್ಲಿ ಸ್ವಲ್ಪ ಜೊಂಪು ಹತ್ತುವದರಲ್ಲಿ ಇದ್ದಾಗ, ಪೊರಕೆಲಸದವಳು ಕಸಗೂಡಿಸಲು ಬಂದದ್ದ ರಿಂದ ಜಾಗ ಖಾಲಿ ಮಾಡಲೇಬೇಕಾಯಿತು.

ಇಂಥ ಅನುಭವ ಹೊಸದೇನೂ ಅಲ್ಲ. ೧೯೫೭ ರಲ್ಲಿ ಕರ್ನಾಟಕ ವಿಶ್ವ ವಿದ್ಯಾಲಯ, ಜೀವಶಾಸ್ತ್ರದಲ್ಲಿ ಸ್ನಾತಕೋತ್ತರ ವರ್ಗವನ್ನು ಸ್ಥಗಿತಗೊಳಿಸಿದ್ದ ರಿಂದ ಮುಂಬೈ ವಿಶ್ವವಿದ್ಯಾಲಯಕ್ಕೆ ಅರ್ಜಿ ಸಲ್ಲಿಸಿ, ಪ್ರವೇಶ, ವಾಸದ ವ್ಯವಸ್ಥೆ ಗಾಗಿ ಆ ಮಹಾನಗರಕ್ಕೆ ಧಾವಿಸಿದೆ. ವಿಶ್ವವಿದ್ಯಾಲಯ, ಮತ್ತು ವಿವಿಧ ಶಿಕ್ಷಣ ಕೇಂದ್ರಗಳಿಗೆ ಉರಿಬಿಸಿಲಿನಲ್ಲಿ ಎಡತಾಕಬೇಕಾಗಿ ಬಂದಿತು. ವಿಪರೀತ ಬಾಯಾರಿಕೆ ಕಾಣಿಸಿಕೊಂಡಿತು. ಮೇಲಿಂದ ಮೇಲೆ ತಂಪು ಪಾನೀಯ ಸೇವಿಸಿ, ನೆಗಡಿ-ಕೆಮ್ಮು ಗಳು ಕಾಣಿಸಿಕೊಂಡವು. ಅಂದು ಏಶಿಯನ್ ಫ್ಲೂ ಮಹಾರಾಷ್ಟ್ರದಲ್ಲೆಲ್ಲ ಹರಡಿ ಕೊಂಡಿದ್ದರಿಂದ, ನನ್ನನ್ನೂ ಅದು ಆಕ್ರಮಿಸಿಕೊಂಡಿತು. ಎಲ್ಲಿಯಾದರೂ ಮಲಗಿ ವಿರಮಿಸಿಕೊಂಡರೆ, ಚೇತರಿಸಿಕೊಳ್ಳುತ್ತಿದ್ದೆ. ಆದರೆ ಹೋಗುವದೆಲ್ಲಿ? ಆ ಮಹಾ ನಗರದಲ್ಲಿ ಅನಾರೋಗ್ಯದಿಂದ ಬಳಲುವವರಿಗೆ ಬಿದ್ದುಕೊಳ್ಳಲೂ ಸ್ಥಳಾಭಾವವೆಂಬ ಕಟುಸತ್ಯ ಗಮನಕ್ಕೆ ಬಂದಿತು. ಅಸಹಾಯಕನಾಗಿ ಅ, ಈ ಬಳಗದವರಿಗೆ ತೊಂದರ ಕೊಡುವ ಮನಸ್ಸಿಲ್ಲದೇ ಆಸ್ಪತ್ರೆಯೊಂದರಲ್ಲಿ ಭರ್ತಿಯಾದೆ. ಆದರೆ ಅಲ್ಲಿ ಬರುವ ಹೊಸ ಹೊಸ ರೋಗಿಗಳಿಗೆ ಅವಕಾಶ ಮಾಡಿಕೊಡುವ ಸಲುವಾಗಿ, ಗುಣಮುಖ ನಾಗುತ್ತಿದ್ದಂತೆ ಹಾಸಿಗೆ ಖಾಲಿ ಮಾಡೆಂದರು. ಮುಂಬಯಿಯಲ್ಲಿ ಆಪ್ತೇಷ್ಟರು ಬಂಧು-ಬಾಂಧವರು ಕಿಕ್ಕಿರಿದು ತುಂಬಿದ್ದರೂ, ಯಾರ ನೆರವಿಗೂ ಕೈಚಾಚದೇ ದುಬಾರಿಯಿಲ್ಲದ ಹೊಟೇಲ ಒಂದರ ಮೊರೆಹೊಕ್ಕೆ. ಪ್ರವಾಸ ಕೈಕೊಳ್ಳುವಷ್ಟು

ತ್ರಾಣ ಬಂದಾಗ, ಆ ಮಹಾನಗರಕ್ಕೆ ವಂದಿಸಿ, ಊರಿಗೆ ಹೊರಟುಬಿಟ್ಟೆ.[೧೭]

ಆಗಿನ್ನೂ ಹನ್ನೆರಡು ವರ್ಷದವನಿರಬೇಕು. ಟಾನ್ಸಿಲ್ಸ್‌ಗಳನ್ನು ಕೂಡಲೇ ತೆಗೆಸಬೇಕೆಂದು ಡಾಕ್ಟರರು ಅಭಿಪ್ರಾಯಪಟ್ಟರು. ಹುಬ್ಬಳ್ಳಿಯ ಚಿಟಗುಪ್ಪಿ ಆಸ್ಪತ್ರೆಯ ಸರ್ಜನರು ಪರಿಚಿತರಿದ್ದುದರಿಂದ ಅಲ್ಲಿಯೇ ಭರ್ತಿ ಮಾಡಿದರು. ರೋಗಿ, ಮಹಾರೋಗಿಗಳೊಂದಿಗೆ ಯಾವ ರೋಗವಿಲ್ಲದ ಈ ಹುಡುಗನನ್ನೂ ಮಲಗಿಸಿ ಬಿಟ್ಟಿದ್ದರು. ರೋಗಿಗಳ ಕೂಗಾಟ, ನರಳಾಟಗಳು ಭಯ ಹುಟ್ಟಿಸು ವಂತಿದ್ದವು. ನಡುರಾತ್ರಿಯಲ್ಲಿ ಬೆಚ್ಚಿ ಬಿದ್ದು ಎಚ್ಚರವಾದಾಗ, ಮತ್ತೆ ನಿದ್ದೆ ಬಾರದೇ ಬೆಳಕು ಹರಿಯುತ್ತಿತ್ತು. ಮೇಲ್ವಿಚಾರಣೆ ವಹಿಸಿಕೊಂಡ ಹಿರಿಯ ರೊಬ್ಬರು ದರ್ಶನ ಲಾಭ ಕೂಡ ಒದಗಿಸಲಿಲ್ಲ. ಒಂದು ರಾತ್ರಿ ನಮ್ಮ ವಾರ್ಡಿನಲ್ಲಿ ಕೋಲಾಹಲವೋ ಕೋಲಾಹಲ 'ಸತ್ತೆನ್ರೆಪೊ ಸತ್ತೆ!' ಅಯ್ಯಯ್ಯೋ ಅವ್ವಾ ಅವ್ವಾಲಃ! ಚೀತ್ಕಾರಗಳು ಭಯಾನಕವಾಗಿದ್ದವು. ಯಮಲೋಕದಲ್ಲಿ ಮಾತ್ರ ಇಂಥ ಶಿಕ್ಷೆ ಕೊಡುವರೆಂದು ಭಾವಿಸಿದವನಿಗೆ ದಿಗ್ಭ್ರಾಂತಿಯಾಗಿತ್ತು. ಬಸ್

---

17 ಈ ಘಟನೆಯಿಂದಾಗಿ ನನ್ನ ಜೀವನದ ದಿಕ್ಕೇ ಬದಲಾಯಿಸಿತು. ನಮ್ಮ ವಿಶ್ವವಿದ್ಯಾಲಯದವರೇ ಸ್ನಾತಕೋತ್ತರ ವರ್ಗಗಳನ್ನು ಪ್ರಾರಂಭಿಸ ಬೇಕೆಂದು ಒತ್ತಾಯಿಸುವ ತಂಡದ ನಾಯಕನಾದೆ. ಪ್ರವೇಶವನ್ನೇನೋ ಕೊಟ್ಟರು. ಆದರೆ ಅಧ್ಯಾಪಕ ವರ್ಗವನ್ನು ನೇಮಿಸದಿದ್ದುದರಿಂದ, ಅದಕ್ಕಾಗಿ ಇನ್ನಷ್ಟು ಅಲೆದಾಡಬೇಕಾಯಿತು. ಇದರಿಂದ ದೊರೆತ ಶಿಕ್ಷಣಕ್ಕಿಂತ, ವಿದ್ಯಾರ್ಥಿಗಳ ಹಕ್ಕು-ಬಾಧ್ಯತೆಗಳನ್ನು ಅರಿಯುವಂತಾ ಯಿತು. ಅಧಿಕಾರಿಗಳು ಕೇವಲ ಸುಳ್ಳು ಆಶ್ವಾಸನೆಗಳನ್ನು ನೀಡಿ ಕಾಲ ಹರಣ ಮಾಡುತ್ತಿದ್ದಾರೆಂದು ಅರಿವಾದಾಗ ಕುಲಪತಿಗಳನ್ನು ಕಂಡು ತೊಂದರೆ ಅರುಹಲು ಹಿಂದೆ ಮುಂದೆ ನೋಡಲಿಲ್ಲ. ಇದರಿಂದ ಅವರು ರೇಗಿದರೂ ನಮ್ಮ ಸಮಸ್ಯೆಗೆ ಪರಿಹಾರ ನೀಡಿದರು. ಪ್ರವೇಶ ಕೊಟ್ಟ ತಪ್ಪಿಗೆ, ವಿದ್ಯಾರ್ಥಿಗಳ ಬೇಡಿಕೆ ಪೂರೈಸಬೇಕಾಯಿತು. ಆದರೆ ಮರು ವರ್ಷ ತಿರುಗಿ ಹೊಸ ವಿದ್ಯಾರ್ಥಿ ವರ್ಗಕ್ಕೆ ಪ್ರವೇಶ ನಿರಾಕರಿಸಿ ಬಿಟ್ಟರು.

ಮತ್ತು ಲಾರಿ ಡಿಕ್ಕಿ ಹೊಡೆದು ಆದ ಅಪಘಾತದಲ್ಲಿ ಸಿಕ್ಕವರನ್ನೆಲ್ಲ ಆಸ್ಪತ್ರೆಗೆ ಸೇರಿಸಿದ್ದರು. ಒಬ್ಬಿಬ್ಬರು ರಸ್ತೆಯಲ್ಲೇ ಅಸು ನೀಗಿದ್ದರು. ಮೂವರು ಆಪ-ರೇಶನ್ ಮಾಡುವಾಗ ಸತ್ತರು. ನಂತರವೂ ಕೆಲಜನ ಮೃತಪಟ್ಟರು. ಸಾಲಾಗಿ ಮೃತ ದೇಹಗಳನ್ನು ಒಂದೆಡೆ ಮಲಗಿಸಿದ್ದರು. ಈ ಆಸ್ಪತ್ರೆಯಲ್ಲಿ ಹೀಗೇ ಆಗುವದುಂಟೆ? ಎಂದು ಅನಿಸಿತ್ತು. ಆದರೆ ನನಗೆ ಮಾತ್ರ ಜೀವಂತವಾಗಿಯೇ ಹೋಗಗೊಟ್ಟಿದ್ದರು!

○

೧೮. ಬೆಂಗಳೂರ ದರ್ಶನ

ಬೆಂಗಳೂರು, ೧೦-೩-೧೯೬೯

ಜೋಬನೇರದಂತಹ ಕಗ್ಗಳ್ಳಿಯಿಂದ ಕರ್ನಾಟಕದ ರಾಜಧಾನಿಗೆ ಬಂದದ್ದರಿಂದ ಇಲ್ಲಿಯ ರೀತಿ-ನೀತಿಗಳಲ್ಲಿ ಆಸಕ್ತಿ ಕೆರಳುವದು ತೀರ ಸ್ವಾಭಾವಿಕ. ಮಲ್ಲೇಶ್ವರಂ,-ವೈಯಾಲಿಕಾವಲದ ವಾಸಸ್ಥಳದಿಂದ ಹೆಬ್ಬಾಳದ ಕೀಟ ಸಂಶೋಧನಾಲಯಕ್ಕೆ ಹೋಗಲು ಯಾವ ಸಾರಿಗೆ ವ್ಯವಸ್ಥೆಯೂ ಇಲ್ಲದ್ದರಿಂದ ಕಾಲ್ನಡಿಗೆಗೆ ಶರಣು ಹೋಗುವದು ಒಂದೇ ಮಾರ್ಗ. ಹದಿನೇಳನೆಯ ಅಡ್ಡರಸ್ತೆಯಲ್ಲಿ ಸ್ಟೆಲಾ ಮೇರಿ ಕಾನವೆಂಟಿನ ಭವ್ಯ ಕಟ್ಟಡ ತಲೆಯೆತ್ತಿ ನಿಂತಿದೆ. ಉಂಡು, ತಿಂದು ಧಾಂಡಿಗರಾಗಿ ಬೆಳೆದ ಧನಿಕ ವರ್ಗದ ಹುಡುಗಿಯರು ಸಮವಸ್ತ್ರ ಧರಿಸಿ ಆಟ-ಪಾಟಗಳಲ್ಲಿ ತೊಡಗಿರುತ್ತಾರೆ. ಸರ್ವರೂ ತಾವು ಹುಟ್ಟಿನಿಂದ ಅಮೇರಿಕಕ್ಕೆ ಸೇರಿದವರೋ ಎನ್ನುವಂತೆ ವ್ಯಾಕರಣ ರಹಿತ ಇಂಗ್ಲೀಷ್ ಮಾತನಾಡುವವರೇ! ಅವರೆಲ್ಲ ಯಸ್ ಮ್ಯಾನ್, ನೋ ಮ್ಯಾನ್ ಎಂದು ಸ್ತ್ರೀವರ್ಗವನ್ನು ಪುರುಷರೆಂದು ಸಂಬೋಧಿಸುವದು ಮಹಿಳಾ ಸ್ವಾತಂತ್ರ್ಯ ಚಳುವಳಿಗೆ ಅವಮಾನ. ಪುಸ್ತಕ ಪಟ್ಟಿ, ತಿಂಡಿ, ತಿನಸು ಹೊತ್ತು ಬರುವ ತಂದೆ-ತಾಯಿಗಳು ಅವರೊಡನೆ ಮಾತನಾಡುವ ಹರಕು-ಮುರುಕು ಇಂಗ್ಲೀಷ್ ಕೇಳುವದೇ ಮನರಂಜನೆಯಾಗಿರುತ್ತದೆ.

ಹಳೆಯ ಮೈಸೂರಿನ ಕುರುಹು ಹೊಂದಿರುವ ಭಾಷ್ಯಂ ವೃತ್ತ, ಕೈಗಾಡಿ-ವ್ಯಾಪಾರಿಗಳಿಗೆ ಆಶ್ರಯ ನೀಡಿದೆ. ಒಣಗಿದ ಕಿತ್ತಲೆ, ಹಳಸಿದ ಪೇರಲಹಣ್ಣು, ಅರೆ ಹುರಿದ ಕಳ್ಳೇಕಾಯಿ, ಖಾರಪುಡಿ ಮೆತ್ತಿಟ್ಟ ಸೌತೇಕಾಯಿ, ತೋತಾಪುರಿ ಮಾವಿನಕಾಯಿ ಹೋಳುಗಳು, ಕರಿಕಬ್ಬಿನ ಗೇಣುದ್ದ ತುಣುಕುಗಳು, ಅವರು ಮಾರುವ ಸರಕು. ವಿದ್ಯಾರ್ಥಿನಿಯರು ಮನೆಯಿಂದ ತಂದ ಸ್ಯಾಂಡ್‌ವಿಚ್, ಮೊಸರನ್ನ, ಪುಳಿಯೋಗರೆಗಳನ್ನು ಭಿಕ್ಷುಕರಿಗೆ ಕೊಟ್ಟು ಈ ತಿಂಡಿಗಾಗಿ ಆಸೆ ಪಡುತ್ತಾರೆ. ದುಡ್ಡಿಲ್ಲದವರು ಸೌತೆಕಾಯಿ ಸಿಪ್ಪೆಗೇ ಉಪ್ಪುಕೇಳಿ ಸವರಿ ತಿನ್ನುವಾಗ ಅಯ್ಯೋ ಎನಿಸದಿರದು. ಕೆಲವರು ಉದ್ದರಿ ಖಾತೆ ಇಟ್ಟಿರುತ್ತಾರೆ.

ಮಹಿಳಾ ವ್ಯಾಪಾರಿಗಳು, ಬಾಯ್ತುಂಬ ಎಲೆಡಿಕೆ ತುಂಬಿಕೊಂಡು ತಮಿಳಿನಲ್ಲಿ ಹರಟುತ್ತಿರುತ್ತಾರೆ. ಸನಿಹದ ಸಾಂಕಿ ಕೆರೆ ಉಸ್ತುವಾರಿ ಮಾಡುವವರಿಲ್ಲದೇ ನಿಂತಿದೆ. ಪಾತ್ರೆ ಬೆಳಗುವವರು ಬಟ್ಟೆ ಬರೆ ಒಗೆಯುವವರು. ದನಕರು ಮೇಯಿಸುವವರು, ಈಜು ಕಲಿಯುವವರನ್ನು ಅಲ್ಲಿ ಕಾಣಬಹುದು.

ಸ್ವಾತಂತ್ರ್ಯ ಯೋಧರಾದ ಕಾರ್ನಾಡ ಸದಾಶಿವರಾಯರ ನೆನಪಿಗಾಗಿ, ಸದಾಶಿವನಗರ ಎಂದು ನಾಮಕರಣ ಮಾಡಿದ್ದಾರೆ. ದೇಶಕ್ಕಾಗಿ ಸರ್ವಸ್ವವನ್ನು ಈಡಾಡಿ ಬಡವರಾಗಿ ಗತಿಸಿದ ಮಹಾನ್ ತ್ಯಾಗಿಯ ಹೆಸರು ಹೊತ್ತರೂ, ಈ ಬಡಾವಣೆಯನ್ನು ಧನಿಕರನ್ನು ತಮ್ಮದನ್ನಾಗಿ ಮಾಡಿಕೊಂಡಿದ್ದಾರೆ. ಬಳ್ಳಾರಿ ರಸ್ತೆಯಲ್ಲಿ ಮುಂದುವರಿದಾಗ, ಇಂಗ್ಲಂಡಿನಲ್ಲಿಯ ಕ್ಯಾಸಲ್ ಮಾದರಿಯಲ್ಲಿ ಕಟ್ಟಿದ ಬೆಂಗಳೂರ ಅರಮನೆ ಬಿಕೋ ಎಂದು ನಿಂತಿದೆ. ಎಂಬುದು ಅರಿವಾಗುವದು. ಹಿಂದೊಮ್ಮೆ ಫಲ–ಪುಷ್ಪಗಳಿಂದ ಅಲಂಕೃತವಾಗಿದ್ದರೂ, ಆಗ ಮರಗಳು ತಬ್ಬಲಿಯಾಗಿ ಕಣ್ಣೀರು ಹಾಕುವಂತೆ ಭಾಸವಾಯಿತು. ಎಡಬದಿಗೆ ಕೆಂಪೇಗೌಡನ ಗೋಪುರ ನಿಂತಿದೆ. ಬೆಂಗಳೂರು ನಗರ ತಾನು ನಾಲ್ಕೂ ದಿಕ್ಕುಗಳಲ್ಲಿ ಕಟ್ಟಿಸಿದ ಗೋಪುರಗಳವರೆಗೆ ವಿಸ್ತಾರವಾಗಿ ಬೆಳೆಯಬೇಕೆಂಬುದು ಆತನ ಹೆಬ್ಬಯಕೆ ಆಗಿತ್ತಂತೆ. ಆದರೆ ಈಗ ಊರ ಅದರ ಹತ್ತುಪಟ್ಟು ಬೆಳೆದುಬಿಟ್ಟಿದೆ. ಬರಿದಾಗಿದ್ದ ಈ ಸ್ಥಳವನ್ನೆಲ್ಲ ವರ್ಚಸ್ಸು ಇರುವವರಿಗೆಲ್ಲ ಗೃಹನಿರ್ಮಾಣಕ್ಕಾಗಿ ಸರಕಾರ ಹಂಚಲಾರಂಭಿಸಿದೆ. ತಗ್ಗು–ದಿನ್ನೆಗಳನ್ನೆಲ್ಲ ಸಮಪಾತಳಿ ಮಾಡಿ, ಹೆದ್ದಾರಿ ಮಾಡಲಾರಂಭಿಸಿದ್ದರಿಂದ ನೋಡಿದಲ್ಲೆಲ್ಲ ಧೂಳು.

ಎದುರಿಗೆ ಭವ್ಯವಾದ ಮೇಕ್ರಿ ವೃತ್ತ ಬರುತ್ತದೆ. ಎಡಗಡೆಯ ರಸ್ತೆ ರಾಮನ್ ಇನ್‌ಸ್ಟಿಟ್ಯೂಟ ಮತ್ತು ಟಾಟಾ ಇನ್‌ಸ್ಟಿಟ್ಯೂಟಿಗೆ ಹೋದರೆ, ಬಲಗಡೆಯ ರಸ್ತೆ ಅರಮನೆ ಮತ್ತು ಜಯಮಹಲಿಗೆ ಹೋಗುತ್ತ, ಬಳ್ಳಾರಿ ರಸ್ತೆ ಮುಂದರಿಯುತ್ತದೆ. ಇರುವೆ ಸಾಲಿನಂತೆ ವಾಹನಗಳು ಎಲ್ಲೆಲ್ಲಿಂದಲೋ ಹೊರಟು ಇನ್ನೆಲ್ಲಿಗೋ ಓಡುತ್ತಿರುತ್ತವೆ. ಟ್ರಕ್‌ಗಳಲ್ಲಿ ಮಳಲು, ಇಟ್ಟಂಗಿ, ಕಲ್ಲು, ಜಲ್ಲಿ, ಸೆರೆಯ ಪಿಪಾಯಿಗಳನ್ನು ಹೊರಲಾಗದಷ್ಟು ಪ್ರಮಾಣದಲ್ಲಿ ಹೇರಿರುತ್ತಾರೆ. ದೂರದ ಊರಿಗೆ ಹೊರಟ ಬಸ್ಸುಗಳು, ಆಟೋಗಳು, ಎತ್ತಿನ ಗಾಡಿಗಳೂ ಒಟ್ಟೊಟ್ಟಿಗೆ ಸ್ಪರ್ಧೆಯಲ್ಲಿ ಸಾಗಿರುತ್ತವೆ. ಇಲ್ಲಿಯೇ ಬಿನ್ನಿ ಮಿಲ್ಸ ಇರುವದರಿಂದ ಜನ ಜಂಗುಳಿ ಹೆಚ್ಚು. ನಿನ್ನ ಬಯಕೆಯೂಟದ ಸೀರೆ ಇಲ್ಲಿಯೇ ಸಿದ್ಧವಾದದ್ದಿದ್ದರೆ

ಆಶ್ಚರ್ಯವಿಲ್ಲ. ಅದರ ಎದುರಿಗೇ ವಾಯುಪಡೆಯ ತರಬೇತಿ ಕೇಂದ್ರವೂ ಇದೆ. ಅನತಿ ದೂರದಲ್ಲಿ ಕೃಷಿ ವಿಶ್ವವಿದ್ಯಾಲಯವಿದೆ. ಅಲ್ಲಿ ನೆಟ್ಟು ನಿಂತಂಥ ಬೋರ್ಡುಗಳನ್ನು ಓದುವದೇ ಕುತೂಹಲಕಾರಿ. "ಹೋರಿಗಳ ವೀರ್ಯ ಸಂಕಲನಾ ಕೇಂದ್ರ" "ಕೃತಕ ಗರ್ಭಧಾರಣಾ ಕೇಂದ್ರ" "ಕುಕ್ಕುಟ ಸಂಗೋಪನಾ ಕೇಂದ್ರ" "ಮೊಟ್ಟೆಗಳ ವಿತರಣಾ ಕೇಂದ್ರ" ಇತ್ಯಾದಿ. 'ನಿರೋಧ ಬಳಸಿ' ಎಂದು ಗುಟಲು ಕಿತ್ತು ಬರುವಂತೆ ಕಿರುಚುವ ಸರಕಾರವೇ ಗೋವುಗಳಿಗೆ ಕೃತಕ ಗರ್ಭ ಧಾರಣೆ ಮಾಡಿಸುವ ಯೋಜನೆ ಅದೆಷ್ಟು ವಿರೋಧಾಭಾಸದ್ದು! ಅನಿಸಿತು. ಈ ಪ್ರಾಣಿ ಪ್ರಪಂಚದ ನಡುವೆ, ಕೀಟ ಸಂಶೋಧನಾಲಯದ ಕ್ಷೀಣ ಸ್ವರವೂ ಕೇಳಿ ಬರುತ್ತಿತ್ತು. ರಸ್ತೆಯಿಂದ ಭವ್ಯವಾಗಿ ಕಾಣಿಸದಿದ್ದರೂ ಆ ವಾರದಲ್ಲಿ ಪಪಾಯಿ, ಪೇರಲ, ಮಾವು, ಹಲಸು, ಸಪೋಟಾ ಗಿಡ, ಮರಗಳನ್ನು ಹುಲುಸಾಗಿ ಬೆಳೆಸಿದ್ದರು. ಮುಖ್ಯ ಕಟ್ಟಡದ ಎದುರಿಗೆ, ಸುಂದರವಾದ ಹೂದೋಟವಿದೆ. ಅಲ್ಲದೇ ಎಲ್ಲ ಕಡೆಯಲ್ಲೂ ಕುಂಡೆಗಳಲ್ಲಿ ಬೆಳೆಸಿದ ಹೂಗಿಡಗಳನ್ನು ಇಟ್ಟಿದ್ದಾರೆ. ಇಂತಹ ಹೊಸ, ಹಸಿರು ಪರಿಸರದಲ್ಲಿ ನೆಮ್ಮದಿ ನನ್ನದಾದೀತು ಎಂದೆನಿಸುತ್ತದೆ.

ದಿನವಿಡೀ ಕೀಟ ಪ್ರಪಂಚದ ವೈಚಿತ್ರ್ಯಗಳನ್ನು ಅಭ್ಯಸಿಸಿದರೆ, ಸಂಜೆ, ಮಾನವ ಜೀವನದ ಇಣುಕು ನೋಟಗಳನ್ನು ಪಡೆಯಲು ಮೀಸಲು. ಇದಕ್ಕಾಗಿ ಮಲ್ಲೇಶ್ವರುದಂತಹ ಸ್ಥಳ ಇನ್ನೊಂದಿಲ್ಲ. ಒಂದೂ ಸಂಪಿಗೆ ಮರವಿಲ್ಲದ, ಸಂಪಿಗೆ ಮರದ ರಸ್ತೆಯ ಇಕ್ಕೆಲದಲ್ಲಿ ಹಳೆಯ ಮನೆ, ಹೊಸ ಗ್ಯಾರೇಜುಗಳು, ಅಂಗಡಿ ಗಳಾಗಿ ಮಾರ್ಪಟ್ಟಿವೆ. ಇಲ್ಲಿ ಅಧಿಕ ಸಂಖ್ಯೆಗಳಲ್ಲಿ ದೇವಾಲಯಗಳಿವೆ. ಧರ್ಮಿ ಷ್ಟರು ಹೆಚ್ಚಿಗಿರುವದರಿಂದಲೋ, ಮಡಿವಂತರಿಗೆ ಪ್ರಾಶಸ್ತ್ಯವಿರುವದರಿಂದಲೋ, ಬ್ರಾಹ್ಮಣರ ರೊಟ್ಟಿಯಂಗಡಿ, ಬ್ರಾಹ್ಮಣರ ಫರಾಳದಂಗಡಿ, ಅಯ್ಯಂಗಾರ್ ಬೇಕರಿ ಎಂದು ತಿಂಡಿ-ತಿನಸುಗಳ ಸ್ಥಳಗಳಿಗೆ ಹೆಸರಿಡುವದು ಸಾಮಾನ್ಯ. ಅತ್ಯಲ್ಪ ಬೆಲೆಗೆ ಹೊಟ್ಟೆತುಂಬ ನಾಶ್ತಾ ಬೇಕಿದ್ದರೆ, ಇಲ್ಲಿಯೇ ಬರಬೇಕು. ಇಡ್ಲಿಗೆ ಹತ್ತು ಪೈಸೆ, ಉದ್ದಿನ ವಡೆಗೆ ಹದಿನೈದು ಪೈಸೆ, ಸಾದಾ ದೋಸೆಗೆ ಇಪ್ಪತ್ತು ಪೈಸೆ, ಮತ್ತು ಮಸಾಲೆ ದೋಸೆಗೆ ನಾಲವತ್ತು ಪೈಸೆ. ಘಮಘಮಿಸುವ ಕಪ್ ಕಾಫಿಗೆ ಇಪ್ಪತ್ತು ಪೈಸೆ. ಇದೂ ದುಬಾರಿ ಅನಿಸಿದರೆ, ತಿನಿಸಿನ ಅಂಗಡಿಗಳಲ್ಲಿ ಇಡ್ಲಿ, ವಡೆ, ಬಟಾಟಾ ವಡಾ, ಪಕೋಡ, ಬಜಿಗಳನ್ನೆಲ್ಲ ತಲಾ ಐದು ಪೈಸೆಗೆ ಪಡೆಯಬಹುದು. ಒಂದು ರೂಪಾಯಿಯ ತಿಂಡಿ ಒಟ್ಟಿಗೇ ಕೊಂಡರೆ ಒಂದು ಜಿನಸನ್ನು ಬೋನಸ್ಸಾಗಿ

ಕೊಡುವ ವಾಡಿಕೆಯೂ ಇದೆ. ರೊಟ್ಟಿಯಂಗಡಿಗಳಲ್ಲಿ ರೊಟ್ಟಿಯೊಂದನ್ನು ಬಿಟ್ಟು ಬಾದಾಮಿ ಹಾಲು, ಬ್ರೆಡ್, ಬನ್, ಬಿಸ್ಕತ್ತುಗಳು ಸಿಗುತ್ತವೆ. ಹುರಿಗಾಳುಗಳ ವೈವಿಧ್ಯಕ್ಕಂತೂ ಕೊನೆ ಮೊದಲಿಲ್ಲ. ಪಟ್ಟೆಸರು, ಕಡಲೆ, ಸೇಂಗಾ ಅಲಸಂದೆಗಳಿಂದ ಗೋಡಂಬಿಯವರೆಗೆ, ಸಕಲ ಕಾಳುಗಳನ್ನು ಉಪ್ಪು-ಕಾರ ಹಚ್ಚಿ ಹುರಿದು ಡುತ್ತಾರೆ. ಐದು ಪೈಸೆ ವ್ಯಾಪಾರವೇ ಜಾಸ್ತಿ. ರಾಜಸ್ಥಾನದಲ್ಲಿ ಬಾಳೆಹಣ್ಣುಗಳನ್ನು ತೂಗಿ ಮಾರಿದರೆ ಇಲ್ಲಿ ಹುರಿಗಾಳು, ಚುರಮುರಿ, ಅವಲಕ್ಕಿಗಳನ್ನು ಶೇರುಗಳಲ್ಲಿ ಅಳೆಯುವ ಪದ್ಧತಿ. ರಸ್ತೆ ಅಂಚಿನಲ್ಲಿ ನಿಂತು ಮಲಕಾಡಿಸುತ್ತ ಬಾದಾಮಿ ಹಾಲು ಸೇವಿಸುವದು ಇಲ್ಲಿಯವರಿಗೆ ಪ್ರಿಯವಾದದ್ದು. ಮನೆಯ ಎದುರಿಗೆ ಚಕ್ಕುಲಿ, ಕೋಡಬಳೆ ಕರಿದು ಮಾರುವ ಕೊಂಕಣಿ ಮಹಿಳೆಯಿದ್ದಾಳೆ. ಹೆಚ್ಚಿನ ತಿಂಡಿ, ತನ್ನ ಮಕ್ಕಳ ಉದರದಲ್ಲಿ ಸೇರುತ್ತದೆಂದು ಕಳವಳಪಡುತ್ತಲೇ ಇರುತ್ತಾಳೆ.

ಮೂಲೆ, ಸುದಿಗಳಲ್ಲಿ 'ಜಾಬ್-ಟಾಯಪಿಂಗ್' ಎಂಬ ಬೋರ್ಡು ತೂಗು ಹಾಕಿ, ಅತಿ ಪುರಾತನ ಯಂತ್ರ ಇಟ್ಟುಕೊಂಡು ಗಿರಾಕಿಗಳಿಗೆ ಬೆರಳಚ್ಚಿನ ಪ್ರತಿ ಮಾಡಿ ಕೊಡುವ ವ್ಯವಸ್ಥೆ ಇದೆ. ಮಹಡಿಯ ಮೇಲೆ ಈ ವೃತ್ತಿಗಳಲ್ಲಿ ತರಬೇತಿ ಕೊಡುವ ವರ್ಗಗಳು ನಡೆಯುತ್ತವೆ. ಇಲ್ಲಿ ಬೀಡಾ, ಬೀಡಿ, ಸಿಗರೇಟುಗಳಿಗೆ ಬೇಡಿಕೆ ಕಡಿಮೆಯಾದ್ದರಿಂದ, ಇವನ್ನು ಮಾರುವವರು ಪಾಟಿ, ಕಡ್ಡಿ, ಬಿಡು ಪೆಪ್ಪರಮಿಂಟುಗಳನ್ನು ಇಟ್ಟಿರುತ್ತಾರೆ. ಹೂವಾಡಗಿತ್ತಿಯರು ಅವನ್ನು ದಂಡೆಯಾಗಿ ಕಟ್ಟದೇ, ಮೂಲೆಗಳನ್ನಾಗಿ ಮಾಡುವದರಿಂದ, ಮೊಳಗಳ ಲೆಕ್ಕದಲ್ಲಿ ಮಾರುವರು. ಮಲ್ಲಿಗೆ, ಜಾಜಿ, ಮೊಗ್ಗುಗಳನ್ನು ತೂಕದಲ್ಲಿ ಕೊಂಡುಕೊಳ್ಳಬೇಕು. ಡಾಕ್ಟರರು ಅಲ್ಲಲ್ಲಿ 'ಶಾಪ್' (ದವಾಖಾನೆ) ಇಟ್ಟುಕೊಂಡಿರುತ್ತಾರೆ. ಇವರಿಗೆಲ್ಲ ವೃತ್ತಿಯ ಡಿಗ್ರಿ ಇರುವ ಕಡ್ಡಾಯವಿದ್ದಂತಿಲ್ಲ. ಅಂತೆಯೇ ಹೆಚ್ಚಿನವರು ಒಂದೆರಡು ರೂಪಾಯಿಗಳಷ್ಟೆ ಫೀ ತೆಗೆದುಕೊಳ್ಳುತ್ತಾರೆ. ಇವಲ್ಲದೇ ದರ್ಜಿ, ಸಮಗಾರ, ಕ್ಷೌರ, ಬೆಳ್ಳಿ-ಬಂಗಾರ, ಸ್ಟೇಶನರಿ, ಔಷಧದ ಅಂಗಡಿಗಳು ಇದ್ದೇ ಇವೆ. ರಸ್ತೆಗಳಲ್ಲಿ ಓಡಾಡುವ ಜನರೂ ಅಂಗಡಿಗಳಷ್ಟೇ ವೈವಿಧ್ಯ ಪೂರ್ಣರಾಗಿರುತ್ತಾರೆ. ಕೊಂಕಣಿ, ಕನ್ನಡ, ತೆಲುಗು, ತಮಿಳು, ಮಲಯಾಳಂ, ಮರಾಠಿ, ಹಿಂದಿಗಳ ಜೊತೆ, ಇಂಗ್ಲಿಷು ಅತ್ಯಧಿಕವಾಗಿ ಕೇಳಿಬರುತ್ತದೆ. ಬೇರೆಲ್ಲ ಇದ್ದರೂ, ಓಡಾಟಕ್ಕಾಗಿ ವಾಹನ ಸೌಕರ್ಯ ಏನೇನೂ ಸಾಲದು, ಎನಿಸುತ್ತಿದೆ.

ಪತ್ರಗಳೆಲ್ಲ ಸಕಾಲದಲ್ಲಿ ಸರಿಯಾಗಿ ಮುಟ್ಟುತ್ತವೆ ಎಂದು ತಿಳಿಯಲೆ?

○

೧೯. ಮಹಿಳಾ ಮಂಡಲಿ

ಬೆಂಗಳೂರು, ೧೨-೧೩-೧೯೬೯

ಜೋಬನೇರದಲ್ಲಿ, ಸಹೋದ್ಯೋಗಿಗಳಲ್ಲಿ ವಿದ್ಯಾರ್ಥಿಗಳಲ್ಲಿ ಮಹಿಳೆಯರೇ ಇರಲಿಲ್ಲವಾದರೆ, ಇಲ್ಲಿ ಅವರೇ ಬಹುಸಂಖ್ಯಾತರಾಗಿದ್ದಾರೆ. ಕುಮಾರಿ ಪೊನ್ನಮ್ಮ ರಸಾಯನಶಾಸ್ತ್ರ ಪರಿಣತೆ. ನನ್ನನ್ನು ಮಾತನಾಡಿಸಬೇಕೆಂದು "ಕನ್ನಡ ಬರುತ್ತದೆಯೇ?" ಎಂದು ವಿಚಾರಿಸಿದಳು. ನೇರವಾಗಿ ಉತ್ತರಿಸದೇ ಅಂದಿನ ದಿನವೇ ಅಂಚೆಯಲ್ಲಿ ಬಂದ ಅಮೇರಿಕದ ಪ್ರವಾಸ ಕಥನದ ಪರಿಚಯು ಓದಲು ಕೊಟ್ಟೆ. ಪ್ರಕಾಶಕರು ಬರೆದ, "ಇದು ಒಂದು ರಸವತ್ತಾದ ಪ್ರವಾಸ ಕಥನ. ಶ್ರೀಕೃಷ್ಣಾನಂದ ಕಾಮತರು ನಾಲ್ಕು ವರ್ಷಗಳ ಅಮೇರಿಕೆಯ ವಾಸದಿಂದ ಅಲ್ಲಿಯ ಜೀವನ ಕ್ರಮ ತಿಳಿದುಕೊಂಡು ಆ ಜೀವನ ಕ್ರಮಕ್ಕೂ ನಮ್ಮದಕ್ಕೂ ಇರುವ ಸಾಮ್ಯ-ವೈಷಮ್ಯಗಳನ್ನೆಲ್ಲ ಬಹಳ ಸೂಕ್ಷ್ಮವಾಗಿ ಎತ್ತಿ ತೋರಿಸಿದ್ದಾರೆ. ಭಾರತೀಯನಾಗಿ ಇಲ್ಲಿಯ ಜೀವನದ ತಳಪಾಯಕ್ಕಿರುವ ಜೀವನ-ಮೌಲ್ಯಗಳನ್ನು ತಾವೂ ತಿಳಿದುಕೊಂಡಿದ್ದಾರೆ, ಅಲ್ಲಿಯವರಿಗೂ ತಿಳಿಸಿ ಹೇಳಿದ್ದಾರೆ. ಹೀಗೆ ಅವರನ್ನು ನಾವು, ನಮ್ಮವರನ್ನು ಅವರು ತಿಳಿದುಕೊಳ್ಳಲಿಕ್ಕೆ ಒಳ್ಳೆ ದಾರಿ ಮಾಡಿಕೊಟ್ಟಿದ್ದಾರೆ. ಇದೊಂದು ಓದುಗರಿಗೆ ಒಳ್ಳೆಯ ತಿಳುವಳಿಕೆ ಕೊಡುವ ಗ್ರಂಥ." ಮಾತುಗಳನ್ನು ಓದಿ, ನಾನೇ "ಆ ಪ್ರಶ್ನೆಯನ್ನು ನನಗೆ! ಕೇಳಿದ್ದರೆ ಒಳ್ಳೆಯದಾಗುತ್ತಿತ್ತು!" ಎಂದಳು. ಏಕೆಂದರೆ ಅವಳ ಮಾತೃಭಾಷೆ ಮಲಯಾಳಿಯಾದ್ದರಿಂದ ಕನ್ನಡ ಅಷ್ಟೊಂದು ಚೆನ್ನಾಗಿ ಬರುವದಿಲ್ಲವಂತೆ. ಆದರೂ ಈ ಕೃತಿ ಓದುವ ಚಪಲದಿಂದ, ಭೋಜನ ವಿರಾಮದಲ್ಲಿ ಎರಡು ಪುಟಗಳಷ್ಟು ಓದಿ, ಕನ್ನಡ ಓದುವದರಲ್ಲಿ ಹೊಸ ದಾಖಲೆ ಸ್ಥಾಪಿಸಿದೆನೆಂದು ಅಭಿಮಾನ ಪಟ್ಟಳು. "ಲೇಖನಿಯ ಸ್ನೇಹಿತೆ," "ಗಂಡು-ಹೆಣ್ಣು"ಗಳಂತಹ ಶಿರೋನಾಮೆಗಳನ್ನು ಓದಿ. "ಇಂಥವನ್ನೆಲ್ಲ ಬರೆಯಲಿಕ್ಕೆ ಪತ್ನಿ ಆಕ್ಷೇಪಿಸಲಿಲ್ಲವೇ?" ಎಂದು ವಿಚಾರಿಸಿದಳು. "ತರಾಟೆಗೆ ತೆಗೆದುಕೊಳ್ಳುವದಿರಲಿ, ಅಮೇರಿಕೆಯಿಂದ ಸವತಿಯೋರ್ವಳನ್ನು ತಂದಿಲ್ಲವೆಂದು

ನೆಮ್ಮದಿಯಿಂದ ಇದ್ದಾಳೆ" ಎಂದಾಗ ಹೊಟ್ಟೆ ಬಿರಿಯುವಂತೆ ನಕ್ಕಳು. "ನೀವ ತುಂಬ ಹಾಸ್ಯಪ್ರಿಯರು, ಡಾಕ್ಟರ್" ಎಂದಳು.

ಕುಮಾರಿ ಮರಾಠೆ, ಕಬ್ಬಿನ ಬೆಳೆಯನ್ನು ಹಾಳುಗೆಡಹುವ ಕೀಟಗಳನ್ ಅಭ್ಯಸಿಸುತ್ತಾಳೆ. ತೋರಿಕೆಯಲ್ಲಿ ಅವಳು ಕನ್ನಡಿಗಳೋ, ಮರಾಠಿಗಳೋ ಎಂದ ಗುರುತಿಸುವದು ಕಷ್ಟ! ಗೌರವರ್ಣ, ರೀತಿ, ನಯ, ವಿನಯಗಳು ಮಹಾರಾಷ್ಟ್ ಗರನ್ನು, ನೆನಪಿಗೆ ತಂದರೆ ಅಗಲ ಮುಖ. ದಪ್ಪ ಹುಬ್ಬು ತುಟಿಗಳ ಕನ್ನಡಿಗರವು. ಹೆಸರೇ ಸೂಚಿಸುವಂತೆ, ತಂದೆ ಮರಾಠಿಗರಿದ್ದು ತಾಯಿ ಕರ್ನಾಟ ಕದವಳು ಇರಬಹುದು. ಮರಾಠಿಗರು ಮೈಸೂರಿನಲ್ಲಿ ಚುಂಚು ಪ್ರವೇಶ ಮಾಡಿ ದಾಗ, ಅಲ್ಲಿಯ ಅನೇಕ ಕುಟುಂಬಗಳು, ಇಲ್ಲಿಗೆ ವಲಸೆ ಬಂದು, ಸ್ಥಾಯಿಯಾ ಬಿಟ್ಟಿದ್ದಾರೆ. ಇಂದು ಕನ್ನಡ ಮರಾಠಿಗಳ ವಿಚಿತ್ರ ಮಿಶ್ರಣ ಅವರ ಭಾ ಯಾಗಿವೆ. ಬೆಂಗಳೂರಿನವರು ತನ್ನ ಹೆಸರನ್ನು 'ಮರಾತೆ' ಎಂದು ಉಚ್ಚರಿಸ ತ್ತಾರೆ, ಎಂದು ಅವಳಿಗೆ ಕೊರಗು, ಸದಾ ಹಸನ್ಮುಖಿಯಾಗಿರುವ ಅವಳನ ನೋಡಿದಾಗಲೆಲ್ಲ ನಿನ್ನ ನೆನಪು ಬರುತ್ತದೆ. ಪೊನ್ನಮ್ಮ ಪ್ರವಾಸ ಕಥನದ ಬಗ ಕಹಳೆ ಊದಿದ್ದರಿಂದ, ತನಗೆ ಆ ಕೃತಿ ಓದುವ ಲವಲವಿಕೆ ಉಂಟಾಗಿದೆ. ಆಫೀಸ ಮುಗಿದ ನಂತರ ಕೊಟ್ಟರಿ, ಇಡೀ ರಾತ್ರಿ ಓದಿ ನಾಳೆ ಹಿಂದಿರುಗಿಸುತ್ತೇನೆ ಎಂದ ದುಂಬಾಲು ಬಿದ್ದಳು. ಸ್ತ್ರೀ ದಾಕ್ಷಿಣ್ಯಕ್ಕೆ ಮಣಿದು ಕೊಟ್ಟದ್ದು ಒಳ್ಳೆಯದಾಯಿತ ಪುಸ್ತಕವನ್ನು ಮನವಾರೆ ಮೆಚ್ಚಿದಳಲ್ಲದೇ ತನ್ನ ಅನಿಸಿಕೆಗಳನ್ನು ಬರೆದು ಕೊಟ ದ್ದಾಳೆ. ಅವಳ ಬಗ್ಗೆ ಮೆಚ್ಚಿಗೆಯೂ, ಮತ್ಸರ ಉಂಟಾಯಿತೇ?

ಅಪಿತಾ, ವಾಚನಾಲಯದ ಮೇಲ್ವಿಚಾರಕಳು. ಲಕ್ಷಣವಾಗಿದ್ದಾಳೆ. ಪಟ ಣದ ಒನಪು-ವೈಯ್ಯಾರಗಳಿಗೆ ಮಾರು ಹೋದವಳಲ್ಲ. ಎಲ್ಲ ಕೆಲಸಗಳನ ಸುವ್ಯವಸ್ಥಿತವಾಗಿ ಸಕಾಲದಲ್ಲಿ ಮಾಡಿ ಮುಗಿಸುವದು ಅವಳ ವೈಶಿಷ್ಟ್ಯ. ಕಾಲೇಜ ವಿಶ್ವವಿದ್ಯಾಲಯಗಳಲ್ಲಿ ಅವ್ಯವಸ್ಥಿತ ವಾಚನಾಲಯಗಳು ವಾಕರಿಕೆ ಬರುವಂ ಮಾಡಿದರೆ, ಇವಳದು ಖುಷಿಕೊಡುವಂತಹದು. ಯಾವುದೇ ಪುಸ್ತಕ ಕೇಳಿದ ಕ್ಷಣಾರ್ಧದಲ್ಲಿ ಕೈಗೆ ಕೊಟ್ಟುಬಿಡುತ್ತಾಳೆ. ನುರಿತ ಬೆರಳಚ್ಚುಗಾರ್ತಿಯೂ ಹೌದ ಅವಳನ್ನು ವರಿಸುವವ, ಅದೃಷ್ಟಶಾಲಿ. ಆದರೆ ವರದಕ್ಷಿಣೆಯ ಪಿಡುಗಿನಿಂ ಅವಳಿಗೆ ಕಂಕಣ ಬಲ ಕಷ್ಟಕ್ಕಿಟ್ಟುಕೊಂಡಿದೆ. ಸುನೀತಿ, ಸಾರಸ್ವತ ವಿವಾಹಿತ ಪತಿ ನಡುನೀರಲ್ಲಿ ಕೈಬಿಟ್ಟದ್ದರಿಂದ ಮಕ್ಕಳ, ಸಂಸಾರದ ಜವಾಬ್ದಾರಿ ಇವ

ಮೇಲೆಯೇ. ಕಾಣಲು ಬಡಕಲಾದರೂ, ಕೆಲಸದಲ್ಲಿ ಅತ್ಯಂತ ದಕ್ಷಳು. ಹೊಸದಾಗಿ ಸಂಸ್ಥೆ ಸೇರಿದಾಗ ಉಳಿದ ಸಹೋದ್ಯೋಗಿಗಳು ಹಾಜರಾತಿಯಲ್ಲಿ ಸಹಿ ಮಾಡುವ ದನ್ನು ನೋಡಿ, ನಾನೂ ಮಾಡಲು ಹೋದಾಗ, ಇವಳೇ, "ನೀವು ಮೇಲಧಿಕಾರಿ ಗಳು ಹಾಜರಾತಿ ಹಾಕುವಂತಿಲ್ಲ" ಎಂದು ಗಹಗಹಿಸಿ ನಕ್ಕಿದ್ದಳು. ಅಕ್ಕಿ ಕೀಟಗಳ ಪಾಲನೆ-ಪೋಷಣೆ ಮಾಡುವವಳು. ಮೊಸಲಾತಿಯಿಂದ ನೇಮಕ ಹೊಂದಿದವಳಂತೆ ಇದ್ದಾಳೆ. ಅವಳ ಕೆಲಸ ಹೇಗೆ ನಡೆದಿದೆ ಎಂದು ವಿಚಾರಿಸಲು ಹೋದಾಗ, ಆ ಕೆಲಸ ನನಗೇ ಒಪ್ಪಿಸಿ ಪರಾರಿಯಾಗಿದ್ದಳು. ಅವಳ ಇಂಥ ಸಾಹಸಗಳ ಸುರಿಮಳೆ ಯನ್ನೇ ಸಹೋದ್ಯೋಗಿಗಳು ಸುರಿದರು. ಸಾಕಷ್ಟು ಸಲ ಪ್ರಯೋಗಾಲಯದಲ್ಲಿ ನಿದ್ದೆ ಹೋಗಿದ್ದಾಳಂತೆ.

ಈ ಮಹಿಳಾಮಂಡಳಿ, ಈ ಹೊಸಬನನ್ನು ತುಂಬ ಮೆಚ್ಚಿಕೊಂಡಂತಿದೆ. ಮೇಲಧಿಕಾರಿಯಲ್ಲಿ ಅತ್ಯಗತ್ಯವಾಗಿ ಇರಬೇಕಾದ, ಕೈಕೆಳಗಿನವರಿಗೆ ಕಿರುಕುಳ ಕೊಡುವ ಪ್ರವೃತ್ತಿಯೇ ಇಲ್ಲವಂತೆ.ಒಬ್ಬಿಬ್ಬರು ಪ್ಲಾಸಿ (ಪಶ್ಚಿಮ ಬಂಗಾಲ) ಗೂ ಬಂದು ಸಂಶೋಧನೆಯಲ್ಲಿ ನೆರವಾಗಲು ಸಿದ್ಧ ಎಂದು ಆಡಿ ತೋರಿಸಿದರು. ಇಂದು ಏನು ತಮಾಷೆಯಾಯಿತು ಗೊತ್ತೇ? ನಮ್ಮದು ಆಂತರ್ರಾಷ್ಟ್ರೀಯ ಸಂಶೋ ಧನಾಲಯ. ಅಂತೆಯೇ ಅತ್ಯುಚ್ಚ ಮೇಲ್ವಿಚಾರಕರಾದ ಡಾ|| ಸಿಮ್ಮಂಡ್ಸರು ಕಳೆದ ಒಂದುವರೆ ತಿಂಗಳಿನಿಂದ ಇಲ್ಲಿಯ ಚಟುವಟಿಕೆಗಳನ್ನು ಪರಾಮರ್ಶಿಸಲು ಇಲ್ಲಿ ಠಾಣ್ಯ ಹಾಕಿದ್ದರು. ಇಂದು ಅವರನ್ನು ಬೀಳ್ಕೊಡುವ ಸಮಾರಂಭವಿತ್ತು. ಅದು ಮುಗಿಯಲು ನಿರೀಕ್ಷಿಸಿದ್ದಕ್ಕಿಂತ ಹೆಚ್ಚಿನ ಸಮಯ ತೆಗೆದುಕೊಂಡಿದ್ದರಿಂದ, ಮಲ್ಲೇ ಶ್ವರಂದತ್ತ ಹೋಗುವ ಮಹಿಳೆಯರಿದ್ದರೆ, ತಮ್ಮ ಬೃಹತ್ ಕಾರಿನಲ್ಲಿ ಕರೆ ದೊಯ್ಯುವದಾಗಿ ಸಾರಿದರು. ನಾನು ಎಂದಿನಂತೆ ಪಾದಚಾರಿಯಾಗಿ ಉಳಿದ ಸಹೋದ್ಯೋಗಿಗಳೊಡನೆ ಹೊರಟಿದ್ದೆ. ದೊಡ್ಡ ಕಾರು ಗಕ್ಕನೆ ನಿಂತು ಹೆಣ್ಣು ಧ್ವನಿಗಳು ನನ್ನನ್ನು ಕೂಗಿ ಕರೆದವು. ಸಿಮ್ಮಂಡ್ಸರಿಗೆ ಏನಾದರೂ ವಿಚಾರ ವಿನಿ ಮಯ ಮಾಡುವದು ಇದ್ದಿರಬೇಕು, ಎಂದು ಹೋದರೆ ಇಡೀ ಮಹಿಳಾ ವೃಂದವೇ ತಮ್ಮೊಂದಿಗೆ ನನ್ನನ್ನು ಕೂಡ್ರಿಸಿಕೊಂಡು ಅವರಿಗೆ ಪರಿಚಯ ಮಾಡಿಸಿತು. ನಾನು ಸಂಸ್ಥೆಯನ್ನು ಸೇರಿದ್ದು ಅವರಿಗೆ ತಿಳಿದಿರಲೇ ಇಲ್ಲವಂತೆ. ನನ್ನ ವಿದ್ಯಾರ್ಹತೆ, ಸಂಶೋಧನಾ-ಅನುಭವಗಳ ಕುರಿತು ವಿಚಾರಿಸಿಕೊಂಡರು.

ಸುಧಾರಾಣಿ, ಅರ್ಹತೆಯಲ್ಲಿ, ಸ್ಥಾನಮಾನಗಳಲ್ಲಿ ನನಗೆ ಸಮ. ಆದರೆ ಅಧಿಕಾರ ಚಲಾಯಿಸುವದರಲ್ಲಿ ಅದ್ವಿತೀಯಳು. ನಮ್ಮದು 'ಪತ್ರ ಸಂಸಾರ' ವೆಂದು ಅರಿತು ನಾವು ಸಮದುಃಖಿಗಳು ಎಂದಳು. ಅವಳ ಪತಿ ಭೋಪಾಲದಲ್ಲಿ ಇರುವನಂತೆ. ಅಲ್ಲಿಯ ಹೆವಿ ಇಲೆಕ್ಟ್ರಿಕಲ್ಸದಲ್ಲಿ ಮೂರುವರ್ಷಗಳ ಸೇವೆಯ ಒಪ್ಪಂದ ಮಾಡಿಕೊಂಡದ್ದರಿಂದ ರಾಜೀನಾಮೆ ಕೊಟ್ಟರೆ ಅಪಾರ ಹಣ ಹಿಂದಿರುಗಿಸಬೇಕಾಗುವದಂತೆ. ದಿನಕ್ಕೊಂದು ಪತ್ರ ಬರೆಯುವದು ಇವಳ ಜಾಯಮಾನಕ್ಕೆ ಹೇಳಿದ್ದಲ್ಲವಾದ್ದರಿಂದ ಅವರದು 'ಫೋನಿ' (ನ) ಸಂಸಾರವಿದ್ದಿರಬೇಕು ಅನಿಸುತ್ತದೆ. ಅವಳು ಕ್ಯಾಲಿಫೋರ್ನಿಯದಲ್ಲಿ ಕಲಿಯುತ್ತಿದ್ದಾಗ, ತನ್ನ ಸಂಬಂಧಿಕಳಾದ ಸುನೀತಿ ಬಜೆಕಲ್‌ಳನ್ನು ಕಾಣಲು ಸಾಯರೆಕ್ಯೂಸ್ (ನ್ಯೂಯಾರ್ಕ್)ಗೆ ಬಂದಿದ್ದಳಂತೆ. ನಾಲ್ಕು ವರ್ಷ ಆ ನಗರವಾಸಿಯಾಗಿದ್ದರಿಂದ ನನ್ನ ಮೌಲ್ಯದಲ್ಲಿ ಹೆಚ್ಚಳವಾಯಿತು! ಅಲ್ಲಿಯೇ ವಿದ್ಯಾರ್ಥಿಯಾಗಿದ್ದ ಸದಾನಂದನ ಪರಿಚಯವೂ ಇದೆ ಎಂದಾಗ ಭೋಜನಕ್ಕೂ ಆಮಂತ್ರಿಸಿದಳು. ತೀರ ವಿರುದ್ಧವಿದ್ದ ಆಫೀಸಿನ ಬಣಗಳು ಮೆಚ್ಚಿಕೊಂಡದ್ದು ಕಷ್ಟಕ್ಕಿಟ್ಟುಕೊಂಡಿತು. ಮೇಲಿಂದ ಮೇಲೆ ಸುಧಾರಾಣಿ, ಕೈಕೆಳಗಿನವರೊಂದಿಗೆ ಹೆಚ್ಚು ಸ್ನೇಹಪರವಾಗಿದ್ದರೆ ಅವರಿಂದ ಕೆಲಸ ಮಾಡಿಸಲಾಗದು, ಎಂದು ನೆನಪಿಸಲಾರಂಭಿಸಿದಳು. ಇವರ ಹಗ್ಗದೆಳೆದಾಟ ಮನಸ್ಸಿಗೆ ಬಾರದ್ದರಿಂದ ಗಂಟು–ಮೂಟೆ ಕಟ್ಟಿಕೊಂಡು ಪ್ಲಾಸಿಗೆ ಆದಷ್ಟು ಬೇಗ ಹೊರಟುಬಿಡುವದೆಂದು ನಿರ್ಧರಿಸಿದ್ದೇನೆ.

○

೨೦. ಬಡ ಬಂಗಾಲಿಗಳು

ಸಿಯಲ್ದಾ (ಕಲಕತ್ತಾ), ೨೫-೩-೧೯೬೯

ನನ್ನನ್ನು ಹೊತ್ತ ರೇಲುಗಾಡಿ ಏದುತ್ತ, ತೇಗುತ್ತ ಉಸಿರೆಳೆಯುತ್ತ ಹೌರಾ ನಿಲ್ದಾಣ ಬಂದು ಸೇರಿಕೊಂಡಿತು. ಕಣ್ಣು ಹಾಯಿಸಿದಲ್ಲೆಲ್ಲ ಜನಸಮುದ್ರ. ಪ್ರಯಾಣಿಕರನ್ನೆಲ್ಲ ಹೊತ್ತುಕೊಂಡು ಹೋಗಲು ಸಾಕಾಗುವಷ್ಟು ಹಮಾಲರಿದ್ದರೂ ಹೆಚ್ಚಿನ ಸಾಮಾನುಗಳಿಲ್ಲದ ನನ್ನಂಥವರಿಂದ ಅವರಿಗೆ ಯಾವ ಲಾಭವೂ ಆಗುವಂತಿರಲಿಲ್ಲ. ತಿಕೀಟು ಕೊಟ್ಟು ಹೊರಬಂದರೆ ಅಲ್ಲಿ ಇನ್ನೂ ಹೆಚ್ಚಿನ ಜನಸಂದಣಿ. ಹೆಚ್ಚಿನವರು ಪ್ರವಾಸಿ, ವ್ಯಾಪಾರಿ, ಇಲ್ಲವೇ ಅತಿಥಿಗಳನ್ನು ಎದುರುಗೊಳ್ಳಲು ಬಂದವರಾಗಿರದೇ ಕಾಲಾಪಹರಣ ಮಾಡಲು ಬಂದ ಸೋಮಾರಿಗಳು. ನಿಲ್ದಾಣದ ಹೆಚ್ಚಿನ ಭಾಗವನ್ನು ಪೂರ್ವ ಪಾಕಿಸ್ತಾನದ[೧೮] ನಿರಾಶ್ರಿತರು ತಮ್ಮದನ್ನಾಗಿ ಮಾಡಿಕೊಂಡು ಸಂಸಾರ ಹೂಡಿ ಬಿಟ್ಟಿದ್ದಾರೆ. ಹಸಿವು, ರೋಗ, ಸಾವುಗಳು ಸಂಭವಿಸುವಂತೆ ಸಂತಾನೋತ್ಪತ್ತಿ ಸದಾಕಾಲವೂ ನಡೆದೇ ಇರುತ್ತದೆ. ಇಂಥ ಜನಸ್ತೋಮಕ್ಕೆ ಸ್ವಚ್ಛತೆಯ ಕಲ್ಪನೆ ಹೇಗೆ ಬರಬೇಕು? ನೋಡಿದೆಡೆ ಹೊಲಸು. ಘ್ರಾಣೇಂದ್ರಿಯ ತಡೆದುಕೊಳ್ಳಲಾರದಷ್ಟು ದುರ್ವಾಸನೆ. ಇನ್ನಿತರ ರೇಲು ನಿಲ್ದಾಣಗಳಿಗಿಂತ ತೀರಾಗಲೀಜು ಅನಿಸಿದ್ದರಿಂದ ಹೀಗೇಕೆ? ಎಂದು ರೇಲ್ವೆ ಅಧಿಕಾರಿಯನ್ನು ಕೇಳಿದಾಗ 'ವಿಪರೀತ ಜನ' ಎಂದ. ಕೆಲವರಾದರೂ ಸ್ವಚ್ಛತೆಯತ್ತ ಲಕ್ಷ್ಯಹರಿಸಬಹುದಲ್ಲ? ಎಂದಾಗ 'ಪಾಪ,ಬಡವರು' ಎಂದು ಇಂಥ ವಿಚಾರ ವಿನಿಮಯದಲ್ಲಿ ತನಗೆ ಆಸಕ್ತಿ ಇಲ್ಲವೆಂದು ತೋರಿಸಿಕೊಂಡ.

ಹೌರಾ ನಿಲ್ದಾಣದಲ್ಲಿಯ ಹೆಚ್ಚಿನ ಶ್ರಮಜೀವಿಗಳು ಬಿಹಾರಿಗಳು. ರಿಕ್ಷಾ ಎಳೆಯುವವರೂ ಅವರೇ. ಮೂರು ರೂಪಾಯಿಗಳಿಗೆ ಸಿಯಾಲ್ದಾ ಮುಟ್ಟಿಸುತ್ತೇನೆಂದ ಒಬ್ಬಾತ. ನೊಗವನ್ನೆತ್ತಿಕೊಂಡಾಗ, ಗೇಣು ಹೊಟ್ಟೆಗಾಗಿ ಮಾನವನು ಪಶುವಾಗಿ ದುಡಿಯಬೇಕಾಗಿ ಬಂದ ಪ್ರಮೇಯ ನೋಡಿ ಕರುಳು ಕಿವಿಚಿದಂತಾ

---

೧೮ ಈಗಿನ ಬಂಗ್ಲಾದೇಶ್

ಯಿತು. ಆ ಬಡಕಲು ದೇಹಿಯನ್ನೇ ರಿಕ್ಷಾದಲ್ಲಿ ಕೂಡ್ರಿಸಿ ನಾನೇ ಅದನ್ನು ಎಳೆದರೆ ಶಿವನು ಮೆಚ್ಚದಿರಲಾರ, ಅನಿಸಿತು. ಲಭ್ಯವಿದ್ದಾಗಷ್ಟೇ ಉಂಡು ಸಿಗದಿದ್ದಾಗ ಕಡ್ಡಾಯದ ಉಪವಾಸ ಮಾಡಿದ ಆ ಬಡಬಿಹಾರಿ, ವಾಯುವೇಗದಿಂದ ಓಡುವಾಗ ಹವೆಯಲ್ಲಿ ಹಾರುತ್ತಿರಬಹುದೇ? ಎಂಬ ಭಾಸವಾಗುತ್ತಿತ್ತು. ಅವನ ಸಂಸಾರ ಚಕ್ರದಂತೆಯೇ ರಿಕ್ಷಾ ಗಾಲಿಗಳು ಯಾವ ಏರಿಳಿತಗಳಿಲ್ಲದೇ ಏಕಪ್ರಕಾರವಾಗಿ ತಿರುಗುತ್ತಿದ್ದವು. ಸಮಾಜವಾದ, ಸಮಾನತೆ, ಪ್ರಜಾಪ್ರಭುತ್ವವೆಂದು ಘಂಟಾಘೋಷವಾಗಿ ಸಾರಿದರೂ ಇದೊಂದು ಶೋಷಣೆ, ಗುಲಾಮಗಿರಿ ಎಂದು ವಿಚಾರ ಮಂಥನದಲ್ಲಿ ಮೈಮರೆತಾಗ, ಅವನು ಮಾತ್ರ ಈ ಯಾವ ಜಂಜಾಟಕ್ಕೂ ಕಿವಿಗೊಡದೇ ಆವೆ ವೇಗದಿಂದ ಓಡುವ ಟ್ರಾಮು, ಹೊಗೆ ಕಾರುವ ಬಸ್, ನಡುರಸ್ತೆಯಲ್ಲಿ ಓಡುವ ಕಾರುಗಳ ನಡುವೆ ಹಾವಿನಂತೆ ಅಂಕು–ಡೊಂಕಾಗಿ ದಾರಿ ಮಾಡಿಕೊಂಡು ಓಡುತ್ತಿದ್ದ. ಅಪಘಾತ ಸಂಭವಿಸುವ ಸಾಧ್ಯತೆ ಇದೆ ಎಂದೆನಿಸಿದಾಗೊಮ್ಮೆ ಕೈಯಲ್ಲಿರುವ ಗಜ್ಜೆಯನಾದ ಹೊರಡಿಸಿ ಎಚ್ಚರಿಸುತ್ತಿದ್ದ. ಬಂಗಾಲಿಗಳು ಬಿಹಾರಿಗಳಿಗೆ ಪಾಪ, ಬಡವರು ಎನ್ನುವ ಬದಲಾಗಿ ಅವರೆಲ್ಲ ಜಿಗಳೆಗಳು, ತಮ್ಮ ರಾಜ್ಯದ ಹಣ ಹೀರಿಕೊಳ್ಳುತ್ತಾರೆ, ಎಂದರೆ ಅದೆಂತಹ ವಿರೋಧಾಭಾಸವಲ್ಲವೇ?

ಬೃಹತ್ ಹೌರಾ ಸೇತುವೆ ಮೇಲೆ ರಿಕ್ಷಾ ಓಡುತ್ತಿದ್ದಾಗ, ಆನೆಯು ಬೆನ್ನ ಮೇಲೆ, ಇರುವೆ ಹರಿದಾಡಿದಂತೆ ಅನಿಸಿತು. ಟ್ರಾಮ್, ಟ್ಯಾಕ್ಸಿ, ಟ್ರಕ್, ಬಸ್, ಕೈಗಾಡಿಗಳ ಜೊತೆಯಲ್ಲಿ ಕಾಲುನಡಿಗೆಯ ಪ್ರವಾಹವೇ ಬ್ರಿಜ್ ಮೇಲೆ ಹೊರಟರೆ, ಕೆಳಗಡೆ ಪತಿತ ಪಾವನೀ ಗಂಗಾಮಾತೆ ಹರಿಯುತ್ತಿದ್ದಾಳೆ. ಇಂದು ಮಾನವನ ಪಾಪಕರ್ಮಗಳು ಅತ್ಯಧಿಕವಾಗಿದ್ದರಿಂದ ಅವನ್ನು ತೊಳೆದು ನಿರ್ಮಲಗೊಳಿಸುವದು ಬಡಪಾಯಿ ಭಾಗೀರಥಿಯಿಂದ ಸಾಧ್ಯವೇ? ಎಂದು ಹೇಳಲಾಗದು. ಆದರೆ ಅವನ ದನಕರು, ಅವನ ಶಾರೀರಿಕ ಕೊಳೆ, ಬಚ್ಚಲು, ಕಕ್ಕಸುಗಳನ್ನು ಮಾತ್ರ ಶುಭ್ರ ಮಾಡುತ್ತಾಳೆ. ಇದರಿಂದಾಗಿ ನದಿ ಪೂರ್ತಿ ಕಲುಷಿತವಾಗಿದೆ. ಅದರಲ್ಲಿ ಎಷ್ಟು ಸಹಸ್ರ ರೋಗಾಣುಗಳು ಇವೆಯೋ ಏನೋ! ಭಕ್ತರು ಮಾತ್ರ ಅದೇ ತೀರ್ಥವೆಂದು ಸೇವಿಸುವಾಗ, ಅಯ್ಯೋ ಅಜ್ಞಾನಿಗಳು! ಎಂದು ಅನಿಸದಿರದು. ಸೇತುವೆಯ ಮೇಲೆ ಬಂಗಾಲಿ ವ್ಯಾಪಾರಿಗಳು ಕೆಲಸಕ್ಕೆ ಬಾರದ ಸಾಮಾನುಗಳನ್ನು ಅವು ಅತ್ಯಮೂಲ್ಯವೆಂದೂ ಈ ಬೆಲೆಗೆ ಬೇರೆಲ್ಲಿಯೂ ಸಿಗಲಾರವೆಂದೂ ಗಿರಾಕಿಗಳಿಗೆ ಮನವರಿಕೆ ಮಾಡುವದರಲ್ಲಿಯೇ ಮೈಮರೆತಿದ್ದರು. ಅವರಲ್ಲಿಯ

ತೀವ್ರ ಸ್ಪರ್ಧೆಯಿಂದಾಗಿ ಒಬ್ಬ ಗಿರಾಕಿಗೆ ನಾಲ್ಕು ಅಂಗಡಿಕಾರರು ಏಕಕಾಲಕ್ಕೆ ಪ್ರವಚನ ಕೇಳಿಸುವದು ತೀರ ಸಾಮಾನ್ಯ. ಈ ತಂಡದಿಂದ ಬದುಕಿಕೊಳ್ಳಲು ಪಲಾಯನ ಮಾಡಿದರೆ, ಇನ್ನೊಂದು, ಮಗುದೊಂದು ತಂಡ, ತಲೆ ತಿಂದು ಜೇಬು ಖಾಲಿ ಮಾಡದೆ ಇರುವದೇ ಇಲ್ಲ.

ಕಲಕತ್ತಾ ಹೆಚ್ಚು ನೋಡುವಂತಾಗದಿದ್ದರೂ ಕಂಡಷ್ಟಕ್ಕೆ ವಾಕರಿಕೆ ಬರಿಸುವಂತೆ ಇತ್ತು. ಲಾರ್ಡ ಬೆಂಟಿಂಕನ ಕಾಲದಲ್ಲಿ ಕಟ್ಟಿದ ಕಟ್ಟಡಗಳು ಸಾಯಲಾರದೇ ಉಸಿರು ಬಿಗಿಹಿಡಿದು ನಿಂತಿವೆ. ಸಂತಾನ ಏಕಪ್ರಕಾರವಾಗಿ ಬೆಳೆಯುತ್ತಿದ್ದರೂ ಆ ಕಿರಿದಾದ ಕಟ್ಟಡಗಳಲ್ಲಿಯೇ ಕಿಕ್ಕಿರಿದು ತುಂಬಿ ಜೀವಿಸುತ್ತಿದ್ದಾರೆ. ಬಡವರಂತೂ ಹಾಳುಬಿದ್ದ ಕಟ್ಟಡ, ಪಾರ್ಕು, ಫುಟ್‌ಪಾತ್‌ಗಳನ್ನೆಲ್ಲ ತಮ್ಮವನ್ನಾಗಿ ಮಾಡಿಕೊಂಡಿದ್ದಾರೆ. ಗಟಾರಗಳಲ್ಲಿ ಹರಿಯಬೇಕಾಗಿದ್ದ ಕೊಳಚೆ ನೀರನ್ನು ರಸ್ತೆಗಳಲ್ಲಿಯೇ ಬಿಟ್ಟಿದ್ದರಿಂದ ಧೋತರ, ಸೀರೆಗಳನ್ನು ಮೇಲೆತ್ತರಿಸಿಕೊಂಡು ಓಡಾಡುವದು ವಾಡಿಕೆ. ಓಡಲಾರದೇ ಕುಂಟುತ್ತ ಬರುವ ನಗರ ಸಾರಿಗೆ ಬಸ್ಸುಗಳು ದಾರಿಹೋಕರ ಮೇಲೆ ನಾರುವ ನೀರನ್ನು ಸಿಂಪಡಿಸಿದಾಗೊಮ್ಮೆ ಬೈಗಳ ಸುರಿಮಳೆ ಕೇಳಿಸಿಕೊಳ್ಳುವಂತಾಗುತ್ತದೆ. ಮುಂಬಯಿಯಲ್ಲಿ ಇನ್ನಿತರ ಸಾರಿಗೆಗೆ ಅಡಚಣೆಯುಂಟಾಗುತ್ತದೆಂದು, ಟ್ರಾಮ್ ರಸ್ತೆಗಳನ್ನು ರದ್ದುಮಾಡಿ ದಶಕಗಳೇ ಕಳೆದರೂ, ಬಂಗಾಲಿಗಳು ಅವನ್ನು ಉಳಿಸಿಕೊಳ್ಳುವದರಲ್ಲಿ ಯಶಸ್ವಿಯಾಗಿದ್ದಾರೆ. ರಸ್ತೆಯ ಇಕ್ಕೆಲದಲ್ಲಿಯೂ ಎಳೆ ನೀರಿನ ಚಿಪ್ಪುಗಳು, ರಸಗುಲ್ಲಾ ತಿಂದು ಒಗೆದ ಮಣ್ಣಿನ ಕುಡಿಕೆಗಳು ರಾಶಿ ಬಿದ್ದಿವೆ. ರಸ್ತೆಗಳೆಲ್ಲ ದುರಸ್ತಿ ಕಾಣದೇ ವರ್ಷಗಳೇ ಕಳೆದಿರಬೇಕು. ಅಂತೆಯೇ ಅಲ್ಲಲ್ಲಿ ಹೊಂಡ–ಕುಳಿಗಳು ಬಿದ್ದು ವಾಹನಗಳ ಓಡಾಟಕ್ಕೆ ತೀವ್ರ ಅಡಚಣೆಯಾಗುತ್ತದೆ. ಇರುವೆ ಸಾಲುಗಳಂತೆ ಹೊರಟ ವಾಹನಗಳು ಗಕ್ಕನೆ ನಿಂತವೆಂದರೆ, ತಿರುಗಿ ಹೊರಡಲು ಒಂದು ಗಂಟೆಯೇ ಬೇಕಾಗುವದು.

ಮುಂದೆ ಓಡಲು, ಕಾದು ನಿಂತಾಗ, ರಿಕ್ಷಾದವನನ್ನು ಮಾತನಾಡಿಸಿದೆ. ಅವನು ಬಿಹಾರದ ಮೋತಿಪುರದ ಸಮೀಪದ ಹಳ್ಳಿಯವನಂತೆ. ಉದರ ನಿರ್ವಹಣೆ ತೀರ ಕಷ್ಟದ್ದಾದ್ದರಿಂದ ಚಿಕ್ಕವನಿದ್ದಾಗಲೇ ಕಲಕತ್ತೆಗೆ ಧಾವಿಸಿ ಬಂದನಂತೆ. ಪತ್ನಿ–ಮಕ್ಕಳು ಹಿರಿಯರೊಂದಿಗೆ ಹಳ್ಳಿಯಲ್ಲಿ ವಾಸಿಸಿದ್ದಾರಂತೆ. ಅನುಕೂಲವಾದಾಗ ಉಳಿಸಿದ ಹಣವನ್ನು ಮನಿಯಾರ್ಡರ ಮಾಡಿ ಕಳಿಸುತ್ತಾನಂತೆ. ಸಿಕ್ಕಾಗ ಎರಡು ಬಿಘಾ ಜಮೀನನ್ನು ಕೊಂಡು ಕುಟುಂಬದೊಂದಿಗೆ ನೆಮ್ಮದಿಯಾಗಿ ಬಾಳಬೇಕು

ಎಂಬುದು ಅವನ ಕನಸಂತೆ. ಆದರೆ ಕಳೆದ ಕಾಲು ಶತಕದಲ್ಲಿ ಅದನ್ನು ಸಾಧಿಸ ಲಾಗಲೇ ಇಲ್ಲವಂತೆ. "ಬಾಬು, ನಮ್ಮಂತಹ ಕಡುಬಡವರು ಹುಟ್ಟಲೇಬಾರದು" ಎಂದು ನಿಟ್ಟುಸಿರು ಬಿಟ್ಟಾಗ, ಅಯ್ಯೋ ಪಾಪ! ಅನಿಸದಿರಲಿಲ್ಲ. ಬೇರೇನೂ ಮಾಡಲಾಗದಿದ್ದರೂ ಒಂದು ರೂಪಾಯಿ ಹೆಚ್ಚಾಗಿಯೇ ಬಾಡಿಗೆ ಕೊಟ್ಟಾಗ 'ಬಾಬು, ನೀವು ತುಂಬ ದಯಾಮಯಿ, ದೇವರು ನಿಮ್ಮನ್ನು ಸದಾ ಸುಖಿ ಯಾಗಿಡಲಿ' ಎಂದು ಬೀಳ್ಕೊಂಡ. ಇಲ್ಲಸಲ್ಲದಕ್ಕೆ ಹಣ ಸುರಿಯುವ ಶ್ರೀಮಂತರು ತರಕಾರಿ ಖರೀದಿಸುವಾಗ, ರಿಕ್ಷಾ ಬಾಡಿಗೆ ಕೊಡುವಾಗ ಎಷ್ಟೊಂದು ಜಿಕೇರಿ ಮಾಡುತ್ತಾರಲ್ಲವೇ?

ಪ್ಲಾಸಿಗೆ ಹೊರಡುವ ಟ್ರೇನಿಗೆ ಇನ್ನೂ ಆರು ತಾಸುಗಳ ಅವಕಾಶವಿತ್ತು. ರೇಲ್ವೆ ಭೋಜನಾಲಯದಲ್ಲಿ ಊಟ ಮಾಡಿ ಬಂದೆ. ಹಸಿದು ಇದ್ದರೇ ಚೆನ್ನಾಗಿತ್ತು ಅನಿಸಿತು. ಕಿಕ್ಕಿರಿದು ತುಂಬಿದ ಸಿಯಾಲ್ದಾ ನಿಲ್ದಾಣದಲ್ಲಿ ಕೂಡ್ರಲು ಎಲ್ಲಿಯೂ ಜಾಗವಿಲ್ಲದ್ದರಿಂದ ಸಾಮಾನಿನ ಮೇಲೆಯೇ ಸ್ಥಾಪಿತನಾಗಿ ಈ ಪತ್ರ ಗೀಚುತ್ತಿದ್ದೇನೆ.

○

೨೧. ಭಯ್ಯಾರ ರಾಜ್ಯದಲ್ಲಿ

ಸಮಷ್ಟಿಪೂರ (ಬಿಹಾರ), ೨೨-೬-೧೯೬೯

ಬಿಹಾರಿ ಭೈಯ್ಯಾಗಳು ಸಂಪು ಹೂಡಿದರೆ ಮುಂಬಯಿಯ ಹಾಲು ವಿತರಣಾ ವ್ಯವಸ್ಥೆ ಮತ್ತು ಕಲಕತ್ತೆಯಲ್ಲಿಯ ಸಾರಿಗೆಯ ಏರ್ಪಾಡು ಅಸ್ತವ್ಯಸ್ತವಾಗುವದರಲ್ಲಿ ಸಂದೇಹವೇ ಇಲ್ಲ. ಮೋತಿಪುರದಲ್ಲಿಯ ಕಬ್ಬಿನ ಕೀಟಗಳ ಸಂಶೋಧನಾಲಯದ ಮೇಲ್ವಿಚಾರಣೆಗೆ ಹೋಗಿದ್ದರಿಂದ "ಭೈಯ್ಯಾ"ರನ್ನು ಅವರ ರಾಜ್ಯದಲ್ಲಿಯೇ ಅಭ್ಯಸಿಸುವ ಅಪೂರ್ವ ಅವಕಾಶ ಸಿಕ್ಕಿತು. ಪ್ಲಾಸಿಯಿಂದ ಕಲಕತ್ತಾ, ಸಮಷ್ಟಿಪುರ ಮಾರ್ಗವಾಗಿ ದ್ರಾವಿಡ ಪ್ರಾಣಾಯಾಮ ಹಾಕಿ, ಮೋತಿಪುರವನ್ನು ಮುಟ್ಟಬೇಕಾಯಿತು. ಪ್ಲಾಸಿಯಂತೆ ಇದೂ ಒಂದು ಚಿಕ್ಕಹಳ್ಳಿ. ರೇಲು ನಿಲ್ದಾಣದ ಬಲಗಡೆಗೆ ಇರುವವೇ ಭವ್ಯವಾದ ಸಕ್ಕರೆ ಕಾರಖಾನೆ. ಇದು ಮಹಮ್ಮದೀಯರ ಒಡೆತನಕ್ಕೆ ಒಳಗಾಗಿದ್ದರಿಂದ, ಕಾರ್ಮಿಕರಿಗೆ ನಮಾಜು ಮಾಡಲು ಅನುಕೂಲವಾಗುವಂತೆ ಎದುರಿಗೇ ದೊಡ್ಡದಾದ ಮಸೀದೆ ಕಟ್ಟಲಾಗಿದೆ. ಮುಂದೆ ಅರ್ಧ ಮೈಲು ದೂರ ಜಮಿದಾರಿ ಅಂದರೆ, ಫಾರ್ಮಿನ ಆಫೀಸುಗಳಿವೆ. ಎದುರಿಗೇ ಕಾವಿಬಣ್ಣದ ಐದು ಬಂಗಲೆಗಳಿವೆ. ನಟ್ಟನಡುವಿನದು ನಮ್ಮ ಸಂಶೋಧನಾಲಯ. ಮೇಲಧಿಕಾರಿಯಾಗಿ ಕೆಲಸಗಾರರ ಕುಂದುಕೊರತೆಗಳನ್ನು ಕೇಡುಹಿಡಿಯಲು ಬಂದಿದ್ದರಿಂದ ಆ ಕಗ್ಗಹಳ್ಳಿಯಲ್ಲಿಯೂ ಆತಿಥ್ಯಕ್ಕೆ ಕೊನೆಮೊದಲಿಲ್ಲ. ಕಂಪನಿಯವರು ಡಿ. ಸಿ. ವಿದ್ಯುತ್ತು, ಬಳಸುತ್ತಿದ್ದುದರಿಂದ ನಮ್ಮ ಆಫೀಸಿನ ಎ. ಸಿ. ಪಂಕಾಗಳನ್ನು ಬಳಸುವಂತಿರಲಿಲ್ಲ. ಅಂತೆಯೇ ಹರಿನಾರಾಯಣನಿಂದ ದೊಡ್ಡದಾದ ಬೀಸಣಿಗೆಯಿಂದ ಗಾಳಿ ಬೀಸುವ ಏರ್ಪಾಡು ಮಾಡಿಸಿದಾಗ, ಎಂದಾದರೊಮ್ಮೆ ನವಾಬನಾಗಿರಬೇಕು, ಅನಿಸಿತು. ಮರುದಿನ ಎಲ್ಲಿಂದಲೋ ರೇಡಿಯೋ, ಫ್ಯಾನುಗಳು ನನಗಾಗಿ ಬಂದವು. ಅಧಿಕಾರವಿದ್ದರೆ ಅಳಿಯನಿಗೂ ದುರ್ಲಭವಾದ ಆತಿಥ್ಯಗಿಟ್ಟಿಸಬಹುದೆಂಬ ಮಾತು ಮೊದಲಬಾರಿಗೆ ಅರಿಯುವಂತಾಯಿತು.

ಇಲ್ಲಿಯ ಕಾರಖಾನೆಯ ಹತ್ತುಪಾಲುದಾರರು ಸದಾಕಾಲ ತಮ್ಮ ಹಕ್ಕು

ಬಾಧ್ಯತೆಗಳಿಗಾಗಿ ಬಡಿದಾಡುತ್ತಲೇ ಇರುವದರಿಂದ ಕೆಲಸಗಾರರಿಗೆ ಹೆಚ್ಚಿನ ಯಾ
ಸವಲತ್ತುಗಳನ್ನೂ ಕೊಡಮಾಡಲಿಲ್ಲ. ಅದೇ ಪ್ಲಾಸಿಯಲ್ಲಿ, ಮೊದಲಿಗೆ ಆಂಗ್ಲರು
ಉತ್ತಮ ಆಡಳಿತ ವ್ಯವಸ್ಥೆಯ ಮೇಲ್ಪಂಕ್ತಿಯನ್ನು ಹಾಕಿಕೊಟ್ಟದ್ದರಿಂದ ಈಗಿನ
ಮಾರವಾಡಿ ಮಾಲಕರು ಕಲಕತ್ತೆಯಲ್ಲಿದ್ದು ಕೇವಲ ಲಾಭದತ್ತ ಕಣ್ಣಿಟ್ಟು, ಸಣ್ಣ
ಪುಟ್ಟ ವಿಷಯಗಳಲ್ಲಿ ತಲೆಹಾಕದ್ದರಿಂದ ಕೆಲಸಗಾರರಿಗೆ ಅನೇಕಾನೇಕ ಸವಲತ್ತು
ಗಳನ್ನು ಕಲ್ಪಿಸಿಕೊಡುವಂತಾಗಿದೆ. ಇಬ್ಬರು ಕೀಟ-ಸಂಶೋಧಕ ಸಹಾಯಕರ
ಮೋತಿಪುರದಲ್ಲಿ ಇದ್ದರೂ ಅವರು ತಮ್ಮ ಸಂಸಾರದ ಬೇಕು-ಬೇಡಗಳನ್ನು ಪೂರೈ
ಸುತ್ತ ಹಾಯಾಗಿದ್ದು ಕಳೆದ ಒಂದು ವರ್ಷದಲ್ಲಿ ಹೆಸರಿಸಬಹುದಾದಂತಹ ಯಾವ
ಸಂಶೋಧನೆಯನ್ನೂ ಮಾಡಲೇ ಇಲ್ಲ. ಮೋಜಿನ ಮಾತೆಂದರೆ, ಬೆಂಗಳೂರಿನವ
ನಾದ ನಾನು, ತನ್ನ ರಾಜ್ಯದವನೆಂದು ಒಬ್ಬಾತ ಸಹೋದ್ಯೋಗಿಯು ಕೊರತೆಗಳ
ಬಗ್ಗೆ ವಿವರವಾಗಿ ದೂರಿಕೊಂಡರೆ, ನನಗೆ ಹಿಂದಿ ಚೆನ್ನಾಗಿ ಬರುತ್ತದೆ, ರಾಜ
ಸ್ಥಾನದಲ್ಲಿ ಮೂರು ವರ್ಷ ಇದ್ದೆ ಎಂಬ ತಳಹದಿಯ ಮೇಲೆಯೇ ನಾನು ಉತ್ತರ
ಪ್ರದೇಶದವನು ಎಂದು ನಂಬಿದಾತ, ಬೆಂಗಳೂರಿನವರು ಬೆಚ್ಚಗೆ ಮಲಗುವದನ್ನು
ಬಿಟ್ಟರೆ ಇನ್ನೇನೂ ಮಾಡುವದಿಲ್ಲವೆಂದು ಮನವರಿಕೆ ಮಾಡಿಕೊಡಲು ಯತ್ನಿಸಿದ!
ಅವರಿಬ್ಬರ ಆಂತರಿಕ ಜಗಳದಲ್ಲಿ ಆಸಕ್ತಿ ಇಲ್ಲವೆಂದೂ, ಸಂಶೋಧನೆಯಲ್ಲಿ ಪ್ರಗತಿ
ಸಾಧಿಸುವದು ಅತಿಮುಖ್ಯವೆಂದೂ ಕಡ್ಡಿಮುರಿದು ಹೇಳಬೇಕಾಯಿತು.

ಆಫೀಸಿನವರ ಆತಿಥ್ಯ ಸ್ವೀಕರಿಸಿ, ಭಿಡೆಗೆ ಬೀಳುವದು ಬೇಡವೆಂದು ಊಟ-
ತಿಂಡಿಗಾಗಿ ಊರಲ್ಲಿ ಹುಡುಕಾಡಿದೆ. ಹಸಿಶುಂಠಿ, ಯಾಲಕ್ಕಿ ಸೇರಿಸಿದ ಚಹಾ,
ಕಷಾಯದ ರುಚಿಕೊಟ್ಟಿತು. ಹೆಸರು ಬೇಳೆ ಹಾಕಿದ ಕಚೋರಿ ಅಳತೆಯ ಪೂರಿ
ಗಳನ್ನು ಜನ ಹೆಚ್ಚಾಗಿ ತಿನ್ನುತ್ತಿದ್ದರು. ಚಹಾ ಕಪ್ಪಿಗೆ ಹನ್ನೆರಡು ಪೈಸೆ ಆದರೆ
ಪೂರಿ ಒಂದಕ್ಕೆ ಬರೇ ಆರು ಪೈಸೆ. ಕಡಲೆಹಿಟ್ಟು, ಹಸಿಮೆಣಸಿನಕಾಯಿ ಊಟ
ಮನಸ್ಸಿಗೆ ಬಾರದ್ದರಿಂದ, ಮೊಸರವಲಕ್ಕಿಯ ಊಟಕ್ಕೆ ಶರಣು ಹೋಗ
ಬೇಕಾಯಿತು. ಆಳೊಬ್ಬ ಗಿರಾಕಿಗಳ ಎದುರು ಕಮಲದ ಎಲೆಯನ್ನು ಇಡುತ್ತ
ಹೋದ. ಅದನ್ನು ಸ್ವಚ್ಛವಾಗಿ ನೀರಿನಿಂದ ತೊಳೆಯುವ ಜವಾಬ್ದಾರಿ ನಮ್ಮ
ಮೇಲೆಯೇ! ಎಲೆಯ ಮೇಲೆ ಒಂದೊಂದು ಪಾವು ಅವಲಕ್ಕಿ, ಅರ್ಧ ಪಾವು ಗಟ್ಟಿ
ಮೊಸರು, ಎರಡು ಚಮಚೆ ಸಕ್ಕರೆ ಬಡಿಸಲಾಯಿತು. ಕೇಳಿದವರಿಗೆ ಚಟ್ನಿಯಷ್ಟು
ಪಲ್ಯವನ್ನು ಪೂರೈಸಿದ. ಮೊಸರವಲಕ್ಕಿಯ ಊಟ ಮನಸ್ಸಿಗೆ ಬಂದದ್ದರಿಂದ

ಮೋತಿಪುರದಲ್ಲಿ ಇದ್ದಷ್ಟು ದಿನ ಅದನ್ನೇ ತಿಂದು ತೇಗಿದೆ. ಕೇವಲ ಎಪ್ಪತ್ತೈದು ಪೈಸೆಗೆ ಹೊಟ್ಟೆ ತುಂಬಿ ಹೋಗುತ್ತದೆಂದರೆ ಯಾರೂ ನಂಬಲಿಕ್ಕಿಲ್ಲ. ಪ್ಲಾಸಿಯಲ್ಲಿಯೂ ಈ ವ್ಯವಸ್ಥೆ ಇದ್ದರೆ! ಎಂದು ಅನಿಸದೇ ಇರಲಿಲ್ಲ.

ನಾನು ನೋಡಿದ ಗ್ರಾಮೀಣ ಬಿಹಾರವೆಲ್ಲ ಹೊಲಸು. ಬಂಗಾಲಿಗಳ ಊರುಗಳೂ ಹೊಲಸಾದರೂ ಸ್ವಸ್ವಚ್ಛತೆಯ ಕಡೆಗೆ ವಿಶೇಷ ಲಕ್ಷ್ಯ ಪೂರೈಸುತ್ತಾರೆ. ಪ್ರತಿದಿನ ಎರಡು ಬಾರಿ ಸ್ನಾನ ಮಾಡಿ ಗರಿಗರಿಯಾಗಿ ನಿಲ್ಲುವ ಶುಭ್ರ ಬಟ್ಟೆ ತೊಡುತ್ತಾರೆ. ಇಲ್ಲಿ ಬಡ ಬಿಹಾರಿಗಳಲ್ಲಿ ಆಯೊಡಿನ್ ಕೊರತೆಯಿಂದಾಗಿ ಬರುವ ಉಬ್ಬು ಕಂಠ (ಗೊಯ್ಟರ್) ತೀರ ಸಾಮಾನ್ಯ. ಹೆಂಗಳೆಯರು ಕೈ ಕಂಠಗಳ ಮೇಲೆಲ್ಲ ಹಚ್ಚೆ ಹಾಕಿಸಿಕೊಳ್ಳುತ್ತಾರೆ. ಕುಂಕುಮದ ಬದಲಾಗಿ ವಿವಿಧ ಬಣ್ಣಗಳ ಟಿಕಳಿ (ಬಿಂದಿ)ಗಳಿಂದ ಹಣೆಯನ್ನು ಅಲಂಕರಿಸುತ್ತಾರೆ. ಸಾಮಾನ್ಯವಾಗಿ ಕುಪ್ಪಸ, ಪರಕರಗಳನ್ನು ತೊಡುವ ಪದ್ಧತಿ ಇಲ್ಲವಾದರೂ ಉಟ್ಟ ರಬ್ಬಾದ ಸೀರೆಯ ತುಂಡಿನಿಂದಲೇ ಅಂಗಾಂಗಳನ್ನು ಮುಚ್ಚಿಕೊಂಡು ಓಡಾಡುತ್ತಾರೆ. ಪುರುಷರು ಮಾಸಿದ ಧೋತರ ಮತ್ತು ಕಿರಿದಾದ ಬಂಡಿಯನ್ನು ಬಳಸುವರು. ಹೆಚ್ಚಿನವರು ತಂಬಾಕು, ಉಜ್ಜಿ ಉಂಡಿ ಕಟ್ಟಿ ಬಾಯಲ್ಲಿ ಇಟ್ಟುಕೊಳ್ಳುವದರಿಂದ, ವೀಳ್ಯದ ಅಭ್ಯಾಸವಿರುವವರಂತೆ ಬಾಯನ್ನು ಗಗನದತ್ತ ಮಾಡಿ ಅಪಭ್ರಂಶ ಹಿಂದಿಯನ್ನು ಮಾತನಾಡುವರು. ಪ್ರತಿ ವಾಕ್ಯದ ಕೊನೆಯಲ್ಲಿ ಆsss ಎಂದು ರಾಗ ಎಳೆಯುವರು. ಹಲವರು ವೀಳ್ಯ ಜಗಿದರೂ ಅದನ್ನು ಬೆಳೆಯುವ ಗೋಜಿಗೆ ಹೋಗದ್ದರಿಂದ ಹೌರಾದಿಂದಲೇ ಬರಬೇಕು. ಈ ವ್ಯಾಪಾರವನ್ನು ಬಂಗಾಲಿ ನಿರಾಶ್ರಿತ ಹೆಂಗಳೆಯರು ತಮ್ಮದನ್ನಾಗಿ ಮಾಡಿಕೊಂಡಿದ್ದಾರೆ. ತಿಕೀಟು ಕೊಳ್ಳದೇ ಲಗೇಜ ಕೊಡದೇ ರೇಲು ಹೊರಡುವಾಗ ಹತ್ತುತ್ತಾರೆ. ಒಂದು ಡಬ್ಬಿಯಿಂದ ಇಳಿಸಿದರೆ ಇನ್ನೊಂದರಲ್ಲಿ ಹತ್ತುತ್ತಾರೆ. ಈ ವೀಳ್ಯದೆಲೆಗಳನ್ನು ಮಾರುವ ಪದ್ಧತಿ ವಿಶಿಷ್ಟವಾದದ್ದು. ಹತ್ತು ಹದಿನೈದು ಎಲೆಗಳನ್ನು ಸಾಲಾಗಿಟ್ಟು ಮೇಲೂ ಕೆಳಗೂ ಕಬ್ಬಿನ ಇಲ್ಲವೇ ಜೋಳದ ಎಲೆಗಳಿಂದ ಕಟ್ಟುತ್ತಾರೆ.

ಮೋತಿಪುರ ಮತ್ತು ಸಮಷ್ಟಿಪುರಗಳ ಸಂತೆಯನ್ನು ನೋಡುವ ಅವಕಾಶವೂ ದೊರೆಯಿತು. ಸಿಂಧಿ, ಪಂಜಾಬಿ, ರಾಜಸ್ಥಾನಿಗಳು ರಂಗು ರಂಗಿನ ಬಟ್ಟೆಗಳನ್ನು ತೊಟ್ಟು ಬರುವ ಜಯಪುರದ ಶನಿವಾರದ ಸಂತೆಗೂ ಇಲ್ಲಿಯದಕ್ಕೂ ಆಕಾಶ–

ಪಾತಾಳಗಳ ಅಂತರ. ನೆರೆದ ಬಹು ಸಂಖ್ಯಾಕರು ಕಡು ಬಡವರು. ಮಾರಲು ಬಂ ಮಾಲು ಅಶುದ್ಧ ಮತ್ತು ಅನಾಕರ್ಷಣೀಯ. ಮಡಕೆ, ಮೆಣಸು, ಅಕ್ಕಿ, ಉಪ್ಪು ಉಳ್ಳಾಗಡ್ಡೆ, ಕಡ್ಲೆ ಹಿಟ್ಟಿನಿಂದ ಕರಿದ ಖಾದ್ಯ-ಪದಾರ್ಥಗಳು ಹೆಚ್ಚಾಗಿ ಮಾರಾ ವಾಗುತ್ತಿದ್ದವು. ತರಕಾರಿ, ಹಣ್ಣು-ಹಂಪಲುಗಳು ತೀರಾ ಕಚಡ. ಬಿಹಾರಿಗಳಿಗೆ ವಿಶಿಷ್ಟವಾದ ಯಾವುದಾದರೂ ಸಾಮಾನು ಕೊಳ್ಳೋಣ ಎಂದರೆ, ಎಲ್ಲವ ಹೊರಗಿನಿಂದಲೇ ಬರಬೇಕು. ಸೋಲಾಪುರದ ಹೊದ್ದುಕೊಳ್ಳುವ ಚಾದರಗಳ ಮುಂಬೈಯ ಮಿಲ್ಲಿನ ಸೀರೆಗಳು, ಕಲಕತ್ತೆಯ ಇಂಜಿನೀಯರಿಂಗ್ ಸಾಮಾನು ದಿ ಯಿಂದ ಗೃಹಕೃತ್ಯದ ಸಾಮಾನುಗಳೇ ಇಲ್ಲಿ ಮಾರಲ್ಪಡುತ್ತವೆ. ಮುಂಬಯಿ ಕಲಕತ್ತಾ ನಗರಗಳಲ್ಲಿ ದುಡಿಮೆಯ ಆಳಾದ ಭೈಯ್ಯಾಗಳು ಸ್ವಂತದ ರಾಜ್ಯದ ಅವಕಾಶಗಳೇ ಇಲ್ಲದ್ದರಿಂದ ಸೋಮಾರಿಗಳು ಅನಿಸುತ್ತಾರೆ. ಇಂದಿನ ದಿನಗಳ ಪಂಜಾಬದ ಕೃಷಿಕರ ನೆರವಿಗಾಗಿ ಕಾರ್ಮಿಕರು ಸುಗ್ಗಿಯ ಕಾಲದಲ್ಲಿ ಆ ರಾಜ್ಯಕ್ಕೆ ಧಾವಿಸುತ್ತಿದ್ದಾರೆ. ಬಿಹಾರ ಸರಕಾರ, ತಮ್ಮದು ಹಿಂದುಳಿದ ರಾಜ್ಯ ಎಂದು ಕೊಳ್ಳುವದರಲ್ಲಿಯೇ ಹೆಚ್ಚು ಅಭಿಮಾನ ತಳೆಯುತ್ತದೆಂದು ಅನಿಸುತ್ತದೆ.

○

೨೨. ಸೌಂದರ್ಯಭರಿತ ಪ್ಲಾಸಿ

ಪ್ಲಾಸಿ (ಪಶ್ಚಿಮ ಬಂಗಾಲ), ೨-೭-೧೯೬೯

ಕರ್ನಾಟಕದ ಕರಾವಳಿಯಂತೆ ಗಂಗೆಯ ಬಯಲೂ ಅತ್ಯಂತ ರಮಣೀಯ. ದೇವ-ದೇವತೆಗಳಿಗಾಗಿ, ನಿಸರ್ಗಮಾತೆ ನಿರ್ಮಿಸಿದ ಆಟದ ಬಯಲು, ಎಂದು ಭ್ರಮೆ ಹುಟ್ಟಿಸುವಷ್ಟು ಸಪಾಟಾದ ಭೂಮಿ. ಹರಿಯ ಜಡೆಯಿಂದ ಭೂಮಿಗೆ ಧುಮುಕಿದ ಭಾಗೀರಥಿಯು ತನ್ನೊಂದಿಗೆ ಹಿಮಾಲಯದ ಸೊಸುಮಣ್ಣು ಹೊತ್ತು ತಂದು ವಂಗದೇಶದಲ್ಲಿ ಹರವಿದ್ದಾಳೆ. ಅಂತೆಯೇ ಕಣ್ಣು ಹಾಯಿಸಿದಲ್ಲೆಲ್ಲ ಹಚ್ಚ ಹಸಿರು. ನೋಡಿದಲ್ಲೆಲ್ಲ ಹೊಂಡ, ಹಳ್ಳ, ನದಿ; ಕಂಡಲ್ಲೆಲ್ಲ ನೀರೇ ನೀರು. ಹೊಲಗಳಲ್ಲೆಲ್ಲ ಕಬ್ಬು, ಭತ್ತ, ಗೋದಿ, ಸಣಬುಗಳನ್ನು ಬೆಳೆಸುತ್ತಾರೆ. ಸೂರಕ್ಕಿಗಳು ಚಿಲಿಪಿಲಿ ಗುಟ್ಟುತ್ತ ಆ ದಂಡೆಯಿಂದ ಈ ದಂಡೆಗೆ, ಈ ತೆನೆಯಿಂದ ಆ ತೆನೆಗೆ ಹಾರುವದನ್ನು ನೋಡುವವೇ ಒಂದು ಅನುಭವ. ಹಳ್ಳಿಗರು ಕಟ್ಟಿಕೊಂಡ ಸಣ್ಣ-ಸಣ್ಣ ಹುಲ್ಲಿನ ಛಾವಣಿಯ ಗುಡಿಸಲುಗಳು, ಅವರ ದನಕರು, ಬಾತುಗೋಳಿಗಳು, ಈ ನಿಸರ್ಗದೊಂದಿಗೆ ಒಂದಾಗಿವೆ. ಈ ಪ್ರಕೃತಿಯಿಂದ ಸ್ಫೂರ್ತಿಗೊಂಡ ರವೀಂದ್ರರು ಮಹಾಕವಿಯಾದರೆ, ನಂದಲಾಲ ಬೋಸರು ಅಪೂರ್ವ ಕಲಾಕಾರರಾದರೆ, ಅದರಲ್ಲೇನು ಆಶ್ಚರ್ಯ? ಎನಿಸಿತು. ಕಬ್ಬಿನ ಕ್ಷುದ್ರ ಕೀಟಗಳಿಂದಾಗಿ ಈ ಸೌಂದರ್ಯಭರಿತ ನಾಡಿಗೆ ಬರುವಂತೆ ಆದದ್ದಕ್ಕೆ ತುಂಬ ಅಭಿಮಾನಪಟ್ಟೆ.

ಕಂಪನಿಯವರು, ಕಬ್ಬನ್ನು ದೂರ ದೂರದ ಹೊಲಗಳಲ್ಲೆಲ್ಲ ಬೆಳೆಸಿದ್ದರಿಂದ, ಆ ಬೆಳೆಯನ್ನು ಪೀಡಿಸುವ ಕೀಟಗಳ ಅಧ್ಯಯನಕ್ಕಾಗಿ ಅಲ್ಲಿ ಇಲ್ಲಿ ಓಡಾಡಿಕೊಂಡು ಇರುವ ಅವಕಾಶ ಸುಲಭವಾಗಿ ಸಿಕ್ಕಿದ್ದರಿಂದ, ನನ್ನ ತಿರುಗಾಟದ ತೀಟೆ ತೀರಿಸಿಕೊಳ್ಳಲು ಅನುಕೂಲವೇ ಆಗಿದೆ. ಕಿಸೆ ತುಂಬ ಸಂಬಳ, ಓಡಾಟಕ್ಕೆ ವಾಹನಗಳು, ಛಾಯಾಗ್ರಹಣಕ್ಕಾಗಿ ಕ್ಯಾಮರಾ, ಫಿಲ್ಮ ಕೊಟ್ಟು ಅಲೆಮಾರಿಯಾಗಲು ಅನುವು ಮಾಡಿಕೊಡುವ ಸಂಸ್ಥೆಯಲ್ಲಿ ಸೇರುವ ಅವಕಾಶ ಸಿಕ್ಕೀತೆಂದು ಅನಿಸಿರಲಿಲ್ಲ. ನಮ್ಮವೇ ಎರಡು ಮೋಟಾರ್ ಸಾಯಕಲ್‌ಗಳಿವೆ. ಬೇಕು ಎಂದಾಗ ಕಂಪನಿ

ಯುವರು ಜೀಪ್ ಕೊಡುತ್ತಾರೆ. ಇವುಗಳಲ್ಲಿ ಪ್ರಯಾಣ ಮಾಡಿ ಪ್ರಕೃತಿಯ
ದರ್ಶನ ಲಾಭ ಪಡೆಯುವದೇ ಒಂದು ಅನುಭವ. ಈ ಹಳ್ಳಿಗಳಲ್ಲಿ ಯಾವ ರಸ್ತೆ
ಗಳೂ ಇಲ್ಲ, ಸಾರಿಗೆ ಸೌಕರ್ಯಗಳಿಲ್ಲ. ಅಂತೆಯೇ ಕಾಲುದಾರಿಯೇ ರಾಜಮಾರ್ಗ
ನಡೆಯಬಲ್ಲ ಕಾಲುಗಳೇ ಮಹಾನ್ ವಾಹನ. ಇಂಥ ತಾಣಗಳಲ್ಲಿ ಮೋಟಾ
ಸಾಯಕಲ್ ಓಡಿದಾಗ, ಜನರ ಹೃದಯದ ಮಿಡಿತ ಜೋರಾಗುವದು ತೀರ ಸಹ
ಕೆಸರಿನಲ್ಲಿ ಆಡಿಕೊಂಡಿದ್ದ ಮಕ್ಕಳೆಲ್ಲ ಇಲಿಗಳಂತೆ ಚೆಲ್ಲಾಪಿಲ್ಲಿಯಾಗಿ ಓಡಿ ಪೊ
ಗಳಲ್ಲಿ ಅವಿತುಕೊಳ್ಳುವದು, ನೀರಿನಲ್ಲಿ ಧುಮುಕುವದು ಮಾಡುತ್ತಾರೆ. ಕೈ ರಾ
ಯಿಂದ ಮಡಕೆಯಲ್ಲಿ ನೀರು ತುಂಬುತ್ತಿರುವ ಗೃಹಿಣಿ, ಅದನ್ನು ಅಲ್ಲಿಯೇ ಬಿಟ
ತತ್ತರ-ಪತ್ತರ ಕಾಲು ಹಾಕುತ್ತ ಒಡ ಜೀವ ಬದುಕೀತೇ! ಎಂದು ನಾಗಾಲೋ
ಕೀಳುವದನ್ನು ನೋಡುವದೇ ಮೋಜು. ಜೀಪನ್ನು ಯಂತ್ರ ಚಾಲಿತ ಆನೆ ಎಂಬಂ
ಪಿಳಿಪಿಳಿ ಕಣ್ಣು ಬಿಡುತ್ತ, ವಿಸ್ಮಯದಿಂದ ನೋಡುತ್ತ ನಿಂತಿರುತ್ತಾರೆ. ಹೊಂಡದ
ಮೀಯುವ ಮಹಿಳೆಯರು ಆಗಂತುಕರ ಕಣ್ಣುಗಳಿಗೆ ತಾವೆಷ್ಟು ಆಕರ್ಷಕವಾಗಿದ್ದ
ವೆಂಬುದನ್ನು ಅರಿಯದೇ ಮಿಕಿ ಮಿಕಿ ಕಣ್ಣು ಬಿಡುತ್ತ ಮೈ ಮರೆತಿರುತ್ತಾರೆ.

ಬಿದಿರಿನಿಂದ ರಚಿತವಾದ ತೀರ ಹಗುರವಾದ ಎತ್ತಿನ ಗಾಡಿಗಳೇ ಇಲ್ಲಿಂ
ಸಾರಿಗೆಯನ್ನು ಪೂರೈಸುತ್ತವೆ. ಜಿಗಟು ಮಣ್ಣಿನಲ್ಲಿ ಆಗಾಗ ಗಾಲಿಗಳು ಹುಗಿ
ಕೊಳ್ಳುವದರಿಂದ ಚಾಲಕನು ಎತ್ತುಗಳ ನೆರವಿಗೆ ಧಾವಿಸಬೇಕಾಗುತ್ತದೆ. ನ
ಹಳ್ಳಗಳಿಗೆ ಈ ಚಕ್ಕಡಿಗಳು ಸೊಪ್ಪು ಹಾಕುವದೇ ಇಲ್ಲ. ತೇಲುವ ಗಾಡಿಗಳನ್ನ
ಎತ್ತುಗಳು ಈಜುತ್ತ ಎಳೆದುಕೊಂಡು ಹೋಗುತ್ತಿರುತ್ತವೆ. ಸಾರಥಿಯು ಅಷ್ಟರ
ತನ್ನ ಸ್ನಾನ ಮುಗಿಸಿ ಆಚೆಯ ದಡ ಸೇರಿರುತ್ತಾನೆ. ಗಂಗಾ ನದಿಯ ಆಸ
ಯಲ್ಲಿರುವವರು ಚಿಕ್ಕ ಚಿಕ್ಕ ನಾವೆಗಳನ್ನು ಯಾನಕ್ಕಾಗಿ ಬಳಸುತ್ತಾರೆ. ಅವುಗಳ
ಸೆಣಬು, ಕಬ್ಬು ಹೇರಿಕೊಂಡು ಒಂದು ಊರಿನಿಂದ ಇನ್ನೊಂದೂರಿಗೆ ಸಾಗಿಸ
ತ್ತಾರೆ. ಪ್ರಯಾಣಿಕರನ್ನು ಈಚೆಯಿಂದ ಆಚೆಗೆ ದಾಟಿಸುವದೂ ಉಂಟ
ಮತ್ಸ್ಯಪ್ರಿಯ ಬಂಗಾಲಿಗಳು ನಾವೆಯಲ್ಲಿ ಕುಳಿತು ಮೀನು ಹಿಡಿಯುತ್ತಿರು
ದೃಶ್ಯ ತೀರ ಸಾಮಾನ್ಯ. ಕೆಲವೊಮ್ಮೆ ಉರಿಯುವ ಚಿಮಣಿಯ ಮಂದ ಬೆಳಕಿನ
ರಾತ್ರಿಯಿಡೀ ಮೀನು ಹಿಡಿಯುವದೂ ಉಂಟು. ವೃತ್ತಿ ಮೀನುಗಾರರು ತೆಂಗಿ
ಗರಿಗಳ ಕಡ್ಡಿಗಳಿಂದ ನಿರ್ಮಿಸಿದ ಪಂಜರದಲ್ಲಿ ನೀರು ಹಾಯಿಸಿ ಪುಟ್ಟ ಪುಟ
ಮೀನುಗಳನ್ನು ತಮ್ಮವನ್ನಾಗಿ ಮಾಡಿಕೊಂಡರೆ, ದೊಡ್ಡ ಮೀನುಗಳಿಗಾ

ಬಲೆಗಳನ್ನು ಬಳಸುವರು. ರುಹು, ಹಿಲ್ಸಾ, ಕಟ್ಲಾಗಳು ಅವರಿಗೆ ಅತ್ಯಂತ ಪ್ರಿಯ ವಾದ ಮೀನಿನ ಪ್ರಕಾರಗಳು.

ಸಾಂತಾಲರು ಬೀಡು ಬಿಟ್ಟ ಹಳ್ಳಿಗಳಿಂದ ಹಾದುಹೋಗುವಾಗಿನ ಅನುಭವ ಗಳು ಅಪೂರ್ವವಾದವು. ಅವರಿನ್ನೂ ಆಧುನಿಕತೆಗೆ ಮಾರುಹೋಗದೇ ತಲೆ ತಲಾಂತರಗಳಿಂದ ನಡೆದು ಬಂದ ಜೀವನವನ್ನೇ ನಡೆಸುತ್ತಿದ್ದಾರೆ. ತರುಣಿಯರೆಲ್ಲ ಗುಂಪಾಗಿ ಹಳ್ಳದಲ್ಲಿ ಈಜಾಟ, ನೀರಾಟಗಳಲ್ಲಿ ಪೈಮರೆತಿರುತ್ತಾರೆ. ಈ ಗೋಪಿ ಯರಿಗೆ, ಯಾವ ಕೃಷ್ಣನೂ ಬಟ್ಟೆ ಕದಿಯುವ ಭಯವಿಲ್ಲ! ಉಡುತ್ತಿರುವ ತೀರ ಕಡಿಮೆ ಬಟ್ಟೆಯನ್ನೂ ದಂಡೆಯಲ್ಲೇ ಒಗೆದು ನೀರಿಗೆ ಧುಮುಕುವದು ಪರಿಪಾಠ. ಚೀರುತ್ತ ಒದರುತ್ತ, ಹೊಗೆ ಕಾರುತ್ತ, ಧೂಳೆಬ್ಬಿಸುತ್ತ ಬಂದ ವಾಹನಗಳ ದರ್ಶನಕ್ಕೆ ನಿಂತ ಷೋಡಶಿಗಳಿಗೆ ತಾವು ನಗ್ನರಾಗಿರುವ ಪರಿವೆ ಕೂಡ ಇರು ವಂತೆ ಕಾಣುವದಿಲ್ಲ. ಬಹುಶಃ ತೀರ ಸಣ್ಣ ಹಳ್ಳಿಗಳಲ್ಲಿ ಇದು ಸಾಮಾನ್ಯವೆಂದು ತೋರುತ್ತದೆ. ಅಂತೆಯೇ ರವೀಂದ್ರನಾಥ ಟಾಗೋರರು ಪಾಶ್ಚಾತ್ಯ ಕಲಾಕಾರ ರಂತೆ ಹೆಣ್ಣನ್ನು ಚಿತ್ರಿಸಲು ಹಣ ತೆತ್ತು ಹೆಣ್ಣುಗಳನ್ನು ಎರವಮಾಡಿಕೊಳ್ಳುವದಕ್ಕಿಂತ ಹಳ್ಳಿಗೆ ಹೋಗಿ ಇಲ್ಲವೇ ಸಂತೆಗೆ ಧಾವಿಸಿ ಹೆಣ್ಣು, ಗಂಡು ದೇಹಗಳನ್ನು ಅಭ್ಯಸಿ ಸುವಂತೆ ವಿದ್ಯಾರ್ಥಿಗಳಿಗೆ ಉಪದೇಶಿಸಿದ್ದುಂಟು. ಇಷ್ಟಾದರೂ ಹಳ್ಳಿಗರ ಛಾಯಾ ಚಿತ್ರ ತೆಗೆಯುವದು ಸುಲಭವಲ್ಲ. ಹೆಗಲಿಗೇರಿಸಿದ ಕ್ಯಾಮರಾ ಕೈಯಲ್ಲಿ ಬಂತೆಂದರೆ, ಈ ಕುಮಾರಿಯರು, ಬಟ್ಟೆಯತ್ತ ಧ್ಯಾನಕೊಡದೇ, ಗುಡಿಸಲಿಗೇ ಧಾವಿಸುವರು. ವಾಹನ, ತಮ್ಮ ಹಳ್ಳಿಯಿಂದ ಹಾದುಹೋಗುವ ತನಕ ಪೊದೆಗಳಲ್ಲಿ ಅವಿತುಕುಳಿತು ಪಿಳಿ ಪಿಳಿ ಕಣ್ಣು ಬಿಡುತ್ತಿರುತ್ತಾರೆ. ಕಷ್ಟದ ಜೀವನದಿಂದ ಒಂದಿಷ್ಟೂ ಕೊಬ್ಬು ಕಾಣದ ಸುಂದರ ಸೌಷ್ಠವದಿಂದ ಈ ಗ್ರಾಮ ತರುಣಿಯರು, ತುಂಡುಸೀರೆಗಳಲ್ಲಿ ಒಳ್ಳೆಯ 'ಮಾಡೆಲ್' ಆಗಬಲ್ಲರು.

ಕಲಾಕಾರನಾಗಬೇಕೆಂದು ಬಾಲ್ಯದಲ್ಲಿ ಕಟ್ಟಿದ ಕನಸು, ಎಂದಾದರೊಂದು ದಿನ ತೈಲ ಚಿತ್ರದಲ್ಲಿ ಪರಿಣತಿ ಸಾಧಿಸುವಂತಾದರೆ,ಧನ ಖ್ಯಾತಿಗಳಿಗೆ ಹಂಬಲಪಡದೇ, ಕೇವಲ ಆತ್ಮಾನಂದಕ್ಕಾಗಿ ಇಲ್ಲಿಯ ಸೃಷ್ಟಿ ಸೌಂದರ್ಯ ಮತ್ತು ಹಳ್ಳಿ ಹೆಂಗಳೆಯರ ಚೆಲುವನ್ನು ಚಿತ್ರಿಸಬೇಕೆಂದಿರುವೆ. ಸದ್ಯಕ್ಕಂತೂ ಇವನ್ನು ಕ್ಯಾಮರಾದಲ್ಲಿ ಸೆರೆ ಹಿಡಿಯುವದೇ ದೊಡ್ಡ ಸಮಸ್ಯೆಯಾಗಿದೆ.

○

೨೩. ಮುದ್ದು ಮಣಿ

ಪ್ಲಾಸಿ, ೧೧-೮-೧೯೬೯

ಬೆಂಗಳೂರಿಗೆ ಹೋದಾಗ ಜೊತೆಯಲ್ಲಿ ವಿಕಾಸ, ಕಾಕಿಯವರನ್ನು ಕರೆತಂದು ಜಾಣತನ ಮಾಡಿದೆ. ನಿನ್ನ ಮಗನ ಜ್ಞಾಪಕ ಶಕ್ತಿ ಅಗಾಧವಾದದ್ದು. ಎಷ್ಟೋ ಕಾಲದ ನಂತರ ನನ್ನನ್ನು ನೋಡಿದರೂ, ಒಂದಿಷ್ಟೂ ಅನುಮಾನಪಡದೇ ಬಾಪ್ಪಾ! ಬಾಪ್ಪಾ! ಎಂದು ಓಡಿಬಂದು ಬಿಗಿದಪ್ಪಿದ. ಅದೇ ಪರಿಚಯವಿಲ್ಲದವರು ಕರೆದರೆ, ಮಾತನಾಡಲು ಯತ್ನಿಸಿದರೆ, ಕಾಕಿಯವರ ಹಿಂದೆ ಮುಸುಕಾಡದೇ ಅಡಗಿಕೊಂಡು ಬಿಡುತ್ತಾನೆ ಕಳ್ಳ. ಮಾತಿನಲ್ಲಿ ನಿನ್ನ ಹೆಸರು ಬಂದರೆ ಸಾಕು, ಅಮ್ಮ, ಅಮ್ಮ ಎಂದು ನೆನಪಿಸಿಕೊಳ್ಳುತ್ತಾನೆ. ಅಲ್ಲದೇ ಅಮ್ಮಾ-ಜಯಪುರ, ಬಾಪ್ಪಾ-ಕಲಕತ್ತಾ ಎಂದು ತನ್ನ ತೊದಲು ಮಾತಿನಿಂದ ಎಲ್ಲರಿಗೂ ಹೇಳಲು ಕಲಿತಿದ್ದಾನೆ. ಬರುವವರಿಗೆಲ್ಲ ನಿನ್ನ ಸೀರೆ ತೋರಿಸಿ ಆಮ್ಮಾ ಎನ್ನುತ್ತಾನೆ. ಕಾಶ್ಮೀರಿ ಕಂಬಳಿಯ ಮೇಲೆ ನಿನ್ನ ಸೀರೆ ಹಾಸಿದಾಗಲೇ ಅವನಿಗೆ ಸುಖ ನಿದ್ರೆ ಬರುವದು. ಸದಾಕಾಲ ನಿನ್ನ ಬಗ್ಗೆ ಏನಾದರೂ ಹೇಳುತ್ತಿದ್ದರೆ ಅವನಿಗೆ ಖುಷಿಯೋ ಖುಷಿ. ನಿನ್ನಮ್ಮನ ಹೆಸರು ಹೇಳಿದ ಹೊರತು ತಿಂಡಿಕೊಡುವದಿಲ್ಲವೆಂದು ಕೀಟಲೆ ಮಾಡಿದಾಗ 'ಜೊ-ಶ-ನಾ' ಎಂದು ಹೇಳುತ್ತಾನೆ. ತುಂಬ ಮುದ್ದಾಗಿ ಕಾಣುತ್ತಾನೆ. ಮನೆಯಲ್ಲಿ ಇದ್ದಾಗೆಲ್ಲ ನನ್ನನ್ನು ಅಂಟಿಕೊಂಡೇ ಇರುತ್ತಾನೆ.

ಬೃಹತ್ ಟೇಬಲ್ಲಿನ ಮೇಲೆ ನಿನ್ನ ಪುಟ್ಟ ಕಂದನನ್ನು ಕೂಡ್ರಿಸಿಕೊಂಡು ಈ ಪತ್ರ ಬರೆಯುತ್ತಿದ್ದೇನೆ. ತೊಂದರೆ ಮಾಡಿಯಾನು, ಎಂದು ಕಾಕಿಯವರು ಕರೆದರೆ ಬರುವವಿಲ್ಲವೆಂದು ತನ್ನ ದೃಢ ನಿರ್ಧಾರವನ್ನು ಸಾರಿಯೇ ಬಿಟ್ಟ. ಅಮ್ಮನಿಗೆ ಪತ್ರ ಬರೆಯುತ್ತೇನೆಂದಾಗ ಅದನ್ನು ಮುಟ್ಟಿ, ಮುಟ್ಟಿ ಆಮ್ಮಾ? ಎಂದು ಕೇಳಿದ. ಏನು ಬರೆಯಲಿ ಎಂದು ಕೇಳಿದಾಗ, ಬಿ....ಕಾ....ಚ ಎಂದು ಗಟ್ಟಿಸಿ ಹೇಳಿದ. ಅಮ್ಮನ ಬಗ್ಗೆ ನೂರಾರು ಪ್ರಶ್ನೆ ಕೇಳಿ ಕೊನೆಗೆ ತಾನೂ ಒಂದು ಪತ್ರ ಬರೆಯುತ್ತೇನೆಂದು ಹಾಳೆಯ ಮೇಲೆ ಗೀಜುತ್ತ ಕುಳಿತಿದ್ದಾನೆ. ನಿನ್ನ

ಭಾವಚಿತ್ರ ತೋರಿಸಿದಾಗ, ಕಣ್ಣುಗಳನ್ನು ಅರಳಿಸಿ, ನಗುಮುಖದಿಂದ ದೊಡ್ಡ ಧ್ವನಿತೆಗೆದು, ಕರೆಯುವಂತೆ ಅಮ್ಮಾ, ಅಮ್ಮಾ ಎಂದು ಕುಣಿಯುತ್ತಾನೆ. ಅವಳು ನಿನಗೆ ಏನೆಂದು ಕರೆಯುತ್ತಾಳೆ ಎಂದರೆ, "ಗುಂಡೂsss" ಎಂದು ರಾಗವಾಗಿ ಹೇಳುತ್ತಾನೆ. 'ಅದೇ ನಿನ್ನ ಹೆಸರೇ?' ಎಂದು ಪ್ರಶ್ನಿಸಿದಾಗ, ಅಲ್ಲವೆಂಬಂತೆ ತಲೆಯಲ್ಲಾಡಿಸುತ್ತ ಬಿ.ಕಾ....ಚ (ವಿಕಾಸ) ಅನ್ನುತ್ತಾನೆ. ಅಮ್ಮ ನಿನಗೇನು ಮಾಡುತ್ತಾಳೆ ಎಂದರೆ ಎಡ ಬಲ ಕೆನ್ನೆಗಳನ್ನು ತೋರಿಸುತ್ತ 'ಪ್ಚು ಪ್ಚು' ಮುದ್ದಿನ ಮಳೆ ಬೀಳಿಸುತ್ತಾಳಂತೆ. ಜಯಪುರಕ್ಕೆ ಹೋಗುತ್ತೀಯಾ? ಎಂದರೆ ಅಮ್ಮಳೇ ಇಲ್ಲಿಗೆ ಬರಲಿ, ಎನ್ನುತ್ತಾನೆ. ಮನೆಯಲ್ಲಿ ಇದ್ದಷ್ಟು ಸಮಯವೂ 'ಟಾಮಿ'ಯಂತೆ ನನ್ನ ಹಿಂದೆಯೇ ಸುತ್ತುತ್ತಿರುತ್ತಾನೆ. ಬಚ್ಚಲು, ಕಕ್ಕಸುಗಳಿಗೆ ಹೋದಾಗ, ಹೊರಬರುವದನ್ನೇ ನೋಡುತ್ತ ಕಾದಿರುತ್ತಾನೆ.

ವಿಕಾಸನಿಗೆ ನಯ, ನಾಜೂಕು, ಮುಂಜಾಗ್ರತೆ ವಿಪರೀತ. ಗೂಟಕ್ಕೆ ತೂಗು ಹಾಕಿದ ಶರ್ಟು ಕೆಳಗೆ ಬಿದ್ದರೆ, ಅದನ್ನು ಹಾಸಿಗೆಯ ಮೇಲೆ ಇಟ್ಟು ಬಂದು ವರದಿ ಮಾಡುವ. ಕಸ-ಕಡ್ಡಿಯನ್ನು ಬುಟ್ಟಿಗೇ ಸೇರಿಸಿ, ಅದನ್ನು ಒಯ್ದು ಕಾಗದ ಝಾಡಿಸಿ ಟೇಬಲ್ಲಿನ ಮೇಲಿಟ್ಟು ಗಾಳಿಗೆ ಹಾರಿ ಹೋಗದಂತೆ ಭಾರವಾದ ವಸ್ತುವನ್ನು ಇಡುವ. ಅಡಿಗೆಗೆ ಬೇಕಾಗುವ ಈರುಳ್ಳಿ, ಬಟಾಟೆಗಳನ್ನು ಬುಟ್ಟಿಯಿಂದ ಅವನೇ ತಂದುಕೊಡಬೇಕು. ಥರ್ಮಾಸು, ಥರ್ಮಾಮೀಟರಗಳನ್ನು ಕೂಡ ಅತ್ಯಂತ ಜಾಗರೂಕತೆಯಿಂದ ತಂದುಕೊಡುವನು. ಅವನು ಬೀಳುವದು, ಅಳುವದು, ಹಟ ಮಾಡುವದು ಇಲ್ಲವೇ ಇಲ್ಲವೆಂದರೂ ಅತಿಶಯೋಕ್ತಿಯಾಗಲಾರದು. ಅವನ ನಗುಮುಖ ಕಂಡಾಗೊಮ್ಮೆ ಅಭಿಮಾನ ಉಕ್ಕಿಬಾರದಿರದು. ವಧುಪರೀಕ್ಷೆ ಮಾಡಿದ್ದು ಒಬ್ಬಳನ್ನೆ, ಪಡೆದದ್ದು ಒಬ್ಬಮಗನನ್ನೆ, ಪ್ರಕಟಿಸಿದ್ದೂ ಒಂದೇ ಪುಸ್ತಕವಾದರೆ ಏನಂತೆ? ಇವೆಲ್ಲ ಅದ್ವಿತೀಯವಾದವೆಂದು ಕಂಡು, ಕೇಳಿದವರಿಂದ ಬೆನ್ನು ಚಪ್ಪರಿಸಿಕೊಳ್ಳುವಂತಾಗಿದೆ. ಮೂರುವರೆ ವರ್ಷಗಳ ವೈವಾಹಿಕ ಜೀವನದಲ್ಲಿ ಇವೇನು ಕಡಿಮೆ ಸಾಧನೆಯೇ? ಅಮೇರಿಕೆಯ ಪ್ರವಾಸಕಥನದ ಪ್ರಪ್ರಥಮ ಕೃತಿಗೆ, ಅದರ ವಸ್ತು ನಿಷ್ಠೆ, ತಿಳಿಹಾಸ್ಯ, ರಂಜಕ ನಿರೂಪಣೆ ಮತ್ತು ಸರಳ ಭಾಷೆಗಳಿಗಾಗಿ ದೇಶದ ಮೂಲೆ-ಮೂಲೆಯಲ್ಲಿರುವ ಕನ್ನಡಿಗರಿಂದ ಪ್ರಶಂಸಾಪತ್ರಗಳು ಬರಲಾರಂಭಿಸಿವೆ.

ವಿಕಾಸನಿಗೆ ಮನೆಯಲ್ಲಿ ಲಭ್ಯವಿರುವ ಸಾಮಾನುಗಳೇ ಆಟಿಕೆಗಳು. ವಿವಿಧ ಅಳತೆಯ ಡಬ್ಬಿಗಳು ಸಿಕ್ಕರೆ, ಒಂದರಲ್ಲಿ, ಇನ್ನೊಂದನ್ನು ಸೇರಿಸಿ ಮುಚ್ಚಳ ಹಾಕಿ, ತೆಗೆಯುತ್ತ ತಾಸಿಗೂ ಮಿಕ್ಕಿ ಅವನು ಆಡಬಲ್ಲ. ಉಳ್ಳಾಗಡ್ಡೆ-ಬಟಾಟೆಗಳನ್ನು ತಲೆಯ ಮೇಲಿಟ್ಟುಕೊಂಡು, 'ಕಾಂದೆ-ಬಟಾಟೆ' ಎಂದು ಮನೆಯವರಿಗೆ ಮಾರಬಲ್ಲ. ಕೈಯಲ್ಲಿ ಕೆಟ್ಲಿ ಹಿಡಿದು "ಚಾಯ್ ಚಾಯ್" ಎಂದು ಪ್ರವಾಸದಲ್ಲಿ ರೇಲ್ವೆನಿಲ್ದಾಣದಲ್ಲಿ ಕಂಡದ್ದನ್ನು, ಕೇಳಿದ್ದನ್ನು ಅನುಕರಿಸಬಲ್ಲ. ಕೈಗೆ ಎಟುಕುವ ಎಲ್ಲ ಬೂಟು ಚಪ್ಪಲುಗಳನ್ನು ಸಾಲಾಗಿಟ್ಟು, 'ಬಾಟಾ' ಅಂಗಡಿಯನ್ನು ಮಾಡುವ. ಕಾಲು ಚೀಲಗಳನ್ನು ಒಣಹಾಕಿ ಧೋಬಿ ಅಂಗಡಿಯನ್ನು ನಡೆಸುವ. ಓತಿಕಾಟ, ಚಿಟ್ಟೆಗಳನ್ನು ಹಿಡಿಯಲು ಹೋಗುವದು, ಕಪ್ಪೆಗಳನ್ನು ಓಡಿಸುವದು ಅವನ ಪ್ರಿತಿಯ ಕೆಲಸ. ಯಾರೂ ನೋಡುವದಿಲ್ಲವೆಂದು ಖಾತ್ರಿ ಮಾಡಿಕೊಂಡು ಕೆಸರು, ಸಗಣಿಗಳಲ್ಲಿ ಕೋಲು ಹಾಕಿ ಆಡುವದೂ ಉಂಟು! ಸ್ವಲ್ಪ ಧ್ವನಿ ಏರಿಸಿ, ಕರೆದರೆ ಸಾಕು, ಅಪ್ಪಂತನಂತೆ, ಧಾವಿಸಿ ಬರುತ್ತಾನೆ. "ಕೆಟ್ಟ ಕೆಲಸ ಮಾಡುತ್ತಾನೆಂದು ಅಮ್ಮನಿಗೆ ಬರೆಯಲೇ?" ಎಂದಾಗ ಬೇಡ, ಸಭ್ಯನಾಗಿ ನಡೆದು ಕೊಳ್ಳುತ್ತಾನೆಂದು ಬರೆಯಲು ಸೂಚಿಸುತ್ತಾನೆ. ಅವನಿಗೆ ಈಗ ಕೊಂಕಣಿ, ಸುಲಭವಾಗಿ ಮಾತನಾಡಲು ಬರುತ್ತದೆ. 'ರ' ಅನ್ನುವ ಬದಲಾಗಿ ಮಾತ್ರ 'ಲ' ಅನ್ನುತ್ತಾನೆ.

ಅಜ್ಜ, ಮೊಮ್ಮಗ ಇಬ್ಬರಿಗೂ ರಸಗುಲ್ಲಾಗಳೆಂದರೆ ಪ್ರಾಣ. ಅವನ್ನು ಆಗಾಗ ತಂದು ಎಲ್ಲಿಯಾದರೂ ಅಡಗಿಸಿ ಇಡುತ್ತೇನೆ. ಅವನಿಗೆ ತಿನ್ನುವ ಆಸೆಯಾದಾಗ, ನಾನು ಮಂತ್ರವಾದಿಯಾಗಿ ಛೂಮಂತರ್ ಹಾಡುಗಳನ್ನು ಹೇಳಬೇಕು. ಅಡಿಗೆಮನೆಯ ಕಪಾಟಿನಲ್ಲಿ ಬಂದಿದೆಯೇ ಎಂದು ನೋಡಲು ಓಡಿಸಬೇಕು. ಆನಂತರ ಮಲಗುವ ಕೋಣೆ, ಕತ್ತಲೆ ಕೋಣೆಗಳಲ್ಲಿ ಸಿಗದೇ ಪೆಚ್ಚು ಮುಖಹಾಕಿಕೊಂಡು ಹಿಂತಿರುಗಿದಾಗ ನಾನು ಕುಳಿತಲ್ಲೇ ಚಿಕ್ಕ ಮಡಕೆ ತುಂಬ ರಸಗುಲ್ಲಗಳು ನಳನಳಿಸುತ್ತವೆ! ನೋಡಿ ಅವನ ಬಾಯಿ ನೀರೂರಲಾರಂಭಿಸುತ್ತದೆ. ಹೊಸದಾಗಿ ಕಟ್ಟಿಕೊಟ್ಟ ಜೋಕಾಲಿಯ ಮೇಲೆ ಕುಳಿತು ತೂಗಿಕೊಳ್ಳುತ್ತ ಒಂದೊಂದೇ ರಸಗುಲ್ಲವನ್ನು ಉದರಕ್ಕೆ ಇಳಿಸುತ್ತ ಮರುದಿನ ಇದಕ್ಕೂ ಹೆಚ್ಚು ತರುವಂತೆ ವಿನಂತಿಸಿಕೊಳ್ಳುತ್ತಾನೆ. ನಾವಿಬ್ಬರೂ ಸರಿಸಮಾನರಂತೆ ವರ್ತಿಸುತ್ತಿದ್ದೇವೆ. ಜೊತೆಯಾಗಿ ಆಡುತ್ತೇವೆ, ಓಡುತ್ತೇವೆ, ತಿನ್ನುತ್ತೇವೆ, ಉಣ್ಣುತ್ತೇವೆ, ಬರೆಯುತ್ತೇವೆ, ಮಲಗುತ್ತೇವೆ. ನಾನು ಆಫೀಸಿಗೆ ಇಲ್ಲವೇ ನಿರೀಕ್ಷಣೆಗೆ ಹೋದಾಗ

ಮಾತ್ರ ಕಾಕಿಯವರು ಬೇಕೇ ಬೇಕು.

ಸಾಹಸದ ಕಥೆಗಳೆಂದರೆ ಅವನಿಗೆ ಪಂಚಪ್ರಾಣ. ಅಲ್ಪ ಸ್ವಲ್ಪ ವಿರಾಮ ಸಿಕ್ಕರೂ ಸಾಕು. ಧಾವಿಸಿ ಬಂದು ಕಥೆ, ಹೇಳೆಂದು ಗಂಟು ಬಿದ್ದಿರುತ್ತಾನೆ. ಅವುಗಳೆಲ್ಲ ಅವನ ಸುತ್ತಲೇ ಹೆಣೆದಿರುವದರಿಂದ ಕಿವಿಗೊಟ್ಟು ಆಸಕ್ತಿಯಿಂದ ಕೇಳುತ್ತಿರುತ್ತಾನೆ. ಆ ನಂತರ ಅದನ್ನು ಅಜ್ಜಿಗೂ ಹೇಳುತ್ತಾನೆ. ಕೇಳಿದಾಗೆಲ್ಲ ಹೇಳುವ ಕಥೆಗಳಲ್ಲಿ ಒಂದು ಮಾದರಿ ಹೀಗಿದೆ–ಕೇಳು, ವಿಕಾಸನಿಗೆ ಖ್ಯಾತ ಬಂಗಾಲಿ ಹುಲಿಯನ್ನು ನೋಡುವ ಮನಸ್ಸಾದ್ದರಿಂದ ಮನೆಯಲ್ಲಿದ್ದ ರಸಗುಲ್ಲಗಳನ್ನು ಕಟ್ಟಿಕೊಂಡು ಸುಂದರಬನಕ್ಕೆ ಬರುತ್ತಾನೆ. ದೊಡ್ಡದೊಂದು ಮರವನ್ನೇರಿ ಕುಳಿತುಕೊಳ್ಳುತ್ತಾನೆ. ಹುಲಿ ಹೊಂಚು ಹಾಕಿ, ಚಿಗರೆಯ ಮೇಲೆ ಜಿಗಿದು, ಅದರ ಮಾಂಸ ಭಕ್ಷಣ ನಡೆಸಿದ್ದನ್ನು ನೋಡಿ ಜಿಗುಪ್ಸೆಯಾಗುತ್ತದೆ. ಕೆಳಗಿಳಿದು ಬಂದು ಹೆಬ್ಬುಲಿಗೆ ರಸಗುಲ್ಲ ತಿನ್ನಿಸುತ್ತಾನೆ. ಅವರ ರುಚಿಗೆ ಮನಸೋತ ಹುಲಿಯಣ್ಣ ಇನ್ನೊಂದು, ಮತ್ತೊಂದು, ಮಗುದೊಂದು ಎಂದು ಎಲ್ಲವನ್ನೂ ಮುಗಿಸಿಬಿಡುತ್ತದೆ. ತನ್ನೊಂದಿಗೆ ಮನೆಗೆ ಬಂದರೆ ಇನ್ನಷ್ಟು ಕೊಡುವೆ ಎಂದು ಆಸೆ ತೋರಿಸಿದಾಗ, ಅದು ಬೀದಿ ನಾಯಿಯಂತೆ ಇವನನ್ನು ಹಿಂಬಾಲಿಸಿ ಬರುವದನ್ನು ಪ್ಲಾಸಿಯ ಜನ ಅತ್ಯಂತ ಕುತೂಹಲದಿಂದ ನೋಡುತ್ತ ನಿಂತಿರುತ್ತಾರೆ. ದಾರದಿಂದ ಅದನ್ನು ಜಗಲಿಯ ಕಂಬಕ್ಕೆ ಕಟ್ಟಿಹಾಕಿ, ಕಾಕಿ ಮಾಡಿದ ಸೌತೆಕಾಯಿ ಕಡಬು ತಿನ್ನಿಸುತ್ತಾನೆ. ಹುಲಿರಾಯ ಚಪ್ಪರಿಸಿ ತಿನ್ನುತ್ತ ತಮ್ಮ ಮನೆಯಲ್ಲಿ ಇಂಥ ತಿಂಡಿಗಳೇ ಇಲ್ಲದ್ದರಿಂದ ಶಾಶ್ವತವಾಗಿ ವಿಕಾಸನ ಮನೆಯಲ್ಲೇ ಇರುವದಾಗಿ ಘೋಷಿಸುತ್ತದೆ. ಈಗ ಹುಲಿಯಣ್ಣ, ವಿಕಾಸನ ಗೆಳೆಯ, ಜೊತೆಗಾರ; ಅವನ ಜೋಕಾಲಿಯಲ್ಲಿ ತೂಗಿಕೊಳ್ಳುತ್ತದೆ. ಬೂಟ-ಚಪ್ಪಲ ಖರೀದಿಸುತ್ತದೆ. ಬಟ್ಟೆಗಳನ್ನು ಧರಿಸಲು ಪ್ರಾರಂಭಿಸಿ, ಅವನ್ನು ಸ್ವಚ್ಛಗೊಳಿಸಲು ವಿಕಾಸನ ಅಂಗಡಿಗೇ ಕೊಡುತ್ತದೆ. ಅಪ್ಪನ ಚಿಲ್ಲರೆಯಿಂದ ವಿಕಾಸನು ನಡೆಸುವ ಬ್ಯಾಂಕಿನಲ್ಲಿ ಒಂದು ಖಾತೆ ತೆರೆಯುತ್ತದೆ. ಒಂದು ದಿನ ಅದು ಅಂಗಳದಲ್ಲಿಯೇ ಹೇಸಿಗೆ ಮಾಡಿದಾಗ, ಕೋಪಗೊಂಡ ವಿಕಾಸನು ಸುಂದರಬನಕ್ಕೆ ಹಿಂದಿರುಗುವಂತೆ ಆಜ್ಞಾಪಿಸುತ್ತಾನೆ. ಅದು ಅತ್ತೂ ಕರೆದು, ವಿಕಾಸನ ಕಾಲಿಗೆ ಬಿದ್ದು, ಕ್ಷಮಾಯಾಚನೆ ಕೇಳಿದಾಗ, ದಯಾಮಯಿ ವಿಕಾಸನು ಕ್ಷಮಿಸಿ ರಸಗುಲ್ಲಾ ತಿನ್ನಿಸುತ್ತಾನೆ!

ಪ್ರತಿಸಂಜೆ ವಿಕಾಸ-ಕಾಕಿಯರನ್ನು ಗಂಗಾ ನದಿಯ ತೀರಕ್ಕೆ ಗಾಳಿ ಸೇವನೆ ಕರೆದೊಯ್ಯುತ್ತೇನೆ. ದಾರಿಯುದ್ದಕ್ಕೂ ವಿಕಾಸನು ಕೇಳುವ ಪ್ರಶ್ನೆಗಳಿಗೆ ಕೊ ಮೊದಲಿಲ್ಲ. ಕೆಲ ಪ್ರಶ್ನೆಗಳಿಗೆ ಉತ್ತರಿಸುವದು ಕಷ್ಟಕ್ಕಿಟ್ಟುಕೊಳ್ಳುತ್ತದೆ. ಹೋ ಪತಿ, ಆಕಳು ಪತ್ನಿಯಾಗಿದ್ದರೆ ಅವು ಜೊತೆಯಾಗಿದ್ದು ಸಂಸಾರವೇಕೆ ಹೂಡು ದಿಲ್ಲ? ಎಂದು ವಿಚಾರಿಸಿದರೆ, ಅದಕ್ಕೇನು ವಿವರಣೆ ಕೊಡುವದು? ದಾ ಯುದ್ದಕ್ಕೂ ಬಂಗಾಲಿ ಹುಡುಗಿಯರು ಎಷ್ಟು ಕರೆದರೂ ಈತ ಅವರತ್ತ ಕಣ್ಣೆತ್ತಿ ಕೂಡ ನೋಡುವದಿಲ್ಲ. ಇದೂ ಒಳ್ಳೆಯದೇ ಆಯಿತು. ಮದುವೆಗೆ ಆಸೆಪಡು ಕನ್ನೆಯರು ಇವನನ್ನು ಬಿಗಿದಪ್ಪಿ ಚುಂಬಿಸುವದು ನನಗೂ ಮನಸ್ಸಿಗೆ ಬರುವದಿಲ್ಲ ಹುಡುಗಿಯರಿಗೆ ಇವನನ್ನು 'ಬಿಕಾಚಬಾಬು' ಎಂದು ಕೂಗಿ ಕರೆದೂ ಕರೆದು ಚುಡಾಯಿಸಿದಾಗಲೇ ನೆಮ್ಮದಿ. ಇವನು ಮಾತ್ರ ಬಾಪ್ಪಾ-ಕಾಕಿಯರ ಕೈಹಿಡಿದ ಗಜಗಾಂಭೀರ್ಯದಿಂದ ಗಂಗಾ ದರ್ಶನಕ್ಕೆ ಹೊರಟಿರುತ್ತಾನೆ.[೧೯]

○

೧೯ ವಿಕಾಸನು ಶಾಲೆ, ಕಾಲೇಜುಗಳಲ್ಲಿ ವಿಕಾಸ ಹೊಂದುತ್ತ ೧೯೮೮ರ ಮೈಸೂರ ವಿಶ್ವವಿದ್ಯಾಲಯದಿಂದ ಕಂಪ್ಯೂಟರ ವಿಜ್ಞಾನದಲ್ಲಿ ಘನ ಯೊಂದಿಗೆ ಇಂಜನಿಯರಿಂದ ಪದವಿ ಪಡೆದ, ಬೆಂಗಳೂರಿನ ಇಂಡಿಯನ್ ಇನಸ್ಟಿಟ್ಯೂಟ ಆಫ್ ಸಾಯನ್ಸನಲ್ಲಿ ತರಬೇತಿ ಪಡೆದು ಸೊಫ್ಟವೇ ಇಂಜನಿಯರನೆಂದು ಸೇವೆ ಸಲ್ಲಿಸುತ್ತಿದ್ದಾನೆ. ಸದ್ಯದಲ್ಲಿಯೇ ಉಚ್ಚ ಶಿಕ್ಷಣಕ್ಕಾಗಿ ಅಮೇರಿಕೆಗೆ ಹೋಗುವ ಸಾಧ್ಯತೆಗಳೂ ಇವೆ.

೨೪. ಪಿತರಿಗೆ ಪತ್ರ

ಪ್ಲಾಸಿ, ೬-೧-೧೯೬೦

ಕಾಕಾರು ನಮ್ಮನ್ನೆಲ್ಲ ಅಗಲಿ ಸರಿಯಾಗಿ ಒಂದು ವರ್ಷವಾಯಿತು. ನಮ್ಮೆಲ್ಲರಿಂದ ಅತಿ ದೂರ ಇದ್ದುದರಿಂದಲೋ ಏನೋ, ಅವರ ನೆನಪುಗಳು ದಿನವಿಡೀ ಆವರಿಸಿ ಬಿಟ್ಟಿದ್ದವು. ಅಂತರಂಗದಿಂದ ತೇಲಿ ಬಂದ ಭಾವನೆಗಳನ್ನು, ಅವರನ್ನೇ ಉದ್ದೇಶಿಸಿ ಬರೆಯಲಾರಂಭಿಸಿದೆ. ಬರೆದು ಮುಗಿಸಿದಾಗ ಕೊಂಚ ನೆಮ್ಮದಿಯೆನಿಸಿತು. ಯಾವ ವಿಳಾಸಕ್ಕೆ ಕಳಿಸುವದೆಂದು ಅರಿಯದೇ ನಿನಗೇ ಕಳಿಸುತ್ತಿದ್ದೇನೆ. ಓದಿ ನೋಡು:

ನೀನು ನಮ್ಮೆಲ್ಲರನ್ನು ಬಿಟ್ಟು ಯಾವ ಲೋಕಕ್ಕೆ ಹೋಗಿರುವಿ? ಯಾವ ಮೋಡದಾಚೆ ಅಡಗಿರುವಿ? ನಮ್ಮ ಕಿರುಕುಳಗಳಿಂದ ಜಿಗುಪ್ಸೆಯಾಯಿತೇ? ಛೆ! ಎಂಥ ಕ್ಷುಲ್ಲಕ ವಿಚಾರಗಳು. ಜೀವನದ ಸುಂಟರಗಾಳಿ, ಜಡಿಮಳೆ, ಗುಡುಗು, ಮಿಂಚುಗಳಿಗೆ ಅಂಜದೇ, ಅಳುಕದೇ ಸಂಸಾರ ನೌಕೆಯನ್ನು ನಡೆಸಿಕೊಂಡು ಹೋದ ಧೀರ ನಾವಿಕನು ನೀನು. ಪ್ರತಿ ದಿನವೂ ಈಗ ನಿನ್ನ ದರ್ಶನಲಾಭ ದೊರೆಯದಿದ್ದರೇನಾಯಿತು? ಕಿವಿಗಳಿಗೆ ನೀತಿಯ ಮಾತು ಕೇಳುವ ಅವಕಾಶ ಸಿಗದಿದ್ದರೇನಾಯಿತು? ನನ್ನಾತ್ಮ ಸದಾ ನಿನ್ನ ಧ್ಯಾನದಲ್ಲಿಯೇ ತೊಡಗಿರುತ್ತದೆ. ದಿನದ ಘಟನೆಗಳ ವರದಿ ನಿನಗೆ ಒಪ್ಪಿಸಬೇಕು. ಸಿದ್ಧಪಡಿಸಿದ ಛಾಯಾಚಿತ್ರಗಳನ್ನು ನಿನಗೆ ತೋರಿಸಬೇಕು ಎಂದು ವಿಚಾರ ಮಾಡುತ್ತಿರುತ್ತೇನೆ. ಆದರೆ ನಿನ್ನನ್ನು ಸಂಪರ್ಕಿಸುವ ಬಗೆ ಹೇಗೆ?

ಅಪ್ಸರೆಯರ ನಾಡಿನಲ್ಲಿ ನೀನು ನೆಮ್ಮದಿಯಾಗಿರುವಿ ಎಂದು ತಿಳಿಯಲೇ? ಮುಳುಗುವ ಸೂರ್ಯ, ಮೂಡುವ ಚಂದ್ರನ ಬೆಳಕಿನಲ್ಲಿ ನಿನಗಾಗಿ ಹುಡುಕಾಡುತ್ತಿದ್ದೇನೆ. ಪುಣ್ಯ ಮಾಡಿದವರೆಲ್ಲ ಚುಕ್ಕೆಗಳಾಗುತ್ತಾರೆಂದು ಚಿಕ್ಕವನಿದ್ದಾಗ ನೀನೇ ಹೇಳಿದ್ದರಿಂದ ಗಗನ ಮಂಡಲದಲ್ಲಿ ನಿನ್ನ ನಕ್ಷತ್ರಕ್ಕಾಗಿ ಶೋಧಿಸುತ್ತೇನೆ. ನೀನು ಅಲ್ಲಿಂದಲೇ ನಮ್ಮೆಲ್ಲರ ಸಕಲ ಚಟುವಟಿಕೆಗಳನ್ನು ವೀಕ್ಷಿಸುತ್ತಿರಬೇಕಲ್ಲವೇ?

ಒಂದು ರಾತ್ರಿಯಿಡೀ ಜಾಗರಣೆ ಮಾಡಿ ನಿನ್ನ ಚುಕ್ಕೆಯನ್ನು ಗುರುತಿಸಬೇಕೆಂದಿರು ನಿನ್ನ ಕರಿಟೋಪಿ ಕಾಣಿಸುವ ಚುಕ್ಕೆ ಹುಡುಕಿ ತೆಗೆಯಲು ಸಾಧ್ಯವೇ?

ನೀನು ಭೂಮಂಡಲ ನಿವಾಸಿಯಾಗಿರುವಾಗಲೇ ಬರೆದು ತಿಳಿಸಿದಂ ಹೊಸ ನೌಕರಿಗೆ ಸೇರಿದ್ದೇನೆ. ಅಂತೆಯೇ ಕೀಟ ಸಂಶೋಧಕನಾಗಿ ಪಶ್ಚಿ ಬಂಗಾಲದ ಪ್ಲಾಸಿಗೆ ಬಂದಿದ್ದೇನೆ. ಹೊನ್ನಾವರದಂತೆಯೇ ಇದೊಂದು ಸೌಂದಯ ಭರಿತ ರಮ್ಯ ಊರು. ಅಲ್ಲಿ ಶರಾವತಿ ಹರಿದರೆ ಇಲ್ಲಿ ಭಾಗೀರಥಿ ಇದ್ದಾ ಆದರೆ ಅಲ್ಲಿಯ ಸೈಹ್ಯಾದ್ರಿ ಪರ್ವತಾವಳಿ ಮಾತ್ರ ಇಲ್ಲಿಲ್ಲ. ಸೂಸು ಮಣ್ಣಿ ಬಯಲು ಪ್ರದೇಶವಾದ್ದರಿಂದ ಅತೀವ ಫಲವತ್ತಾಗಿದೆ. ಅಂತೆಯೇ ಕಾಳ ಕಡಿಗಳ ಜೊತೆಗೆ ಕೀಟಗಳೂ ಬೃಹತ್ ಸಂಖ್ಯೆಯಲ್ಲಿ ಬಿಡು ಮಾಡಿವೆ. ಅವು ನಿಯಂತ್ರಣ, ನನ್ನ ಕರ್ತವ್ಯ. ನೀನು ಹಾಕಿಕೊಟ್ಟ ಮೇಲ್ಪಂಕ್ತಿಯಲ್ಲಿ ದಿನವಿ ಮೈ ಮುರಿದು ದುಡಿಯುತ್ತೇನೆ. ದುಡಿತದಿಂದ ಗೌರವ ಪಡೆಯಬಹುದೆ ನಿನ್ನ ಹಿತೋಕ್ತಿಯ ಸತ್ಯಾಂಶವನ್ನು ಮನಗಾಣುತ್ತಿದ್ದೇನೆ. ಇದರ ಜೊ ಬರವಣಿಗೆಯನ್ನು ಪ್ರಾರಂಭಿಸಿದ್ದೇನೆ. ಅಮೇರಿಕೆಯ ಪ್ರವಾಸ ಕಥನವನ್ನು ನಿ ಅರ್ಪಿಸಿದ್ದೇನೆ. ಕನ್ನಡ ಓದುಗರು ಈ ಕೃತಿಗೆ ತುಂಬುಮನಸ್ಸಿನ ಸ್ವಾ ನೀಡಿದ್ದಾರೆ. ಅಂತೆಯೇ ಇನ್ನೊಂದು ಪುಸ್ತಕದ ಹಸ್ತಪ್ರತಿ ಬರೆದು ಮು ದ್ದೇನೆ. ಸತ್ಯ, ಸರಳತೆ, ಸಮಾಧಾನ, ಕಷ್ಟ ಸಹಿಷ್ಣುತೆಗಳಂತಹ ನಿನ್ನ ಆದ ಗಳನ್ನು ನನ್ನವನ್ನಾಗಿ ಮಾಡಿಕೊಳ್ಳಲು ಸದಾ ಸೆಣಸಾಟ ನಡೆಸಿದ್ದೇನೆ.

ನಿನಗೆ ಅನುರೂಪ ಸೊಸೆಯಾಗಬೇಕೆಂದು ಜ್ಯೋತ್ಸ್ನಾ, ಸತತ ಯತ್ನ ದ್ದಾಳೆ. ನಿನ್ನ ಹಿತೋಕ್ತಿಯ ಮೇರೆಗೆ, ಇದ್ದ ಒಳ್ಳೆ ನೌಕರಿಗೆ ರಾಜೀನಾಮೆ ಕೊಡ ಜಯಪುರದ ಅವಧಿ ಮುಗಿಸಿ ಈಗ ಧಾರವಾಡಕ್ಕೆ ವರ್ಗವಾಗಿ ಬಂದು ಅರ್ಧ ನಿಂತು ಹೋದ ಡಾಕ್ಟರೇಟು ಮುಗಿಸುವ ವಿಚಾರವನ್ನು ಇಟ್ಟುಕೊಂಡಿದ್ದಾ ನಮ್ಮ ಏಕಮೇವ, ಅದ್ವಿತೀಯ ಪುತ್ರ ವಿಕಾಸನು ತನ್ನನ್ನು ಎತ್ತಿಕೊಂಡ ಅಜ್ಜನ ಫೋಟೋದಲ್ಲಿ ಗುರುತಿಸಿ, ಅಜ್ಜಾ ಅಜ್ಜಾ ಎಂದು ಮುದ್ದಿಸುತ್ತಾನೆ. ಅ ತುಂಬ ಜಾಣನಾಗಿ ಬೆಳೆಯುತ್ತಿದ್ದಾನೆ. ನೀನು ನನಗೆ ಕೊಟ್ಟ ವಿದ್ಯಾ-ಬ ಗಳನ್ನು ಅವನಿಗೂ ಕೊಡುವಂತಹ ಭಾಗ್ಯ ಒದಗಿ ಬಂದಿದ್ದರೆ ಅವನೂ ಆದರ್ಶ ಮೊಮ್ಮಗನಾಗಿ ಬೆಳೆಯುವದರಲ್ಲಿ ಏನೇನೂ ಸಂದೇಹವಿರಲಿಲ್ಲ. ನ ಮೂವರೂ ಒಂದೆಡೆ ಇದ್ದಾಗ ನಿನ್ನನ್ನು ಬರಮಾಡಿಕೊಳ್ಳಬೇಕೆಂದು ತ

ಕಟ್ಟಿದ್ದೆ. ಆದರೆ ದೈವ ಇನ್ನೊಂದನ್ನೇ ಬಗೆದು ನಿನ್ನನ್ನು ಪರಲೋಕಕ್ಕೆ ಕೊಂಡೊಯ್ದಿತು. ಅಲ್ಲಿಯವರು ನಿನ್ನಂಥ ಸಜ್ಜನರ ಮಾರ್ಗದರ್ಶನವನ್ನು ತಪ್ಪದೇ ಪಡೆಯುತ್ತಾರೆಂದು ನಂಬಿದ್ದೇನೆ.

ಕಳೆದ ಒಂದು ವರ್ಷದಿಂದ ನಿನ್ನ ಯೋಗಕ್ಷೇಮದ ಬಗ್ಗೆ ನಮಗೆ ಏನೇನೂ ತಿಳಿಯದು. ಅಲ್ಲಿ ಜೆಟ್ಟಿಯಂಥ ಕ್ಷೌರಿಕರಿದ್ದಾರೆಯೇ? ನಿನ್ನ ಶರ್ಟು, ಧೋತರ ಗಳನ್ನು ಯಾರು ಒಗೆದುಕೊಡುತ್ತಾರೆ? ನಿನ್ನ ಪ್ರೀತಿಯ ಕೆಂಪು ಹರಿವೆಸೊಪ್ಪು ಅಲ್ಲಿ ಬೆಳೆಯುತ್ತಾರೆಯೇ? ನಿನ್ನ ಹವ್ಯಾಸದ ಚಿತ್ರಕಲೆಗೆ ಬೇಕಾಗುವ ಕುಂಚ-ಬಣ್ಣಗಳು ಸುಲಭ ಬೆಲೆಗೆ ಸಿಗುತ್ತವೆಯೇ? ಕಮ್ಮಾರನ ಕಾಂಗಿರಿ ನಿನ್ನ ಇನ್ನೊಂದು ಹವ್ಯಾಸ-ಅದಕ್ಕೆ ಬೇಕಾಗುವ ಹತ್ಯಾರಗಳು ಲಭ್ಯವಾಗಿವೆಯೇ? ನಿನ್ನ ವಿಳಾಸ ತಿಳಿಸಿದರೆ ಇವುಗಳನ್ನು ಇಲ್ಲಿಂದ ಪಾರ್ಸಲ್‌ಮಾಡಿ ಕಳಿಸಬಹುದಾಗಿತ್ತು. ಸುರಲೋಕದ ಸುರಾ ಪಾನ, ಸ್ವೇಚ್ಛಾಚಾರಗಳಿಂದ ನಿನಗೆ ಜಿಗುಪ್ಸೆಯಾಗಿರಬೇಕಲ್ಲವೇ? ಆದರೆ ಅಂಥ ಜೀವನಕ್ಕಾಗಿ ಹಂಬಲಿಸುವವರು ಭೂಲೋಕದಲ್ಲಿ ಅದೆಷ್ಟು ಜನ ಜೀವಿಸಿರುವರೋ!

ನಾನೂ ಪ್ರತ್ಯಕ್ಷ ಕಂಡರೂ ಪರಾಮರ್ಶಿಸಿ ನೋಡಬೇಕು ಎಂಬ ಲೋಕೋಕ್ತಿಯಲ್ಲಿ ವಿಶ್ವಾಸವಿಟ್ಟವನು. ಆದ್ದರಿಂದ ಧಾರ್ಮಿಕ ಕುರುಡು ಆಚಾರ-ವಿಚಾರಗಳಲ್ಲಿ ಒಂದಿಷ್ಟು ವಿಶ್ವಾಸವಿಲ್ಲ. ಇಷ್ಟಾದರೂ ಕೆಲವೊಂದು ನಂಬಿಕೆಗಳು ನಿಜವಾಗಿದ್ದರೆ,........ ಎಂದು ಅನಿಸದೇ ಇರುವದಿಲ್ಲ. ಮೃತರ ಶ್ರಾದ್ಧದ ದಿನ ತಮ್ಮ ಆಪ್ತ-ಬಂಧುಗಳು ಮಿತ್ರರೊಂದಿಗೆ ಇರಲು ಮೃತರ ಆತ್ಮ, ಭೂಮಿಗೆ ಇಳಿದು ಬರುತ್ತದಂತೆ. ಅಂತೆಯೇ ಅವರಿಗೆ ಇಷ್ಟವಾದ ಅಡಿಗೆಯನ್ನೇ ಮಾಡಿ ನೆರೆದವರಿಗೆಲ್ಲ ತೃಪ್ತಿಯಾಗುವಷ್ಟು ಉಣಬಡಿಸುವ ಪರಿಪಾಠ ಬೆಳೆದುಬಂದಿದೆ. ನೀನೂ ಇಂದು ಭೂಮಿಗೆ ಇಳಿದು ಬಂದು ನಮ್ಮೊಂದಿಗೆ ಇರುವಂತಾಗಿದ್ದರೆ ಎಷ್ಟು ಖುಷಿಪಡುತ್ತಿದ್ದೆವು. ನೀನು ಅವಶ್ಯ ಬಾ. ಪಕ್ಷಿಯ, ಕಾಗೆಯ ರೂಪ ದಲ್ಲಾದರೂ ಬಾ. ಆದರೆ ಖಂಡಿತ ಬಾ. ನಮ್ಮನ್ನೆಲ್ಲ ನಿರಾಸೆಗೊಳಿಸಲಿಕ್ಕಿಲ್ಲ ವೆಂದು ನಂಬಲೇ? ಕಾಕಿಯವರು ಹಬ್ಬದೂಟ ಏರ್ಪಡಿಸಿದ್ದಾರೆ. ನಿನ್ನ ಪ್ರೀತಿಯ ಕಡಲೇಬೇಳೆ ಪಾಯಸ ಸಿದ್ಧವಾಗಿದೆ. ಮಕ್ಕಳು, ಮೊಮ್ಮಕ್ಕಳು ಒಂದೆಡೆ ಸೇರಿ ದ್ದಾರೆ. ನೀನೂ ಭೂಮಿಗೆ ಇಳಿದುಬಂದು ಎಂದಿನಂತೆ ಹಾಸ್ಯ-ಚಟಾಕಿಗಳನ್ನು ಹಾರಿಸುವಂತಾಗಿದ್ದರೆ....ಈ ವರ್ಷ ಬರಲಾಗದಿದ್ದರೆ ಹೋಗಲಿ. ಮುಂದಿನ ವರ್ಷ ಬರುವಿ ಎಂಬ ಆಶ್ವಾಸನೆ ಸಿಕ್ಕಿತೇ? ಕ್ಯಾಮರಾದಲ್ಲಿ ಫಿಲ್ಮ ಹಾಕಿ ನಿನಗಾಗಿ ಕಾಯಲೇ?

○

೨೫. ನೆರವು

ಪ್ಲಾಸಿ, ೧೩-೨-೧೯೭೦

ಆಸ್ಪತ್ರೆಯಲ್ಲಿದ್ದ ಪತ್ನಿಯ ಶುಶ್ರೂಷೆಗಾಗಿ ಸಕಾಲದಲ್ಲಿ ಧನಸಹಾಯ ಮಾಡಿದ್ದನ್ನು ನೆನೆದು ನಿನ್ನ ದೊಡ್ಡಪ್ಪನವರ ಕಣ್ಣು ತೇವವಾದವೆಂದು ತಿಳಿದು ಕನಿಕರವೆನಿಸಿತು. ಅದಕ್ಕಾಗಿ ನಾವು ಏನೂ ಅಂಥ ತ್ಯಾಗ ಮಾಡಲಿಲ್ಲವೆಂದು ಹೇಳಬೇಕಾಗಿತ್ತು. ನಮ್ಮ ಸುಖ-ಸಂಪತ್ತುಗಳನ್ನು ಅಭಾಗಿಗಳೊಂದಿಗೆ ಹಂಚಿಕೊಂಡಾಗಲೇ ಜೀವನಕ್ಕೆ ಒಂದು ಅರ್ಥ ಬರುತ್ತದೆಂಬ ನಂಬಿಗೆ. ಈ ಕಲ್ಪನೆ ಇತರರಿಂದ ಎರವಲು ತಂದಿದ್ದಲ್ಲ. ಹುಟ್ಟಾ ಬಂದದ್ದು. ನಾನು ತೀರ ಎಳೆಯುವ ನಿದ್ದಾಗಿನಿಂದಲೂ ಮಿತವ್ಯಯಿ. ಊರ ತೇರು-ಜಾತ್ರೆಗಾಗಿ ಕೊಟ್ಟ ಒಂದೆರಡಾಣೆ (ಒಂದು ಅಣೆ=೧/೧೬ ರೂ.) ಜೇಬಿನಲ್ಲಿ ಇಟ್ಟುಕೊಂಡು, ಈ ಹಣದಿಂದ ಏನೆಲ್ಲ ಕೊಳ್ಳಬಹುದು ಎಂದು ಲೆಕ್ಕಾಚಾರ ಹಾಕುವ ಪರಿಪಾಠ ಬೆಳೆದುಬಂದಿತ್ತು. ಒಂದು ಬಿಡಿ ಕಾಸೂ ಖರ್ಚು ಮಾಡದೇ, ಕೇವಲ ಕಲ್ಪನಾಶಕ್ತಿಯಿಂದಲೇ ಬೆಂಡು, ಬತ್ತಾಸು, ಸಕ್ಕರೆಮಿಠಾಯಿ, ಜಿಲೇಬಿ, ಗೋಡಂಬಿ, ಕಲ್ಲಂಗಡಿ ಹಣ್ಣುಗಳನ್ನು ನನ್ನದನ್ನಾಗಿ ಮಾಡಿಕೊಳ್ಳುವ ಕೌಶಲ್ಯವನ್ನು ಕರಗತಮಾಡಿಕೊಂಡಿದ್ದೆ. ಇದಲ್ಲದೇ ಬಂಧು-ಬಾಂಧವರು ಬಂದು ಹೋದಾಗ, ಕೈಯಲ್ಲಿಟ್ಟ ಪೈ (=೧/೧೯೨ ರೂಪಾಯಿ), ಬಿಲ್ಲಿ (=೧/೬೪ ರೂಪಾಯಿ)ಗಳನ್ನು ಶೇಖರಿಸಿ ಇಡುತ್ತಿದ್ದೆ. ಮಾಧ್ಯಮಿಕ ಶಾಲೆಗೆ ಬರುವದರೊಳಗಾಗಿ ಹದಿನೈದು ರೂಪಾಯಿಗಳಾಗಿದ್ದವು. ಆಗ ಬೆಂಗಳೂರಿನಲ್ಲಿ ನಡೆಯಲಿದ್ದ ಓ.ಟಿ.ಸಿ. ಕ್ಯಾಂಪಿಗೆ ಮೂವರು ಸ್ನೇಹಿತರು ಹೊರಟದ್ದರಿಂದ ಮತ್ತು ಧನ ಸಹಾಯಕ್ಕಾಗಿ ಅಂಗಲಾಚಿದ್ದರಿಂದ, ಇಲ್ಲವೆನ್ನಲಾಗದೇ ತಲಾ ಐದೈದು ರೂಪ್ಯಾ ಕೊಟ್ಟು ಸಂತೋಷಿಸಿದ್ದೆ. ಅವರು ಹೊನ್ನಾವರದಿಂದ ಗೇರಸೊಪ್ಪೆಗೆ ದೋಣಿಯಲ್ಲಿ ಹೋಗಿ, ದಟ್ಟಕಾಡಿನಲ್ಲಿ ನಡೆದುಹೋಗಿ ತಾಳಗುಪ್ಪಾ ಸೇರಿ, ಅಲ್ಲಿಂದ ರೇಲಿನಲ್ಲಿ ಬೆಂಗಳೂರು ಸೇರಿದ್ದರು. ಮೂರುವಾರಗಳ ನಂತರ ಹಿಂದಿರುಗಿದಾಗ, ಅವರ ಕಾಲುಗಳಿಗೆ ಬಾಸುಂಡೆಗಳು ಎದ್ದಿದ್ದವು.

ಸಹಾಯ ಪಡೆದ ಒಬ್ಬನು ಬಿಲ್ಲಿ, ಆಣೆಗಳ ರೂಪದಲ್ಲಿ ಹಿಂದಿರುಗಿಸಿದ. ಇನ್ನೊಬ್ಬಾತ ಹಳೆಯ ಪುಸ್ತಕಗಳನ್ನು ಕೊಟ್ಟು ಹೊಂದಾಣಿಕೆ ಮಾಡಿಕೊಂಡ. ಮೂರನೆಯವನು ಇಂದಿಗೂ ಸಾಲದ ಐದು ರೂಪಾಯಿಗಳನ್ನು ಹಿಂದಿರುಗಿಸುವದರಲ್ಲಿಯೇ ಇದ್ದಾನೆ!

ಈ ಪಾಲುಗೊಳ್ಳುವ ಪ್ರವೃತ್ತಿ ನನ್ನೊಂದಿಗೇ ಬೆಳೆಯಿತು. ಲಂಡನ್ನಿನಲ್ಲಿ ನೌಕರಿ ಮಾಡಲು ಅನುಮತಿ ದೊರಕಿಸಿದ ಬಾಲ್ಯ ಸ್ನೇಹಿತ ಅಲ್ಲಿಗೆ ಹೋಗಲು ಕೈಯಲ್ಲಿ ಕಾಸಿಲ್ಲದೇ ಒದ್ದಾಡಲಾರಂಭಿಸಿದ್ದ. ಬರುವ ಶಿಷ್ಯವೇತನದಲ್ಲಿ ಉಳಿತಾಯ ಮಾಡಿ ಎರಡು ಸಹಸ್ರ ರೂಪಾಯಿಗಳನ್ನು ನನ್ನ ಅಮೇರಿಕೆಯ ಜೀವನದ ಕಾರ್ಪಣ್ಯದಲ್ಲಿ ಉಳಿಸಿದ್ದನ್ನು, ಅಲ್ಲಿಂದ ಕಳಿಸಿಕೊಟ್ಟಾಗ, ಅವನ ಆನಂದಕ್ಕೆ ಮೇರೆಯೇ ಇರಲಿಲ್ಲ. ಇಪ್ಪತ್ತು ಪುಟಗಳ ಸುದೀರ್ಘ ಕೃತಜ್ಞತಾ ಪತ್ರವನ್ನು ಬರೆಯುವ ಸಾಹಸವನ್ನು ಮಾಡಿದ್ದನವನು. ಲಂಡನ್ನಿನಲ್ಲಿ ನೌಕರಿಯ ಜೊತೆಗೆ ಇಲೆಕ್ಟ್ರಾನಿಕ್ ಇಂಜಿನಿಯರಿಂಗ್ ಕಲಿತು ಡಿಪ್ಲೊಮಾ ಗಳಿಸಿದ್ದರಿಂದ ಟೊರೊಂಟೊ (ಕೆನಡಾ)ದ ದೊಡ್ಡ ಆಸ್ಪತ್ರೆಯೊಂದರಲ್ಲಿ ಸೂಕ್ಷ್ಮಯಂತ್ರ ಸಾಮುಗ್ರಿಗಳ ಮೇಲ್ವಿಚಾರಕನೆಂದು ನೇಮಿಸಿಕೊಂಡರು. ಅವನಿಗೆ ಹೊಸ ಜೀವನ ಕಂಡುಕೊಳ್ಳಲು ನನ್ನ ಅಲ್ಪ ಸಹಾಯ ನೆರವಾಗಿತ್ತು. ಸಹೋದ್ಯೋಗಿಯೊಬ್ಬನಿಗೆ ಅಮೇರಿಕೆಯಲ್ಲಿ ಪೋಸ್ಟ್ ಡಾಕ್ಟರೇಟ್ ಫೆಲೊಶಿಪ್ ದೊರೆತರೂ ಹೋಗಲು ಹಣದ ಕೊರತೆ ತೀವ್ರವಾಗಿದ್ದರಿಂದ ಆಗಲೂ ಹಣದ ಕಳಿಸಿದ್ದೆ. ಇನ್ನೊಬ್ಬ ಪರಿಚಯದವನಿಗೂ ಇಂಥ ಧನ ಸಹಾಯ ಮಾಡಿದರೂ, ಅವನು ವಿದೇಶದಲ್ಲಿ ಏನನ್ನೂ ಕಲಿಯಲಿಲ್ಲ. ಪಡೆದ ಹಣವನ್ನೂ ಹಿಂದಿರುಗಿಸಲಿಲ್ಲ.

ನಿನ್ನ ದೊಡ್ಡಪ್ಪನವರಿಗೆ ಇಳಿಯ ವಯಸ್ಸಿನಲ್ಲಿ ಔಷಧೋಪಚಾರಕ್ಕಾಗಿ, ಧನ ಸಹಾಯ ಮಾಡುವಂತಾದದ್ದಕ್ಕೆ ಸಮಾಧಾನವಾಗಿದೆ. ಇಂಥ ಸಹಾಯವನ್ನು ಅಪತ್ಕಾಲದಲ್ಲಿ ಒದಗಿಸುವದು ಕರ್ತವ್ಯವೆಂದು ತಿಳಿದಿದ್ದೇನೆ. ಅಹಂಭಾವ, ಪ್ರತಿಷ್ಠೆ, ಖ್ಯಾತಿಯ ಆಸೆಯಿಲ್ಲದೇ ಮುಂದೆ ಚಾಚಿದ ಅಭಯಹಸ್ತವಿದು. ಇದರ ಬಗ್ಗೆ ಒಂದಕ್ಷರ ಒಂದು ಪಿಳ್ಳೆಗೆ ಹೇಳದಿದ್ದರೂ ನೆರವು ಪಡೆದವರೇ ನಮ್ಮವರಿಗೂ, ಪರಿಚಿತರಿಗೂ ಹೇಳಿ ಹೇಳಿ ಕೃತಜ್ಞತೆ ಸೂಚಿಸಿದ್ದಾರೆ. ನಾವಿಬ್ಬರೂ ದುಡಿಯುತ್ತಿದ್ದು ಸಹಸ್ರಾರು ರೂಪಾಯಿಗಳಿಂದ ಸುಖಜೀವನ ನಡೆಸಬಹುದು. ಸಕಲರೂ ಇದನ್ನೇ ಮಾಡುತ್ತಾರೆ. ಆದರೆ ನಮ್ಮ ಆದಾಯದ ಅಲ್ಪ ಭಾಗವನ್ನಾದರೂ

ಇನ್ನಿತರರ ಕಷ್ಟ-ಸಂಕಟದ ಸಂದರ್ಭದಲ್ಲಿ ವಿನಿಯೋಗಿಸಬೇಕೆಂಬುದು ನನ್ನ ಕನಸು. ಕೆಲವು ನಿರ್ಭಾಗ್ಯರ ಹೃದಯದಲ್ಲಾದರೂ ನಮ್ಮಂಥವರಿಗಾಗಿ ಒಂದು ಸ್ಥಾನವಿದ್ದೇ ಇರುತ್ತದೆ. ರಾಜಸ್ಥಾನದ ಜೊಬನೇರದಲ್ಲಿದ್ದಾಗ, ಕಾಲೇಜಿನ ಕಲಾಕಾರನಿಗೆ ಹಲವು ರೀತಿಯಿಂದ ನೆರವಾಗಿದ್ದೆ. ನಿನ್ನೆ ಆತನ ಕೃತಜ್ಞತಾಪೂರ್ವಕ ಪತ್ರ ಬಂದಿದೆ.

ಇನ್ನಿತರ ರೀತಿಯಿಂದಲೂ ಆಗೀಗ ನಾನು ಜನರಿಗೆ ಸಹಾಯಮಾಡಲು ಯತ್ನಿಸುತ್ತಿರುತ್ತೇನೆ. ಹಣ್ಣುಮುದುಕಿ ಭಾರವಾದ ಚೀಲಹೊತ್ತು ಹೊರಟಾಗ ಅದನ್ನೆತ್ತಿಕೊಂಡು ಮನೆಗೆ ಮುಟ್ಟಿಸಿದ್ದುಂಟು. ಕಬ್ಬು ಹೇರಿದ ಚಕ್ಕಡಿ ಕೆಸರಿನಲ್ಲಿ ಹೂತುಹೋದಾಗ, ಹೊರಗೆಳೆಯುವಂತೆ ಮಾಡಿದ್ದೇನೆ. ಅನಾರೋಗ್ಯದಿಂದ ಬಳಲುತ್ತಿರುವವರಿಗೆ ನೆಮ್ಮದಿಯ ಮಾತುಗಳನ್ನಾಡಿ ಸಂತೈಸಲು ಯತ್ನಿಸಿದ್ದೇನೆ. ಕಾಯಿಲೆಯವರ ಮಲಮೂತ್ರಗಳನ್ನು ಹೊರಗೊಯ್ದು ಸ್ವಚ್ಛಗೊಳಿಸಲು ಹಿಂದೇಟು ಹಾಕಿದವನಲ್ಲ. ಈ ಪ್ರವೃತ್ತಿ ಸದಾಕಾಲ ಉಳಿಸಿಕೊಳ್ಳಬೇಕೆಂಬ ಆಸೆ.[೨೦]

○

೨೦ ಈ ಪತ್ರವನ್ನು ಪತ್ನಿ ಚೆನ್ನಾಗಿ ನೆನಪಿಟ್ಟುಕೊಂಡು ಹಲವಾರು ಬಗೆಯ ಸೇವೆಯನ್ನು ಪಡೆಯಲು ಮರೆಯಲಿಲ್ಲ! ಅವಳೇ ಬರೆದ 'ಸಂಸಾರದಲ್ಲಿ ಸ್ವಾರಸ್ಯ' ಪುಸ್ತಕ (ತಳುಕಿನ ವೆಂಕಣ್ಣಯ್ಯನವರ ಸ್ಮಾರಕ ಗ್ರಂಥಮಾಲೆ, ಮೈಸೂರು ೧೯೮೭) ದಲ್ಲಿ 'ಅನಾರೋಗ್ಯಧಾಮ' ಅಧ್ಯಾಯ ನೋಡಿ.

೨೬. ವಿಧೇಯಕ ಪತಿ

ಪ್ಲಾಸಿ, ೧೭-೨-೧೯೭೦

ತನ್ನ ಪತ್ನಿ ಅತ್ಯಂತ ವಿಧೇಯಕಳಾಗಿರಬೇಕೆಂದು ಎಲ್ಲ ಗಂಡಂದಿರೂ ಅಪೇಕ್ಷಿಸುತ್ತಾರೆ. ಆದರೆ ಬಹುಸಂಖ್ಯಾಕ ಪತಿದೇವರಿಗೆ ತಂತಮ್ಮ ಪತ್ನಿಯರನ್ನು ಸಂಭಾಳಿಸಲು ಬಾರದು, ಎಂಬುದು ಕಟುಸತ್ಯ. ತಾವಿಬ್ಬರೂ ಜೀವನದಲ್ಲಿ ಏನು ಸಾಧಿಸಬೇಕೆಂದಿದ್ದೇವೆ? ಎಂದು ಸಾರಾಸಾರ ವಿಚಾರ ಮಾಡಿ, ಅದರಲ್ಲಿ ಪತ್ನಿಯ ಪಾತ್ರ ಎಷ್ಟು, ಏನು? ಎಂದು ಗುರುತಿಸುವ ತೊಂದರೆಯನ್ನೇ ಅವರು ತೆಗೆದು ಕೊಳ್ಳುವದಿಲ್ಲ. ತಮ್ಮ ಆದರ್ಶದ ಸ್ಪಷ್ಟ ಕಲ್ಪನೆಯೇ ಹೆಚ್ಚಿನವರಿಗೆ ಇರುವದಿಲ್ಲ. ಹೀಗಾಗಿ ಗೃಹಿಣಿಯಾದವಳು ತನಗೆ ಯೋಗ್ಯವೆಂದು ಕಂಡದ್ದನ್ನು ಮಾಡಿದಾಗ, ಅದು ಮನಸ್ಸಿಗೆ ಬಾರದೇ ಪತಿಯು ಪತ್ನಿಯನ್ನು ತರಾಟೆಗೆ ತೆಗೆದುಕೊಳ್ಳುವದು ಸಾಮಾನ್ಯ. ಒಂದು ಉದಾಹರಣೆ–ನಿನಗೆ ಗೊತ್ತಿದ್ದದ್ದೇ–ಬರೆದರೆ ಈ ಮಾತಿನ ಅರ್ಥ ಮನದಟ್ಟಾಗಬಹುದು. ಡಾಕ್ಟರರ ಪತ್ನಿ, ರೋಗಿಯ ಫೋನ ಕರೆಗೆ ಉತ್ತರಿಸಲು, ಹರಟೆ ಹೊಡೆಯುತ್ತಿದ್ದ ಪತಿಗೆ ವಿನಂತಿಸಿಕೊಂಡಾಗ ಅವನು ಸಿಡಿದೆದ್ದು, ತಾನಿಲ್ಲವೆಂದು ಹೇಳಬೇಕಾಗಿತ್ತು ಎಂದು ಕಿರುಚಿಕೊಂಡ. ಮರುದಿನವೂ ಅದೇ ರೋಗಿಯ ಫೋನ ಬಂದಾಗ, ಪತಿ ಮನೆಯಲ್ಲಿ ಇಲ್ಲವೆಂದು ಸಾರಿದ್ದಕ್ಕಾಗಿ, ಅವಳನ್ನು ತರಾಟೆಗೆ ತೆಗೆದುಕೊಂಡ. "ಈ ರೋಗಿಗಳು ಇದ್ದುದರಿಂದಲೇ ಅಲ್ಲವೇ, ನಮ್ಮ ಸಂಸಾರ ಸುಸೂತ್ರವಾಗಿ ನಡೆದದ್ದು? ನಿನ್ನ ರೇಷ್ಮೆ ಸೀರೆ, ಕಾರು ಗಳೆಲ್ಲ ಆಕಾಶದಿಂದ ಉದುರುತ್ತವೆಂದು ತಿಳಿದೆಯಾ?" ಎಂದು ಜಬರಿಸಿದ. ಈ ವಿರೋಧಾಭಾಸದ ವರ್ತನೆಯಿಂದ ತಬ್ಬಿಬ್ಬಾದ ಪತ್ನಿ ನಂತರದ ದಿನಗಳಲ್ಲಿ ಫೋನ ಕರೆಗೆ ಉತ್ತರಿಸುವ ಗೋಜಿಗೆ ಹೋಗದೇ ಇದ್ದುದಕ್ಕಾಗಿಯೂ ತಿರುಗಿ ಬೈಗಳ ಸುರಿಮಳೆಯಲ್ಲಿ ನೆನೆಯಬೇಕಾಯಿತು.

ನನ್ನಿಂದ ಪತ್ನಿಗೆ ಯಾವ ರೀತಿಯ ತೊಂದರೆಯೂ ಆಗಬಾರದೆಂದು,

'ವಿಧೇಯಕ ಪತಿ'ಯಾಗಬೇಕೆಂದು ಬಹಳ ಹಿಂದೆಯೇ ನಿರ್ಧರಿಸಿಬಿಟ್ಟಿದ್ದೇನೆ. ಸಾಲು ಓದಿ ಪಿಸಕ್ಕನೆ ನಕ್ಕುಬಿಟ್ಟೆಯಲ್ಲವೇ? ಆದರೆ ಇದನ್ನು ದೃಢೀಕರಿಸ ಬೇಕಾದಷ್ಟು ಸಾಕ್ಷಿ-ಪ್ರಮಾಣಗಳನ್ನು ಕೊಡಬಲ್ಲೆ. ಜೊಬನೇರದಲ್ಲಿ ಸಂಸಾ ಹೂಡಲು ಯಾವ ಸವಲತ್ತುಗಳು ಇಲ್ಲದಿದ್ದರೂ ಮದುವೆಯಾದ ಕೂಡ ನನ್ನೊಂದಿಗೆ ರಾಜಸ್ಥಾನಕ್ಕೆ ಹೊರಟು ನಿಂತಾಗ ಕೂಡಲೇ ಒಪ್ಪಿಕೊಳ್ಳಲಿಲ್ಲವೇ ವಿಹಾರಕ್ಕಾಗಿ ಕಾಶ್ಮೀರಕ್ಕೆ ಹೋಗೋಣವೆಂದಾಗ ಅಷ್ಟೊಂದು ಹಣದ ಅನುಕೂ ವಿಲ್ಲದಿದ್ದರೂ ಹೊರಡಲಿಲ್ಲವೇ? ನೌಕರಿ ಸಾಕು, ರಾಜೀನಾಮೆ ಕೊಡುವದ ಹೇಳಿದ್ದಿ. ಆ ಕೂಡಲೇ ಒಪ್ಪಿಗೆ ಕೊಡಲಿಲ್ಲವೇ? ಅರ್ಧಕ್ಕೆ ನಿಲ್ಲಿಸಿದ ಡಾಕ್ಟರೇ ಮುಂದುವರಿಸುವದಾಗಿ ಹೇಳಿದಾಗ, ತನು, ಮನ, ಧನದಿಂದ ಸಹಾಯ ಮಾಡುತ್ತೆ ನೆಂದೆ. ಸಂಸಾರ ಸಾಕ-ಬೇಕು ಎಂದಾಗ, ಹೌದು, ಹೌದು! ಎಂದೆ. ಬರು ಸಂಬಳದಲ್ಲಿ ಉಳಿತಾಯ ಮಾಡಬೇಕೆಂದಾಗ ಒಪ್ಪಿಕೊಂಡೆ. ಗೃಹ ಕೃತ್ಯದ ಸಕ ಕೆಲಸಗಳಲ್ಲಿಯೂ ನೆರವಾಗಬೇಕೆಂದಾಗ ಸಮ್ಮತಿಸಿದೆ. ನನ್ನಂತಹ ವಿಧೇಯಕ ಪ ಈ ಪೃಥ್ವಿಯಲ್ಲಿ ಇನ್ನೊಬ್ಬಾತ ಇದ್ದಿರಬಹುದೇ?

ಗಂಡಂದಿರೆಲ್ಲಾ ಸೇರಿ ಚಹಾ, ಕಾಫಿ ಅಥವಾ ಬಿಯರ್ ಸೇವಿಸುತ್ತಾ ಹರಟುತ್ತ ಕಾಲಹರಣ ಮಾಡುವದು ಸಾಮಾನ್ಯ. ಅಮಲೇರಿದಾಗ ತಮ್ಮ ತಮ ಪತ್ನಿಯರ ಕುಂದು-ಕೊರತೆ ಹೇಳಿಕೊಳ್ಳುವದರಲ್ಲಿ ಹಿಂದೆ ಬೀಳುವದಿಲ್ಲ. ಸಿ ವಂತರ ಮಗಳು, ಪತಿಯ ಬಡತನದ ಹಿನ್ನೆಲೆಯನ್ನು ಹೀಗಳೆಯುವದನ್ನೆ ಚಟ ಮಾಡಿಕೊಂಡಿರುತ್ತಾಳೆ. ಪ್ರಭಾವಶಾಲಿಯ ಪುತ್ರಿ, ತನ್ನ ತವರಿನವರ ಸಾಧ ಗಳನ್ನೆ ಹೇಳುತ್ತಿರುತ್ತಾಳೆ. ಹೆಂಡಕ್ಕೆ ಮಾರು ಹೋದವನ ಪತ್ನಿ 'ಕುಡಿದು ಸರ್ವಸ್ವವನ್ನು ಹಾಳು ಮಾಡಿದರು' ಎಂಬ ಹಾಡನ್ನೆ ಹಗಲೆಲ್ಲ ಹಾಡುತ್ತಿರುತ್ತಾಳೆ ಸೌಮ್ಯ ಸ್ವಭಾವದವನು, ಜೀವನದಲ್ಲಿ ಮುಂದೆ ಬಾರದ್ದಕ್ಕಾಗಿ 'ಬಳೆಗಳನ್ನು ತೊಟ್ಟುಕೊಳ್ಳಬಾರದೇ' ಅನ್ನುತ್ತಾಳೆ ಗಂಡುಬೀರಿ ಗೃಹಿಣಿ. ಹಣ ಹಿಗ್ಗಿಸುವ ದನ್ನು ಬಿಟ್ಟರೆ ಹೆಂಡತಿಯನ್ನು ಮಾತನಾಡಿಸಲು ಕೂಡ ಇವರಿಗೆ ಬಿಡುವಿಲ್ಲವೆಂದು ಮೂದಲಿಸುವಳು, ವ್ಯಾಪಾರಿಯ ಪತ್ನಿ. ಇವರ ಸರ್ವ ಸಮಯವೂ ರೋಗಿ ಗಳಿಗೇ ಮೀಸಲು, ಎಂದು ಆಕ್ಷೇಪಿಸುವವಳು ಡಾಕ್ಟರರ ಪತ್ನಿ. ಆಫೀಸನ್ನು ಹೊಕ್ಕುಬಿಟ್ಟರೆ, ತಾವು ವಿವಾಹಿತರು, ಎಂಬುದನ್ನೆ ಮರೆಯುತ್ತಾರೆ ಸಾಹೇಬರು! ಎಂದು ಉಚ್ಚ ಅಧಿಕಾರಿಯ ಅರ್ಧಾಂಗಿನಿ ಪರಿಹಾಸ್ಯ ಮಾಡುವಳು. ಈ ಧನ-

ದೌಲತ್ತು ಒಂದೂ ಬೇಕಾಗಿಲ್ಲ. ಒಂದು ಚಿಕ್ಕ ಹಳ್ಳಿಯಲ್ಲಿ ನಾವೇ ನಾವಾಗಿರೋಣ ಎನ್ನುವವಳು, ಸಕಲ ಸೌಲಭ್ಯಗಳನ್ನೂ ಹೊಂದಿರುವ ಜೀವನ ಸಂಗಾತಿ.

ಆರತಕ್ಷತೆ, ಅರಿಸಿನ-ಕುಂಕುಮಗಳ ನೆವದಿಂದ ಹೆಂಗಳೆಯರೆಲ್ಲ ಒಂದೆಡೆಗೆ ಸೇರಿದಾಗ, ಇಂಥದೇ ಕಾಡು ಹರಟೆಯಲ್ಲಿ ಕಾಲಕ್ಷೇಪ ಮಾಡುತ್ತಿರಬಹುದಲ್ಲವೇ? ತಾಯಿಯ ಮಾತನ್ನು ಅಲ್ಲಗಳೆಯಲಾಗದ್ದರಿಂದ ತನ್ನನ್ನು ಗೃಹಸ್ಥನು ಕಸ ಸಮಾನವಾಗಿ ಕಾಣುತ್ತಾನೆ ಎಂದು ಒಬ್ಬಾಕೆ ಗೋಗರೆದರೆ, ತಾವು ವಿಂಗಡದ ಗುಡಿ ಮಾಡೋಣವೆಂದರೆ ಕುಂಟುನೆಪ ಹೂಡಿ ಮುಂದೆ ಹಾಕುತ್ತಲೇ ಇರುವನೆಂದು ಇನ್ನೊಬ್ಬಳು ಕಣ್ಣೀರು ಹಾಕಬಹುದು. ಮಗುದೊಬ್ಬಳು ತಾನು ಮರಗುಳಿಯ ಕೈ ಹಿಡಿದಿರುವೆ. ಸ್ನಾನಕ್ಕೆ ಇಳಿದಾಗ ಸಾಬೂನು, ಟಾವೆಲ್ಲು ಎಂದು ಕಿರಿಚಿಕೊಳ್ಳುವದು ಪ್ರತಿನಿತ್ಯದ ಸುಗಮ ಸಂಗೀತ! ಎಂದು ಅಪಹಾಸ್ಯ ಮಾಡಬಹುದು ಗಾನಪ್ರಿಯೆಯೊಬ್ಬಳು. ತನ್ನವಳ ತಪ್ಪುಗಳನ್ನು ಹುಡುಕುತ್ತಿರುವದೇ ತನ್ನವರ ಏಕಮೇವ ಗುರಿ, ಎಂದು ಗರತಿಯೊಬ್ಬಳು ಸಾರಿದರೆ, ಬ್ಯಾಂಕ ಠೇವಣಿ ಹೆಚ್ಚಿಸುವದನ್ನು ಬಿಟ್ಟರೆ ಬೇರೆ ಯಾವುದರಲ್ಲಿಯೂ ಆಸಕ್ತಿಯಿಲ್ಲ ಎಂದು ಗೊಣಗುವವಳು ಅಸಹಾಯಕ ಪತ್ನಿ. ತನಗೆ ಕಥೆ-ಕಾದಂಬರಿಗಳಲ್ಲಿ ಆಸಕ್ತಿಯಿದ್ದರೆ, ಪತಿ ಅವನ್ನು ವೈರಿಯೆಂದು ಪರಿಗಣಿಸುವ, ಕೈಯಲ್ಲಿರುವ ಪುಸ್ತಕವನ್ನು ಕಿತ್ತೊಗೆಯುವ! ಎಂದು ನೊಂದುಕೊಳ್ಳುವಳು ಅರಸಿಕನ ಪತ್ನಿ. ಇವರೆಲ್ಲ ಸೇರಿ ತಂತಮ್ಮ ವೈವಾಹಿಕ ಜೀವನದ ಅನುಭವಗಳನ್ನು ಹೇಳಲೇಬೇಕು ಎಂದು ಪಟ್ಟುಹಿಡಿದಾಗ, ನೀನು ಏನು ಹೇಳಬಹುದು? ಎಂದು ಕಲ್ಪಿಸಿಕೊಂಡೇ ರೋಮಾಂಚನವಾಯಿತು.

"ನಾನೆಷ್ಟು ನಿರ್ಭಾಗ್ಯಳೆಂದು ನಿಮ್ಮೆಲ್ಲರ ಅನುಭವಗಳ ರಾಶಿ ಕೇಳಿದಾಗ ಅರಿವಾಯಿತು! ಒಮ್ಮೆಯೂ ಸ್ನಾನಕ್ಕೆ ಇಳಿದು ಸಾಬೂನು, ಟಾವೆಲ್‌ಗಳಿಗಾಗಿ 'ಇವರು' ಕಿರುಚಾಡಲಿಲ್ಲ. ಮಾಡಿದ ಅಡಿಗೆಯಲ್ಲಿ ಒಮ್ಮೆಯೂ ಕುಂದು-ಕೊರತೆಗಳನ್ನು ಹುಡುಕಲಿಲ್ಲ. ಹೋಗಲಿ, ಅಡಿಗೆ ಏಕೆ ಮಾಡಿಲ್ಲ? ಎಂದು ಕೂಡಾ ಹಸಿದು ಬಂದಾಗ ಪ್ರಶ್ನಿಸುವದಿಲ್ಲ. ತಮ್ಮ ಬಟ್ಟೆ ಬರೆಯತ್ತ ಗಮನ ಕೊಡದವರು ಪತ್ನಿಗೆ ಒಳ್ಳೇ ಸೀರೆ ಕೊಡಿಸುತ್ತಾರೆ. ಒಮ್ಮೆ ಕೈಯಲ್ಲಿದ್ದ ಎಲ್ಲ ಹಣ ಹಾಕಿ ರೇಶ್ಮೆ ಸೀರೆಯನ್ನು ಕೊಂಡು ತಂದಾಗ, ತಾನೇ ಅವರನ್ನು ತರಾಟೆಗೆ ತೆಗೆದುಕೊಂಡದ್ದಕ್ಕಾಗಿ ಈಗಲೂ ಮರುಗುತ್ತಿರುತ್ತೇನೆ. ಗೃಹಕೃತ್ಯದ ಯಾವುದೇ ಕೆಲಸವನ್ನು, ಯಾವ ಅಳುಕೂ ಇಲ್ಲದೆ ಮಾಡಿ ಮುಗಿಸುವದು ಇವರ ಪರಿಪಾಠ.

ಸ್ವಲ್ಪವಾದರೂ ಅನಾರೋಗ್ಯವಾದರೆ ಸಾಕು. ಆದರ ಔಷಧೋಪಚಾರಕ್ಕೆ ಕೊ ಮೊದಲಿಲ್ಲ. ಇಂಥ ವ್ಯಕ್ತಿ, ಗಂಡನೆಂಬಾತ ಒಬ್ಬನಿರುತ್ತಾನೆಂದು ಯಾರಾದರು ಹೇಳಿದರೆ ನಾನೇ ನಂಬುತ್ತಿರಲಿಲ್ಲ, ನನ್ನವರನ್ನು ಹಂಗಿಸಲಿಕ್ಕಾದರೂ ಒಂದೆರ ಕೊರತೆಗಳು ಇರಬಾರದಾಗಿತ್ತೆ?" ಎಂದು ಉದ್ಗರಿಸಿದಾಗ ಎಲ್ಲರೂ ಬಿದ್ದು ಬಿದ ನಗುತ್ತಾರೆ. ಹೇಗಿದೆ ವಿಚಾರ ಲಹರಿ; ಕಲ್ಪನಾ ವಿಲಾಸ?

ಪಶ್ಚಿಮ ಬಂಗಾಲದ ಪ್ಲಾಸಿಯಲ್ಲಿ ನೌಕರಿ ಸಿಕ್ಕಾಗ ಕೇವಲ ಎರಡೇ ವರ್ ಅಲ್ಲಿದ್ದರೆ ಸಾಕು ಎಂದಿ. ಒಪ್ಪಿಕೊಂಡೆ. ಅಧಿಕಾರಿಯಾದ್ದರಿಂದ ಶಿಸ್ತಿನಿಂದ ಇ ಬೇಕು ಎಂದು ತಾಕೀದು ಮಾಡಿದಿ. ಈಗ ಬಂಗಾಲಿ ಧೋಬಿ, ಗಂಜಿಹಾಕಿ ಇಸ್ತ್ ಮಾಡಿದ ಗರಿಗರಿಯಾದ ಬಟ್ಟೆಗಳನ್ನೆ ತೊಡುತ್ತಿದ್ದೇನೆ. ಸ್ಥಾಯಿಯಾಗಿ ಬೇರ ಬಿಡಲು ಒಂದು ಒಳ್ಳೆ ಸ್ಥಳ ಹುಡುಕಲು ಹೇಳಿದ್ದಿ. ಧಾರವಾಡ ಒಳ್ಳೆಯ ಊರು ಆದರೆ ಬೆಂಗಳೂರು ಹೆಚ್ಚಿನ ಅವಕಾಶಗಳನ್ನು ಒದಗಿಸುವ ತಾಣವಾದ್ದರಿಂ ಅದನ್ನೆ ನಮ್ಮ ಶಾಶ್ವತ ಸ್ಥಾನವಾಗಿ ಮಾಡಿಕೊಳ್ಳಬೇಕೆಂಬ ನಿರ್ಧಾರಕ್ಕೆ ಬಂದಿದ್ದೇನೆ ನಿನಗೆ ಒಪ್ಪಿಗೆಯಾದರೆ ಅಲ್ಲಿಯೇ ಫ್ಲ್ಯಾಟನ್ನೋ, ಮನೆಯನ್ನೋ ಕೊಳ್ಳುವ ಯತ್ ಮಾಡುತ್ತೇನೆ. ಹೇಗಿದ್ದರೂ ನಮ್ಮ ಮುಖ್ಯ ಕಚೇರಿ ಬೆಂಗಳೂರಾದ್ದರಿಂದ ಅಲ್ಲಿ ಮೇಲಿಂದ ಮೇಲೆ ಹೋಗಬೇಕಾಗುತ್ತದೆ. ನೀನು ಅಪ್ಪಣೆ ಕೊಡಿಸಿದ್ದನ್ನೆಲ್ಲ ಚಾಚೂ ತಪ್ಪದೇ ನಿರ್ವಹಿಸುವದರಿಂದ ನೀನು ಗೃಹಸ್ಥನಾಗಿ ನಾನು ಗೃಹಿಣಿಯಾಗಿ ದ್ದರೆ ಚೆನ್ನಾಗಿರುತ್ತಿತ್ತು, ಎಂದು ಅನಿಸುತ್ತಿರುತ್ತದೆ!

○

೨೭. ಪತ್ರ ಸ್ನೇಹಿತೆಯರು

ಪ್ಲಾಸಿ, ೧೦-೩-೧೯೭೦

ವಿವಾಹದ ನಾಲ್ಕು ವರ್ಷಗಳ ನಂತರ, ನಿನ್ನವನಿಗೆ ಸ್ನೇಹಿತೆಯೋರ್ವಳಿದ್ದಳು. ಅವರಲ್ಲಿ ಪತ್ರ ವ್ಯವಹಾರ ತುಂಬ ಮುಂದುವರಿದಿದ್ದರಿಂದ ಮದುವೆಯಲ್ಲಿ ಪರಿವರ್ತನೆಗೊಳ್ಳುವವೆಂದು ಸಕಲರೂ ನಂಬಿದ್ದರು ಎಂದು 'ಸತ್ಯ ಸಂಗತಿ'ಯನ್ನು ನಿನಗೆ........ಹೇಳಿದ್ದು ತಿಳಿದು ಮೋಜೆನಿಸಿತು. ನೀನೂ ಇದನ್ನು ನಂಬಿ, ಕೊರಗಿ, ಬಂಡೇಳಲಿಲ್ಲವೆಂದು ನೆಮ್ಮದಿಯಾಯಿತು. ನಾನು ಮಿತಭಾಷಿಯಾಗಿದ್ದರೂ ಎಲ್ಲರ ಮಾತುಗಳನ್ನು ಕಿವಿಗೊಟ್ಟು ಆಲಿಸಿ ಅರ್ಥೈಸಿಕೊಳ್ಳಲು ಯತ್ನಿಸುತ್ತಿರುತ್ತೇನೆ. ಸೌಂದರ್ಯ ಪ್ರಿಯತೆ, ವಿಚಾರ ಮಂಥನ, ಜೊತೆಗೆ ಜೀವನದ ಸೂಕ್ಷ್ಮತೆಗಳನ್ನು ಅರಿತುಕೊಳ್ಳುವ ಹವ್ಯಾಸವಿದೆ. ಅಂತೆಯೇ ಶಾಲಾದಿನಗಳಿಂದಲೂ ಆಪ್ತರಿಗೆ, ಸ್ನೇಹಿತರಿಗೆ, ಬರೆಯುವ ಪತ್ರಗಳಲ್ಲಿ ಇವುಗಳ ಬಗ್ಗೆ, ಉಚಿತವೆಂದು ಕಂಡ ವಿಚಾರಗಳ ಬಗ್ಗೆ ಬರೆದು ಹಾಳೆಯನ್ನು ತುಂಬಿ ತುಳುಕಿಸುತ್ತಿದ್ದೆ. ಅವರೆಲ್ಲರೂ ನನ್ನ ಪತ್ರಗಳನ್ನು ಪ್ರಶಂಸಿಸಿ ಬರೆದ ಓಲೆಗಳನ್ನು ನಾನು ಕಾಯ್ದಿಟ್ಟಿದ್ದರೂ, ನನ್ನ ಪತ್ರಗಳನ್ನು ಅವರಾರೂ ಇಟ್ಟುಕೊಂಡಂತೆ ಇಲ್ಲ. ಅವು ಸಿಗುವಂತಾಗಿದ್ದರೆ, ನನ್ನ ಪತ್ರ-ಬರವಣಿಗೆಯ ಹಂತಗಳನ್ನು ಗುರುತಿಸಬಹುದಾಗಿತ್ತು.

ಅದೇಕೊ, ನಾನೆಂದರೆ ಮಾವಶಿಯುವರಿಗೆ ತುಂಬ ಇಷ್ಟ. ರಜಾ ದಿನಗಳಲ್ಲಿ ಭೇಟಿಯಾದಾಗ ಪತ್ರ ಬರೆಯುವೆ, ಎಂದು ಖಚಿತವಾದ ಆಶ್ವಾಸನೆಪಡೆದೇ ಬೀಳ್ಕೊಡುತ್ತಿದ್ದರು. ಅವರು ಸೌಮ್ಯ ಸ್ವಭಾವದವರು. ಸಂಗೀತ, ಕಲೆಗಳಲ್ಲಿ ಆಸಕ್ತಿ. ನಾನು ಕಾಲೇಜು ಸೇರಿದಾಗ ಅವರು ಮುಂಬಯಿಯ ಮೆಡಿಕಲ್ ಕಾಲೇಜಿನಲ್ಲಿ ಓದುತ್ತಿದ್ದರು. ಅಂದಿನ ಅನುಭವಗಳ ಪತ್ರಗಳನ್ನು ಕಾದಿರಿಸಿದ್ದೇನೆ ಎಂದು ಅನೇಕ ವರ್ಷಗಳವರೆಗೆ ಅವರು ಅಭಿಮಾನದಿಂದ ಹೇಳುತ್ತಿದ್ದರು. ಅಂದು ಪ್ರಾರಂಭವಾದ ಪತ್ರ ವ್ಯವಹಾರ ಏಕಪ್ರಕಾರ

ವಾಗಿ ನಡದೇ ಇದೆ. ಪತ್ರ ಬರೆಯುವದು ಸ್ನೇಹದ ಕುರುಹು ಇದ್ದಂತೆ, ನನಗೆ ಅದು ಅಭಿವ್ಯಕ್ತಿ ಮಾಧ್ಯಮವೂ ಹೌದು. ಒಳ್ಳೇ ಮಾತುಗಾರರಾಗಿ, ನಕ್ಕು, ನಗಿಸಿ ನಲಿಸುವವರನ್ನು, ಒಂದು ಅಂಚೆ ಕಾರ್ಡನ್ನು ತುಂಬುವಷ್ಟು ಪತ್ರ-ಲೇಖನ ಮಾಡಲು ಬರದವರನ್ನು, ನಾನು ಕಂಡಿದ್ದೇನೆ. ಪತ್ರ ಯಾರಿಗೇ ಬರೆಯಲಿ, ಅದು ಅನೈತಿಕವೆಂದು ಅನಿಸುವದೇ ಇಲ್ಲ.

ಅಂತಿಮ ಶಾಲಾ ಪರೀಕ್ಷೆ ಮುಗಿಸಿಕೊಂಡು ಅಕ್ಕನ ಮನೆಗೆ ಹೋಗಿದ್ದೆ. ಅವರಲ್ಲಿ ಒಂದು ತಿಂಗಳ ಮಲೆನಾಡಿನ ಜೀವನ ರಸದೂಟ ನೀಡಿತ್ತು. ಆ ಸವಿ ಅನುಭವಗಳ ಕುರಿತಾದ ಉದ್ದ ಪತ್ರವನ್ನು ಮರಳಿ ಬಂದ ನಂತರ ಅಕ್ಕನಿಗೆ ನಿವೇದಿಸಿ ಬರೆದಿದ್ದೆ. ಅದನ್ನು ಓದಿದ ಅವರ ಮನೆಯ ಅರಸಿಕರು, ಕೂಡ 'ಕವಿಯಂತೆ ಬರೆದಿದ್ದಾನೆ' ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಅಮೇರಿಕೆಯ ಜೀನ್ ರೊಥ್, ಲೇಖನಿಯ ಸ್ನೇಹಿತೆ ೨೧ ಯಾಗಿ ದೊರೆತ ನಂತರ ಪತ್ರ ಬರವಣಿಗೆ ಬೇರೆಯೇ ಹಾದಿ ಹಿಡಿಯಿತು. ಆದರೆ ನ್ಯೂಯಾರ್ಕ್ ವಿಶ್ವವಿದ್ಯಾಲಯದ ಶಿಷ್ಯವೇತನ ದೊರಕಿಸಿ ಡಾಕ್ಟರೇಟ್ ಪದವಿ ಪಡೆಯುವವರಲ್ಲಿ ಅವರ ಕೊಡುಗೆ ಏನೂ ಇಲ್ಲವೆಂದರೆ ಅತಿಶಯೋಕ್ತಿ ಆಗಲಾರದು. ಇಂದಿಗೂ ಅವರೊಡನೆ ಪತ್ರ ವ್ಯವಹಾರ ಮುಂದರಿದಿರುವದು ನಿನಗೆ ಅರಿಯದ ವಿಷಯವೇನಲ್ಲ. ಅವರಂತೆ ಹತ್ತಾರು ಅಮೇರಿಕನ್‌ಕುಟುಂಬದವರೊಡನೆ ಸಂಪರ್ಕ ಇಟ್ಟುಕೊಂಡಿದ್ದೇನೆ.ಅಲ್ಲಿಯ ಗಂಡಾಳುಗಳು ದಿನವೆಲ್ಲ ಮೈಮುರಿ ದುಡಿದು, ಬಳಲಿ ಬೆಂಡಾಗಿ ಮನೆಗೆ ಬರುವದರಿಂದ, ಹೆಣ್ಣಾಳುಗಳೇ ಸಕಲ ಪತ್ರ ವ್ಯವಹಾರ ನಡೆಸುತ್ತಾರೆ. ಅಂತೆಯೇ ಪರಿಚಯದವರ ಪತ್ನಿಯರಾದ ಜಿನಾ, ಹೆಲನ್, ಜೀನ್ ಎಲ್ಲರೂ ನನ್ನ ಲೇಖನಿಯ ಸ್ನೇಹಿತೆಯರಾಗಿ ಬಿಟ್ಟಿದ್ದಾರೆ!

ಅಮೇರಿಕೆಯ ವ್ಯಾಸಂಗದ ನಾಲ್ಕು ವರ್ಷಗಳ ಕಾಲ, ಪತ್ರ ಬರವಣಿಗೆ, ನನ್ನ ಪಠ್ಯೇತರ ಚಟುವಟಿಕೆಯಾಗಿತ್ತು. ಬರೆದ ಪತ್ರಗಳು ಶಾಶ್ವತವಾಗಿ ಕಳೆದುಕೊಂಡಂತೆ, ಎಂಬ ಅನುಭವದಿಂದಾಗಿ ಅವುಗಳ ನಕಲುಗಳನ್ನು ಕಾದಿರಿಸುವ ಪರಿಪಾಠ ಬೆಳೆಸಿಕೊಂಡೆ. ಇಂಗ್ಲೀಷಿನಲ್ಲಿ ಡಾಕ್ಟರೇಟ ಮಾಡುತ್ತಿದ್ದ ಹೈದರಾಬಾದದ ಶ್ರೀನಿವಾಸರಾವ್, ಒಮ್ಮೆ ನನ್ನ ರೂಮಿಗೆ ಬಂದಿದ್ದಾಗ, ವ್ಯವಸ್ಥಿತವಾಗಿ ಇಟ್ಟಿದ್ದ

೨೧ ನೋಡಿ: ಮನೋಹರ ಗ್ರಂಥಮಾಲೆಯು ಪ್ರಕಟಿಸಿದ 'ನಾನೂ ಅಮೇರಿಕೆಗೆ ಹೋಗಿದ್ದೆ' ಪುಸ್ತಕದಲ್ಲಿಯ 'ಲೇಖನಿಯ ಸ್ನೇಹಿತೆ' ಅಧ್ಯಾಯವನ್ನು

ಪತ್ರಗಳ ಪ್ರತಿಗಳನ್ನು ನೋಡಿ ತಲೆದೂಗಿದ್ದರು. ಇಂಗ್ಲೀಷ್ ಬರಹಗಾರರು, ನಾಟಕಕಾರರು, ಕವಿಗಳು, ತಾವು ಬರೆದ, ತಮಗೆ ಬಂದ ಪತ್ರಗಳನ್ನು ಕಾದಿರಿಸಿದ್ದರೆ ಅದೇ ಒಂದು ವಿಶಿಷ್ಟ ಮಹಾನ್ ಸಾಹಿತ್ಯ ಪ್ರಕಾರವಾಗಿ ಬಿಡುತ್ತಿತ್ತು, ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದರು. ಅಂಥ ಸಾಮರ್ಥ್ಯ ಅಥವಾ ಮಹತ್ವ ನನ್ನ ಪತ್ರಗಳಿಗೆ ಇಲ್ಲವಾದರೂ, ಅವುಗಳನ್ನು ಓದಿದವರಿಗೆ, ರಸಾನುಭವವಾಗುವದರಲ್ಲಿ ಸಂದೇಹವೇ ಇಲ್ಲ. ಜೊತೆಯಾಗಿ ಇರುವಂತಾದಾಗ ಅವನ್ನು ಓದಲು ಪ್ರಾರಂಭಿಸೋಣ, ಆಗದೇ?

ಏನೋ ಹೇಳಲು ಹೊರಟು ಏನೇನೋ ಬರೆದು ಬಿಟ್ಟೆ! ಅಸಂಖ್ಯಾತ ಸ್ನೇಹಿತರೊಡನೆ ಪತ್ರ ವ್ಯವಹಾರ ಇಟ್ಟುಕೊಂಡಿರುವಂತೆ, ಕೆಲವು ಸ್ನೇಹಿತೆಯರಿಗೂ ಪತ್ರ ಬರೆಯುತ್ತಿರುತ್ತೇನೆ.ಆದರೆ ಇವರಲ್ಲಿ ಯಾರೊಬ್ಬನೊಡರೆಯೂ ಪತ್ರ ಸ್ನೇಹ, 'ಪ್ರೇಮ'ದಲ್ಲಿ ಪರಿವರ್ತನೆಗೊಳ್ಳಬಹುದೆಂಬ ಆಸೆ ತೋರಿಸಿಲ್ಲ, ಎಂದು ಕಡಾಖಂಡಿತವಾಗಿ ಹೇಳಬಲ್ಲೆ! ಪತ್ರ ಬರೆದ ತಪ್ಪಿಗಾಗಿ ವಿವಾಹ ಮಾಡಿಕೊಳ್ಳಬೇಕಾಗಿದ್ದರೆ, ಪದ್ಮಾ, ಶಾಂತಾ, ಮೀರಾ, ಶಾರದಾ, ಡಾಯನಾ, ಡಾರ್ಬೆರಾ, ಹೆಲೆನ್, ಜೀನಾ ಮುಂತಾದವರೆಲ್ಲ ಪತ್ನಿಯರಾಗಿರುತ್ತಿದ್ದರು. ಶ್ರೀಕೃಷ್ಣ ಪರಮಾತ್ಮನಿಗೆ ಮಾತ್ರ ಇದು ಸಾಧ್ಯವಲ್ಲದೆ ಕಲಿಯುಗದ ಈ ಕೃಷ್ಣನಿಗೆ ಓರ್ವ ಪತ್ನಿಯನ್ನೇ ಸಂಭಾಳಿಸುವದು ಕಷ್ಟಕ್ಕಿಟ್ಟುಕೊಂಡಾಗ, ಬಹುಪತ್ನಿಯರ ಮಾತು ದೂರವೇ ಉಳಿಯಿತು. ಉಡುಪಿಯ ನಂದಿನಿ ೨೨ ಮತ್ತು ವಿಜಾಪುರದ ಮೀನಾ ೨೩ ಇಬ್ಬರೂ

---

೨೨ ಆ ನಂತರ ನಂದಿನಿಯ ಒತ್ತಾಯದ ಮೇರೆಗೆ ಅವರ ಭೇಟಿಗೆ ಹೋಗಿದ್ದೆ. ಐದು ಸೋದರಿಯಲ್ಲಿ ಅವಳೇ ಕಿರಿಯಳಾದ್ದರಿಂದ ಅವಳ ಮಾತು ಸರ್ವರಿಗೂ ಮಾನ್ಯ. ಆದರೆ ಬಂದವರು ಯಾರು? ಎಂದು ಆಪ್ತರಿಗೆ ತಿಳಿ ಹೇಳುವದು ಅವರ ತಾಯಿಗೆ ತುಂಬ ಕಷ್ಟಕರವಾಯಿತು. ಹೀಗಾಗಿ ಎಲ್ಲರೂ ಹಿರಿಯ ಮಗಳನ್ನು 'ನೋಡಲು ಬಂದ ಗಂಡು ಎಂಬ' ನಿರ್ಧಾರಕ್ಕೆ ಬಂದರು.

೨೩ ಬಿಜಾಪುರ ಇನ್ನೂ ನೋಡದ್ದರಿಂದ ಮೀನಾಳ ಆಮಂತ್ರಣದ ನೆಪ ಮಾಡಿ ಹೋಗಿದ್ದೆ. ಕಿಶೋರಿಗೆ ಈ ಆಗಂತುಕನನ್ನು ಹೇಗೆ ಮಾತನಾಡಿಸಬೇಕೆಂದು ತಿಳಿಯದೇ ನಾಚಿಕೆಯಿಂದ ಬೆಂಡಾದಾಗ, ಶಿಕ್ಷಕರಾಗಿದ್ದ ಆಕೆಯ ತಂದೆಯೇ ಎಲ್ಲ ಮಾತು-ಕಥೆಯ ಜವಾಬ್ದಾರಿ ಹೊತ್ತರು!

ಎಳೆ ಗೋಪಿಯರು ಅದು ಹೇಗೋ ನನ್ನ ಪತ್ತೆ ಪಡೆದು, ಪತ್ರಸಲ್ಲಾಪ ಪ್ರಾರಂಭಿಸಿದ್ದಾರೆ![೨೪]

ಹುರುಳಿಲ್ಲದ ಗುಲ್ಲು ಎಬ್ಬಿಸುವದರಲ್ಲಿ ನಮ್ಮವರು, ನಿಸ್ಸೀಮರೆಂದು ತೋರುತ್ತದೆ.ನಮ್ಮ ಶಾಲೆಯ ವಿದ್ಯಾರ್ಥಿನಿಯೊಬ್ಬಳು ತೀರ ಸರಳ ಸ್ವಭಾವದವಳು. ಯಾರನ್ನಾದರೂ ಮುಕ್ತಮನಸ್ಸಿನಿಂದ ಮಾತನಾಡಿಸುವವಳು. ಒಂದು ದಿನ ಸಹಪಾಠಿಯೊಬ್ಬನೊಡನೆ ಮಾತನ್ನಾಡುತ್ತಿರುವದು, ಯಾವುದೋ ವಕ್ರಕಣ್ಣಿಗೆ ಗೋಚರಿಸಿತು. ಪಿಸು, ಪಿಸುಮಾತು, ಕುಚೋದ್ಯದ ಕಟಕಿಮಾತು, ಅವನ್ನು ಹೊತ್ತ ಫಲಕಗಳು ಅಲ್ಲಲ್ಲಿ ತಲೆ ಎತ್ತಿ ನಿಂತವು. ಸ್ನೇಹ ಮಿತಿಮೀರಿದೆ; ಅವಳು ತಾಯಿಯಾಗಲಿದ್ದಾಳೆ ಎಂದು ಒಬ್ಬ, ಗರ್ಭಪಾತ ಮಾಡಿಸಿಕೊಂಡಿದ್ದಾಳೆ ಎಂದು ಇನ್ನೊಬ್ಬ, ದೂರದ ಆಸ್ಪತ್ರೆಯಲ್ಲಿ ಬಾಣಂತನ ಮಾಡಿಸಿಕೊಂಡು ಮಗುವನ್ನು ಕಡಲಿಗೆ ಎಸೆದಿದ್ದಾಳೆ ಎಂದ ಮಗದೊಬ್ಬ. ಇದೆಲ್ಲ ವದಂತಿ,ಕೇವಲ ಒಂದೇ ತಿಂಗಳಿನಲ್ಲಿ ನಡೆದದ್ದು ಎಂಬುದು ಗಮನಾರ್ಹ ಸಂಗತಿ! ಎಂದೂ ಪತ್ರ ಬರೆಯದವರು ಕೂಡ,ಧಾರವಾಡ, ಮುಂಬಯಿಗಳಲ್ಲಿ ಓದುತ್ತಿದ್ದ ಸಹಪಾಠಿಗಳಿಗೆ ಈ ಹುರುಳಿಲ್ಲದ ಸಮಾಚಾರ ತಿಳಿಸದೇ ಇರಲಿಲ್ಲ. ಆದ್ದರಿಂದ ನಿನ್ನವನ ಬಗ್ಗೆ ಹೇಳಿದ್ದು ತೀರ ಅಲ್ಪ ಎಂದೆನಿಸಿತು. ಇನ್ನೂ ಮುಂದುವರಿದು, ನಾನು ನಿಮ್ಮ ಮನೆಯಲ್ಲೇ ವಾಸ್ತವ್ಯ ಹೂಡಿ ವಿದ್ಯಾಭ್ಯಾಸ ಮುಗಿಸಿದೆ, ಎಂಬ ಗಾಳಿ ಸುದ್ದಿ ಬಂದರೆ ಬೆದರಬೇಡ. ಭಾವಿ ಪತ್ನಿಗೆ ಅಮೇರಿಕೆಗೂ ಕರೆದುಕೊಂಡೇ ಹೋಗಿದ್ದ ಎಂದು ಸಿದ್ಧ ಮಾಡುವವರೂ ಇದ್ದಿರಬಹುದಲ್ಲವೇ? ನಿನಗೆ ಕೀಟಲೆ ಕೊಡಲೆಂದೇ ಇಲ್ಲಸಲ್ಲದ ಕಥೆಗಳನ್ನು ಹೇಳಿದರೆ, ಸ್ನೇಹಿತೆಯರೊಡನೆ ಪತ್ರ ಮುಂದರಿಸಲು ನಾನೇ ಸೂಚಿಸಿದ್ದೇನೆ, ಎಂದು ಮುಖಕ್ಕೆ ಹೊಡೆದಂತೆ ಹೇಳಿಬಿಡು!

---

೨೪ ಇತ್ತೀಚೆಗೆ ಉಳುವೆಯ ಶಾರದೆಯ ಪತ್ರ ಪರಿಚಯ ಬೆಳೆದಿದೆ. ತಮ್ಮೂರ ಪಕ್ಷಿಧಾಮ ನೋಡಲು ಬರಲೇಬೇಕು ಎಂದು ಪಟ್ಟು ಹಿಡಿದದ್ದರಿಂದ ಬಿಡುವು ಮಾಡಿಕೊಂಡು ಹೋದಾಗ ಅವಳು ಆಪ್ತರಲ್ಲಿ ಹೋಗಿದ್ದಳು. ಆದರೆ ಆತಿಥ್ಯಕ್ಕೆ ಏನೇನೂ ಕೊರತೆಯಾಗಲಿಲ್ಲ!

೨೮. ಪುತ್ರನ ಪಾಲನೆ

ಪ್ಲಾಸಿ, ೨೫-೩-೧೯೭೦

ವಿವಾಹವೆಂಬುದು ವಧು-ವರರ ಜೀವನವನ್ನೇ ಬದಲಿಸುವ ಘಟನೆಯಾದರೂ, ಬಹುಸಂಖ್ಯಾತರು ತಮ್ಮ ಬಾಳ ಸಂಗಾತಿಯ ಆಯ್ಕೆಯಲ್ಲಿ ಯಾವ ಮುಂದಾಲೋಚನೆ ತೋರಿಸದೇ ಇರುವದು ದುರ್ದೈವದ ಸಂಗತಿ. ಮುಂದೆ ಸಂತಾನದ ಬಗೆಗೂ ತಾರತಮ್ಯವಿಲ್ಲದ ಧೋರಣೆ ಮುಂದರಿಯುವದು ತೀರ ಸಾಮಾನ್ಯ. ಜೊಬನೇರದ ಶ್ರೀವಾಸ್ತವ ದಂಪತಿಗಳಿಗೆ ಬೇಡವಾದಾಗ ಹುಟ್ಟಿದ ಮಗಳು ಅಂಗವಿಕಲಳಾದಳಂತೆ. ಸಚಾನರ ಮಾನಸಿಕ ರೋಗಿ ಮಗಳು ಅವರಿಗೆ ಬೇಕಾಗಿರಲೇ ಇಲ್ಲವಂತೆ. ಇಂಥ ದುರಂತಗಳಿಗೆ, ಎಷ್ಟೋ ಸಲ-ಕಾರಣ, ಪತಿ-ಪತ್ನಿಯರಲ್ಲಿ ವಿಚಾರ-ವಿಮರ್ಶೆಯ ಅಭಾವವೆಂದು ಬೇರೆ ಹೇಳಬೇಕೇ? ಪರಿಚಿತ ದಂಪತಿಗಳ ವಿರಸ-ಸಂಸಾರದಲ್ಲಿ, ಮಾತು-ಕತೆ ನಿಂತಾಗ ಎರಡು ಬಾರಿ ಗರ್ಭಪಾತ ಮಾಡಿಸುವ ಸಂದರ್ಭ ಬಂದಿತಂತೆ! ಯಾವಾಗಲೂ ದೂರವಿರುವ ನಮ್ಮ ದಾಂಪತ್ಯದಲ್ಲಿ ಇಂಥ ಸಮಸ್ಯೆಗಳನ್ನು ಎದುರಿಸಬೇಕಾಗಿ ಬರಲಿಲ್ಲ! ಅಲ್ಲದೇ ಪತ್ರಮುಖೇನ ಹೆಚ್ಚು ಬಿಚ್ಚು ಮನಸ್ಸಿನಿಂದ ಅನಿಸಿಕೆಗಳನ್ನು ವಿನಿಮಯ ಮಾಡಿಕೊಳ್ಳಬಹುದು ಅನಿಸುತ್ತದೆ. ಅಂತೆಯೇ ಏಕಮೇವ ಪುತ್ರನ ಪಾಲನೆಯ ಬಗ್ಗೆ ಕಾಡುವ ಕೆಲ ಅಂಶಗಳ ಬಗ್ಗೆ ಬರೆಯುವ ಸಾಹಸಕ್ಕೆ ಇಳಿಯುವವನಿದ್ದೇನೆ.

ಯಾವ ಹರಕೆ ಹೊರದೇ, ವ್ರತ ಕೈಕೊಳ್ಳದೇ, ಜ್ಯೋತಿಷಿಯ ಅಭಿಪ್ರಾಯಪಡದೇ ಪುತ್ರನನ್ನು ಪಡೆದಿದ್ದೇವೆ. ಆತ, ಸಾಮಾನ್ಯ ಮಕ್ಕಳಿಗಿಂತ ಹೆಚ್ಚು ಜಾಣನಾಗಿರುವದರಿಂದ ಪಾಲನೆ-ಪೋಷಣೆಗಳಲ್ಲಿ ಚಿಕಿತ್ಸಕ-ಮುಂಜಾಗ್ರತೆಗಳು ಮುಖ್ಯ. ಪರಿಚಯು ಮತ್ತು ಪರಿಸರದವರು ಸದಾ ನಗುವ ಮುದ್ದು ಮಗುವನ್ನು ಎತ್ತಿಕೊಂಡು, ಮುದ್ದಾಡಿ, ಸಿಹಿ ತಿಂಡಿ ಕೊಟ್ಟು, ಗೆದ್ದುಕೊಂಡು ಬಿಡುತ್ತಾರೆ. ಹೀಗಾಗಿ ಮಕ್ಕಳಿಗೆ, ತಂದೆ-ತಾಯಿಗಳಿಗಿಂತ, ತಾತ್ಕಾಲಿಕ ಹಿತ-

ಚಿಂತಕರೇ ಹತ್ತಿರದವರಾಗಿ ಬಿಡುತ್ತಾರೆ. ಅಂತೆಯೇ ಹುಲಿಯಂತೆ ಗರ್ಜಿಸಿ, ಕೋತಿಯಂತೆ ಜಿಗಿದು, ನಾಯಿಯಂತೆ ಬೊಗಳಿ, ನವಿಲಿನಂತೆ ಕುಣಿದು, ಮುದ್ದು ಮುದ್ದಾಗಿ ಹಾಡಿ ಎಲ್ಲರಿಗೂ ಮಕ್ಕಳು ಮನರಂಜನೆ ಒದಗಿಸುತ್ತವೆ. ಸ್ನಾನ, ಊಟ, ನಿದ್ರೆಯ ವೇಳೆಗೂ ಮನೆಗೆ ಮರಳಲು ನಿರಾಕರಿಸುವ ಮಕ್ಕಳಿವೆ. ನೆರೆ ಮನೆಯ ಅಣ್ಣ, ಅಕ್ಕ, ಅಜ್ಜಿ, ಅಂಟಿಯೊಂದಿಗೆ ರಾತ್ರೆ ಕಳೆಯುತ್ತೇವೆಂದು ಪಟ್ಟು ಹಿಡಿಯುತ್ತವೆ. ಪಾಪ! ಚಿಕ್ಕ ಮಗು, ಅದಕ್ಕೇಕೆ ನಿರಾಸೆ ಮಾಡುವದು? ಎಂದು ಪಾಲಕರೂ ಸುಮ್ಮನಾಗಿ ಬಿಡುತ್ತಾರೆ. ಮುಂಬರುವ ಸಮಸ್ಯೆಗಳಿಗೆ ಇದು ರಣಕಹಳೆಯಾದೀತು, ಎಂಬ ಸೂಚನೆ ಹಲವು ಪಾಲಕರಿಗೆ ತಲುಪುವದೇ ಇಲ್ಲ.

ನಮ್ಮಂತೆ, ತಂದೆ-ತಾಯಿಗಳಿಬ್ಬರೂ ದುಡಿಯುವವರಿದ್ದರೆ, ಎದುರಿಸ ಬೇಕಾದ ಸಮಸ್ಯೆಗಳು ಅಸಂಖ್ಯಾತ. ಬೆಳೆಯುವ ಮಗುವಿಗೆ ಪೂರೈಸಬೇಕಾದ ಲಕ್ಷ್ಯ, ಸಮಯ, ಮಮತೆಗಳನ್ನು ಕೊಡಲಾಗುತ್ತಿಲ್ಲವೆಂಬ ಕೊರಗು ಸದಾ ಕಾಡುತ್ತಿರುತ್ತದೆ. ಬೆನ್ನಟ್ಟಿ ಬರುವ ಈ ತಪ್ಪುಗಾರಿಕೆಯ ಭಾವನೆಯಿಂದ ಬಚಾವು ಆಗಲು ಗಳಿಕೆಯ ದೊಡ್ಡ ಪಾಲನ್ನು ಮಗುವಿನ ಐಹಿಕ ಸವಲತ್ತುಗಳನ್ನು ಪೂರೈಸಲು ಬಳಸುತ್ತೇವೆ. ಕೇವಲ ಮೂರು ದಶಕಗಳ ಹಿಂದೆ ನಾನೂ ವಿಕಾಸ ನಂತೆ, ಮಗುವಿದ್ದಾಗ, ಪಾಲಕರು ಪೆಚ್ಚಿನ ಆಟಿಗೆ ಸೌಲಭ್ಯಗಳನ್ನು ಕೊಡ ಮಾಡದಿದ್ದರೂ ಆದರ-ಪ್ರೀತಿಗಳಿಗೆ ಏನೇನೂ ಕೊರತೆ ಮಾಡಿರಲಿಲ್ಲ. ಕಾಕಾ ರವರು ಆಗಾಗ ವಾಯು-ವಿಹಾರಕ್ಕೆ ಕರೆದೊಯ್ದು ಗುಡ್ಡ, ಬೆಟ್ಟ, ನದಿ, ಕೊಳ್ಳ ಗಳ ಪರಿಚಯ ಮಾಡಿಕೊಡುತ್ತಿದ್ದರು. ಹಿಂದಿರುಗಿ ಬರುವಷ್ಟರಲ್ಲಿ ಹಾಲು ಹಾಕಿದ ಗಂಜಿ, ಉಪ್ಪಿನಕಾಯಿಗಳ ಆಹಾರ ಸಿದ್ಧಪಡಿಸುತ್ತಿದ್ದರು-ಕಾಕಿಯವರು. ಮಜ್ಜಿಗೆ ಕಡೆಯುತ್ತಿರಲಿ, ಮಸಾಲೆ ರುಬ್ಬುತ್ತಿರಲಿ, ಅವರ ಹತ್ತಿರವೇ ಇದ್ದು, ಅವರ ಕಥೆ ಕೇಳುತ್ತಲೋ, ಹಾಡು ಆಲಿಸುತ್ತಲೋ ಇಲ್ಲವೆ ಹಿತ್ತಿಲಲ್ಲಿ ಸುತ್ತಾ ಡುತ್ತಲೋ ಇದ್ದರೆ ಬೇರೇನೂ ಬೇಕೆನಿಸುತ್ತಿರಲಿಲ್ಲ. ಇನ್ನೂ ಚಿಕ್ಕ ವಯಸ್ಸಿನಲ್ಲಿ ಅಂದರೆ ಬರೇ ಅಂಗಿತೊಟ್ಟು ಚಡ್ಡಿಯಿಲ್ಲದೇ ತಿರುಗುವ ಪ್ರಾಯದ ನೆನಪು ಇವು!

ಕೇವಲ ಒಂದೇ ತಲೆಮಾರಿನಲ್ಲಿ ಆದ ಪರಿವರ್ತನೆಗಳನ್ನು ಪರಾಮರ್ಶಿಸಿ ದೆಯಾ? ಮಗನಿಗೆ ಬಗೆ ಬಗೆಯ ಬಿಸ್ಕತ್ತು, ಬನ್, ಜಾಮ್, ಬೋರ್ನವಿಟ, ಹಾರ್ಲಿಕ್ಸುಗಳ ಬ್ರೆಕ್‌ಫಾಸ್ಟ್. ಸೊಗಸಿನ ಬಾಬಾಸೂಟ್‌ಗಳು, ಮೆಕ್ಯಾನೊ ಆಟಿಗೆ ಸೆಟ್‌ಗಳು. ಬೇಕೆಂದಾಗಲೆಲ್ಲ ಪೆಪ್ಪರಮಿಂಟ್, ಚಾಕೊಲೆಟ್, ಲಾಲಿಪೂಪ್

ಗಳು. ಆತ ಇಷ್ಟ ಪಡುವ ಅಡಿಗೆ ಮಾಡಿದರೆ, ಎರಡು ತುತ್ತು ಊಟ ಮಾಡಿ ಯಾನು! ಎಂಬ ಸಂಭ್ರಮ. ಬೇಕೆಂದೊಡನೆ ಸಿದ್ಧಮಾಡುವ ವ್ಯಂಜನ, ತಿಂಡಿಗಳು. ಓಡಾಡಲು ಪ್ರಾಮ್‌ಗಾಡಿ, ನಂತರ ಟ್ರಾಸಿಕಲ್. ಸಮವಸ್ತ್ರದ ಸೂಟು-ಬೂಟು ಗಳು. ಇವೆಲ್ಲವನ್ನು ವೇಳೆ ವೇಳೆಗೆ ಪೂರೈಸಲು ನಮಗೆ ಬಿಡುವು ಇಲ್ಲದ್ದರಿಂದ ಇನ್ನಿತರರ ನೆರವು ಬೇಕೇ ಬೇಕು. ಮಗನಿಗಾಗಿ ಏನೇನು ಮಾಡುತ್ತಿದ್ದೇವೆ, ಎಂದು ನೆಮ್ಮದಿ ಪಡಲು ಯತ್ನಿಸಿದರೂ ನಿಜವಾದ ಪಾಲಕರ ಜವಾಬ್ದಾರಿ ಗಳನ್ನು ನಿರ್ವಹಿಸುತ್ತಿಲ್ಲ, ಎಂಬ ಕಟುಸತ್ಯ ಕೊರೆಯುತ್ತಿರುತ್ತದೆ. ಮಕ್ಕಳು, ಗುರು-ಹಿರಿಯರ ಬೋಧನೆಗಳನ್ನು ಪಾಲಿಸಿ ಬೆಳೆಯುವದಿಲ್ಲ. ಬದಲಿಗೆ ಅವು ಪ್ರತಿ ನಿಮಿಷವೂ ಅನುಕರಣೆ ಮಾಡುತ್ತಲೇ ಇರುತ್ತವೆ. ಅಂತೆಯೇ ನಮ್ಮ ಪ್ರತಿ ವರ್ತನೆಯನ್ನೂ ಕಣ್ಣಲ್ಲಿ ಕಣ್ಣಿಟ್ಟು ಒರೆಗಲ್ಲಿಗೆ ಹಚ್ಚಿ ನೋಡುತ್ತಲೇ ಇರು ತ್ತವೆ. ಮಕ್ಕಳು ಎಂಥವರಾಗಬೇಕು, ಹೇಗೆ ಬೆಳೆಯಬೇಕು, ಎಂದು ಎಂಥ ಕನಸು ಕಟ್ಟುತ್ತವೆಯೋ ಅಂತಹವೇ ಆದರ್ಶ ಜೀವನವನ್ನು ಪಾಲಕರು ನಡೆಸ ಬೇಕಾಗುತ್ತದೆ. ಬೀಡಿ, ಸಿಗರೇಟು ಸೇದುವವರ ಮಕ್ಕಳಿಗೆ ಅದು ಕೆಟ್ಟ ಚಟ ಅನಿಸುವದೇ ಇಲ್ಲ. ಮದ್ಯ ಪಾನೀಯಗಳ ಮಕ್ಕಳಿಗೆ ಚಹಾ-ಕಾಫಿಯಂತೆ ಹೆಂಡವೂ ಒಂದು ಪಾನೀಯವೆನಿಸಿದರೆ ಆಶ್ಚರ್ಯವಿಲ್ಲ.

ನಾನು ಭಾರೀ ಕನಸುಗಾರ. ನಮ್ಮ ಮಗನು ನಮ್ಮಿಬ್ಬರನ್ನೂ ಮೀರಿಸ ಬೇಕೆಂಬ ಹಿರಿಯಾಸೆ. ಅಂತೆಯೇ ಅವನು ನೆರೆ-ಹೊರೆಯವರ ಸುಲಭ ಆದರ್ಶ ಗಳನ್ನು ತನ್ನದನ್ನಾಗಿ ಮಾಡಿಕೊಳ್ಳದಂತೆ ಎಚ್ಚರಿಕೆ ವಹಿಸುವದು ಅತಿಮುಖ್ಯ. ಐಷಾರಾಮ ಕೊಡುವದಕ್ಕಿಂತ ಮುಖ್ಯವಾಗಿ, ಸ್ನೇಹ-ಸಂಗಾತಿ-ಪಾಲನೆಗಳು ಸದಾಕಾಲ ಇರಲೇಬೇಕು. ನಮ್ಮಿಬ್ಬರ ಕಾರ್ಯಬಾಹುಳ್ಯದಿಂದಾಗಿ ಇದು ಸುಲಭ-ಸಾಧ್ಯವೆಂದು ಅನಿಸುವದಿಲ್ಲ. ಆದ್ದರಿಂದ ಒಂದು ಪರಿಹಾರ ಮಾರ್ಗವನ್ನು ಸೂಚಿಸುತ್ತಿದ್ದೇನೆ. ನಾವು ಹೋದಲ್ಲೆಲ್ಲ ಮಗನನ್ನು ಕರೆದೊಯ್ದು, ಒಮ್ಮೆ ಹಿಂದಿ, ಒಮ್ಮೆ ಬಂಗಾಲಿ, ಇನ್ನೊಮ್ಮೆ ಮರಾಠಿ ಶಾಲೆ ಸೇರಿಸಿ ಯಾವುದೂ ತನ್ನ ದನ್ನಾಗಿ ಮಾಡಿಕೊಳ್ಳಲು ಸಾಧ್ಯವಾಗದಂತೆ ಮಾಡುವದಕ್ಕಿಂತ, ನಾನು ಕಲಿತ ಹೊನ್ನಾವರದ-ಕಸಬಾ ಗಂಡು ಮಕ್ಕಳ ಶಾಲೆಗೆ ಸೇರಿಸಿದರೆ ಅವನಿಗೆ ಸಾಮಾನ್ಯ ಮಕ್ಕಳ ಸಹವಾಸ ಯಥೇಷ್ಟವಾಗಿ ಲಭಿಸುವದು. ಕಾಕಿಯವರಿಗಂತೂ ಈ ಮೊಮ್ಮಗನೆಂದರೆ ಪಂಚಪ್ರಾಣ. ತಂಗಿ ಮಾಲಿನಿಯಂತೂ ಮನೆಯ-ಮಕ್ಕಳ

ಪಡೆಯನ್ನು ನಿಯಂತ್ರಿಸುವದರಲ್ಲಿ ರಿಂಗ್ ಮಾಸ್ಟರ್ ಇದ್ದಂತೆ. ಬೇರಾರಿಗೂ ಇರದ ಈ ಸವಲತ್ತು ನಮಗೆ ಲಭ್ಯವಿರುವಾಗ, ಅದರ ಸದುಪಯೋಗ ಏಕೆ ಮಾಡಿಕೊಳ್ಳಬಾರದು? ಇದ್ದ ಒಬ್ಬನೇ ಮಗನನ್ನು ಬಿಟ್ಟಿರಲು ತಾಯಿಯ ಕರುಳು ಒಪ್ಪಲಿಕ್ಕಿಲ್ಲ. ಆದರೆ ಮಗನ ಭವಿತವ್ಯದ ದೃಷ್ಟಿಯಿಂದ ಹೀಗೆ ಮಾಡುವದೇ ಉಚಿತವೆನಿಸುತ್ತದೆ.೨೫ ನೀನು ಒಪ್ಪಿದರೆ ಮಾತ್ರ ಹೊನ್ನಾವರಕ್ಕೆ ಪತ್ರ ಬರೆದು ಹಾಕುತ್ತೇನೆ.

○

೨೫ ಈ ನಿರ್ಣಯದಿಂದಾಗಿ ವಿಕಾಸನು ಹತ್ತಿರ ಜೋಡಿ ಹನ್ನೊಂದಾಗಿ ಬೆಳೆದಿದ್ದರಿಂದ ನಗರದವರು ಮೇಲು, ಹಳ್ಳಿಯವರು ಕೀಳು ಎಂಬ ಭಾವನೆ ಇಲ್ಲ. ಕೊನ್‌ವೆಂಟ್ ಶಾಲೆಗೆ ಶರಣು ಹೋಗದ್ದರಿಂದ, ಕನ್ನಡ, ಕೊಂಕಣಿ, ಇಂಗ್ಲೀಷ್ ಭಾಷೆಗಳ ಮೇಲೆ ಸಮನಾದ ಪ್ರಭುತ್ವ ಪಡೆದಿದ್ದಾನೆ.

೨೯. ಕುರುಡಲ್ಲದ ಕಾಂಚಾಣ

ಪ್ಲಾಸಿ, ೧೭-೪-೧೯೭೦

ನಾವಿಬ್ಬರೂ ಸರಸ್ವತಿಯ ಭಕ್ತರಾದರೂ ಲಕ್ಷ್ಮಿಯನ್ನು ಕಡೆಗಾಣಿಸುವಂತಿಲ್ಲ. ಸಕಲ ಸನ್ಮಾನಗಳಿಂದ ಮನಃಪೂರ್ವಕವಾಗಿ ಮಾಡಿದ ಆದರೋಪಚಾರಗಳಿಂದ ಮಾತ್ರ ಆಕೆ ನಿರುಪದ್ರವಿಯಾಗಿ ಸದಾಕಾಲ ನಮ್ಮೊಂದಿಗೇ ಬೀಡು ಮಾಡಿಕೊಂಡಿರುತ್ತಾಳೆ. ವಿದ್ಯಾವಂತನು ಭಿಕಾರಿಯಾಗದಿದ್ದರೂ ಲಕ್ಷ್ಮೀದೇವಿ, ಲತ್ತೆ ಹೊಡೆದಾಗಲೆಲ್ಲ ಲಕ್ಷಾಧಿಪತಿಯೂ ಅನಾಥನಾಗಿ ಬಿಡುತ್ತಾನೆ. ಅಂತೆಯೇ ಕಾಸಿನ ಪತಿ ಕುಬೇರನ ಕೃಪಾಕಟಾಕ್ಷ ನಮ್ಮೊಂದಿಗೆ ಇರುವಂತೆ, ಮುಂದಾಲೋಚನೆಯಿಂದ ವರ್ತಿಸಬೇಕು. ನೌಕರಿ ಮಾಡುವದು ಹಣಕ್ಕಾಗಿ, ಹಣ ಇರುವದು ಖರ್ಚು ಮಾಡುವದಕ್ಕಾಗಿ ಎಂದು ವಾದಿಸುವವರಿದ್ದಾರೆ. ಆದರೆ ಈ ವಿಚಾರಧಾರೆ ನನಗೆ ಸಮ್ಮತವಿಲ್ಲ. ಚಾಕರಿ ಮಾಡುವದು ಕ್ರಿಯಾಶೀಲರಾಗಿರುವದಕ್ಕಾಗಿ. ಹಣ ಸಂಪಾದಿಸುವದು ಸಾಮಾಜಿಕ ಸಂರಕ್ಷಣೆಗಾಗಿ. ಅಂತೆಯೇ ಗಳಿಸುವ ಸಂಬಳಕ್ಕಿಂತ ಅದರಲ್ಲಿ ಎಷ್ಟು ಉಳಿತಾಯ ಮಾಡುತ್ತೇವೆ? ಎಂಬುದು ಮುಖ್ಯ. ಇಂದಿನ ನವ ಪೀಳಿಗೆಯವರು, ಆದಾಯಕ್ಕಿಂತ ಖರ್ಚಿನಲ್ಲಿ ಹೆಚ್ಚಳ ಮಾಡಿಕೊಂಡಿರುವದನ್ನು ರೂಢಿಸಿಕೊಂಡಿರುತ್ತಾರೆ. ಅಂತೆಯೇ ಸಕಲ ರೀತಿಯ ಸಾಲಗಳಿಗೆ ಕೈ ಮುಂದೆ ಮಾಡುತ್ತಲೇ ಇರುತ್ತಾರೆ. ಗೃಹ ನಿರ್ಮಾಣಕ್ಕೆ, ವಾಹನಕ್ಕೆ, ಮಕ್ಕಳ ಶಿಕ್ಷಣಕ್ಕೆ, ಪ್ರವಾಸಕ್ಕೆ, ಹಬ್ಬಕ್ಕೆ, ಕೊಡಮಾಡುವ ಸಾಲಗಳನ್ನೆಲ್ಲ ಪಡೆದಿರುತ್ತಾರೆ. ಹೆಚ್ಚಿನ ಸಂಬಳ ಈ ಸಾಲಕ್ಕೆ ಮೀಸಲಾಗಿರುವದರಿಂದ, ಇನ್ನಷ್ಟು ಕಾಲಕ್ಕೆ ಶರಣು ಹೋಗಲೇಬೇಕಾಗುತ್ತದೆ. ಇದು ಅಮೇರಿಕನ್ ಜೀವನ ಕ್ರಮ. ಆದರೆ ವ್ಯಾವಹಾರಿಕ ಪದ್ಧತಿ ಯಾವುದು ಗೊತ್ತೆ? ಹಣಕ್ಕಾಗಿ ಪರದಾಡದಂತಾಗುವಷ್ಟು ಉಳಿತಾಯ ಮಾಡುವದು. ಮೊದಲನೇ ರೂಪಾಯಿಯನ್ನು ಸಂಗ್ರಹಿಸುವದು ಕಷ್ಟ. ಆದರೆ ಅದನ್ನು ಹತ್ತು ರೂಪಾಯಿಗಳನ್ನಾಗಿ ಮಾಡಬಹುದು. ಅದರಂತೆ ಮೊದಲ ಹತ್ತು ರೂಪಾಯಿಗಳನ್ನು ಉಳಿಸಿದರೆ, ಅವನ್ನು ನೂರು ರೂಪಾಯಿಗಳನ್ನಾಗಿ ಮಾಡಬಹುದು. ಈ ರೀತಿಯಲ್ಲಿ ಉಳಿತಾಯ ಕಾರ್ಯಕ್ರಮ

ಹಾಕಿಕೊಂಡರೆ, ಸಹಸ್ರ ರೂಪಾಯಿಗಳನ್ನು ಸುಲಭವಾಗಿ ಸಂಗ್ರಹಿಸಬಹುದು. ಮಾನವನು ದಿನದ ಹದಿನೈದು ತಾಸು ಬೆನ್ನು ಮುರಿದು ದುಡಿಯಬಹುದು. ಆದರೆ ಠೇವಣಿ ಇಟ್ಟ ಹಣ, ತನ್ನ ಮಾಲಕನಿಗಾಗಿ ದಿನದ ಇಪ್ಪತ್ನಾಲ್ಕು ತಾಸೂ ಬಡ್ಡಿಯನ್ನು ದುಡಿಯುತ್ತಲೇ ಇರುತ್ತದೆ! ಅದೆಂತಹ ಸತ್ಯವಲ್ಲವೇ?

ಜೀವನಾವಶ್ಯಕತೆಗಳನ್ನು ತೀರ ಕಡಿಮೆ ಇಟ್ಟುಕೊಂಡರೆ, ಯಾವ ತಾಪತ್ರಯ ಗಳನ್ನೂ ಎದುರಿಸಬೇಕಾಗುವದಿಲ್ಲ ಎಂಬುದು ಅನುಭವದ ಮಾತು. ತಂದೆ ಬೆವರು ಸುರಿಸಿ, ಬೆನ್ನು ಮುರಿದು ಗಳಿಸಿದ ಹಣವನ್ನು ಬೇಕಾದಂತೆ ಖರ್ಚು ಮಾಡುವ ಅಧಿಕಾರ ನನಗಿಲ್ಲವೆಂದು ವಿದ್ಯಾರ್ಥಿ ಜೀವನದ ಉದ್ದಕ್ಕೂ ಎರಡು ಊಟ ಮತ್ತು ಎರಡು ಕಪ್ಪು ಹಾಲಿನಿಂದ ಹೊಟ್ಟೆಯನ್ನು ತಣ್ಣಗೆ ಇಟ್ಟು ಕೊಳ್ಳುವ ಪರಿಪಾಠ ಬೆಳೆಸಿಕೊಂಡೆ. ಬಟ್ಟೆ-ಬರೆಗಳ ಷೋಕಿ ಮೊದಲಿನಿಂದಲೂ ಇಲ್ಲ. ಸಿನೇಮ-ನಾಟಕಗಳು ಚಿಕ್ಕಂದಿನಿಂದಲೂ ಆಕರ್ಷಿಸಿರಲಿಲ್ಲ. ಕರ್ನಾಟಕ ಕಾಲೇಜಿನಲ್ಲಿ ಶಿಕ್ಷಕನಾದಾಗಲೂ ಇದೇ ಪರಂಪರೆಯನ್ನು ಮುಂದುವರಿಸಿದೆ. ಅಮೇರಿಕೆಯಲ್ಲಿ ಯಾವುದಕ್ಕೂ ಬಿಡುವು ಸಿಗದಿದ್ದರಿಂದ ಒಪ್ಪೊತ್ತಿನ ಊಟದ ಪರಿಪಾಠವನ್ನು ಜಾರಿಗೆ ತಂದೆ. ಪ್ಲಾಸಿಗೆ ಬಂದ ನಂತರ ತಿಂಗಳ ಖರ್ಚಿನಲ್ಲಿ ತುಂಬ ಕಡಿತವಾಗಿದೆ. ಇದರ ಗುಟ್ಟು ಹೇಳಲೇ? ಸಕ್ಕರೆ ಕಂಪನಿಯುವರು ವಿಶಾಲ ವಾದ ಬಂಗಲೆ, ನೀರು, ವಿದ್ಯುತ್‌ನ್ನು ಪುಕ್ಕಟೆಯಾಗಿ ಕೊಡಮಾಡಿದ್ದಾರೆ. ಕೈತೋಟದಲ್ಲಿ ಬೆಳೆಯುವ ಹೀರೇಕಾಯಿ, ಸೋರೇಕಾಯಿ, ಬೂದುಗುಂಬಳ, ತೊಂಡೆಕಾಯಿ, ಬಸಳೆಸೊಪ್ಪು, ಬಾಳೆಕಾಯಿಗಳಿಂದಾಗಿ ತರಕಾರಿಯ ಖರ್ಚಿಲ್ಲ. ಆಗೊಮ್ಮೆ ಈಗೊಮ್ಮೆ ಪೇರಲಹಣ್ಣು, ಮಾವಿನಹಣ್ಣು, ಬಾಳೆಹಣ್ಣುಗಳು ಕೈಗೆ ಹತ್ತುವದರಿಂದ ಹಣ್ಣು-ಹಂಪಲುಗಳ ಖರ್ಚೂ ಅಷ್ಟಾಗಿಲ್ಲ. ಕಾಲ್ನಡಿಗೆಯಲ್ಲಿ ವಿಶ್ವಾಸವಿಟ್ಟದ್ದರಿಂದ ವಾಹನದ ಖರ್ಚೂ ಇಲ್ಲ. ಹಾಲು, ಮೀನು, ಅಕ್ಕಿ, ಧೋಬಿ ಮತ್ತು ಪ್ರೇಯಸಿಗೆ ಬರೆಯುವ ದಿನಕ್ಕೊಂದು ಪತ್ರದ ಖರ್ಚು ನೋಡಿ ಕೊಂಡರಾಯಿತು! ಆದ್ದರಿಂದ ಬೆಂಗಳೂರು ಕೇಂದ್ರದ ಆಫೀಸಿಗೆ ಪ್ರತಿ ತಿಂಗಳು ಅರ್ಧ ಸಂಬಳವನ್ನು ನನ್ನ ಬ್ಯಾಂಕ್ ಖಾತೆಗೆ ಜಮಾ ಮಾಡಲು ಆದೇಶ ನೀಡಿ ದ್ದೇನೆ. ಇದರಿಂದಾಗಿ ಅನೇಕ ಸಹೋದ್ಯೋಗಿಗಳು ತಾವೂ ಪ್ಲಾಸಿಗೆ ಹೋಗಿದ್ದರೆ ಚೆನ್ನಾಗಿತ್ತು, ಎಂದು ಮರುಗುವಂತಾಗಿದೆ.

ಹಣದ ಉಳಿತಾಯ ಮಾಡುತ್ತಿರುವದು-ದೊಡ್ಡ ಬಂಗಲೆಯನ್ನು ಕಟ್ಟುವ

ದಕ್ಕಾಗಿ ಅಥವಾ ಕೊಳ್ಳುವದಕ್ಕಾಗಿ ಅಲ್ಲ. ಕಾರು ಕೊಂಡು ಅದರಲ್ಲಿ ಓಡಾಡ ಬೇಕೆಂಬ ಹಂಬಲವೂ ಇಲ್ಲ. ಐಹಿಕ ಸುಖೋಪಭೋಗದ ಯಾವ ಸಾಮಗ್ರಿಯೂ ಬೇಕಾಗಿಲ್ಲ. ಜೀವನವನ್ನು ಅರ್ಥವತ್ತಾಗಿ ಮಾಡಬೇಕು, ಎಂದು ಕಾಣುತ್ತಿರುವ ಕನಸನ್ನು ನನಸಾಗಿ ಮಾಡಲು ಈ ಉಳಿತಾಯ ಅವಶ್ಯ. ರಾಜಸ್ಥಾನದ ಕೃಷಿ ಕಾಲೇಜಿನ ಮೇಲಧಿಕಾರಿಗಳು ತೋರಿಸಿದ, ಸಣ್ಣತನ ಮನಸ್ಸಿಗೆ ಬಾರದೇ ರಾಜೀ ನಾಮೆ ನೀಡಿದೆ. ಈ ನೌಕರಿ ಐದು ವರ್ಷಕ್ಕೆಂದು ಜಾಹೀರ ಮಾಡಿದರೂ, ನಾನು ಎರಡೇ ವರ್ಷ ಸೇವೆ ಸಲ್ಲಿಸಿ ನಿವೃತ್ತನಾಗುತ್ತೇನೆ ಎಂದು ಆಶ್ವಾಸನೆ ಕೊಟ್ಟಿದ್ದು ನೆನಪಿದೆಯೇ? ಶೇವಣಿ ನಿರೀಕ್ಷಿಸಿದ್ದಕ್ಕಿಂತ ವೇಗವಾಗಿ ಬೆಳೆಯಲಾರಂಭಿ ಸಿದ್ದರಿಂದ, ಸೂಚಿಸಿದ್ದಕ್ಕಿಂತ ಮುಂಚಿತವಾಗಿಯೇ ಬಿಡುಗಡೆ ಹೊಂದಿದರೆ ಅಚ್ಚರಿ ಪಡಬೇಡ. ಮುಂದೇನು? ಎಂಬ ಪ್ರಶ್ನೆ ಎಂದೂ ಕಾಡಲೇ ಇಲ್ಲ. ವಿದ್ಯೆ, ಬುದ್ಧಿ, ಹುಮ್ಮಸ್ಸು, ಹವ್ಯಾಸಗಳು ಇರುವಾಗ ಭವಿಷ್ಯವನ್ನು ಎದುರಿಸಲು ಏಕೆ ಅಂಜಬೇಕು? ನನ್ನ ಪ್ರಾಧ್ಯಾಪಕರಾದ ಪ್ರೊ. ಮೆಕ್ ಎಂಡ್ರೂಸರು, ತಾವು ನಿವೃತ್ತ ರಾದ ನಂತರ, ತಮ್ಮ ಹವ್ಯಾಸಗಳತ್ತ ಗಮನಕೊಡಲು ಸಾಧ್ಯವಾಯಿತೆಂದು, ಒಮ್ಮೆ ಬರೆದಿದ್ದರು. ಅತ್ಯಂತ ಅಚ್ಚುಮೆಚ್ಚಿನ ಛಾಯಾಗ್ರಹಣದತ್ತ ಸಕಲ ಸಮಯುವನ್ನು ತೊಡಗಿಸಲು ಸಾಧ್ಯವಾದರೆ, ಅದಕ್ಕೂ ಅಭಿಮಾನದ ವಿಷಯ ಬೇರೊಂದು ಉಂಟೇ? ನನ್ನ ಬರವಣಿಗೆಗೆ ಬೇಡಿಕೆ ಬಂದರೆ ಅದನ್ನೂ ಅಲ್ಪ ಸ್ವಲ್ಪ ಮಾಡಬೇಕೆಂದಿರುವೆ.

ನಿನ್ನ ಸಂಬಳವನ್ನು ಲಪಟಾಯಿಸುವದಕ್ಕಾಗಿ, ಇದು ಮುನ್ನುಡಿ ಎಂದು ತಿಳಿದಿರಬೇಕಲ್ಲವೇ? ಹಾಗಲ್ಲ ಮಾರಾಯತಿ! ಸಂಸಾರ ಪ್ರಾರಂಭಿಸುವಾಗ ನಿನ್ನ ಉತ್ಪನ್ನವನ್ನು ಗಣನೆಗೆ ತೆಗೆದುಕೊಂಡೇ ಇರಲಿಲ್ಲ. ಮುಂದೆಯೂ ಈ ಧೋರಣೆ ಬದಲಿಸುವ ಅವಶ್ಯಕತೆ ಬೀಳಲಿಕ್ಕಿಲ್ಲವೆಂಬ ಆತ್ಮವಿಶ್ವಾಸವಿದೆ. ತಿಂಗಳು ಪ್ರಾರಂಭ ವಾದ ಒಂದೆರಡು ದಿನಗಳಲ್ಲಿಯೇ ಕೈ ಬರಿದಾಗುತ್ತದೆ ಎಂದು ನೊಂದು ನೀನು ದೂರಿ ಕೊಂಡದ್ದರಿಂದ ಇಷ್ಟೊಂದು ತತ್ವಜ್ಞಾನ ಬರೆಯುವ ಸಾಹಸ ಮಾಡಿದೆ. ನಿನ್ನ ಹಣಕಾಸಿನ ಸಮಸ್ಯೆಯನ್ನು ಅತ್ಯಂತ ಸುಲಭವಾಗಿ ಬಗೆಹರಿಸಬಹುದೆಂದು ಅನಿಸು ತ್ತದೆ. ಆದಾಯದ ಶೇಕಡಾ ಎಷ್ಟು ಹಣ ಖರ್ಚು ಮಾಡುವದು? ಎಂಬ ನಿರ್ಧಾರಕ್ಕೆ ಬರಬೇಕು. ಮನಸ್ಸಿಗೆ ಬಂದಾಗೊಮ್ಮೆ ಚೆಕ್ ಮೇಲೆ ಸಹಿ ಮಾಡುವ ಚಟ ಬಿಟ್ಟು, ತಿಂಗಳಿಗೊಮ್ಮೆ ಒಂದೇ ಒಂದು ಚೆಕ್ ಬಳಸಿಕೊಳ್ಳಬೇಕು.

ಇಷ್ಟಾಗಿಯೂ ಲಕ್ಷ್ಮೀ ಮೆಚ್ಚದಿದ್ದರೆ, ಶೇಖರಣೆಯ ಖಾತೆ ಪ್ರಾರಂಭಿಸು. ವಿನಂತಿಸಿ ಕೊಂಡಷ್ಟು ಮೊತ್ತವನ್ನು ಬ್ಯಾಂಕಿನವರು ಪ್ರತಿ ತಿಂಗಳು ಸಂಬಳದಿಂದ ಈ ಲೆಕ್ಕಕ್ಕೆ ಜಮಾ ಮಾಡುತ್ತಾರಲ್ಲದೇ ಅದರ ಮೇಲೆ ಚಕ್ರಬಡ್ಡಿ ಕೊಡುವ ವ್ಯವಸ್ಥೆಯೂ ಇದೆ. ಈ ಕಾಸು ಭರದಿಂದ ಬೆಳೆಯುವದನ್ನು ಅರಿತು ಅಚ್ಚರಿಪಡುವಿ. ಅಲ್ಲದೇ ಖರ್ಚಿನ ಮೇಲೆ ಕಡಿವಾಣ ಬೀಳುವದು. ಸಹೋದ್ಯೋಗಿಗಳಂತೆ ರೇಶ್ಮೆ ಸೀರೆ, ಆಭರಣಗಳಲ್ಲಿ ನೀನು ವಿಶ್ವಾಸವಿಡದಿದ್ದರೂ, ನೌಕರಿ ಮಾಡುವದರಿಂದ, ನಾಲ್ಕು ಕಾಸು ಸಂಗ್ರಹವಾಗುತ್ತದೆಯೆಂಬ ನೆಮ್ಮದಿಯಾದರೂ ಬೇಡವೇ?

○

೩೦. ಹೆಣ್ಣಾಳು

ಪ್ಲಾಸಿ, ೩೦-೪-೧೯೭೦

ನಮ್ಮ ದೇಶದ ಬಡತನದ ದರ್ಶನ ಪಡೆಯಬೇಕಿದ್ದರೆ ಬಂಗಾಲಕ್ಕೇ ಬರಬೇಕು. ಬೇರೆ ರಾಜ್ಯಗಳಲ್ಲಿ ವಾಸಕ್ಕೆ ದರಿದ್ರರಿಗೆ ಗುಡಿಸಲು ಇರಲಿಕ್ಕಿಲ್ಲ. ಹೊಟ್ಟೆ ತುಂಬ ಕೂಳು ಇರಲಿಕ್ಕಿಲ್ಲ. ಇಲ್ಲಿಯವರಿಗೆ ಮರ್ಯಾದೆ ಮುಚ್ಚಿಕೊಳ್ಳುವಷ್ಟು ಸರಿಯಾದ ಬಟ್ಟೆಗಳಿಲ್ಲ. ಹೆಣ್ಣುತನ ಮರೆಮಾಡುವಷ್ಟು ಅರಿವೆಯನ್ನು ಅವರಿಂದ ಕೊಳ್ಳಲಾಗದಿರುವದು ತೀರ ಶೋಚನೀಯ. ಪೂರ್ವಬಂಗಾಲದಿಂದ ತೀರ ನಿರಾಶ್ರಿತರೆಂದು ವಲಸೆ ಬಂದವರು ಸಂತಾಲ, ರಾಜವಾಡ, ಬುನೋ ಆದಿವಾಸಿಗಳ ಹೆಂಗಳೆಯರು ಬಚ್ಚಲಲ್ಲಿ ಬಳಸುವ ಟಾವೆಲ್, ಅಂಗವಸ್ತ್ರದಷ್ಟು ಕಿರಿಬಟ್ಟೆಯನ್ನು ಉಡುವರು. ಅದೂ ಪಾರದರ್ಶಕವೆನಿಸುವಷ್ಟು ಜಾಳು. ಉತ್ತರಕನ್ನಡ ಜಿಲ್ಲೆಯ ಹಾಲಕ್ಕಿ ಗೌಡತಿಯರು, ಗ್ರಾಮೊಕ್ಕಲ ಹೆಂಗಳೆಯರು ಕುಪ್ಪಸ ತೊಡದಿದ್ದರೂ ಅಂದವಾಗಿ ಮೈಮುಚ್ಚಿಕೊಳ್ಳುತ್ತಾರಷ್ಟೆ. ಅಲ್ಲದೇ ಒಳಕಚ್ಚೆ ತೊಡಲು ಮರೆಯುವದಿಲ್ಲ. ಇವೆರಡೂ ಇಲ್ಲದ ಈ ಹೆಣ್ಣುಗಳು ಅರೆನಗ್ನರಾಗಿಯೇ ಜೀವನ ನಡೆಸುತ್ತಾರೆ.

ಬೆಳೆಯುತ್ತಿರುವ ಕಬ್ಬನ್ನು ಬೇಸಿಗೆಯ ಉರಿಬಿಸಿಲಿನಿಂದ ಸಂರಕ್ಷಿಸಲು, ಸಕ್ಕರೆ ಕಂಪನಿಯವರು ಪಂಪುಗಳಿಂದ ಗಂಗೆಯ ನೀರನ್ನು ಧಾರಾಳವಾಗಿ ಹೊಲಗಳಿಗೆ ಹರಿಯಬಿಡುತ್ತಾರೆ. ಕಬ್ಬಿನ ಕೀಟಗಳಿಗೆ ಇದು ಯೋಗ್ಯವಾದ ವಾತಾವರಣವಾಗಿದ್ದರಿಂದ ಅವುಗಳ ಸಂಖ್ಯೆ ಭರದಿಂದ ಬೆಳೆಯಲಾರಂಭಿಸಿದೆ. ಕೀಟಗಳಿಗೆ ಆಹುತಿಯಾದ ಕಬ್ಬುಗಳನ್ನು ಕಡಿಯಲು ಹೆಣ್ಣಾಳುಗಳನ್ನು ನೇಮಿಸಿಕೊಂಡಿದ್ದಾರೆ. ನಸುಕಿನಲ್ಲಿಯೇ ತಮ್ಮ ದೊಡ್ಡಿಗಳಿಂದ ಹೊಲಕ್ಕೆ ಹೋಗಿ, ಕೀಟಹತ್ತಿದ ಕಬ್ಬುಗಳನ್ನು ಕಡಿದು, ಅವನ್ನು ರಾಶಿ ಮಾಡಿ ಹೊತ್ತು ಸುಡುವ ಬಿಸಿಲಲ್ಲಿ ನಮ್ಮ ಸಂಶೋಧನಾಲಯಕ್ಕೆ ತರಬೇಕು. ಬೇಲಡಾಂಗಾ, ಚಾಕಧಾ ಮುಂತಾದ ಹಳ್ಳಿ

ಗಳು ಪ್ಲಾಸಿಯಿಂದ ಎಂಟು ಹತ್ತು ಕಿಲೋಮೀಟರ ದೂರದಲ್ಲಿವೆ. ಈ ಹೆಣ್ಣಾಳು ಗಳು ತರುವ ಭಾರವನ್ನು ನಗರದ ಹಮಾಲನ ಹತ್ತಿರ ಹೊರಿಸಿ ತರಿಸಿದ್ದರೆ, ಸಹಜ ವಾಗಿಯೇ ಹತ್ತು ಹದಿನೈದು ರೂಪಾಯಿಗಳನ್ನು ತೆತ್ತಬೇಕಾಗುತ್ತಿತ್ತು. ಅವರೆ ಈ ಹೆಣ್ಣಾಳುಗಳಿಗೆ ಕಂಪನಿಯವರು ಕೊಡುವ ಕೂಲಿ ಒಂದು ರೂಪಾಯಿಗಿಂತ ಕಡಿಮೆ ಎಂದರೆ ನಂಬುವಿಯಾ? ಅವರು ತಂದ ಕಬ್ಬಿನಿಂದ ಎಷ್ಟು ಕೀಟಗಳು ಹೊರ ಟವು? ಎಂದು ನಾವು ಶಿಫಾರಸ್ಸು ಪತ್ರ ಕೊಟ್ಟಾಗಅದಕ್ಕೆ ಅನುಗುಣವಾಗಿ ಅವರಿಗೆ ವೇತನ ಕೊಡಲಾಗುತ್ತದೆ ಈ ಸಂಖ್ಯೆಯನ್ನು ಹಿಗ್ಗಿಸಲು ಆಗುವದಿಲ್ಲ. ಹಾಗೆ ಮಾಡಿದರೆ ನಮ್ಮ ಜೀವಿ ನಿಯಂತ್ರಣ-ಕಾರ್ಯಕ್ರಮ ಯಶಸ್ವಿಯಾಗಿಲ್ಲ ಎಂದು ನಾವೇ ಒಪ್ಪಿಕೊಂಡಂತೆ ಆಗುತ್ತದೆ. ಆದ್ದರಿಂದ ತೀರ ಕಡಿಮೆ ಕೀಟ ಇದ್ದ ಹೊರೆ ತಂದವರಿಗೆ ನಮ್ಮ ಬೊಕ್ಕಸದಿಂದ ಸಂಬಳದ ಸಹಾಯ ಮಾಡುವ ಏರ್ಪಾಡು ಮಾಡಿದ್ದೇನೆ.

ಇಪ್ಪತ್ತು ಮೂವತ್ತು ಹೆಣ್ಣಾಳುಗಳು ತಲೆಯ ಮೇಲೆ ಕಬ್ಬಿನ ಹೊರೆ ಹೊತ್ತು ಬರುವಾಗ ಯಾವುದೋ ಧಾರ್ಮಿಕ ದಿನಾಚರಣೆ ಇದ್ದಿರಬಹುದೆಂದು ಭಾಸವಾಗುತ್ತದೆ. ಸಂಶೋಧನಾಲಯದ ಎದುರಿಗಿರುವ ವಿಸ್ತಾರವಾದ ಬಯಲಿ ನಲ್ಲಿ ತರಕಾರಿ ಮಾರುವವರಂತೆ ಕುಳಿತು ಕೈಗತ್ತಿಯಿಂದ ಕಬ್ಬನ್ನು ಸೀಳಿ ಸಿಕ್ಕ ಕೀಟ ಗಳನ್ನು ನಾವು ಪೂರೈಸಿದ ಡಬ್ಬಿಗೆ ಸೇರಿಸುವಾಗ ಅಯ್ಯೋ! ಅನಿಸದಿರದು. ಅವರು ಮಾತ್ರ ತಮ್ಮ ಪಾಡಿಗೆ ಹರಟುತ್ತಲೋ, ಮೆಲುದನಿಯಲ್ಲಿ ಹಾಡುತ್ತಲೋ ಕಾರ್ಯ ಮಗ್ನರಾಗಿರುತ್ತಾರೆ. ಅವರೆಲ್ಲರಿಗೆ ಹೊಟ್ಟೆತುಂಬ ಊಟವಿಲ್ಲ, ಎಂಬುದು ಸರ್ವ ವಿದಿತ. ಒಬ್ಬಳಂತೂ ಯೌವನದಲ್ಲೇ ಮುದುಕಿಯಾಗಿ ಬಿಟ್ಟಿದ್ದಾಳೆ. ನಿನ್ನೆಯಿಂದ ಊಟವಿಲ್ಲ, ಇಂದು ಕೈಗೆ ಬರುವ ಒಂದು ರೂಪಾಯಿಯ ಅಕ್ಕಿ ಕೊಂಡೊಯ್ದು ಗಂಜಿ ಮಾಡಿ ಕುಡಿಯಬೇಕು ಎಂದು ಅವಳು ಹೇಳಿದಾಗ ಕರುಳು ಕಿತ್ತು ಬರುವಂತಾಯಿತು.ಪ್ರಧಾನಿಗೆ ಕೇಶಾಲಂಕಾರ ಮಾಡುವವಳಿಗೆ ಸಹಸ್ರಾರು ರೂಪಾಯಿ ಸಂಬಳ ತೆರುವ ದೇಶದಲ್ಲಿ ಕಠಿಣ ದುಡಿಮೆಯ ಹೆಣ್ಣಾಳಿಗೆ ದಿನಕ್ಕೊಂದೇ ರೂಪಾಯಿ ಗಳಿಕೆ. ದುಡಿಮೆಯಾಗದ ದಿನ ಅದೂ ಇಲ್ಲ. ಅದೆಂತಹ ಸಮತಾ ವಾದದ ದೇಶ ನಮ್ಮದು! ಚೊಚ್ಚಲು ಬಾಣಂತಿಯೊಬ್ಬಳು ತನ್ನ ಹಸುಗೂಸನ್ನು ಅತ್ತೆಯ ಹತ್ತಿರ ಬಿಟ್ಟು ಬಂದಿದ್ದಾಳಂತೆ. ನಿಸರ್ಗದತ್ತವಾಗಿ ಬಂದ ತಾಯ ಹಾಲೂ ಹೀರುವ ಭಾಗ್ಯ ಆ ಬಾಲೆಯ ಹಣೆಯಲ್ಲಿ ಬರೆದಿಲ್ಲವೆಂದು ತೋರಿತು. ಪನಿಪನಿ

ಯಾಗಿ ತೊಟ್ಟಿಕ್ಕುವ ಹಾಲಿನಿಂದ ತಾಯ ಸೀರೆ ನೆನೆಯುತ್ತಿದ್ದಿತು.

ಈ ದುರ್ದೈವಿಗಳಿಗಾಗಿ ನನ್ನಿಂದ ಹೆಚ್ಚೇನೂ ಮಾಡಲಾಗುವದಿಲ್ಲವಲ್ಲ! ಎಂದು ಕೈ ಹಿಸುಕಿಕೊಳ್ಳುತ್ತಿರುತ್ತೇನೆ. ಆದರೂ ಈ ಹೆಣ್ಣಾಳುಗಳು ಈ ಕೀಟ ಬಾಬು (ಪೋಕಾ ಬಾಬು) ಒಳ್ಳೆಯವನೆಂದು ತಮ್ಮ ತಂಡದವರಿಗೆಲ್ಲ ಸಾರಿದ್ದಾರೆ. ಎಂದಾದರೊಮ್ಮೆ ಹಿತ್ತಲಲ್ಲಿ ಬೆಳೆದ ಬಾಳೆಗೊನೆಯಿಂದ ಬಾಳೆಕಾಯಿ ಹಂಚುತ್ತೇನೆ. ಹಿಂದಿರುಗಿಸುವ ತ್ರಾಣ ಅವರಿಗಿಲ್ಲ ಎಂದರಿತೇ ಒಂದೆರಡು ರೂಪಾಯಿ 'ಸಾಲ' ಕೊಡುತ್ತೇನೆ. ಅವರ ಕೆಲಸ ಮುಗಿದ ನಂತರ ಕೊಮಲಾ, ಬಿಮಲಾ, ಗೊಂಗಾ (ಕಮಲಾ, ವಿಮಲಾ, ಗಂಗಾ) ಎಂದೆಲ್ಲ ಅವರ ಹೆಸರುಗಳನ್ನು ಕರೆದಾಗ, ನವ ಯುವತಿಯರಂತೆ ಕಿಸಿಕಿಸಿ ನಗುತ್ತ ಕೀಟಗಳೊಂದಿಗೆ ಸುತ್ತುವರಿದು ನಿಂತಿರುತ್ತಾರೆ. ತಮ್ಮ ಹೆಸರುಗಳನ್ನು ಟೈಪ್ ಮಾಡುತ್ತಿರುವದನ್ನು ಬೆರಗಾಗಿ ನೋಡುತ್ತ ನಿಂತಿರುತ್ತಾರೆ. ಕೀಟ ಸಂಗ್ರಹದ ಯಾದಿಯನ್ನು ಅವರ ಮುಖ್ಯಸ್ಥಳ ಕೈಗೆ ಕೊಟ್ಟಾಗ, 'ನಾಳೆ ತಿರುಗಿ ಬರುತ್ತೇವೆ ಬಾಬು' ಎಂದು ಶಾಲಾ ವಿದ್ಯಾರ್ಥಿಗಳಂತೆ ಕಂಪನಿಯ ಖಜಾಂಚಿ ಆಫೀಸಿಗೆ ಗಂಜಿಗಾಗಿ ಕಾಸು ಪಡೆಯಲು ಧಾವಿಸುತ್ತಾರೆ.

ಅನುಕಂಪವೆಲ್ಲ ಸ್ತ್ರೀಯರಿಗೇ ಮೀಸಲು, ಎಂದು ತಿಳಿಯಬೇಡ. ಒಂದು ಸಂಜೆ ನನ್ನ ಧೋಬಿ, "ಇಂದು ಏನೇನೂ ಸಂಪಾದನೆಯಾಗಲಿಲ್ಲ. ಆದ್ದರಿಂದ ಸ್ವಲ್ಪ ಹಣ ಮುಂಗಡವಾಗಿ ಕೊಡಿ ಬಾಬು" ಎಂದು ಅಂಗಲಾಚಿದ. ಧನಸಹಾಯ ಮಾಡುವದು ವ್ಯಾವಹಾರಿಕವಾಗಿ ಸರಿಯಲ್ಲವೆನಿಸಿದರೂ ಕರುಣೆ ತಿರುಗಿ ಹೊರಟವನಿಗೆ ಕೂಗಿ ಕರೆದು ಎರಡು ರೂಪಾಯಿಗಳನ್ನು ಕೈಗೆ ಹಾಕುವಂತೆ ಮಾಡಿತು. ಕೃತಜ್ಞತೆಯಿಂದ ಅವನ ಮುಖ ಅರಳಿತು. 'ನಿಮ್ಮಿಂದ ಮಾತ್ರ ನೆರವು ಬಂದೀತೆಂದು ಖಾತ್ರಿಯಿಂದ ಬಂದೆ. ನಾಲ್ವರು ಮಕ್ಕಳು, ಪತ್ನಿ, ಮುದಿತಾಯಿ, ಇವರ ಹೊಟ್ಟೆ ತಂಪಾಗಿಟ್ಟ ಪುಣ್ಯ ನಿಮಗೆ ಬರುತ್ತದೆ' ಎಂದು ಪ್ರಯತ್ನಪೂರ್ವಕ ನಗೆಲೆತ್ನಿಸಿ ಹೊರಟುಹೋದ.

ಒಂದುದಿನ ಸಂಶೋಧನಾ ಸಹಾಯಕ ಹುಸೇನ್‌ನ ಮನೆಯಲ್ಲಿ ಮಗುವಿಗೆ ಹೆಸರಿಡುವ ಕಾರ್ಯಕ್ರಮವಿದ್ದುದರಿಂದ, ಊಟದ ಡಬ್ಬಿಯಿಲ್ಲದೇ ಬಂದಿದ್ದ. ಸುಡುಬಿಸಿಲಲ್ಲಿ ಸಾಯಕಲ್ ತುಳಿಯುತ್ತ ಹತ್ತು ಕಿಲೋಮೀಟರ ದೂರದ ಮನೆಗೆ ಹೋಗಿ ಹಿಂದಿರುಗುವದರಲ್ಲಿ ಜಾಣತನವಿಲ್ಲವೆಂದಾಗ, ಒಪ್ಪಿಕೊಂಡ. ಈ ಕುಗ್ರಾಮದಲ್ಲಿ ಹೊಟೇಲ್ ಎಲ್ಲಿಂದ ಬರಬೇಕು? ಹೊಟ್ಟೆಯ ಗತಿಯೇನು? ಎಂದು

ಆತ ತಲೆ ಕೆರೆದುಕೊಳ್ಳುತ್ತಿರುವಾಗಲೇ 'ಇಂದು ನಾವಿಬ್ಬರೂ ಕೂಡಿಯೇ ಊಟ ಮಾಡೋಣ' ಎಂದು ಅವನನ್ನು ಮನೆಗೆ ಕರೆದುಕೊಂಡು ಬಂದೆ. ಅವನಿಗೆ ಮುಜುಗರವಾದರೂ ಇಂಥ ಮೇಲಧಿಕಾರಿಗಳೂ ಇರುತ್ತಾರೆಯೇ! ಎಂದು ವಿಸ್ಮಯಪಡುವಂತೆ ಆಯಿತು. ಅಡಿಗೆ ಮುಗಿಸಿಯೇ ಆಫೀಸಿಗೆ ಹೋಗುವದು ಪರಿಪಾಠ. ಆದ್ದರಿಂದ ಇನ್ನೊಮ್ಮೆ ಅಡಿಗೆ ಮಾಡುವ ಗೋಜಿಗೆ ಹೋಗದೇ ಮಾಡಿದ್ದರಲ್ಲಿ ಅರ್ಧ ಅವನಿಗೆ ಕೊಡಮಾಡಿ, ಜೊತೆಗೆ ಬಾಳೆಹಣ್ಣು, ತುಪ್ಪ, ಸಕ್ಕರೆ, ಒಂದು ಗ್ಲಾಸು ಹಾಲು ಕೊಟ್ಟೆ. ಇದರಿಂದ ಅವನ ಹೊಟ್ಟೆ ತುಂಬಿ ತೇಗುವಂತೆ ಆಗಿರಲಿಕ್ಕಿಲ್ಲ. ಆದರೆ ಸಹೋದ್ಯೋಗಿಯೊಡನೆ, ಮಾಡಿದ ಅಡಿಗೆಯನ್ನು ಪಾಲುಗೊಳ್ಳುವ ಹೃದಯವಂತಿಕೆ ತೋರಿಸಿದ ನೆಮ್ಮದಿ ನನ್ನದಾಯಿತು. ದೊಡ್ಡ ಹೊಟೇಲಿನಲ್ಲಿ ನೂರಾರು ರೂಪಾಯಿ ಖರ್ಚು ಮಾಡಿ ಭೋಜನಕೂಟ ಏರ್ಪಡಿಸುವದಕ್ಕಿಂತ ಅವಶ್ಯಕತೆಯಿದ್ದಾಗ ಈ ಪಾಲುಗಾರಿಗೆ ಹೆಚ್ಚು ಮಾನವೀಯ, ಎಂದು ನನ್ನ ಕಲ್ಪನೆ.

ನಿನ್ನೆ ಅದೇ ಹುಸೇನನ ಹಳ್ಳಿಯಲ್ಲಿ ಬೆಂಕಿಯ ಆಕ್ರೋಶಕ್ಕೆ ನಾಲವತ್ತು ಮನೆಗಳು ಆಹುತಿಯಾದವಂತೆ. ಇನ್ನು ಜಡಿಮಳೆ ಸುರಿಯಲಾರಂಭಿಸುವ ಮುನ್ನವೇ, ಆರುನೂರು ರೂಪಾಯಿ ಖರ್ಚು ಮಾಡಿದರೆ, ನಮ್ಮವರ ಎರಡು ಮನೆ ಉಳಿಸಿಕೊಳ್ಳಬಹುದು. ಆದ್ದರಿಂದ ಐವತ್ತು ರೂಪಾಯಿ ಮುಂಗಡವಾಗಿ ಕೊಡಲು ಸಾಧ್ಯವೇ? ಎಂದು ಇಂದು ವಿಚಾರಿಸಿದ. ಈ ಹಣ ಹಿಂದಿರುಗಿ ಬರುವ ಸಾಧ್ಯತೆ ತೀರ ಕಡಿಮೆ ಎನಿಸಿದರೂ, ಅಭಾಗ್ಯರಿಗೆ ನೆರವಾಗುವದೇ ಸರಿಯೆಂದು ಕೇಳಿದಷ್ಟು ಹಣ ಕೊಟ್ಟೆ. ಪರರ ಹಣ ಮುಳುಗಿಸುವದೇ ಧ್ಯೇಯವಾಗಿರುವದಿಲ್ಲ ಎಂದು ಬಡ ಧೋಬಿ ಸಿದ್ಧಮಾಡಿ ತೋರಿಸಿದ. ನನ್ನ ಎಂಟು ಬಟ್ಟೆಗಳನ್ನು ತೊಳೆದು ಹಿಂದಿರುಗಿಸುತ್ತಿದ್ದಂತೆ, 'ಬಾಬು, ನಿಮ್ಮಿಂದ ಪಡೆದ ಎರಡು ರೂಪಾಯಿಗಳ ಹೊಂದಾಣಿಕೆಯಾಯಿತು' ಎಂದು ತಾನಾಗಿ ಹೇಳಿದಾಗ, ನನ್ನ ಕಣ್ಣು ಹನಿಗೂಡಿತ್ತು. ಅವನು ವಿದ್ಯಾವಂತನಿರಲಿಕ್ಕಿಲ್ಲ. ಆದರೆ ಸುಸಂಸ್ಕೃತ.

○

೩೧. ಅಭಿಮಾನಿ

ಪ್ಲಾಸಿ, ೨೭-೫-೧೯೭೦

ನಾವು ಅಭಿಮಾನಿಗಳಾಗದಿದ್ದರೆ ಇನ್ನಿತರರು ಗೌರವದಿಂದ ಹೇಗೆ ಕಂಡಾರು? ನಂ ನಮ್ಮ ಆತ್ಮಕ್ಕೆ ಒಪ್ಪಿಗೆಯಾಗುವಂತೆ ಜೀವನ ನಡೆಸಿದರೆ ಬೇರಾರಿಗೂ ಸೊಪ್ಪು ಹಾಕಬೇಕಾದದ್ದೇ ಇಲ್ಲ. ಪ್ರಜಾಸತ್ತೆಯಲ್ಲಿ ಸಕಲರೂ ಸರಿಸಮಾನರು, ಎಂದು ಪರಿಗಣಿಸಬೇಕೆಂದು ಕಡ್ಡಾಯವಿದ್ದರೂ, ಅದೆಲ್ಲ ಸಂವಿಧಾನದಲ್ಲಿ ಮಾತ್ರ ಎಂದು ಬೇರೆ ಹೇಳಬೇಕೆ? ಉದ್ದಿಮೆದಾರನ ಪುತ್ರನು ಸರ್ವರೀತಿಯಲ್ಲಿ ಅಯೋಗ್ಯ ನಾದರೂ, ಒಂದಿಷ್ಟೂ ಕೊರತೆ ಇಲ್ಲದಂತೆ ಜೀವನ ನಡೆಸಲು ಅವನಿಗೆ ಸಕಲ ಸೌಲಭ್ಯಗಳು ಒದಗುತ್ತವೆ. ಪೋಲಿಯಾಗಿ ಅಲೆಯುವ ರಾಜಕಾರಣಿಯ ಮಗನು ತಂದೆಯ ವಕೀಲಿಯಿಂದಲೇ ಮಂತ್ರಿಯೋ, ಮುಖ್ಯಮಂತ್ರಿಯೋ ಆಗಿ ಮೆರೆಯುವದನ್ನು ಪ್ರತಿನಿತ್ಯವೂ ನೋಡುತ್ತೇವೆ. ಸರಕಾರಿ ಅಧಿಕಾರಿಯ ವಂಶ ಜನು, ನಾಲಾಯಕನಾಗಿದ್ದರೂ, ಒಮ್ಮೆ ಹೇಗಾದರೂ ನೌಕರಿಗೆ ಸೇರಿಕೊಂಡ ನೆಂದರೆ, ಸಾರ್ವಜನಿಕ ಸಕಲ ಸವಲತ್ತುಗಳನ್ನು ತನ್ನವನ್ನಾಗಿ ಮಾಡಿಕೊಳ್ಳಲು ಯಾವ ಅಡ್ಡಿ-ಆತಂಕಗಳೂ ಬರಲಾರವು. ವ್ಯಾಪಾರಿಯ ಮಗನಿಗೆ ಅಪ್ಪ, ಗಳಿಸಿದ ಹಣ ಎಣಿಸಲು ಬಂದರೆ ಸಾಕು. ಸುಲಭವಾಗಿ ಲಕ್ಷಾಧೀಶನಾಗಬಹುದು. ಸಮಾಜದ ಇನ್ನೊಂದು ಮುಖ ತೀರ ಶೋಚನೀಯ. ಬಡತನ, ಅಕಾಲ ಪಿತೃ ಮರಣ, ಸಾಂಸಾರಿಕ ತಾಪತ್ರಯಗಳಿಂದ ಶಿಕ್ಷಣ ಮುಗಿಸಲಾರದೇ, ಅರಳಲು ಅವಕಾಶ ದೊರೆಯದೇ, ಕಿರಿದಾದ ನೌಕರಿಯನ್ನೋ, ಸಣ್ಣ-ಪುಟ್ಟ ವ್ಯಾಪಾರ ವನ್ನೋ ಮಾಡುತ್ತ, ಹೂ ಅರುಳುವ ಮೊದಲೇ ಬಾಡಿದಂತೆ ಜೀವನ ನಡೆಸುವ ವರು, ಇವರೆಲ್ಲ ಯಾವ ಸಬಲ ಕಾರಣವೂ ಇಲ್ಲದೇ ಶತಕಗಳಿಂದ ಬಡವರಾಗಿ ಉಳಿದಿದ್ದಾರೆ. ಈ ಎರಡು ಗುಂಪುಗಳಿಗೂ ಮಧ್ಯವರ್ತಿಗಳಾಗಿದ್ದರಿಂದ, ನಮಗೆ ಬೇಕಾದ ಜೀವನ ರೂಪಿಸಿಕೊಳ್ಳುವ ಸಾಧ್ಯತೆ ಸದಾಕಾಲವೂ ಇದ್ದೇ ಇದೆ.

ನಾವು ಹೇಗೆ ಜೀವನ ನಡೆಸಬೇಕು? ಎಂಬುದರ ಬಗ್ಗೆ ಅವರಿವರ ಮತ ನಮಗೆ ಬೇಕಿಲ್ಲ. ನನ್ನ ನಿನ್ನ ಸಹ ಮತವೊಂದಿದ್ದರೆ ಸಾಕು. ಜೀವನ ನಡೆಸ ಬೇಕಾಗಿರುವದು ನಮ್ಮ ನೆಮ್ಮದಿಗಾಗಿಯೇ ಹೊರತು ಇನ್ನೊಬ್ಬರಿಂದ ಬೆನ್ನು ಚಪ್ಪರಿಸಿಕೊಳ್ಳುವದಕ್ಕಾಗಿ ಅಲ್ಲ. ಯಾವ ಥಳಕು ಪೋಷಾಗಳಿಗೆ ಮಾರು ಹೋಗದೇ ಸುಲಭ, ಸರಳ ಜೀವನ ನಡೆಸಿದರೆ ಇತರರೂ ತಲೆದೂಗದೇ ಇರ ಲಾರರು. ಇವರಂತೆ ತಮಗೂ ಇರಲಾಗುವದಿಲ್ಲವಲ್ಲ! ಎಂಬ ಅಸೂಯೆಯಿಂದ ಅಪಹಾಸ್ಯಕ್ಕೂ ಗುರಿ ಮಾಡಬಹುದು. ನಾವಿಬ್ಬರೂ ಗಟ್ಟಿಗರಾಗಿದ್ದರೆ, ಯಾರಿಗೂ ಸೊಪ್ಪು ಹಾಕಲೇಬೇಕಾಗಿಲ್ಲ. ಅವರ ಸಂಪತ್ತಿನ ಮೇಲೆ ನಾವು ಸಂಸಾರ ನಡೆಸು ತ್ತಿಲ್ಲವಲ್ಲ! ಯಾವದೇ ಕಾರಣಕ್ಕೆ ನಾವು ಜಾರಿಬಿದ್ದರೆ, ಟೀಕೆ ಮಾಡುವದರಲ್ಲಿ ಇವರು ಮೊದಲಿಗರು. ಅದ್ದರಿಂದ ನಮ್ಮ ಜೀವನವನ್ನು ನಾವೇ ರೂಪಿಸಿಕೊಳ್ಳೋಣ ವಂತೆ, ಆಗದೇ? ಕಾಲುನಡಿಗೆಯಲ್ಲಿ ಹೋಗಬಹುದಾದ ದಾರಿಗೆ ಬಸ್ ಏರು ವದು ಬೇಡ. ಬಸ್ ಸಿಗುತ್ತಿರುವಲ್ಲಿ ಟಾಂಗಾ ಬೇಡ. ಟಾಂಗಾ ಇದ್ದಲ್ಲಿ ಟ್ಯಾಕ್ಸಿ ಬೇಕಾಗಿಲ್ಲ. ಇದೇ ನಮ್ಮ ಜೀವನದ ಸೂತ್ರವಾಗಲಿ ಎಂಬ ಆಸೆ.

ಏನೇ ಮಾಡಲಿ, ಹೇಗೇ ಇರಲಿ, ನಮ್ಮ ಸಕಲ ಚಟುವಟಿಕೆಗಳಲ್ಲಿ ಅಭಿ ಮಾನ–ಆತ್ಮ ತೃಪ್ತಿಗಳು ಇರಲೇಬೇಕು. ನಡೆಯುವ ತ್ರಾಣವಿಲ್ಲದೆ ಕಾರು ಕೊಳ್ಳುವದಕ್ಕಿಂತ ಗಟ್ಟಿಮುಟ್ಟಾದ ಕಾಲುಗಳಿರುವದು ಮೇಲಲ್ಲವೇ? ನಿತ್ರಾಣ ರಾಗಿ ಮಿಕ್ಸಿಯ ಗುಂಡಿ ಒತ್ತುವದಕ್ಕಿಂತ, ರುಬ್ಬುವ ಕಲ್ಲನ್ನು ತಿರುಗಿಸುವಂತಹ ಬಾಹುಬಲವಿರುವದು ಮೇಲು; ತುಪ್ಪದಲ್ಲಿ ಕರಿದ ಪೂರಿ, ಬಾಸುಂದಿ, ಹಲ್ವ ಗಳನ್ನು ತಿಂದು ತೇಗುವದಕ್ಕಿಂತ, ಮೂಲಂಗಿ, ಬೀಟ್, ಗಜ್ಜರಿ, ಸೌತೇಕಾಯಿ ಟೊಮ್ಯಾಟೊಗಳನ್ನು ಜೀರ್ಣಿಸಿಕೊಂಡು ತೇಗುವದು ಸರ್ವದೃಷ್ಟಿಯಿಂದಲೂ ಹಿತಕರ. ಕೊಬ್ಬು, ಕಾಲು ನೋವು, ಬೆನ್ನು–ನೋವುಗಳಿಂದ ನರಳಿ, ನಿಸರ್ಗ– ಚಿಕಿತ್ಸೆಗೆ ಹಣ ಸೂರೆ ಮಾಡುವದಕ್ಕಿಂತ, ಪ್ರತಿದಿನ ಬೆಳಿಗ್ಗೆ ನಿಸರ್ಗದ ಸಾನ್ನಿಧ್ಯ ದಲ್ಲಿ ತಿರುಗಾಡುವದು ಕ್ಷೇಮಕರ. ಸಂಬಳದ ಜೊತೆಗೆ ಗಿಂಬಳ ಗಿಟ್ಟಿಸಲಾಗದ್ದ ರಿಂದ, ನಾವು ಹೀಗೆ ಮಾಡಬೇಕಾಗಿ ಬಂದಿದೆ, ಎಂದು ಸಹೋದ್ಯೋಗಿಗಳು, ಪರಿಚಯದವರು ಗೇಲಿ ಮಾಡಬಹುದು. ಅವರ ಅಭಿಪ್ರಾಯಕ್ಕಾಗಿ ನಕ್ಕು ಬಿಡುವ ಕೆಚ್ಚೆದೆ ನಮ್ಮದಾಗಿರಬೇಕು.

ನಮಗೆ ತೃಪ್ತಿಕೊಡುವ ಕೆಲಸಗಳನ್ನು ಮಾಡುವವರ ಜೊತೆಗೆ, ಇನ್ನಿತರ

ರಿಗೂ ಖುಷಿ ಕೊಡುವಂತಹ ಚಟುವಟಿಕೆಯಲ್ಲಿ ತೊಡಗಿದಾಗ, ಅಭಿಮಾನ ಉಕ್ಕಿ ಬಾರದಿರದು. ಜೊಬನೇರದ ಕೆಲಸದ ಹುಡುಗ, ಗೋಪಾಲನ ಛಾಯಾಚಿತ್ರ ತೆಗೆದು ಒಂದು ಪ್ರತಿಯನ್ನು ಅವನಿಗೂ ಕೊಟ್ಟಾಗ, ಅವನ ಸಂತೋಷಕ್ಕೆ ಮೇರೆಯೇ ಇರಲಿಲ್ಲ. ಕೇರಿಯವರೆಲ್ಲರಿಗೂ ತೋರಿಸಿ ಅದು ಮರುದಿನವೇ ಮುದುಡಿಯಾಗಿ ಮೂಲೆಗುಂಪಾಗಿರಬಹುದು. ಆದರೆ ಅದು ಅವನ ಜೀವನದ ಪ್ರಪ್ರಥಮ ಭಾವಚಿತ್ರವೆಂಬುದು ನಿಸ್ಸಂಶಯ, ಕೊನೆಯದಾಗಿದ್ದರೂ ಆಶ್ಚರ್ಯ ವಿಲ್ಲ. ಅದರಂತೆ ಪೋಸ್ಟಮ್ಯಾನ್ ರಮ್‌ಝಾನನು ಜೋಬನೇರ ವಿಳಾಸಕ್ಕೆ ಬಂದ ಪತ್ರಗಳನ್ನೆಲ್ಲ ತಪ್ಪದೇ ಪ್ಲಾಸಿಗೆ ಕಳಿಸುವದಲ್ಲದೇ ಪ್ರತಿ ಪತ್ರದ ಕೊನೆಯಲ್ಲಿ ಒಂದು ಮೂಲೆಯಲ್ಲಿ ಹಿಂದಿಯಲ್ಲಿ, 'ಮಾಸ್ಟರ್‌ಸಾಬ್, ನಮಸ್ಕಾರ ನೀವು ಮಾಡಿಕೊಟ್ಟ ಫೋಟೊ ನೋಡಿದಾಗೆಲ್ಲ ನಿಮ್ಮ ನೆನಪಾಗುತ್ತದೆ.' ಎಂದು ಬರೆಯಲು ಮರೆಯುವದಿಲ್ಲ. ಡೀನ್ ಪ್ರಸಾದರು ತಮ್ಮ ಭವ್ಯ ಬಂಗಲೆಯ ಬೈಠಕ್‌ಖಾನೆ ಯಲ್ಲಿ ನಾನು ಮಾಡಿಕೊಟ್ಟ ದೊಡ್ಡ ಭಾವಚಿತ್ರವೊಂದನ್ನು ತೂಗಹಾಕಿ, 'ಡಾ| ಕಾಮತರು ಸೆರೆ ಹಿಡಿಯುವಂಥ ಭಾವಚಿತ್ರಗಳನ್ನು ಯಾರಿಂದಲೂ ಮಾಡಲಾಗು ವದಿಲ್ಲ'ವೆಂದು ಬಂದವರೆಲ್ಲರ ಎದುರು ಅಭಿಮಾನದಿಂದ ಹೇಳಿಕೊಳ್ಳುತ್ತಾರಂತೆ. ನಿನ್ನ ಪ್ರಾಧ್ಯಾಪಕರಿಗೆ, ಬೆಳವಡಿ ಮಲ್ಲಮ್ಮ ಮತ್ತು ಶಿವಾಜಿಯ ಉಬ್ಬು ಚಿತ್ರ ಮಾಡಿ ಕಳಿಸಿದಾಗ, ಧಾರವಾಡದ ಛಾಯಾಚಿತ್ರಕಾರನಿಂದ ಆಗದ ಕೆಲಸವನ್ನು ನಿನ್ನ ಯಜಮಾನರು ಯಶಸ್ವಿಯಾಗಿ ಮಾಡಿದ್ದಾರೆಂ'ದು ಬೆನ್ನು ಚಪ್ಪರಿಸಲಿಲ್ಲವೇ? ಅಕ್ಕ-ತಂಗೆಂದಿರ, ತಮ್ಮಂದಿರ, ಅಪ್ತರ ಚಿತ್ರಗಳು, ಆಲ್ಬಮ್‌ಗಳನ್ನು ಮಾಡಿ ಕಳಿಸಿದ್ದೆನಲ್ಲವೇ? ಹೋಗಿ ಬಂದವರಿಗೆಲ್ಲ ಅವರು, ಅವನ್ನು ಎಷ್ಟು ಅಭಿಮಾನ ದಿಂದ ಪ್ರದರ್ಶಿಸುತ್ತಾರೆ ಗೊತ್ತೇ? ಎಷ್ಟು ಹಣ ಕೊಟ್ಟರೂ, ಯಾವ ಸ್ಟುಡಿಯೋ ದವನೂ೨೬ ಇಂಥ ಆಲ್ಬಮ್‌ಗಳನ್ನು ಅವರಿಗೆ ಮಾಡಿಕೊಡಲಾರ! ಇಷ್ಟೇ ಏಕೆ?

---

೨೬ ೧೯೫೩ರಲ್ಲಿ ಟ್ಯಾಯ್ಫಾಯ್ಡ್ ಜ್ವರ, ಜ್ಯೋತ್ಸ್ನಾಳ ತಾಯಿ, ಶಾರದಾಬಾಯಿ ಯವರನ್ನು ಆಹುತಿ ತೆಗೆದುಕೊಂಡಿತು. ಅವರ ಒಳ್ಳೆಯ ಭಾವಚಿತ್ರ ವೊಂದೂ ನಮ್ಮ ಬಳಿ ಇರಲಿಲ್ಲ. ಯಾವುದೋ ಗುಂಪಿನಲ್ಲಿದ್ದ ಚಿತ್ರದ ಪ್ರತಿಕೃತಿ ಮಾಡಿಸಿದಾಗ ಅದು ವಿಕಾರ ರೂಪ ತಾಳಿತ್ತು. ೧೯೭೦ರಲ್ಲಿ ಶಾರದಾಬಾಯಿಯವರು ಸ್ವರ್ಗಸ್ಥರಾದ ಹಿರೇಕೆರೂರಿನ ಯಾತ್ರೆ ಕೈ

ತಂದೆಯವರ ಭಾವಚಿತ್ರಗಳನ್ನು ಆಕಾಲದಲ್ಲಿ ತೆಗೆಯದಿದ್ದರೆ, ಇಂದು ಯಾವ ಚಿತ್ರವೂ ನಮ್ಮ ಹತ್ತಿರ ಇರುತ್ತಿರಲಿಲ್ಲ. ಈ ಚಟುವಟಿಕೆಗಳಿಂದ ಒಂದು ಪೈಸಾ ಲಾಭವಾಗದಿದ್ದರೂ, ಇವೆಲ್ಲ ನನಗೆ ಅತ್ಯಂತ ಅಭಿಮಾನ ಪಡುವ ಸಂಗತಿಗಳಾಗಿವೆ.

ಇಷ್ಟೆಲ್ಲ ಬರೆಯಲು ಪ್ರಚೋದಿಸಿದ್ದು, ಅರ್ಧಕ್ಕೇ ನಿಲ್ಲಿಸಿದ ನಿನ್ನ ಡಾಕ್ಟರೇಟ್ ವಿದ್ಯಾಭ್ಯಾಸವನ್ನು ಮುಂದುವರಿಸುವ ವಿಚಾರದ ಸಂದರ್ಭದಲ್ಲಿ ವಿವಾಹದ ಹೊಸ ದಿನಗಳಲ್ಲೇ ನೌಕರಿಗೆ ತಿಲಾಂಜಲಿಕೊಟ್ಟು, ಧಾರವಾಡಕ್ಕೆ ಹಿಂತಿರುಗಿ, ಕಾಯಾ, ವಾಚಾ, ಮನಸಾ ಅಧ್ಯಯನದಲ್ಲಿ ತೊಡಗುವಂತೆ ನಾನು ಹೇಳಿದ್ದು ಜ್ಞಾಪಕವಿಟ್ಟುಕೊಂಡಿರುವಿ, ಎಂದು ತಿಳಿಯುತ್ತೇನೆ. ಆದರೆ ಆಗ ನೀನೇ ಪುನಃ ಒಂಟಿ ಜೀವನ, ಕಠಿಣ ಓದುಗಳನ್ನು ಕೈಕೊಳ್ಳಲು ಒಪ್ಪಿಕೊಂಡಿರಲಿಲ್ಲ. ಕಾಕಾ ಅವರೂ ನಿನ್ನ ಅಭಿಪ್ರಾಯವನ್ನೇ ಅನುಮೋದಿಸಿದ್ದರು. ಇದಾದ ನಂತರ ನಮ್ಮ ಜೀವನದಲ್ಲಿ ಅನೇಕ ಬದಲಾವಣೆಗಳು ಬಂದಿವೆ. ಜೀವನದ ಆನಂದದ ಸೆಲೆಯಾಗಿ ವಿಕಾಸನು ಉದಯಿಸಿದ್ದಾನೆ. ನಾನು ದೂರದ ಬಂಗಾಲದಲ್ಲಿದ್ದು ದಾಂಪತ್ಯ ಜೀವನದ ಕಿರಿಕಿರಿಯಿಲ್ಲ. ಸರಕಾರ ನಿನ್ನನ್ನು ಧಾರವಾಡಕ್ಕೆ ವರ್ಗಮಾಡಿದೆ.

→ ಕೊಂಡಾಗ, ಶ್ರೀ ಅಡಿವೆಪ್ಪ ಕುಬಸದ ಅವರ ಮನೆಗೂ ಭೇಟಿ ಕೊಟ್ಟೆವು. ಅವರ ವೃದ್ಧ ಹೆಂಡತಿ, ತನ್ನ ಸ್ನೇಹಿತೆಯ ಅಳಿಯ-ಮಗಳು ಬಂದಿದ್ದಾರೆಂದು ಹಿರಿಹಿರಿ ಹಿಗ್ಗಿದರು. ಅವರ ಪತಿಯವರು ಹುಲಿ-ಶಿಕಾರಿಯಲ್ಲಿ ಎತ್ತಿದ ಕೈ. ದನಗಳನ್ನು ಕೊಲ್ಲುತ್ತಿದ್ದ ಹುಲಿಯೊಂದನ್ನು ಬೇಟಿಯಾಡಿದಾಗ ಈ ಎರಡೂ ಕುಟುಂಬದ ಸದಸ್ಯರನ್ನು ಸೇರಿಸಿ ಛಾಯಾಚಿತ್ರ ತೆಗೆಸಿದ್ದರು. ಅದನ್ನು ಹುಡುಕಿ ತಂದು ತೋರಿಸಿದರಲ್ಲದೇ ಪ್ರತಿ ಮಾಡಲು ಅನುಮತಿಕೊಟ್ಟಾಗ, ನಮ್ಮ, ಯಾತ್ರೆ ನಿರೀಕ್ಷೆ ಮೀರಿ ಯಶಸ್ವಿಯಾದ ತೃಪ್ತಿ ನಮ್ಮದಾಗಿತ್ತು. ಅದರ ಆಧಾರದ ಮೇಲೆ ಅತ್ತೆಯವರ ದೊಡ್ಡದೊಂದು ಭಾವಚಿತ್ರ ತಯಾರಾದಾಗ ಪತ್ನಿಯ, ಇತರ ಬಾಂಧವರ ಆನಂದಕ್ಕೆ ಮಿತಿಯಿರಲಿಲ್ಲ. ಮೂಲಪ್ರತಿಯನ್ನು ತಿರುಗಿ ಅಡಿವೆಪ್ಪನವರ ಕುಟುಂಬಕ್ಕೆ ಹಿಂದಿರುಗಿಸಲು ಮರೆಯಲಿಲ್ಲ.

ಪಿ.ಎಚ್.ಡಿ ಮಾಡಲು ನಿನ್ನ ಪ್ರಾಧ್ಯಾಪಕರು ಸಕಲ ರೀತಿಯ ನೆರವು ಕೊಡಲು ಸಿದ್ಧರಿದ್ದಾರೆ. ಇಂಥ ಅನುಕೂಲ ವಾತಾವರಣ ಸಿಗುವದು ತೀರ ಅಪರೂಪ. ಇದರ ಲಾಭ ಮಾಡಿಕೊಳ್ಳದಿದ್ದರೆ ನಮ್ಮ ಕನಸುಗಳು ಹೇಗೆ ನನಸಾದಾವು? ಜನ ಏನೆಂದುಕೊಂಡಾರು? ಎಂದು ನೀನು ಅಳುಕಬೇಕಾದದ್ದೇ ಇಲ್ಲ. ಡಾಕ್ಟರೇಟ್ ಪದವಿ ಗಿಟ್ಟಿಸಿದರೆ, ಹೆಚ್ಚಿನವರು ಹೊಟ್ಟೆಕಿಚ್ಚು ಪಡೆದಾರು, ಎಂದು ಬೇರೆ ಹೇಳಬೇಕೇ?

○

೩೨. ಅನಿರೀಕ್ಷಿತ ಯಶ

ಬೆಂಗಳೂರು, ೧೭-೭-೧೯೭೦

ಮೊನ್ನೆ ಒಂದು ತಮಾಷೆ ನಡೆಯಿತು. ಇಲ್ಲಿಯ ಟಾಟಾ ಇನ್‌ಸ್ಟಿಟ್ಯೂಟಿನ ಇಲೆಕ್ಟ್ರಾನಿಕ್ಸ್ ವಿಭಾಗದಲ್ಲಿ ಪ್ರೊ। ಸೋಂದೆಯವರು ಪ್ರಾಧ್ಯಾಪಕರಾಗಿದ್ದಾರೆ. ಅವರಣ್ಣ, ಸಿರ್ಸಿ (ಉತ್ತರ ಕನ್ನಡ)ಯ ಅರ್ಬನ್ ಬ್ಯಾಂಕಿನ ಚೇರ್ಮನ್ ಆಗಿದ್ದಾರಲ್ಲದೇ ಪತ್ತಾರು ಬಗೆಯ ವ್ಯವಹಾರಗಳನ್ನು ನಿಯಂತ್ರಿಸುತ್ತಾರೆ. ಸಾಕಷ್ಟು ಹೊಲ, ತೋಟಗಳನ್ನು ಮಾಡಿಕೊಂಡಿದ್ದಾರೆ. ಹೀಗಾಗಿ ಧನ-ಗೌರವಗಳನ್ನು ಪಡೆದವರು. ಅವರ ಧರ್ಮಪತ್ನಿ ಚಿತ್ರದುರ್ಗದವರಂತೆ. ಪ್ರೊ। ಸೋಂದೆಯವರು ಬೆಂಗಳೂರಿಗೆ ಬಂದ ಅಣ್ಣನ ಕುಟುಂಬದವರನ್ನು ತಮ್ಮ ಕಾರಿನಲ್ಲಿ ಮಾಂಶಿಯ ಮನೆಗೆ ಕರೆತಂದಿದ್ದರು. ಪ್ರತಿಷ್ಠಿತರನ್ನು ಕಂಡರೆ ನಾನು ಬೆಚ್ಚಿ ಬೀಳುವದರಿಂದ ಒಂದು ಮೂಲೆಯಲ್ಲಿ ಮುದುಡಿಯಾಗಿ ಕುಳಿತಿದ್ದೆ. ಕೀಟ ಪಂಡಿತನೆಂದು ಡಾಕ್ಟರರು ಪರಿಚಯಿಸಿದ್ದರಿಂದ ಮತ್ತು ಆಗಂತುಕರು ಕೃಷಿ ವಿಜ್ಞಾನದಲ್ಲಿ ಪದವೀಧರರಿದ್ದುದರಿಂದ ನನ್ನ ಜ್ಞಾನವನ್ನು ಒರೆಗಲ್ಲಿಗೆ ಹಚ್ಚಲು ಯತ್ನಿಸಿದರು. 'ಹೌದು' 'ಅಲ್ಲ'ವೆಂದು ಗೋಣು ಹಾಕುವದರಲ್ಲೇ ನನ್ನ ಪ್ರತಿಕ್ರಿಯೆ ವ್ಯಕ್ತಪಡಿಸುತ್ತ ಇದ್ದೆ. ಇತರ ಸಂಭಾಷಣೆಯಲ್ಲಿ ಆಸಕ್ತಿ ತೋರಿಸದಿದ್ದುದರಿಂದ ಅವರೇ ಮಾತಿಗೆ ನಾಂದಿ ಹಾಡಿ, ಎವೆ ಇಕ್ಕದೇ ನನ್ನನ್ನು ನೋಡಲಾರಂಭಿಸಿದಾಗ ದಿಗಿಲಾಯಿತು! ಮನಸ್ಸಿನಲ್ಲಿಯೇ ಏನೋ ಮೆಲುಕು ಹಾಕಿ, ಲೆಕ್ಕಾಚಾರ ಮಾಡಿದವರಂತೆ, ಒಮ್ಮಿಂದೊಮ್ಮೆ ಧಾರವಾಡದ ಮನೋಹರ ಗ್ರಂಥಮಾಲೆಯವರು ಪ್ರಕಟಿಸಿದ, 'ನಾನೂ ಅಮೇರಿಕೆಗೆ ಹೋಗಿದ್ದೆ' ಲೇಖಕರಾದ ಡಾ. ಕೃಷ್ಣಾನಂದ ಕಾಮತರಿಗೂ ನಿಮಗೂ ರೂಪದಲ್ಲಿ ಬಹಳ ಸಾಮ್ಯವಿದೆ. ಅವರೇನಾದರೂ ನಿಮಗೆ ಹತ್ತಿರದ ಸಂಬಂಧಿಯೇ? ಎಂದು ವಿಚಾರಿಸಿದಾಗ ಅವಾಕ್ಕಾಗಿ ಅವರನ್ನು ನೋಡುವಷ್ಟರಲ್ಲಿ ಡಾಕ್ಟರರು, ನಿಮ್ಮೆದುರು ಕುಳಿತವನು ಸಾಮಾನ್ಯ ವ್ಯಕ್ತಿ ಎಂದು ತಿಳಿದಿದ್ದೀರಾ?ನ್ಯೂಯಾರ್ಕ್ ವಿಶ್ವವಿದ್ಯಾಲಯದ ಡಾಕ್ಟರೇಟ್ ಪದವಿ ಗಿಟ್ಟಿಸಿದ್ದಾರಲ್ಲದೆ ಅಮೇರಿಕೆಯ ಪ್ರವಾಸಕಥನ ಬರೆದ

ಭೂಪತಿ ಇವರೇ! ಪತ್ನಿ ಆಕಾಶವಾಣಿಯಲ್ಲಿದ್ದಾರೆ....ಎಂದು ಹೇಳುತ್ತಿದ್ದಂತೆಯೇ ಅತಿಥಿಗಳು ತಮ್ಮ ಪತ್ನಿಯನ್ನು ಕೂಗಿ ಅಡಿಗೆ ಮನೆಯಿಂದ ಕರೆಯಿಸಿಕೊಂಡರು. ಕಲ್ಪನೆಗೂ ಮೀರಿದ ಗುಟ್ಟುರಟ್ಟಾದ ಆಶ್ಚರ್ಯದಿಂದ ಅವರ ಧರ್ಮಪತ್ನಿಯ ಮುಖ ಅರಳಿತು. ಪ್ರಫುಲ್ಲತೆಯಿಂದ, ಆ ಪ್ರವಾಸಕಥನವನ್ನು ಇವರು ಓದಿ, ತುಂಬಾ ಮೆಚ್ಚಿಕೊಂಡರು. ನನಗೂ ಓದಲು ಕೊಟ್ಟರು. ಯಾವ ಪ್ರವಾಸ ಕಥನವೂ ಇಷ್ಟೊಂದು ರಸಾನುಭವವನ್ನು ಕೊಟ್ಟಿರಲಿಲ್ಲ. ಲೇಖಕ ಕಾಮತರು ಯಾವೂರಿನವರು ಇರಬಹುದು? ಎಂದು ತುಂಬ ಹೊತ್ತು ವಿಚಾರ ವಿಮರ್ಶೆ ಮಾಡಿದೆವು. ಉತ್ತರ ಕನ್ನಡ ಜಿಲ್ಲೆಯಲ್ಲಿ ಇಂಥ ಪ್ರತಿಭಾವಂತರು ಇದ್ದಂತೆ ಇರದ್ದರಿಂದ ನೀವು ದಕ್ಷಿಣ ಕನ್ನಡ ಜಿಲ್ಲೆಯವರಿರಬೇಕೆಂಬ ತೀರ್ಮಾನಕ್ಕೆ ಬಂದೆವು. ಈಗ ನೋಡಿದರೆ ನೀವು ನಮ್ಮ ಜಿಲ್ಲೆಯವರಷ್ಟೆ ಅಲ್ಲ ನಮ್ಮ ಸ್ನೇಹಿತರಾದ ಡಾಕ್ಟರ್ ದಂಪತಿಗಳ ಆಪ್ತರೆಂದು ತಿಳಿದು ಅತೀವ ಆನಂದವಾಯಿತು ಎಂದರು.

ನಾನು ಸೇರಿದ ಅಂತರ್ರಾಷ್ಟ್ರೀಯ ಕೀಟ-ಸಂಶೋಧನಾಲಯ ಮೇಲಧಿಕಾರಿಗಳು, ಬೆನ್ನು ಮುರಿದು ದುಡಿದು ಸಂಶೋಧನೆ ಮಾಡಿ ಪ್ರಬಂಧಗಳನ್ನು ಪ್ರಕಟಿಸಿದರೆ ಖ್ಯಾತಿ ಬರುತ್ತದೆ ಎಂದು ಹಿತೋಕ್ತಿ ಹೇಳಿದ್ದರು. ಆದರೆ ಬರೆದ ಪ್ರಪ್ರಥಮ ಕನ್ನಡ ಪುಸ್ತಕದಿಂದಲೇ ಸಿಕ್ಕ ಪ್ರಸಿದ್ಧಿ ದಂಗು ಬಡಿಯುವಂತೆ ಮಾಡಿದೆ. ದೇಶದ ಮೂಲೆ ಮೂಲೆಗಳಿಂದ ಪ್ರಶಂಸೆಯ ಪತ್ರಗಳು ಬರುತ್ತಲೇ ಇವೆ. ಸಾಗರದಿಂದ ಕೆ. ವಿ. ಸುಬ್ಬಣ್ಣ, ಧಾರವಾಡದಿಂದ ರಾಮಚಂದ್ರ ಕೊಟ್ಟಲಗಿ, ಆಕಾಶವಾಣಿಯ ಎನ್ಕೆ, ಬೆಂಗಳೂರು ವಿಶ್ವವಿದ್ಯಾಲಯದ ಡಾ| ಕೆ. ಸಿ. ಶಿವಪ್ಪ, ಅಹಮ್ಮದಾಬಾದದಿಂದ ಅಮ್ಮಿನಭಾವಿ, ಗದಗದಿಂದ ಮಾಧವ ಕುಲಕರ್ಣಿ, ಮುಂಬಯಿಯಿಂದ ಖ್ಯಾತನಾಳ, ಬೆಂಗಳೂರಿನಿಂದ ಜಿ. ಟಿ. ನಾರಾಯಣರಾವ್ ಮೊದಲಾದವರು, ಅದೆಷ್ಟೋ ಅಪರಿಚಿತರು ಅಂಚೆಯ ಮೂಲಕ ಬೆನ್ನು ತಟ್ಟುತ್ತಲೇ ಇದ್ದಾರೆ. ತೀರ್ಥಹಳ್ಳಿಯ ನಾಗೇಂದ್ರನಾಥ ಎಂಬವರ ಪತ್ರ ತುಂಬ ಹಿಡಿಸಿತು. 'ಹುಡುಗನಿದ್ದಾಗ ಚಂದಮಾಮ, ಸ್ವಲ್ಪ ಬೆಳೆದ ಮೇಲೆ ಕೃಷ್ಣರಾಯರ ಕಾದಂಬರಿ, ಈಗ ಭೈರಪ್ಪನವರ ಕಾದಂಬರಿಗಳನ್ನು ಓದುವಾಗಿನ ರೋಮಾಂಚಕ ಅನುಭವವೇ ನಿಮ್ಮ ಪ್ರವಾಸಕಥನ........ಓದುವಾಗ ನನಗಾಯಿತು........ಎಂದೆಲ್ಲ ಬರೆದಿದ್ದಾರೆ.

ಶಾಲಾ ವಿದ್ಯಾರ್ಥಿಯಾಗಿದ್ದಾಗ ಗೊರೂರು ರಾಮಸ್ವಾಮಿ ಅಯ್ಯಂಗಾರರ೨೭ 'ನಮ್ಮೂರ ರಸಿಕರು' ತುಂಬ ಮೆಚ್ಚಿಕೊಂಡಿದ್ದೆ. ಈ ಸಾಹಿತಿ ವರ್ಗದವರು ಬ್ರಹ್ಮನ ವಿಶೇಷ ಸೃಷ್ಟಿ ಇದ್ದಿರಬೇಕು, ಎಂದು ಕೊಂಡಿದ್ದೆ. ಎ. ಎನ್. ಮೂರ್ತಿರಾಯರ ೨೮ ಗಾಡಿಯ ಪ್ರಯಾಣ, ಹೂವುಗಳು ಮುಂತಾದ ಲಲಿತ ಪ್ರಬಂಧಗಳನ್ನು ಅಭ್ಯಸಿಸಿದಾಗ ಈ ಬರಹಗಾರರೆಲ್ಲ ಮಹಾನ್ ವ್ಯಕ್ತಿತ್ವ ಹೊಂದಿದವರೆಂದು ಮನದಟ್ಟಾಗಿತ್ತು. ನಮ್ಮ ಶಿಕ್ಷಕರೂ, ಊರವರೂ ಆದ ಖ್ಯಾತಕವಿ, ವಿ. ಜಿ. ಭಟ್ಟರ 'ಉತ್ತರ ಕನ್ನಡದ ಜೀವನ ಚಿತ್ರಗಳು' ಓದುತ್ತಿದ್ದಂತೆ, ದಿನಂಪ್ರತಿ ನೋಡುವ ವ್ಯಕ್ತಿಗಳೂ ಇಂಥ ಕೃತಿಗಳನ್ನು ರಚಿಸಬೇಕಾದರೆ, ಅವರಲ್ಲಿ

---

೨೭ ಗೊರೂರರ ಭೇಟಿಗೆ (೨೧-೮-೧೯೮೩) ಹೋದಾಗ ವಿಶೇಷ ಆತ್ಮೀಯತೆಯಿಂದ ಬರಮಾಡಿಕೊಂಡರು. ಅವರ ಕೃತಿ,'ಅಮೇರಿಕೆಯಲ್ಲಿ ಗೊರೂರು' ಕೃತಿಗೆ ಮುನ್ನುಡಿ ಬರೆದ ಡಾ। ಹಾ. ಮಾ. ನಾಯಕರು ನನ್ನ ಹೆಸರನ್ನು ಉಲ್ಲೇಖಿಸಿದ್ದರಿಂದ, ಆನಂತರ ಪುಸ್ತಕ ತರಿಸಿ ಓದಿದರಂತೆ. ಅದನ್ನು ಮುಂಚಿತವಾಗಿಯೇ ನೋಡುವಂತಾಗಿದ್ದರೆ, ತಮ್ಮ ಬರವಣಿಗೆಯ ಮೇಲೆ ಆದರ ಪ್ರಭಾವ ಬೀಳದೇ ಇರುತ್ತಿರಲಿಲ್ಲವೆಂದರು. ಬೆನ್ನುತಟ್ಟಿ ತುಂಬಾ ರಸವತ್ತಾಗಿ ಬರೆಯುತ್ತೀರಾ! ಎಂದು ಮೆಚ್ಚಿಗೆ ಸೂಚಿಸಿದರು.

೨೮ ಎ.ಎನ್. ಮೂರ್ತಿರಾಯರು ನನ್ನ ಪ್ರವಾಸಕಥನವನ್ನು ಸಾಕಷ್ಟು ವಿಳಂಬವಾಗಿ ಓದಿದರೂ,ತಮ್ಮ ಮೆಚ್ಚುಗೆಯನ್ನು ದೀರ್ಘವಾದ (೫-೭-೧೯೮೬ರ) ಪತ್ರದಲ್ಲಿ ಬರೆದು ತಿಳಿಸಲು ಮರೆಯಲಿಲ್ಲ. ಇಂಗ್ಲೀಷ್‌ನಲ್ಲಿ ಬರೆದ ಪತ್ರದ ಸಾರಾಂಶ ಹೀಗಿದೆ. 'ನಿಮ್ಮ ಪ್ರವಾಸಕಥನ ತುಂಬ ಖುಷಿ ಕೊಟ್ಟಿತು. ಪ್ರತಿ ಪುಟದಲ್ಲಿಯೂ ವಸ್ತುನಿಷ್ಠೆ, ಪ್ರಾಮಾಣಿಕತೆ, ತಿಳಿಯಾದ ಹಾಸ್ಯಗಳು ನಳನಳಿಸುತ್ತವೆ. ಅಮೇರಿಕನ್ನರ ಧನದ ಹಪಾಪಿ ಹೊರಗೆಡವಿದಂತೆ ಭಾರತೀಯರ ಟೊಳ್ಳುತನವನ್ನೂ ಮುಚ್ಚುಮರೆಯಿಲ್ಲದೆ: ಹೇಳಿದ್ದರಿಂದ ಮೆಚ್ಚುಗೆಯಾಯಿತು. ಜೊತೆಗೆ ನಮ್ಮ ಮತ್ತು ಅವರ ಹಿರಿಮೆ ಹೇಳಲೂ ಮರೆತಿಲ್ಲ. ಇಂಥ ಅಪೂರ್ವ ಬರವಣಿಗೆಗೆ ಅಭಿನಂದನೆಗಳು.'

ಅದಾವುದೋ ಅಗೋಚರ ಪ್ರತಿಭೆ ಇರಲೇಬೇಕೆಂದುಕೊಂಡಿದ್ದೆ. ಆದರೆ ಬರೆಯುವ ಕಲೆ, ಕೆಲಮಟ್ಟಿಗೆ ನನ್ನಲ್ಲೂ ಇದ್ದಿರಬಹುದು ಎಂದಾಗಲಿ, ಯತ್ನಿಸಿದರೆ ನಾನೂ ಬರಹಗಾರನಾಗಬಲ್ಲೆ ಎಂದಾಗಲಿ, ಕನಸು ಮನಸಿನಲ್ಲಿಯೂ ನೆನೆಸಿರಲಿಲ್ಲ. ಅಂತೆಯೇ ನಿನ್ನನ್ನು ವರಿಸುವ ಮೊದಲು ಸಾಹಿತ್ಯ ರಚನೆಯ ಯತ್ನವನ್ನೇ ಮಾಡಿರಲಿಲ್ಲ. ಆದ್ದರಿಂದ ನನ್ನಲ್ಲಿ ಹುದುಗಿದ್ದ ಸಾಹಿತ್ಯ ಬೀಜಕ್ಕೆ ನೀರೆರೆದು ಬೆಳೆಸಿ ಗಿಡ ಮಾಡಿದ ಶ್ರೇಯಸ್ಸು ನಿನಗೇ ಸಲ್ಲಬೇಕು.

○

೩೩. ಪರದೇಶಕ್ಕಾಗಿ ಪರದಾಟ

ಪ್ಲಾಸಿ, ೨೬-೧೦-೧೯೭೦

ಶಾಲೆ-ಕಾಲೇಜುಗಳ ಶಿಕ್ಷಣ ಮುಗಿಸಲಿದ್ದ ವಿದ್ಯಾರ್ಥಿಗಳು ಯಾವುದೋ ದಿಗ್ವಿಜಯ ಸಾಧಿಸಿದವರಂತೆ ಬೀಳ್ಕೊಡುವ ಸಮಾರಂಭವನ್ನು ಏರ್ಪಡಿಸಿಕೊಳ್ಳುವದು ಸಾಮಾನ್ಯ. ಇಂತಹ ಸಂದರ್ಭಗಳಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯೂ ತಮ್ಮ ಜೀವನದ ಗುರಿಯ ಬಗ್ಗೆ ಹೇಳಿಕೊಳ್ಳುವದು ವಾಡಿಕೆ. ಪದವೀಧರರಾಗಲಿರುವ ಪ್ರತಿಯೊಬ್ಬ ವಿದ್ಯಾರ್ಥಿಯು ಪರದೇಶದಲ್ಲಿ ಉಚ್ಚ ಶಿಕ್ಷಣ ಪಡೆದು ಸಮಾಜ ಸೇವೆ ಮಾಡುವದೇ ತನ್ನ ಜೀವನದ ಏಕಮಾತ್ರ ಉದ್ದೇಶ ಎನ್ನದೇ ಇರುವದಿಲ್ಲ. ಪರದೇಶದ ಕನಸು ಕಾಣದೇ ಇದ್ದವನು ನಮ್ಮ ಗುಂಪಿನಲ್ಲಿ ನಾನೊಬ್ಬನೇ ಆಗಿದ್ದೆ ಎಂದರೆ ನೀನು ನಂಬಲಿಕ್ಕಿಲ್ಲ. ಕ್ರಿಶ್ಚಿಯನ್ ಸಹಪಾಠಿಯೊಬ್ಬಳು ತನ್ನನ್ನು ಮೆಥೊಡಿಸ್ಟ್ ಮಿಶನ್‌ದವರು ಅಮೇರಿಕೆಗೆ ಕಳಿಸುತ್ತಿದ್ದಾರೆ. ಪಾಸ್‌ಪೋರ್ಟಗೆ ಅರ್ಜಿ ಸಲ್ಲಿಸಿದ್ದೇನೆ. ವೀಸಾ ಸಿಗುವದಕ್ಕೆ ಏನೇನೂ ತೊಂದರೆಯಿಲ್ಲ. ಟಿಕೇಟು ಅಮೇರಿಕೆಯಿಂದಲೇ ಬರಲಿದ್ದುದರಿಂದ ಗಂಟು-ಮೂಟೆ ಕಟ್ಟುವದೊಂದೇ ಬಾಕಿ! ಎಂದು ಸಾರುತ್ತ ಪರದೇಶಕ್ಕಾಗಿ ಪರದಾಡುವವರಿಗೆ ಹೊಟ್ಟೆಕಿಚ್ಚಾಗುವಂತೆ ನೋಡಿಕೊಳ್ಳುತ್ತಿದ್ದಳು. ಆದರೆ ಅವರಲ್ಲಿ ಯಾರೊಬ್ಬರಿಗೂ ಅಮೇರಿಕನ್ ಆಮಂತ್ರಣ ಬರಲೇ ಇಲ್ಲ. ಪರದೇಶ ಪ್ರಯಾಣದ ಹಂಬಲವನ್ನೇ ಇಟ್ಟುಕೊಳ್ಳದ ನಿನ್ನವನನ್ನು ಮಾತ್ರ ನ್ಯೂಯಾರ್ಕ್ ವಿಶ್ವವಿದ್ಯಾಲಯ ಶಿಷ್ಯವೇತನ ನೀಡಿ ಬರಮಾಡಿಕೊಂಡಿತು. ನಾಲ್ಕು ವರ್ಷ ಹೊಟ್ಟೆ-ಬಟ್ಟೆಯ ಏರ್ಪಾಡು ಮಾಡಿತು. ಡಾಕ್ಟರೇಟ್ ಪದವಿ ಪಡೆಯುವ ಅನುಕೂಲ ಒದಗಿಸಿತು. ಜೀವನ ಎಷ್ಟೊಂದು ವಿಚಿತ್ರವಾಗಿರುತ್ತದೆಯಲ್ಲವೆ?

ವರ್ಷಗಳು ಉರುಳಿದಂತೆ ಈ ಪರದೇಶಕ್ಕಾಗಿ ಪರದಾಟದ ಬೇನೆ ಎಲ್ಲರಿಗೂ ಅಂಟಿಕೊಳ್ಳುವದನ್ನು ನೋಡಿ ಹೌಹಾರಿದ್ದೇನೆ. ಉದಯಶಂಕರ, ರವಿಶಂಕರ ವಿದೇಶ ಯಾತ್ರೆಗಳೇ ಅವರ ಯಶಸ್ಸಿನ ಗುಟ್ಟು ಎಂದು ನಮ್ಮ ಕಲಾಕಾರ ಕೋಟಿ

ನಂಬಿದಂತಿದೆ. ಅಂತೆಯೇ ತಾವೂ ಅಲ್ಲಿಗೆ ಹೋಗಿ ಬಂದರೆ ಇಲ್ಲಿ ಜಯಭೇರಿ ಹೊಡೆಯಬೇಕೆಂಬ ಹಗಲುಗನಸುಗಳನ್ನು ಕಾಣುತ್ತಲೇ ಇರುತ್ತಾರೆ. ಕೇವಲ ತಂಬೂರಿ ಮೀಟಲು ವಿದೇಶಕ್ಕೆ ಹೋಗಿ ಬಂದು ಮೆರೆದವರು ಉಂಟು. ಭಾರೀ ಕಷ್ಟಪಟ್ಟು ಹೋದವರ ಕಚೇರಿಗಳೆಲ್ಲ ನಡೆಯುವದು ಭಾರತೀಯರೆಲ್ಲ ಹೆಚ್ಚಾಗಿ ನೆಲೆಸಿರುವ ವಸಾಹತುಗಳಲ್ಲಿ ಮಾತ್ರ. ಪಾಶ್ಚಾತ್ಯರು ಇವಕ್ಕೆ ಬರುವದು ಅಪರೂಪ. ಬಂದರೂ ಭಾರತೀಯ ಸಂಗೀತವನ್ನು ಅರ್ಥ ಮಾಡಿಕೊಳ್ಳುವವರು ಕಡಿಮೆ. ಅಪಾರ್ಥ ಮಾಡಿಕೊಳ್ಳುವವರೂ ಇರುತ್ತಾರೆ. ರವಿಶಂಕರ್–ಅಲ್ಲಾರಾಖಾ ಜೋಡಿ ಸಾಯರೆಕ್ಯೂಸ್(ನ್ಯೂಯಾರ್ಕ್)ಗೆ ಬಂದಾಗ ನಮಗೆಲ್ಲ ಕಡ್ಡಾಯವಾಗಿ ಟಿಕೇಟು ಗಳನ್ನು ಕೊಳ್ಳುವಂತೆ ಮಾಡಿದ್ದರು. ಭಾರತೀಯರೇ ಹೋಗದಿದ್ದರೆ, ಅಮೇರಿ ಕನ್ ಸಂಗೀತ ವಲಯಗಳು, ವಿಮರ್ಶಕರು ಏನು ಎಂದಾರು ಎಂಬ ಭಯ! ಇಷ್ಟಾದರೂ ಈ ಅಪರೂಪದ ಕಲಾವಿದರ ಜೋಡಿ, ತಮ್ಮ ವಾದ್ಯಕ್ಕಿಂತ ಹ್ಯಾಮರ್ ಹೆಚ್ಚು ಯಶಸ್ವಿಯಾಗಿ ಬಳಸುತ್ತಾರೆಂದೂ, ಇಬ್ಬರಲ್ಲಿ ಒಮ್ಮತವಿರ ದಿದ್ದಾಗ್ಯೂ ತಲೆಹಾಕುತ್ತಲೇ ಇರುತ್ತಾರೆಂದೂ ಟೀಕಿಸದೇ ಇರಲಿಲ್ಲ!

ದೇಶ–ದೇಶಗಳ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವಿನಿಮಯ ಮಾಡಿ ಕೊಳ್ಳುವ ಒಪ್ಪಂದದ ಅನ್ವಯ ಇರುವ ವಿದೇಶ ಪ್ರಯಾಣದ ಅವಕಾಶಗಳಿಗಾಗಿ ಕಲಾಕಾರರು, ಸಂಗೀತ–ನೃತ್ಯಪಟುಗಳು, ವಿಜ್ಞಾನಿಗಳು, ಅಧಿಕಾರಿಗಳು ಹೋರಾ ಡುತ್ತಲೇ ಇರುತ್ತಾರೆ. ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಆಯ್ಕೆಯ ನಾಟಕ ವಾಡಿದರೂ ಅಧಿಕಾರಿ, ರಾಜಕಾರಣಿಗಳ ವರ್ಚಸ್ಸು ಇದ್ದವರಿಗೆ ಮಾತ್ರ ಇವುಗಳ ಲಾಭ ದೊರೆಯುತ್ತದೆ ಎಂಬುದು ಸರ್ವವಿದಿತ. ಯಾವ ಅದೃಷ್ಟಶಾಲಿಗಳು ಹೋಗಲಿದ್ದಾರೆ, ಎಂಬುದು ಕೊನೆಯ ಕ್ಷಣದವರೆಗೂ ಗೊತ್ತಾಗದೇ ಸರ್ವರೂ ಪ್ರವಾಸದ ತಯಾರಿಯೊಂದಿಗೆ, ಸಾಮಾನು–ಕಾಗದ ಪತ್ರಗಳೊಂದಿಗೆ ದಿಲ್ಲಿಗೆ ಧಾವಿಸಿ, ಕೊನೆಗೆ ತಂಡದಲ್ಲಿ ಸೇರ್ಪಡೆಯಾಗದವರು ಜೋಲು ಮುಖ ಹಾಕಿ ಕೊಂಡು ಹಿಂದಿರುಗುವದು ಸಾಮಾನ್ಯ. ಸೀಮಿತ ಅವಧಿಗಾಗಿ ಉನ್ನತ ಸ್ಥಾನ ಪಡೆ ದಿರುವ ಕಮೀಶನರರು, ಮೇಯರರು, ಚೇರ್ಮನ್ನರು ವಿದೇಶಗಳಲ್ಲಿ ಪತ್ತಾರು ಬಗೆಯ ಕಾರ್ಯ ವಿಧಾನವನ್ನು ಗಂಭೀರವಾಗಿ ಅಧ್ಯಯನ ಮಾಡಲು ಹೊರಡು ವದು ತೀರ ಸಾಮಾನ್ಯ. ಬೃಹತ್ ಬೀಳ್ಕೊಡುವ ಸಮಾರಂಭಗಳಲ್ಲಿ ಭಾಗವಹಿಸಿ, ಹೋದಲ್ಲೆಲ್ಲ ತಮ್ಮ ಅಧಿಕಾರದ ಲಾಭ ಪಡೆದುಕೊಂಡವರಿಂದ ಆತಿಥ್ಯ ಪಡೆದು,

ಕಾಂಚನ-ಉಡುಗೊರೆಗಳನ್ನು ಸ್ವೀಕರಿಸಿ, ನಾಲ್ಕಾರು ಊರುಗಳನ್ನು ಸುತ್ತಿ ಬರುವಾಗ, ಸಾಧ್ಯವಿದ್ದಷ್ಟು ವಿದೇಶಿ ಸಾಮಾನುಗಳನ್ನು ತಂದು ನಿವೃತ್ತರಾದ ರೆಂದರೆ ಅವರು ಜನ್ಮ ತಾಳಿದ್ದು ಸಾರ್ಥಕವಾದಂತೆ. ಇತ್ತಲಾಗಿ ಸಾಧು-ಸಂತರು, ಕೀರ್ತನಕಾರರೂ ಇತರರ ಮೇಲ್ಪಂಕ್ತಿಯನ್ನು ಅನುಸರಿಸಿ ಸಾಕ್ಷಾತ್ಕಾರ ಪಡೆಯಲು ಪಾತಾಳ ಲೋಕದಂಥ ಪಶ್ಚಿಮ ದೇಶಗಳಿಗೆ ನಿರ್ಗಮಿಸುತ್ತಿದ್ದಾರೆ!

ವಿದ್ಯಾ-ಬುದ್ಧಿಗಳಿಲ್ಲದ ಧನಿಕರಿಗೂ ಈ ವ್ಯಾಮೋಹದ ಕೊರತೆ ಇಲ್ಲ. ಅಂತೆಯೇ ಪ್ರವಾಸಿ ಕಂಪನಿಯೊಂದರ ಮೊರೆಹೊಕ್ಕು ಸಕಲ ಕಾಗದ-ಪತ್ರಗಳನ್ನು ಅವರಿಂದಲೇ ಮಾಡಿಸಿ, ಅವರು ತೋರಿಸಿದಷ್ಟನ್ನು ನೋಡಿ, ಒಂದೆರಡು ವಾರ/ ತಿಂಗಳಲ್ಲಿ ಹಿಂದಿರುಗಿ ಬಂದರೆಂದರೆ ಸಮಾಜದಲ್ಲಿ ಅವರಿಗೊಂದು ಘನವಾದ ಸ್ಥಾನ ಲಭಿಸಿದೆ ಎಂದು ಪರಿಗಣಿಸಬೇಕು. ವಿದೇಶಗಳಲ್ಲಿ ಬೇರೂರಿದವರ ಪಾಲಕರು ಮೂರು ತಿಂಗಳ ವೀಸಾದ ಮೇಲೆ ಅಲ್ಲಿಗೆ ಹೋಗಿ, ಮಕ್ಕಳ ಪ್ರೀತಿಯ ಅಡಿಗೆ ಮಾಡಿ ಬಡಿಸಿ, ಮಗಳ ಇಲ್ಲವೇ ಸೊಸೆಯ ಬಾಣಂತನ ಮಾಡಿ ಬಂದರೆಂದರೆ ಅವರ ಜನ್ಮ ಸಾರ್ಥಕವಾದಂತೆ. ಮಕ್ಕಳು, ತಾವು ಹೋಗುವಲ್ಲೆಲ್ಲ ಮಾತ್ರ ಅವರನ್ನು ಕರೆದುಕೊಂಡು ಹೋಗುವದರಿಂದ, ಇವರಿಗೆಲ್ಲ ಯಾವುದೇ ಬಗೆಯ ವಿಶಿಷ್ಟ ಅನುಭವಗಳು ಇರುವದಿಲ್ಲ. ಇಷ್ಟಾದರೂ ತಾವು ನೋಡಿದ, ನೋಡದಿದ್ದ ದೇಶ ವನ್ನು ರಂಗುರಂಗಾಗಿ ಬಣ್ಣಿಸುತ್ತಲೇ ಇರುತ್ತಾರೆ. ಇಂಥವರ ಮಾತುಗಾರಿಕೆಗೆ ಮರುಳಾಗಿ ಅಡಿಗೆಯವರೆಂದಾಗಲಿ, ಸೂಲಗಿತ್ತಿಯೆಂದಾಗಲಿ ವಿದೇಶಗಳಿಗೆ ಹೋಗಲು ಅನೇಕರು ಹಾತೊರೆಯುತ್ತಿರುತ್ತಾರೆ. ಪಾಶ್ಚಾತ್ಯ ದೇಶಗಳಲ್ಲಿ ಸ್ಥಾಯಿ ಯಾದವರನ್ನು ವರಿಸಿ ತಾವೂ ಅಲ್ಲಿ ಶಾಶ್ವತವಾಗಿ ನೆಲೆಸುವ ಹಂಬಲವಿಟ್ಟುಕೊಂಡ ಯುವ ಪೀಳಿಗೆಯವರಿಗಂತೂ ಕೊರತೆ ಇಲ್ಲವೇ ಇಲ್ಲ.

ಪರದೇಶ ಪ್ರಯಾಣಕ್ಕೆ ಪರದಾಡುವ ಜಾಡ್ಯ ಸಕಲರನ್ನೂ ಸೋಂಕುತ್ತಿರು ವದು ಶೋಚನೀಯ. ಜೀವನದಲ್ಲಿ ಸರ್ವ ರೀತಿಯಿಂದ ಯಶಸ್ಸು ಪಡೆದ ಪರಿಚಯದ ಪತಿ-ಪತ್ನಿಯರೂ ಇದರಿಂದ ಹೊರತಾಗಿಲ್ಲ. ಕೈತುಂಬ ಸಂಪಾದನೆ ಯಿದೆ, ದೊಡ್ಡ ಬಂಗ್ಲೆ ಕಟ್ಟಿಸಿದ್ದಾರೆ, ಕ್ಯಾಲಕುಲೇಟರದಿಂದ ಕಾರಿನವರೆಗೆ ಸಕಲ ಸಲಕರಣೆಗಳನ್ನೂ ಹೊಂದಿದ್ದಾರೆ. ಜೊತೆಗೆ, ಯೋಗಕ್ಷೇಮ ನೋಡಿಕೊಳ್ಳ ಬೇಕಾದಂತಹ ಮುದಿ ತಂದೆ-ತಾಯಿ ಇದ್ದಾರೆ. ಒಳ್ಳೆ ಮಾರ್ಗದರ್ಶನ ಮಾಡಿ ಬೆಳೆಸಬೇಕಾದಂಥ ಮಕ್ಕಳು ಇವೆ. ಇಷ್ಟಾದರೂ ವಿದೇಶ ಪ್ರಯಾಣದ ಆಸೆ

ಪತ್ತಿಕ್ಕುವದು ಪ್ರಯಾಸದ್ದು ಅನಿಸಿದ್ದರಿಂದ ಹೊರಟೇ ಬಿಟ್ಟಿದ್ದಾರೆ. ಇವರ ಗೃಹಕೃತ್ಯದ ಹೊಣೆಗಳನ್ನು ವಿಳಂಬಿತ ಕಾಲದವರೆಗೆ ಹೊರಲು ಯಾರೂ ಸಿದ್ಧರಾಗದ್ದರಿಂದ ಕಿರು ವೈದ್ಯಕೀಯ ತರಬೇತಿ ಪಡೆಯಲಿದ್ದಾರಂತೆ. ತಮಾಷೆಯ ಮಾತೆಂದರೆ, ಯಾವುದನ್ನು ಮನೆಯಲ್ಲಿಯೇ ಸಾಧಿಸಬಹುದಿತ್ತೋ ಅದಕ್ಕಾಗಿ ಅವರು ವಿದೇಶಕ್ಕೆ ಹೋಗಿದ್ದು ಇದರಿಂದ ವೃದ್ಧ ತಾಯ್ತಂದೆಗಳ ಊಟ-ಉಪಚಾರ ಔಷಧ-ಚಿಕಿತ್ಸೆಗಳಿಗೆ ವ್ಯತ್ಯಯ ಬರುವದೆಂದು ಅರಿತರೂ ಪತ್ನಿ, ಪಾಶ್ಚಾತ್ಯ ವೃದ್ಧ ಸೇವಾಶ್ರಮದಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಅವರ ಏಕಮೇವ ಪುತ್ರನು ಅತ್ಯಂತ ಸ್ವಾರ್ಥಿಯಾಗಿ, ಯಾರ ನಿಯಂತ್ರಣಕ್ಕೆ ಒಳಪಡಲು ನಿರಾಕರಿಸಿ ಸಮಸ್ಯೆಯ ಮಗುವಾಗುತ್ತಿದ್ದರೆ ಅವನ ಪಿತರು ಪಾಶ್ಚಾತ್ಯ ಮಕ್ಕಳ ಮಾನಸಿಕ ಚಿಕಿತ್ಸಾವಿಧಾನ ಅಭ್ಯಸಿಸುತ್ತಿದ್ದಾರೆ! ಅವರು ಹಿಂದಿರುಗುವದರಲ್ಲಿ ಆದಾಯವೆಲ್ಲ ಕುಸಿದು, ಹಿರಿಯರು ಹಾಸಿಗೆ ಹಿಡಿದು, ಮಗನು ಶುದ್ಧ ನಾಲಾಯಕನಾದರೆ ಏನೂ ಆಶ್ಚರ್ಯವಿಲ್ಲ.

○

೩೪. ಶಿಕ್ಷಣದ ಗುರಿ

ಪ್ಲಾಸಿ, ೧೧-೧೧-೧೯೭೦

ವಿದ್ಯಾರ್ಹತೆಗೆ ಅನುಗುಣವಾದ ನೌಕರಿ ಇಲ್ಲದ್ದಕ್ಕೆ ನೀನೇಕೆ ಬೇಸರಿಸಬೇಕು? ಹೊಟ್ಟೆ ಹೊರೆದುಕೊಳ್ಳುವದಕ್ಕಾಗಿಯೇ ಶಿಕ್ಷಣ ಎಂಬುದು ತಪ್ಪು ಗ್ರಹಿಕೆ. ನರಿ-ನಾಯಿಗಳೂ ತಮ್ಮ ಅವಶ್ಯಕತೆಗಳನ್ನು ಯಾವ ಶಾಲೆ-ಕಾಲೇಜುಗಳ ಮೆಟ್ಟಿಲು ಹತ್ತದೇ ಪೂರೈಸಿಕೊಳ್ಳುತ್ತವೆ. ವಿದ್ಯಾಭ್ಯಾಸದ ಮೂಲ ಉದ್ದೇಶವಿರುವದು ಮಾನವನ ಮಾನಸಿಕ ವಿಕಾಸಕ್ಕಾಗಿ. ಹಣ ಸಂಪಾದನೆ, ಸುಖಜೀವನಗಳೇ ಶಿಕ್ಷಣದ ಗುರಿಯಾಗಿದ್ದರೆ, ಡಾರವಿನ್, ನ್ಯೂಟನ್, ಐನ್‌ಸ್ಟೈಯಿನ್‌ರಂಥವರು ಈ ವಿಶ್ವವನ್ನು ಶ್ರೀಮಂತವಾಗಿಸುತ್ತಿರಲಿಲ್ಲ. ಅದೇ ಮಾರವಾಡಿ, ಸಿಂಧಿಗಳು ಅಂಥ ಶಿಕ್ಷಣ ಪಡೆಯದಿದ್ದರೂ ಧನಿಕರಾಗಲು ಎಂದೂ ಹಿಂದೆ ಬಿದ್ದಿಲ್ಲ. ನಾನು ಎಂದೂ ಶಿಕ್ಷಣದಿಂದ ಸಿರಿವಂತನಾಗಬೇಕೆಂದು ಕನಸು ಕಟ್ಟಿದವನಲ್ಲ. ಅಂತೆಯೇ ಸರ್ವೇ ಸಾಮಾನ್ಯರಲ್ಲಿ ಕಂಡುಬಾರದ ವಿದ್ಯೆಯ ಬಗೆಗಿನ ಮಮತೆ-ವಿಶ್ವಾಸಗಳು ನನ್ನಲ್ಲಿ ಮನೆ ಮಾಡಿಕೊಂಡಿವೆ. ವಿದ್ಯಾರ್ಥಿ ದೆಸೆಯಲ್ಲಿ ನಾನೆಂದೂ ಗ್ಯಾಡ್ ಓದಿದವನಲ್ಲ. ಟ್ಯೂಶನ್ ಪಡೆದವನಲ್ಲ. ಪರೀಕ್ಷೆಗಾಗಿಯೇ ಅಭ್ಯಾಸ ಮಾಡಿದವನಲ್ಲ. ಅಂಕಿಗಳ ಸಂಪಾದನೆಗೆ ವಾಮಮಾರ್ಗ ತುಳಿದವನಲ್ಲ. ರ್‍ಯಾಂಕ್‌ಗಾಗಿ ಹಂಬಲಿಸಿದವನೂ ಅಲ್ಲ. ಆದರೆ ಮಾದರಿ ಪ್ರಶ್ನೆಗಳನ್ನು ಪಡೆದು, ಗ್ಯಾಡ್ ಉತ್ತರಗಳನ್ನು ಕಂಠಪಾಠ ಮಾಡಿ, ಜೇಬು ತುಂಬ ಗುಣ ಪಡೆದವರ ಶಿಕ್ಷಣ ಅಲ್ಲಿಗೇ ಮುಕ್ತಾಯವಾದರೆ, ಶಾಲೆ-ಕಾಲೇಜುಗಳಲ್ಲಿ ಓದಿ ಅರಿತುಕೊಂಡದ್ದೆಲ್ಲ ಇಂದು ನನ್ನದಾಗಿ ಉಳಿದುಕೊಂಡಿದೆ. ಹರಿಶ್ಚಂದ್ರ ಕಾವ್ಯ ಭಾಗ, ಹರಿಹರನ ಕೆಲ ರಗಳೆ, ಮುದ್ದಣ-ಮನೋರಮೆಯರ ಸಂವಾದ, ಕಪ್ಪೆ-ಅರಭಟ್ಟನ ಶಾಸನಗಳು ಇಂದಿಗೂ ಅಕ್ಷರಶಃ ನೆನಪಿವೆ; ಪ್ರಿಯವಾಗಿ ಉಳಿದುಕೊಂಡಿವೆ.

ಶಾಲಾ-ಜೀವನದಲ್ಲಿಯೇ ಚಿತ್ರಕಲೆಯನ್ನು ಕರಗತ ಮಾಡಿಕೊಂಡಿದ್ದರೂ,

ಅದರಿಂದ ಹಣ ಗಳಿಸಬೇಕೆಂಬ ವಿಚಾರ ಎಂದೂ ಬರಲಿಲ್ಲ. ಆದರೆ ಇದರಿಂದ ಸುಂದರ ವಸ್ತು, ಸೃಷ್ಟಿ ಕಂಡಾಗಲೆಲ್ಲ ಅದನ್ನು ಸವಿಯಲು ಸಹಾಯವಾಯಿತು. ನಾಲ್ಕು ವರ್ಷ ಎನ್.ಸಿ.ಸಿ. ಕಲಿತೆ. ಸೈನ್ಯ ಸೇರಲಿಲ್ಲ. ಆದರೆ ಅದರಿಂದಾಗಿ ಶಾರೀರಿಕ ದಾರ್ಢ್ಯತೆ, ಜೊತೆಗೆ ಕೈಕೊಂಡ ಕೆಲಸಗಳಲ್ಲಿ ಶಿಸ್ತು-ಅಚ್ಚುಕಟ್ಟುತನಗಳು ತಾವಾಗಿಯೇ ನುಸುಳಿಕೊಂಡವು. ವಂಶಪಾರಂಪರಿಕವಾಗಿ ಬಂದ ವೃತ್ತಿಗೆ ಕಾಲೇಜ-ಶಿಕ್ಷಣ ಬೇಕಾಗಿರದಿದ್ದರೂ ಆಸಕ್ತಿಯಿಂದ ಓದಿದ್ದೆ. ಶಿಕ್ಷಣಾಧಿಕಾರಿಯಾಗುವ ಕನಸು ಕಾಣದಿದ್ದರೂ ಜೀವನ ಶಿಕ್ಷಣ ತರಬೇತಿಯನ್ನು ಪಡೆದೆ. ಇದರಿಂದ ನೂಲುವದು, ಹಾಸು ಹಾಕುವದು, ವಿಂಕಿ ಮಾಡುವದು, ನೇಯುವದು, ರಟ್ಟಿನ ಕೆಲಸ, ಬಡಿಗತನಗಳು ಕರಗತವಾದುವಲ್ಲದೇ ಇಂದಿಗೂ ಅವನ್ನು ಒಂದಿಲ್ಲೊಂದು ರೀತಿಯಲ್ಲಿ ನಿತ್ಯ ಜೀವನದಲ್ಲಿ ಬಳಸುತ್ತಲೇ ಇದ್ದೇನೆ. ಸ್ನಾತಕೋತ್ತರ ಶಿಕ್ಷಣ ಮುಗಿಸಿದ ನಂತರ ಹೆಚ್ಚಿನ ವೇತನ ಬರುವ ನೌಕರಿಗೆ ಸೇರದೇ ಸಂಶೋಧನಾ-ಸೌಕರ್ಯಗಳಿರುವ ದೊಡ್ಡ ಕಾಲೇಜಿನಲ್ಲಿ ಕಡಿಮೆ ಸಂಬಳದ ನೌಕರಿಗೆ ಸೇರಿದ ಧೀರ ನಾನು!

ಉಚ್ಚ ಶಿಕ್ಷಣಕ್ಕಾಗಿ ಅಮೇರಿಕೆಗೆ ಹೋದದ್ದು ದೊಡ್ಡ ಅಧಿಕಾರಿಯಾಗಿ ಮೆರೆಯಬೇಕು; ಇಲ್ಲವೇ ಕೈತುಂಬ ಸಂಬಳ ಸಂಪಾದಿಸಬೇಕೆಂಬ ಆಸೆಯಿಂದ ಅಲ್ಲವೇ ಅಲ್ಲ. ನನ್ನೊಡನೆಯೇ ಬೆಳೆದು ಬಂದ ತಿರುಗಾಟದ ತವಕ, ಅಷ್ಟೊಂದು ದೂರದ ದೇಶಕ್ಕೂ ಕರೆದೊಯ್ದಿತು. ಅಮೇರಿಕೆಯಲ್ಲಿ ಪಡೆದ ಡಾಕ್ಟರೇಟ್ ಪದವಿ, ಶಿಕ್ಷಣದ ಮಾಪನವೆಂದು ಇನ್ನಿತರರು ತಿಳಿದರೆ, ಅಲ್ಲಿಯ ಅನುಭವಗಳಿಂದ ನನ್ನಲ್ಲಾದ ಪರಿವರ್ತನೆಗಳಿಗೆ ಅಳತೆಗೋಲೇ ಇಲ್ಲ! ಜೀವನವನ್ನು ಬೇಕಾದಂತೆ ರೂಪಿಸಿಕೊಳ್ಳುವದು ನಮ್ಮ ಕೈಯಲ್ಲಿಯೇ ಇದೆ, ಎಂದು ಅಲ್ಲಿಯೇ ಅನುಭವಿಸಿದೆ. ಅಲ್ಲದೇ ಇನ್ನಿತರರಿಗೆ ಸೊಪ್ಪು ಹಾಕಬೇಕಾಗಿಲ್ಲವೆಂದೂ ಅರಿತೆ. ಆದಷ್ಟು ಅಮೇರಿಕನ್‌ರ ಹೃದಯವನ್ನು ಗೆದ್ದುಕೊಂಡೆ. ದೇಶ, ಜಾತಿ, ವರ್ಣಗಳನ್ನು ಮೆಟ್ಟಿನಿಂತ ಮಾನವೀಯತೆ ಎಲ್ಲೆಲ್ಲೂ ಇದೆ, ಎಂಬುದನ್ನು ಕಂಡುಕೊಂಡೆ. ಆ ಬೃಹತ್ ದೇಶದ ನಾಲ್ಕೂ ಮೂಲೆಗಳಲ್ಲಿಯೂ ಅಲೆದಾಡಿ, ಗಿಡ-ಮರಗಳನ್ನು, ಪಶು-ಪಕ್ಷಿಗಳನ್ನು ವೀಕ್ಷಿಸಿ, ಕೆಲವೊಮ್ಮೆ ಅವುಗಳೊಂದಿಗೆ ಒಂದಾಗುವ ಅವಕಾಶವೂ ದೊರೆಯಿತು. ಮಾನವನಿಗೆ ಸುಖ-ಸಂಪತ್ತುಗಳಿಗಿಂತ ಆತ್ಮ-ಗೌರವ, ದೇಶಾಭಿಮಾನಗಳು ಹೆಚ್ಚಿನ ನೆಮ್ಮದಿ ಕೊಡಬಲ್ಲವೆಂದು

ಅನುಭವಿಸಿ, ಸ್ವದೇಶಕ್ಕೆ ಮರಳಲು ನಿಶ್ಚಯಿಸಿವೆ. ಇಲ್ಲಿ ಅಧಿಕಾರಿಯಾಗಿ ಮೆರೆಯುವ ಉದ್ದೇಶ, ಇಲ್ಲವೇ ಪರಿಸರ ವಿಜ್ಞಾನ,–ತಜ್ಞನೆಂದು ಡೌಲು ತೋರಿಸದೇ, ಪಡೆದ ತರಬೇತಿಯನ್ನು ದೇಶ–ಬಾಂಧವರೊಂದಿಗೆ ಹಂಚಿಕೊಳ್ಳುವದೆಂದು ಮಾತ್ರ ಕನಸು ಕಟ್ಟಿದ್ದೆ. ಅಂತೆಯೇ ರಾಜಸ್ಥಾನದ ಕೃಷಿ ಕಾಲೇಜಿನಲ್ಲಿ ಮೂರು ವರ್ಷ ಸೇವೆ ಸಲ್ಲಿಸಿದ ನಂತರ, ಅಲ್ಲಿಯ ಶಿಕ್ಷಣ–ರಾಜಕಾರಣದಿಂದಾಗಿ ರಾಜೀನಾಮೆ ಕೊಡಬೇಕಾಯಿತು.[೨೯] ಇಲ್ಲಿಯ ಸಂಶೋಧನಾ–ರಾಜಕಾರಣದಲ್ಲಿ ಬಿಸಿ ಏರಲಾರಂಭಿಸಿದ್ದರಿಂದ ನನಗೊಗ್ಗದ ಪರಿಸರದಿಂದ ಕಾಲು ಕೀಳುವ ಪ್ರಸಂಗ ಬಂದಿದೆ.[೩೦]

ಕಾಲು ಶತಮಾನದವರೆಗೆ ಪಡೆದ ಶಿಕ್ಷಣ ಎಂತಹದು? ಎಂಬ ಅಗ್ನಿ ಪರೀಕ್ಷೆಯನ್ನು ಬರಲಿರುವ ವರ್ಷಗಳಲ್ಲಿ ಎದುರಿಸಬೇಕಾಗಿದೆ. ಬಹುಸಂಖ್ಯಾಕರಿಗೆ ಹೇಗೋ ದೊರೆತ ನೌಕರಿ ಬಿಟ್ಟರೆ ಬೇರೆ ಯಾವ ರೀತಿಯಲ್ಲಾದರೂ ಹೊಟ್ಟೆ ಹೊರಕೊಂಡೇವೆಂಬ ಆತ್ಮವಿಶ್ವಾಸವೇ ಇರುವದಿಲ್ಲ. ಆದೇ ನಾನು, ಎಷ್ಟೆಲ್ಲ ವಿಧದಲ್ಲಿ ಉದರ ನಿರ್ವಹಣೆ ನಡೆಸಬಹುದು ಎಂದು ಲೆಕ್ಕಾಚಾರ ಹಾಕಿ ನೋಡಿದಾಗ ವಿಸ್ಮಯವಾಯಿತು. ನಿನ್ನಂಥ ಅಧಿಕಾರಿಗಳಿಗೆ ಬ್ಯಾಂಕ್, ಕಚೇರಿಗಳಿಗೆ ಎಡತಾಕುವದು, ಆದಾಯ–ಖರ್ಚುಗಳ ವಿವರಗಳನ್ನು ಇಡುವದು, ಕಾಲ–ಕಾಲಕ್ಕೆ ಕರ ತುಂಬುವದು, ಮಹತ್ವದ ಕಾಗದ–ಪತ್ರಗಳನ್ನು ವ್ಯವಸ್ಥಿತವಾಗಿ ಜೋಡಿಸಿಡುವದು ಇತ್ಯಾದಿ, ಬಲು ಬೇಸರದ ಕೆಲಸ. ಇವುಗಳನ್ನೆಲ್ಲ ಅತಿ ದಕ್ಷತೆಯಿಂದ ನಿರ್ವಹಿಸಬಲ್ಲೆ! ಅಲ್ಲದೇ ನೀನು ಹಿಂದೆ ಮುಂದೆ ನೋಡದೇ, ಇಂಥ ಕೆಲಸದಲ್ಲಿ ಪರಿಣತನೆಂದು ಸರ್ಟಿಫಿಕೇಟು ಕೊಡಬಲ್ಲೆಯಾದ್ದರಿಂದ ಅಂಥ ಕೆಲಸ ಸಿಗುವದು ಕಷ್ಟದಾಯಕವಾಗಲಾರದು! ಎರಡನೆಯದಾಗಿ ಅನಾಯಾಸ ಹಣ ಗಳಿಸಬಲ್ಲ ಸೇಠ್, ಸೇಠಾನಿಯುವರಿಗೆ ತಿನ್ನುವ ಬಾಯಿ ಚಪಲ ಹೆಚ್ಚು. ಆದರೆ ಅವರು ಸದಾಕಾಲ ಬಲೂನಿನಂತೆ ಹಿಗ್ಗುತ್ತಲೇ ಇರುವದರಿಂದ ವೈದ್ಯರು ಅವರಿಗೆ ತೂಕ

---

೨೯ ನೋಡಿ: 'ನಾ ರಾಜಸ್ಥಾನದಲ್ಲಿ' ಅಕ್ಷರ ಪ್ರಕಾಶನ. ಸಾಗರ ೧೯೭೪, ಅಧ್ಯಾಯ ೩೨.

೩೦ ನೋಡಿ: 'ವಂಗದರ್ಶನ' ಮನೋಹರ ಗ್ರಂಥಮಾಲಾ, ಧಾರವಾಡ ೧೯೭೨, ಅಧ್ಯಾಯ ೩೪.

ಕಡಿಮೆ ಮಾಡಲು ಹೇಳುತ್ತಿರುತ್ತಾರೆ. ಸ್ನಿಗ್ಧ ಪದಾರ್ಥ, ಮಸಾಲೆ ಜೀನಸುಗಳನ್ನು ಹೆಚ್ಚಾಗಿ ಬಳಸದೇ ರುಚಿಕರವಾದ ಅಡಿಗೆ ಮಾಡಬಲ್ಲೆನಾದ್ದರಿಂದ, ನನ್ನ 'ನಳಪಾಕ'ಕ್ಕೆ ಒಳ್ಳೇ ಬೇಡಿಕೆ ಬರುವ ಸಾಧ್ಯತೆಯೂ ಇದೆ! ಆದ್ದರಿಂದ ಈ 'ಕಾಮತ್ ಹೊಟೇಲ್' ಪೂರೈಕೆ ಮನೆಯವರಿಗಷ್ಟೇ ಮೀಸಲಿಡದೇ ಪಂಚತಾರಾ ಹೊಟೇಲಿನ ಅಡಿಗೆ ಮನೆ ಸೇರಿಕೊಂಡರೆ ಹೇಗೆ ಎಂದು ಯೋಚಿಸುತ್ತಲೇ ಇದ್ದೇನೆ!

ಸ್ವಲ್ಪ ಗಂಭೀರವಾದ ವಿಚಾರ ಬರೆಯಲೇ? ಪಡೆದ ಪದವಿಗಳನ್ನು ಬಳಸದೇ ಜೀವನ ನಡೆಸಬೇಕೆಂಬ ನಿರ್ಣಯ ಫಲ ನೀಡುವದರಲ್ಲಿದೆ. ಯಾವ ತರಬೇತಿಯೂ ಇಲ್ಲದೇ ಬರಹಗಾರನಾಗಿ ಬಿಟ್ಟಿದ್ದೇನೆ. ಆದರೆ ಅದನ್ನು ವೃತ್ತಿಯನ್ನಾಗಿಸುವ ಎದೆಗಾರಿಕೆ ನನ್ನಲ್ಲಿಲ್ಲ. ಹಾಗೆ ಮಾಡಿದಾಗೆಲ್ಲ ಟೊಳ್ಳು ಸಾಹಿತ್ಯ ಹೊರ ಬರುವದು ಅನುಭವದ ಮಾತು. ಛಾಯಾಗ್ರಹಣ ನನಗೆ ಅತ್ಯಂತ ಪ್ರಿಯವಾದ ಕಲೆ: ಗುರುವಿನ ಅವಶ್ಯಕತೆ ಕೂಡಾ ಅನಿಸಲಿಲ್ಲ; ಸ್ವಸಂತೋಷಕ್ಕಾಗಿ ಛಾಯಾಗ್ರಹಣವನ್ನು ಕೈಕೊಂಡರೂ, ಅದನ್ನು ವೈಜ್ಞಾನಿಕ ಸಂಶೋಧನಕ್ಕೂ ಯಶಸ್ವಿಯಾಗಿ ಉಪಯೋಗಿಸಬಹುದು, ಎಂಬುದನ್ನು ಸ್ಮರಿಸಿಕೊಳ್ಳಬಹುದು. ಇದನ್ನೇ ಜೀವನೋಪಾಯವಾಗಿ ಮಾಡಿಕೊಂಡರೆ, ವಿಜ್ಞಾನ, ಶಿಕ್ಷಣ, ಸಂಶೋಧನೆ, ಜೊತೆಗೆ ವಿದ್ಯಾರ್ಥಿಗಳ ನಿಕಟ ಸಂಪರ್ಕ ಇಟ್ಟುಕೊಳ್ಳಲು ಅನುಕೂಲವಾಗುತ್ತದೆ, ಎಂಬುದು ನನ್ನ ಮನದಾಸೆ. ಇದರಲ್ಲಿ ಧುಮುಕಲು ದೃಢ ಸಂಕಲ್ಪ ಒಂದನ್ನು ಬಿಟ್ಟರೆ ಬೇರಾವ ತರಬೇತಿಯೂ ಇಲ್ಲ. ಆದರೆ ಪಡೆದ ಶಿಕ್ಷಣ–ಅನುಭವಗಳು, ಇಂಥ ಸಾಹಸಕ್ಕೆ ಕೈಹಾಕುವಂತೆ ಪ್ರೋತ್ಸಾಹಿಸುತ್ತಲಿವೆ. ನಿಜವಾಗಿ ಅರಿತ ವಿದ್ಯೆಗೆ ಇದೇ ಪರೀಕ್ಷಾ ಕಾಲವೆಂದು ನನ್ನ ಗ್ರಹಿಕೆ. ವೈಜ್ಞಾನಿಕ ಛಾಯಾಗ್ರಹಣಕ್ಕೆ ನಗರಗಳಲ್ಲಿ ಮಾತ್ರ ಬೇಡಿಕೆ ಎಂದು ಗೊತ್ತು.[೩೧] ಅಲ್ಲದೇ ಮಹಾ

---

೩೧ ಕಳೆದ ಎರಡು ದಶಕಗಳಿಂದ ಬೆಂಗಳೂರಿನಲ್ಲಿ ವೈಜ್ಞಾನಿಕ ಛಾಯಾಗ್ರಹಣ ನಡೆಸಿಕೊಂಡು ಬಂದಿದ್ದೇನೆ. ಈ ವೃತ್ತಿಯಲ್ಲಿ ಪಡೆದ ಅನುಭವಗಳೇ ಒಂದು ಗ್ರಂಥಕ್ಕಾಗುವಷ್ಟು ಇವೆ!

ನಗರಗಳಲ್ಲಿ ಇಂಥ ಸಾಹಸ ಮಾಡಲು ಬೇಕಾದ ಅನುಕೂಲತೆಗಳಿಗಾಗಿ ಸಾಕಷ್ಟು ಹಣ ಸುರಿಯಬೇಕೆಂಬುದೂ ಸರ್ವವಿದಿತ. ಆದರೂ ಒಂದು ಕೈನೋಡಿ ಬಿಡಬೇಕೆಂದು ಮನಸ್ಸು. ನಿನ್ನ ಅನಿಸಿಕೆಯನ್ನು ಆದಷ್ಟು ಬೇಗ ತಿಳಿಸುವಿಯಲ್ಲವೇ?

○

ಮನೋಹರ ಗ್ರಂಥಮಾಲಾ, ಧಾರವಾಡ.

ಚಂದಾ ಪರಿಚಯ

- ೧೫-೮-೧೯೩೩ರಿಂದ ಈ ಗ್ರಂಥಮಾಲೆ ಪ್ರಾರಂಭವಾಗಿದೆ.
- ಕನ್ನಡ ಸ್ವತಂತ್ರ-ಕೃತಿ-ಪ್ರಕಟನೆಗೇ ಮೀಸಲಾದಿದೆ.
- ಈ ವರೆಗೆ – ಐವತ್ತಾರು ವರ್ಷಗಳವರೆಗೆ – ಅವಿಚ್ಛಿನ್ನವಾಗಿ ಗ್ರಂಥಪ್ರಕಟನೆಯ ಕೆಲಸ ಮಾಡುತ್ತ ಬಂದಿದೆ.
- ಕಾದಂಬರಿ, ಸಣ್ಣಕತೆ, ಏಕಾಂಕ, ನಾಟಕ, ಹರಟೆ, ಪ್ರವಾಸಕಥ ದಿನಚರಿ, ಪತ್ರಸಾಹಿತ್ಯ, ಜೀವನಚರಿತ್ರೆ, ಆತ್ಮಚರಿತ್ರೆ ಮೊದಲಾ ವಿವಿಧ ಸಾಹಿತ್ಯ-ಪ್ರಕಾರಗಳಲ್ಲಿಯೂ ಗ್ರಂಥಗಳನ್ನು ಗ್ರಾಹಕರಾದವರಿ ಒದಗಿಸಿಕೊಡುತ್ತದೆ.
- ೨೫ ವರ್ಷಗಳ ಸವಿನೆನಪಿಗೆಂದು "ನಡೆದು ಬಂದ ದಾರಿ" ಎಂ ಮೂರು ಸಂಪುಟಗಳ (ಒಟ್ಟು ಡೆಮಿ ೨೫೦೦ ಪುಟ) ಹೊತ್ತಿಗೆಯನ್ ಹೊರತಂದು ಕನ್ನಡ-ಸಾಹಿತ್ಯೇತಿಹಾಸಕ್ಕೆ ನೆರವಾಗಿದೆ.
- ೫೦ ವರ್ಷಗಳ ಸವಿನೆನಪಿಗೆಂದು "ಪುಟಬಂಗಾರ" ಎಂಬ ವಿಶೇಷ ಐದ ಬೃಹತ್ ಸಂಪುಟಗಳನ್ನು ಹೊರತಂದಿದೆ.
- ಚಂದಾದಾರರಾದವರಿಗೆ ಒಂದು ವರ್ಷದಲ್ಲಿ ಸುಮಾರು ೭೦೦ ಪು ಗಳಷ್ಟನ್ನು ಗ್ರಂಥರೂಪದಲ್ಲಿ ಮಾಲೆಯು ಸಲ್ಲಿಸುತ್ತದೆ.

- ವಾರ್ಷಿಕ ಚಂದಾ: ಸಾದಾ ಪ್ರತಿಗಳಿಗೆ ಎಂಬತ್ತು ರೂ. (೮೦-/) ಮಾತ್ (ಅಂಚೆವೆಚ್ಚ ೧೫/-ರೂ. ಪ್ರತ್ಯೇಕ)

- ಚಂದಾಹಣವನ್ನು ಮನಿಯಾರ್ಡರ್ ಮೂಲಕವಾಗಲಿ, ಬ್ಯಾಂಕ ಡ್ರಾಫ್ಟ್ ಮೂಲಕವಾಗಿಯಾಗಲಿ ಸಲ್ಲಿಸಬಹುದು. ವ್ಹಿ. ಪಿ.ಯಿಂದ ಕಳಿಸಲಾಗುವದಿಲ್ಲ.
- ಪರವೂರಿನ ಚೆಕ್ಕುಗಳನ್ನು ಕಳಿಸುವಾಗ ದಯವಿಟ್ಟು 'ಬ್ಯಾಂಕ' ಕಮಿಶನ್' ೫/-ರೂ ಸೇರಿಸಿ ಕಳುಹಿಸಬೇಕು.